ಮಂಗಳವಾರ, ಜನವರಿ 4, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 4 | ಪುಟ 14
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮಕುಶಲ
ಮಕ್ಕಳಿಗೆ ನಾವು ಏನೇನನ್ನೋ ಕಲಿಸಲು ಉತ್ಸಾಹ ಪಡುತ್ತೇವೆ. ಆದರೆ ಮಕ್ಕಳಿಂದಲೇ ನಾವು ಕಲಿಯಬೇಕಾದ್ದು ಬಹಳಷ್ಟಿದೆ...

ಆಳ-ಅಗಲ
ಚುನಾವಣಾ ಕಣದಲ್ಲಿ ಸ್ತ್ರೀ ಪ್ರಾತಿನಿಧ್ಯದ ಸವಾಲು
ದೇವಾಲಯಗಳ ಸ್ವಾಯತ್ತತೆಗೆ ತೊಂದರೆ ಎಲ್ಲಿದೆ? 8
ಮೊದಲ ದಿನ 40 ಲಕ್ಷ ಮಕ್ಕಳಿಗೆ ಲಸಿಕೆ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,183 ▲	17,625 ▲	₹49,810 (ಬೆಂಗಳೂರು)	₹63,900 (ಬೆಂಗಳೂರು)	74.28 ▲

supreme PRODUCTS
Glass lined Solar water Heater
EXCHANGE OFFER AVAILABLE
SOLAR WATER HEATER 100LPD @ JUST 15890/-
MRP 22700/-
30% OFF
93796 61979, 98450 81846

ಸುದರ್ಶನ್ ಜ್ಯುವೆಲರ್ಸ್
ಚಿನ್ನ • ಬೆಳ್ಳಿ • ವಜ್ರದ ಆಭರಣಗಳು
916 Hallmark Gold Rate
₹4440/-gm
ಬೆಳ್ಳಿ ₹58,000/-
ಚಿಕ್ಕಪೇಟೆ: 41300355

ಕೋವಿಡ್: ತಜ್ಞರ ಜತೆ ಸಿ.ಎಂ ಚರ್ಚೆ • ಇದೇ 6ಕ್ಕೆ ಸಚಿವ ಸಂಪುಟ ಸಭೆ

ನಿರ್ಬಂಧ: ಇಂದು ನಿರ್ಧಾರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆರೆಯ ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ತೀವ್ರಗತಿಯಲ್ಲಿ ಹೆಚ್ಚುತ್ತಿರುವುದು ಹಾಗೂ ಕರ್ನಾಟಕದಲ್ಲಿ ದಿನೇ ದಿನೇ ಏರುಗತಿ ಕಾಣುತ್ತಿರುವ ಬೆನ್ನಲ್ಲೇ, ಕೈಗೊಳ್ಳಬೇಕಾದ ನಿಯಂತ್ರಣ ಕ್ರಮಗಳ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ಮಹತ್ವದ ಸಭೆ ಮಂಗಳವಾರ (ಜ. 4) ಸಂಜೆ ನಡೆಯಲಿದೆ.



ಡಿಸೆಂಬರ್ 3ರಂದು 413ರಷ್ಟಿದ್ದ ಕೋವಿಡ್ ಪ್ರಕರಣಗಳ ಸಂಖ್ಯೆ ಜನವರಿ ಮೊದಲ ವಾರ 1,290ಕ್ಕೆ ಏರಿದೆ. ಕೋವಿಡ್ ಪತ್ತೆಗೆ ನಡೆಸುವ ಪರೀಕ್ಷೆಗಳ ಸಂಖ್ಯೆಯೂ ಅದೇ ಮಟ್ಟದಲ್ಲಿ ಏರಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಡಿಸೆಂಬರ್ ಮೊದಲ ವಾರ ಪ್ರಕರಣಗಳ ಸಂಖ್ಯೆ 150ರ ಆಸುಪಾಸಿನಲ್ಲಿದ್ದು, ದೃಢ ಪ್ರಮಾಣ ಶೇ 0.47ರಷ್ಟಿತ್ತು. ಜನವರಿ ಮೊದಲ ವಾರ ಪ್ರಕರಣ ಸಂಖ್ಯೆ 1,041ಕ್ಕೆ, ದೃಢಪ್ರಮಾಣ ಶೇ 1.43ಕ್ಕೆ ಹೆಚ್ಚಳವಾಗಿದೆ.

'ಕೋವಿಡ್ ದೃಢ ಪ್ರಮಾಣ ಶೇ 5ರಷ್ಟು ಮೀರಿದ ಪ್ರದೇಶಗಳಲ್ಲಿ ಲಾಕ್‌ಡೌನ್ ಸೇರಿದಂತೆ ಕಠಿಣ ಕ್ರಮ-ಕೈಗೊಳ್ಳಬೇಕು, ದೃಢ ಪ್ರಮಾಣ ದರ ಆಧರಿಸಿ ವಲಯಗಳನ್ನು ವಿಂಗಡಿಸಿ, ನಿಯಂತ್ರಣ ಕ್ರಮ ಕೈಗೊಳ್ಳಬೇಕು ಎಂದು ತಾಂತ್ರಿಕ ಸಲಹಾ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಈ ಶಿಫಾರಸುಗಳ ಜತೆಗೆ, ಮಹಾರಾಷ್ಟ್ರ, ತಮಿಳುನಾಡು, ಕೇರಳದಲ್ಲಿ ಕೈಗೊಂಡ ಕ್ರಮಗಳ ಬಗ್ಗೆಯೂ ಮಂಗಳವಾರದ ಸಭೆಯಲ್ಲಿ ಪರಿಶೀಲನೆ ನಡೆಸಲಾಗುವುದು' ಎಂದು ಮೂಲಗಳು ಹೇಳಿವೆ.

6ನೇ ಪುಟ ನೋಡಿ

'ಮೂರನೇ ಅಲೆ ದೊಡ್ಡ ಸವಾಲು'



'ಕೋವಿಡ್ ಮೂರನೇ ಅಲೆ ದೊಡ್ಡ ಸವಾಲು. ಎರಡು ಅಲೆಗಳನ್ನು ನಿಭಾಯಿಸಿರುವ ಅನುಭವದ ಆಧಾರದಲ್ಲಿ ಇದನ್ನು ವಿಭಿನ್ನವಾಗಿ ನಿಭಾಯಿಸಬೇಕಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಮೂಡಲಪಾಳ್ಯದ ಭೈರವೇಶ್ವರನಗರದ ಬಿಬಿಎಂಪಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಸ್ನಾತಕೋತ್ತರ ಕಾಲೇಜಿನಲ್ಲಿ 15ರಿಂದ 18 ವರ್ಷದ ಒಳಗಿನ ಶಾಲಾ ವಿದ್ಯಾರ್ಥಿಗಳಿಗೆ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, '2022ನೇ ವರ್ಷವನ್ನು ಆರೋಗ್ಯಭರಿತ ಹಾಗೂ ಕೋವಿಡ್ ಮುಕ್ತ ವರ್ಷವನ್ನಾಗಿ ಮಾಡಲು ಸಂಕಲ್ಪ ಕೈಗೊಳ್ಳಬೇಕು. ಬೆಳೆಯುತ್ತಿರುವ ಆರ್ಥಿಕತೆಯನ್ನು ಗಮನದಲ್ಲಿರಿಸಿಕೊಂಡು, ಕೋವಿಡ್ ಹರಡದಂತೆ ಕಠಿಣ ಕ್ರಮಗಳನ್ನು ಕೈಗೊಂಡು ಮುನ್ನಡೆಯಬೇಕಿದೆ' ಎಂದು ಹೇಳಿದರು.

'ಕಳೆದ ಒಂದು ವಾರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ನೆರೆಯ ರಾಜ್ಯಗಳಲ್ಲಿ ಕೋವಿಡ್ ವ್ಯಾಪಕವಾಗಿ ಹಬ್ಬುತ್ತಿದೆ. ರಾಜ್ಯ ಸರ್ಕಾರ ಕೋವಿಡ್ ನಿಯಂತ್ರಣಕ್ಕಾಗಿ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಹೀಗಾಗಿ, ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆ ಇದೆ. ಕೋವಿಡ್ ಎದುರಿಸಲು ಆರೋಗ್ಯ ಇಲಾಖೆಯಲ್ಲಿಯೂ ಆಮೂಲಾಗ್ರ ಬದಲಾವಣೆಗಳನ್ನು ತರಲಾಗಿದ್ದು, ತಳಮಟ್ಟದಲ್ಲಿ ಮೂಲಸೌಕರ್ಯಗಳನ್ನು ಹೆಚ್ಚಿಸಲಾಗಿದೆ' ಎಂದು ಹೇಳಿದರು.

ರಾಜ್ಯದಲ್ಲಿ ಮತ್ತೆ 10 ಓಮೈಕ್ರಾನ್ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಭಾನುವಾರ ಹೊಸದಾಗಿ 10 ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿವೆ. ಇದರಿಂದ ಸೋಂಕಿತರ ಒಟ್ಟು ಸಂಖ್ಯೆ 77ಕ್ಕೆ ತಲುಪಿದೆ.

ಶೇ 50ರಷ್ಟು ಸಿಬ್ಬಂದಿ ಮನೆಯಿಂದ ಕೆಲಸ: ಕೇಂದ್ರ ಆದೇಶ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಅಧೀನ ಕಾರ್ಯದರ್ಶಿಗಿಂತ ಕೆಳ ಶ್ರೇಣಿಯ ಸಿಬ್ಬಂದಿಯಲ್ಲಿ ಶೇ 50ರಷ್ಟು ಮಂದಿ ಮನೆಯಿಂದ ಕೆಲಸ ಮಾಡಲು ಅವಕಾಶ ನೀಡಿ ಸಿಬ್ಬಂದಿ ಸಚಿವಾಲಯವು ಸೋಮವಾರ ಆದೇಶ ಹೊರಡಿಸಿದೆ.

ಅಂಗವೈಕಲ್ಯ ಇರುವವರು ಮತ್ತು ಗರ್ಭಿಣಿ ನೌಕರರು ಕಚೇರಿಗೆ ಹಾಜರಾಗುವುದಕ್ಕೆ ವಿನಾಯಿತಿ ನೀಡಲಾಗಿದೆ. ದಟ್ಟಣೆಯಾಗುವುದನ್ನು ತಡೆಯಲು ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಪಾಳಿ ವ್ಯವಸ್ಥೆಯಲ್ಲಿ ಕೆಲಸ ಮಾಡುವಂತೆ ಸೂಚಿಸಲಾಗಿದೆ. ಕೋವಿಡ್ ಕಂಟೈನ್‌ಮೆಂಟ್ ವಲಯಗಳಲ್ಲಿ ನೆಲೆಸಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಕಚೇರಿಗೆ ಹಾಜರಾಗುವುದರಿಂದ ವಿನಾಯಿತಿ ನೀಡಲಾಗಿದೆ. ಕಂಟೈನ್‌ಮೆಂಟ್ ವಲಯವು ಸಹಜ ಸ್ಥಿತಿಗೆ ಮರಳುವವರೆಗೆ ಇದು ಅನ್ವಯವಾಗುತ್ತದೆ.

ತುಸು ತಗ್ಗಿದ ತಯಾರಿಕಾ ವಲಯದ ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಗಳು 2021ರ ಡಿಸೆಂಬರ್‌ನಲ್ಲಿ ಇಳಿಕೆ ಕಂಡಿದ್ದರೂ ಸಕಾರಾತ್ಮಕ ಮಟ್ಟದಲ್ಲಿಯೇ ಮುಂದುವರಿದಿವೆ ಎಂದು ಐಎಚ್‌ಎಸ್ ಮರ್ಕಿಟ್ ಇಂಡಿಯಾ ಸಂಸ್ಥೆ ಸೋಮವಾರ ಹೇಳಿದೆ.

12

MANGALORE UNIVERSITY
AND
ALVA'S COLLEGE
MOODUBIDIRE, D.K.
ALVA'S Education Foundation®
Under the auspices of Association of Indian Universities
Cordially Invite You To The Inaugural Ceremony of
81st ALL INDIA INTER-UNIVERSITY ATHLETICS CHAMPIONSHIP FOR MEN
On 4th January 2022 | at 6:00 pm
At Swarajya Maidan, Moodubidire, D.K.
Inaugurator : Mr. Narayana Gowda, Honorable Minister of Sports, Youth Affairs, Government of Karnataka
President : Dr. P. Subrahmanya Yadapadithaya, Vice Chancellor, Mangalore University
Flag Hoisting : Dr. Baljith Singh Seckon, Joint Secretary of Sports AIU
: Dr. M. Mohan Alva, Chairman, Alva's Education Foundation ®.
Inauguration of Sports and Cultural March - Past : Sri V. Sunil Kumar, Honorable Minister for Energy, Kannada and Culture, Government of Karnataka
Torch Receiving : Sri. Umanatha A. Kotian, MLA Mulki - Moodubidire
Chief Guest : Sri Nalin Kumar Kateel, Member of Parliament D.K.
: Sri S. Angara, Honorable Minister for Fisheries, Ports & Inland Transport, Govt of Karnataka
: Sri. Kota Shrinivas Poojary, Honorable Minister for Social Welfare, Govt of Karnataka
Dr. Kishore Kumar C.K, Registrar, Mangalore University
Dr. M. Mohan Alva, Chairman, Alva's Education Foundation ®, Moodubidire
Dr. Gerald S. D'souza, Organizing Secretary, Director of Physical Education, Mangalore University
All the members of Syndicate and Academic Council
Mangalore University

ಅಂಬೇಡ್ಕರ್, ಕೆಂಪೇಗೌಡರ ಪ್ರತಿಮೆ ಅನಾವರಣ ಸಂಬಂಧ ಮನಸ್ತಾಪ

ಅಶ್ವತ್ಥನಾರಾಯಣ – ಸುರೇಶ್ ಜಟಾಪಟಿ

ಪ್ರಜಾವಾಣಿ ವಾರ್ತೆ

ರಾಮನಗರ: ಇಲ್ಲಿನ ಜಿಲ್ಲಾ ಕಚೇರಿಗಳ ಸಂಕೀರ್ಣದ ಮುಂಭಾಗ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮ್ಮುಖದಲ್ಲಿ ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಹಾಗೂ ಸಂಸದ ಡಿ.ಕೆ. ಸುರೇಶ್ ಜಟಾಪಟಿಗೆ ಮುಂದಾದ ಪ್ರಸಂಗ ನಡೆಯಿತು.

ಪ್ರತಿಮೆಗಳ ಅನಾವರಣ ಹಾಗೂ ವಿವಿಧ ಕಾಮಗಾರಿಗಳ ಚಾಲನೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಪಾಲ್ಗೊಂಡಿದ್ದರು. ಅಂಬೇಡ್ಕರ್ ಮತ್ತು ಕೆಂಪೇಗೌಡರ ಪ್ರತಿಮೆ ನಿರ್ಮಾಣಕ್ಕೆ ಶ್ರಮಿಸಿದ ಡಿ.ಕೆ. ಶಿವಕುಮಾರ್ ಸೇರಿದಂತೆ ಎಲ್ಲ ಮುಖಂಡರನ್ನು ಜಿಲ್ಲಾಡಳಿತ ಕಡೆಗಣಿಸಿದ್ದು, ಕಾಟಾಚಾರಕ್ಕಾಗಿ ಆಹ್ವಾನಿಸಲಾಗಿದೆ ಎಂದು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ದಲಿತ ಮುಖಂಡರು ಕಪ್ಪು ಪಟ್ಟಿ ಧರಿಸಿ ಕಾರ್ಯಕ್ರಮದಲ್ಲಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಕೆಲವರು ವೇದಿಕೆಗೆ ಏರಿ ಪ್ರತಿಭಟಿಸಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ವಿಧಾನ ಪರಿಷತ್ ಸದಸ್ಯ ಎಸ್‌. ರವಿ, ಸಂಸದ ಡಿ.ಕೆ. ಸುರೇಶ್ ಹಾಗೂ ಸಚಿವ ಅಶ್ವತ್ಥನಾರಾಯಣ ಜಟಾಪಟಿ ನಡೆಸಿದರು

ಭಾಷಣದಲ್ಲಿ ಈ ಕುರಿತು ಪ್ರಸ್ತಾಪಿಸಿದ ಸಚಿವ ಅಶ್ವತ್ಥನಾರಾಯಣ 'ಮುಖ್ಯಮಂತ್ರಿಯಾಗಿ ಇದೇ ಮೊದಲ ಬಾರಿಗೆ ಬೊಮ್ಮಾಯಿ ನಮ್ಮ ಜಿಲ್ಲೆಗೆ ಬಂದಿದ್ದಾರೆ. ಅವರನ್ನು ಗೌರವದಿಂದ ನಡೆಸಿಕೊಳ್ಳಬೇಕಿತ್ತು. ಇವತ್ತು ಏನು ತಪ್ಪಾಗಿದೆ ಎಂದು ಘೋಷಣೆ ಕೂಗುತ್ತಿದ್ದೀರಿ. ನಾಲ್ಕು ಜನ ಕಟ್ಟಿಕೊಂಡು ಸಭೆಗೆ ಅಡ್ಡಿಪಡಿಸುತ್ತಿದ್ದೀರಿ. ಯಾರಪ್ಪ ಗಂಡು ಅದು, ಸಭೆಯಲ್ಲಿ ಗಲಾಟೆ ಮಾಡುವುದು ಬಿಟ್ಟು ಏನು ಕೆಲಸ ಮಾಡಿದ್ದೀರಿ ತೋರಿಸಿ. ನಾನೆಂದೂ ಯಾರ ಜಮೀನಿಗೂ ಬೇಲಿ ಹಾಕುವ ಕೆಲಸ ಮಾಡಿಲ್ಲ' ಎಂದರು. ವೇದಿಕೆಯಲ್ಲೇ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಂಸದ ಸುರೇಶ್ ಅವರು ಅಶ್ವತ್ಥನಾರಾಯಣ ಅವರತ್ತ ನುಗ್ಗಿ ಬಂದರು. ಈ ಸಂದರ್ಭ ಇಬ್ಬರ ನಡುವೆ ಮಾತಿನ ಜಟಾಪಟಿ ನಡೆಯಿತು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

8ನೇ ಪುಟ ನೋಡಿ

ಆಫ್‌ಲೈನ್ ಪಾವತಿಗೆ ಆರ್‌ಬಿಐ ಅವಕಾಶ

ಮುಂಬೈ (ಪಿಟಿಐ): ಗ್ರಾಮೀಣ ಮತ್ತು ಅರೆ ಪಟ್ಟಣ ಪ್ರದೇಶಗಳಲ್ಲಿ ಡಿಜಿಟಲ್ ವಹಿವಾಟುಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ಇಂಟರ್ನೆಟ್ ಸೇವೆ ಇಲ್ಲದಿದ್ದರೂ ಡಿಜಿಟಲ್ ಪಾವತಿಯನ್ನು ಸಾಧ್ಯವಾಗಿಸಲು ಅಗತ್ಯವಿರುವ ನಿಯಮಗಳ ಚೌಕಟ್ಟನ್ನು ಸೋಮವಾರ ಪ್ರಕಟಿಸಿದೆ.

12

'ರೈತರ ಸಮಸ್ಯೆ: ಮೋದಿ ಸೊಕ್ಕಿನ ವರ್ತನೆ'

ನವದೆಹಲಿ: 'ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಹೋರಾಟದ ಬಗ್ಗೆ ಪ್ರಸ್ತಾಪಿಸಿದಾಗ ಪ್ರಧಾನಿ ನರೇಂದ್ರ ಮೋದಿ ಅವರು ಬಹಳ ಸೊಕ್ಕಿನಿಂದ ವರ್ತಿಸಿದ್ದರು. ಪ್ರತಿಭಟನೆ ವೇಳೆ 500 ರೈತರು ಮೃತಪಟ್ಟಿದ್ದಾರೆ ಎಂದಾಗ ಮೋದಿ ಅವರು, 'ನನಗಾಗಿ ಸತ್ತಿದ್ದಾರೆಯೇ' ಎಂದು ಪ್ರಶ್ನಿಸಿದ್ದರು' ಎಂದು ಮೇಘಾಲಯ ರಾಜ್ಯಪಾಲ ಸತ್ಯಪಾಲ್ ಮಲಿಕ್ ಹೇಳಿದ್ದಾರೆ.

13

ಚಿನಕುರಳಿ

ಪ್ರಕಾಶ್ ಶೆಟ್ಟಿ

VICCO®
— ವಿಶ್ವಾಸಾರ್ಹ ಆಯುರ್ವೇದ —
1952 ರಿಂದ
Go natural ಆಯುರ್ವೇದದ ಔಷಧ
"ನಾನು ಪ್ರತಿ ರಾತ್ರಿಯೂ ವೀಕೋ ಟರ್ಮರಿಕ್ ಕ್ರೀಮನ್ನು ಹಚ್ಚಿಕೊಳ್ಳುತ್ತೇನೆ."
ಅದರಲ್ಲಿ ಅರಿಶಿನ ಮತ್ತು ಶ್ರೀಗಂಧದ ಸಾರವಿದೆ; ಅದು ರಾತ್ರಿಯಲ್ಲಿ ಚರ್ಮವನ್ನು ರಿಪೇರಿ ಮಾಡಿ ಬೆಳಗಾಗುವ ಹೊತ್ತಿಗೆ ಅದನ್ನು ಆರೋಗ್ಯಕರಗೊಳಿಸು ತ್ತದೆ.

ಈ ಕ್ರೀಮ್‌ನಲ್ಲಿರುವ ಅರಿಶಿನ ಮತ್ತು ಶ್ರೀಗಂಧ ರಾತ್ರಿಯಲ್ಲಿ ಚರ್ಮವನ್ನು ರಿಪೇರಿ ಮಾಡಿ ಬೆಳಗಾಗುವ ಹೊತ್ತಿಗೆ ಅದನ್ನು ಆರೋಗ್ಯಕರಗೊಳಿಸು ತ್ತವೆ. ಆದ್ದರಿಂದ ನಿಮ್ಮ ಮುಖದಲ್ಲಿ ಮೊಡವೆಗಳು, ಕಪ್ಪು ಕಲೆಗಳು ಮತ್ತು ಟೆನ್ಷನ್‌ನಿಂದ ವಯಸ್ಸಾದಂತೆ ಕಾಣುವುದು, ಈ ಯಾವುದರ ಕುರುಹುಗಳೂ ಇರುವುದಿಲ್ಲ. ಹಳದಿ ಗುಣಗಳಿಂದ ತ್ವಚೆ ಹೊಳೆಯುವುದಾದರೆ, ವಿದೇಶದ ಕಾಸ್ಮೆಟಿಕ್‌ಗಳನ್ನು ಬಿಟ್ಟುಬಿಡಿ ಮತ್ತು ಸ್ವದೇಶಿ ಆಯುರ್ವೇದದ ಜೊತೆಗೆ ಸದಾ ಹೊಳೆಯುತ್ತಾ ಇರಿ.
ನಿಮ್ಮ ಚರ್ಮಕ್ಕೆ ಆರೋಗ್ಯಕರ ಹೊಳಪನ್ನು ಕೊಡಿ
ಸಂಪೂರ್ಣ ಸ್ವದೇಶಿ
ಎಲ್ಲಾ ಮೆಡಿಕಲ್ ಸ್ಟೋರ್‌ಗಳಲ್ಲಿಯೂ ಲಭ್ಯ.
www.viccolabs.com • Like us on /ViccoLabs • Shop online at www.viccoestore.com • Customer Care Cell No. 0712-2420890



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

ಶ್ರೀ ಥಾವರ್ ಚಂದ್ ಗೆಹ್ಲೋಟ್
ಘನತೆವೆತ್ತ ರಾಜ್ಯಪಾಲರು, ಕರ್ನಾಟಕ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮಂಡ್ಯ ಹಾಗೂ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಶ್ರೀಕ್ಷೇತ್ರ ಇವರ ಸಹಯೋಗದೊಂದಿಗೆ

ಸನ್ಮಾನ್ಯ ರಾಜ್ಯಪಾಲರು ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಡಾ. ಕೆ. ಸಿ. ನಾರಾಯಣಗೌಡರು ಟೋಕಿಯೋ ಒಲಂಪಿಕ್, ಪ್ಯಾರಾ ಒಲಂಪಿಕ್‌ನಲ್ಲಿ ಭಾಗವಹಿಸಿದ ಕ್ರೀಡಾಪಟುಗಳನ್ನು ಸನ್ಮಾನಿಸುತ್ತಿರುವುದು.

ರಾಜ್ಯ ಯುವಜನೋತ್ಸವ
2021–22
ಸ್ಥಳ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಆದಿಚುಂಚನಗಿರಿ, ನಾಗಮಂಗಲ ತಾ., ಮಂಡ್ಯ ಜಿಲ್ಲೆ
ದಿನಾಂಕ : 04.01.2022ರ ಮಂಗಳವಾರ, ಬೆಳಗ್ಗೆ 11.30 ಗಂಟೆಗೆ
ಉದ್ಘಾಟನಾ ಸಮಾರಂಭ
ಉದ್ಘಾಟನೆ:
ಶ್ರೀ ಥಾವರ್ ಚಂದ್ ಗೆಹ್ಲೋಟ್
ಗೌರವಾನ್ವಿತ ರಾಜ್ಯಪಾಲರು, ಕರ್ನಾಟಕ
ದಿವ್ಯಸಾನಿಧ್ಯ:
ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಶ್ರೀಕ್ಷೇತ್ರ
ಘನ ಉಪಸ್ಥಿತಿ:
ಡಾ. ಕೆ.ಸಿ. ನಾರಾಯಣಗೌಡ
ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ವಿ. ಸುನೀಲ್ ಕುಮಾರ್
ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ
ದಿನಾಂಕ : 05.01.2022ರ ಬುಧವಾರ, ಮಧ್ಯಾಹ್ನ 3.00 ಗಂಟೆಗೆ
ಸಮಾರೋಪ ಸಮಾರಂಭ
ಘನ ಉಪಸ್ಥಿತಿ ಹಾಗೂ ಅಮೃತ ಸಮುದಾಯ ಅಭಿವೃದ್ಧಿ ಯೋಜನೆ ಹಾಗೂ ಅಮೃತಾ ಕ್ರೀಡಾದತ್ತು ಯೋಜನೆಗೆ ಚಾಲನೆ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ದಿವ್ಯಸಾನಿಧ್ಯ:
ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಶ್ರೀಕ್ಷೇತ್ರ
ಸಾಧಕರಿಗೆ ಸನ್ಮಾನ:
ಡಾ. ಕೆ.ಸಿ. ನಾರಾಯಣಗೌಡ
ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ
ಬಹುಮಾನ ವಿತರಣೆ:
ಡಾ. ಸಿ. ಎನ್. ಅಶ್ವತ್ಥ್ ನಾರಾಯಣ್
ಮಾನ್ಯ ಉನ್ನತ ಶಿಕ್ಷಣ, ಕೌಶಲ್ಯಾಭಿವೃದ್ಧಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು, ಕರ್ನಾಟಕ ಸರ್ಕಾರ
: ಅಧ್ಯಕ್ಷತೆ :
ಶ್ರೀ ಸುರೇಶ್ ಗೌಡ
ಮಾನ್ಯ ಶಾಸಕರು, ನಾಗಮಂಗಲ ವಿಧಾನಸಭಾ ಕ್ಷೇತ್ರ
ಡಾ. ಹೆಚ್.ಎನ್. ಗೋಪಾಲಕೃಷ್ಣ, ಭಾ.ಆ.ಸೇ. ಆಯುಕ್ತರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಶ್ರೀಮತಿ ಎಸ್ ಅಶ್ವತಿ, ಭಾ.ಆ.ಸೇ. ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ
ಡಾ. ಶಾಲಿನಿ ರಜನೀಶ್, ಭಾ.ಆ.ಸೇ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಬನ್ನಿ, ರಾಜ್ಯ ಮಟ್ಟದ ಯುವ ಜನೋತ್ಸವದಲ್ಲಿ ಪಾಲ್ಗೊಳ್ಳಿ...
ಎಲ್ಲ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ "ಪ್ರಯತ್ನಿಸಿ ಶ್ರಮಿಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಫಲಪುಷ್ಪ ಪ್ರದರ್ಶನ: ಗೊಂದಲದಲ್ಲಿ ತೋಟಗಾರಿಕಾ ಇಲಾಖೆ

ಬೆಂಗಳೂರು: ಜನವರಿ ಕೊನೆಯ ವಾರದಲ್ಲಿ ಲಾಲ್‌ಬಾಗ್ ಉದ್ಯಾನದಲ್ಲಿ 'ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನ' ಆಯೋಜಿಸಲು ತೋಟಗಾರಿಕೆ ಇಲಾಖೆ ಎಲ್ಲ ಸಿದ್ಧತೆ ಮಾಡಿಕೊಂಡಿದೆ. ಆದರೆ, ಓಮೈಕ್ರಾನ್ ಸೋಂಕು ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಪ್ರದರ್ಶನ ಆಯೋಜಿಸುವುದೋ ಅಥವಾ ರದ್ದು ಮಾಡುವುದೋ ಎಂಬ ಗೊಂದಲಕ್ಕೆ ಇಲಾಖೆ ಸಿಲುಕಿದೆ.

ಈ ಬಾರಿ ಫಲಪುಷ್ಪ ಪ್ರದರ್ಶನವನ್ನು ನಟರಾದ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಗೌರವಾರ್ಥ ಆಯೋಜಿಸಲು ಉದ್ದೇಶಿಸಲಾಗಿತ್ತು. ಗಾಜಿನ ಮನೆಯಲ್ಲಿ ಇಬ್ಬರು ನಟರ ಹೂವಿನ ಪ್ರತಿಕೃತಿಗಳನ್ನು ನಿರ್ಮಿಸಿ, ಪುಷ್ಪನಮನ ಸಲ್ಲಿಸಲು ಎಲ್ಲ ತಯಾರಿ ನಡೆದಿದೆ. ಆದರೆ, ಕಳೆದ ವಾರದಿಂದ ಓಮೈಕ್ರಾನ್ ಸೋಂಕು ಪ್ರಕರಣಗಳು ದಿಢೀರ್ ಏರಿರುವುದರಿಂದ ಪ್ರದರ್ಶನದ ಬಗ್ಗೆ ಸ್ಪಷ್ಟತೆ ಇಲ್ಲವಾಗಿದೆ.

'ಫಲಪುಷ್ಪ ಪ್ರದರ್ಶನಕ್ಕೆ ಎರಡು ತಿಂಗಳಿನಿಂದಲೇ ಸಿದ್ಧತೆಗಳು ನಡೆದಿವೆ. ಓಮೈಕ್ರಾನ್ ಪ್ರಕರಣಗಳೂ ಏರಗತಿಯಲ್ಲಿವೆ. ಹಾಗಾಗಿ, ಜನವರಿ 10 ರವರೆಗೆ ಕಾದು ನೋಡುತ್ತೇವೆ. ಸದ್ಯಕ್ಕೆ ಫಲಪುಷ್ಪ ಪ್ರದರ್ಶನ ರದ್ದು ಮಾಡಿಲ್ಲ' ಎಂದು ತೋಟಗಾರಿಕೆ ಸಚಿವ ಮುನಿರತ್ನ 'ಪ್ರಜಾವಾಣಿ'ಗೆ ತಿಳಿಸಿದರು.

ನಗರದಲ್ಲಿ ಇಂದು

'ಜನನಿ'–ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮ: ಉದ್ಘಾಟನೆ– ಶಾಸಕ ಎಲ್.ಎ. ರವಿಸುಬ್ರಹ್ಮಣ್ಯ, ಅತಿಥಿ–ನಟಿ ಸುಧಾರಾಣಿ, ಬಿ.ಎಸ್. ಸತ್ಯನಾರಾಯಣ (ಕಟ್ಟೆ ಸತ್ಯ), ಪ್ರಸೂತಿ ತಜ್ಞೆ ದಿವ್ಯ ಭಟ್, ಬಿ.ಎಸ್.ಸುಜಯ್ ಸತ್ಯನಾರಾಯಣ, ಅಧ್ಯಕ್ಷತೆ–ಸುಧೀಂದ್ರ, ಆಯೋಜನೆ–ಕಟ್ಟೆ ಸತ್ಯ ಫೌಂಡೇಷನ್, ಸಹಯೋಗ–ರಾಧಾಕೃಷ್ಣ ಆಸ್ಪತ್ರೆ, ಸ್ಥಳ–ಸಿ.ಅಶ್ವತ್ಥ್ ಕಲಾ ಭವನ, ಬೆಳಿಗ್ಗೆ 9.30

ಸುಧಾರಾಣಿ

ಎಂ.ಎಸ್.ಮುತ್ತುರಾಜ್ ಅವರ 'ನಾನು ಸ್ವಾಭಿಮಾನಿ ಕ್ಷೌರಿಕ' ಕಾದಂಬರಿ ಬಿಡುಗಡೆ: ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ಅಧ್ಯಕ್ಷತೆ–ಸಿದ್ದರಾಮಯ್ಯ, ಅತಿಥಿಗಳು–'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಕಾಂಗ್ರೆಸ್ ಮುಖಂಡ ಎಚ್.ಎಂ.ರೇವಣ್ಣ, ರಾಜ್ಯ ಸವಿತಾ ಸಮಾಜದ ಅಧ್ಯಕ್ಷ ಎನ್. ಸಂಪತ್‌ಕುಮಾರ್, ಆಯೋಜನೆ– ಕರ್ನಾಟಕ ರಾಜ್ಯ ಸವಿತಾ ಸಮಾಜ, ಸ್ಥಳ– ಗಾಂಧಿಭವನ, ಬೆಳಿಗ್ಗೆ 10.30

ಸಂವಿಧಾನ ಓದು: ಉಪನ್ಯಾಸ– ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್, ಅಧ್ಯಕ್ಷತೆ– ಬೆಂಗಳೂರು ದಕ್ಷಿಣ ಜಿಲ್ಲೆಯ ಉಪ ನಿರ್ದೇಶಕ ಬಿ.ಎಂ.ರಾಜಕುಮಾರ್, ಆಯೋಜನೆ– ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ಕರ್ನಾಟಕ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕ ಸಂಘ, ಬೆಂಗಳೂರು ದಕ್ಷಿಣ, ಸ್ಥಳ– ಶಾಶ್ವತಿ ಸಭಾಂಗಣ, ಎನ್.ಎಂ.ಕೆ. ಆರ್.ವಿ. ಮಹಿಳಾ ಕಾಲೇಜು, ಜಯನಗರ, ಬೆಳಿಗ್ಗೆ 10.30

ವಿಶ್ವ ಬ್ರೈಲ್ ದಿನ: ಅತಿಥಿಗಳು– ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಸಂಸದ ಪಿ.ಸಿ.ಮೋಹನ್, ಆರೋಗ್ಯ ಇಲಾಖೆಯ ಆಯುಕ್ತ ಡಿ. ರಂದೀಪ್, ಬಿನೋ ಜೆ ಪಿನ್, ಪ್ರಮೀಳಾ ನಾಯ್ಡು, ಮುನಿರಾಜು, ಆಯೋಜನೆ–ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್, ಸ್ಥಳ– ಹೋಟೆಲ್ ಸಿಟಿ ಸೆಂಟರ್, ಗೂಡ್‌ಶೆಡ್ ರಸ್ತೆ ಸಮೀಪ, ಮೆಜೆಸ್ಟಿಕ್, ಮಧ್ಯಾಹ್ನ 3

ಮುಜಾಫರ್ ಅಸ್ಸಾದಿ ಅವರ 'ಅಲ್ಪಸಂಖ್ಯಾತರು ಮತ್ತು ಜಾತಿ ವ್ಯವಸ್ಥೆ' ಪುಸ್ತಕ ಬಿಡುಗಡೆ: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಅತಿಥಿ– ಪತ್ರಕರ್ತ ಶಿವಸುಂದರ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ ದಾಸ್, ಆಯೋಜನೆ– ವಿಸ್ತಾರ್ ಟ್ರಸ್ಟ್ ಹಾಗೂ ಬಹುರೂಪಿ, ಸ್ಥಳ– ಗಾಂಧಿ ಭವನ, ಸಂಜೆ 4

ಎಚ್.ಶ್ರೀನಿವಾಸಯ್ಯ ಅವರ ಸಂಸ್ಮರಣೆ ಹಾಗೂ ಶ್ರೀನಿವಾಸಯ್ಯ ಸೇವಾ ಪ್ರಶಸ್ತಿ ಪ್ರದಾನ: ಸಿದ್ದಲಿಂಗ ಸ್ವಾಮೀಜಿ, ಉದ್ಘಾಟನೆ– ಎಚ್.ವಿಶ್ವನಾಥ್, ಪುರಸ್ಕೃತರು–ಡಿ.ಆರ್.ಪಾಟೀಲ, ಅಧ್ಯಕ್ಷತೆ–ಎ.ಸದಾನಂದ, ಆಯೋಜನೆ– ಎಚ್.ಶ್ರೀನಿವಾಸಯ್ಯ ಚಾರಿಟಬಲ್ ಟ್ರಸ್ಟ್, ಸ್ಥಳ–ರಾಮ ಮಂದಿರ ಟ್ರಸ್ಟ್, ಸಿಲ್ವರ್ ವ್ಯಾಲಿ ಕಾಲೇಜು ಸಭಾಂಗಣ, ತೆಂಗಿನಮರದ ರಸ್ತೆ, ಮಲ್ಲೇಶ್ವರ, ಸಂಜೆ 4.30

'ನಿರಂತರ ಕನಕ': ಕನಕದಾಸರ ಸಂಗೀತ ಆರಾಧನೆ, ಸಂಜೆ 6.30ಕ್ಕೆ ವೇದಿಕೆ ಕಾರ್ಯಕ್ರಮ, ಅತಿಥಿಗಳು–ಎಸ್.ರಂಗಪ್ಪ, ಪ.ರಾ.ಕೃಷ್ಣಮೂರ್ತಿ, ಬನಶಂಕರಿ ವಿ ಅಂಗಡಿ, ಸಂಜೆ 4ರಿಂದ ರಾತ್ರಿ 9ರವರೆಗೆ ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳು, ಆಯೋಜನೆ–ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸಂಗೀತ ಸಂಭ್ರಮ ಟ್ರಸ್ಟ್ (ಜ.6ರವರೆಗೆ ಕಾರ್ಯಕ್ರಮ ನಡೆಯಲಿದೆ)

ತೇಜಸ್ವಿ ಸೂರ್ಯ ವಿರುದ್ಧದ ಪ್ರಕರಣ: ವಿಚಾರಣೆಗೆ ತಡೆ

ಬೆಂಗಳೂರು: ಚುನಾವಣೆ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣದಲ್ಲಿ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ವಿರುದ್ಧದ ವಿಚಾರಣೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಕುರಿತಂತೆ ಮ್ಯಾಜಿಸ್ಟ್ರೇಟ್ ಕೋರ್ಟ್ ಹೊರಡಿಸಿದ್ದ ಸಮನ್ಸ್ ಪ್ರಶ್ನಿಸಿ ತೇಜಸ್ವಿ ಸೂರ್ಯ ಸಲ್ಲಿಸಿದ್ದ ಅರ್ಜಿಯನ್ನು ಆಲಿಸಿದ ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಶ್ರೀನಿವಾಸ ರಾವ್, 'ಇದೊಂದು ಪರಿಗಣನೆಗೆ ಅರ್ಹವಲ್ಲದ ಪ್ರಕರಣ. ಆದರೂ, ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಇದೇ 6ರಂದು ಅರ್ಜಿದಾರರ ಖುದ್ದು ಹಾಜರಾತಿಗೆ ಸಮನ್ಸ್ ಜಾರಿಗೊಳಿಸಿದೆ. ಪೊಲೀಸರು ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟ್ ನಿಯಮ ಪಾಲನೆ ಮಾಡಿಲ್ಲ. ಆದ್ದರಿಂದ, ಸಮನ್ಸ್ ಜಾರಿಗೆ ಮಧ್ಯಂತರ ತಡೆ ನೀಡಬೇಕು. ನಿಯಮ ಪಾಲನೆ ಮಾಡದೆ ಇರುವುದರಿಂದ ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿದರು.

ಪ್ರಕರಣವೇನು?: '2019ರ ಲೋಕ ಸಭಾ ಚುನಾವಣೆ ವೇಳೆ ತೇಜಸ್ವಿ ಸೂರ್ಯ ಅವರು ಹಂಚಿದ್ದ ಕರ ಪತ್ರದಲ್ಲಿ ಪ್ರಕಾಶಕರು ಮತ್ತು ಮುದ್ರಕರ ವಿವರಗಳು ಇರಲಿಲ್ಲ. ಈ ಕರಪತ್ರಕ್ಕೆ ಖರ್ಚಾದ ಲೆಕ್ಕವನ್ನು ಮರೆ ಮಾಚಲಾಗಿದೆ. ಅಂತೆಯೇ ಇದು ಪ್ರಜಾ ಪ್ರತಿನಿಧಿ ಕಾಯ್ದೆಯ ಕಲಂ 127ರ ಉಲ್ಲಂಘನೆ. ಆದ್ದರಿಂದ, ತೇಜಸ್ವಿ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಸಿದ್ದಾಪುರ ಠಾಣೆಯಲ್ಲಿ ದೂರು ದಾಖಲಾಗಿತ್ತು. ಪೊಲೀಸರು ಈ ದೂರನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ವರ್ಗಾಯಿಸಿದ್ದರು. ನ್ಯಾಯಾಲಯ ಇದನ್ನು ಸಂಜ್ಞೇಯ (ಪರಿಗಣಿಸಲು ಅರ್ಹ) ಅಪರಾಧ ಎಂದು ಪರಿಗಣಿಸಿತ್ತು.

ವಿದ್ಯುತ್ ವ್ಯತ್ಯಯ

ಬೆಂಗಳೂರು: ನೆಲದಡಿಯಲ್ಲಿ ಕೇಬಲ್ ಅಳವಡಿಸುವ ಕಾರ್ಯ ಕೈಗೊಂಡಿರುವುದರಿಂದ ಜ.4ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಬಿನ್ನಿ ಬಡಾವಣೆ, ವಿನಾಯಕ ಬಡಾವಣೆ, ರಾಜೀವ್ ಗಾಂಧಿ ನಗರ, ಹನುಮಂತರಾಯನಪಾಳ್ಯ, ಅನ್ನಪೂರ್ಣೇಶ್ವರಿ ನಗರ, ಪಾಪರೆಡ್ಡಿಪಾಳ್ಯ, ಕೃಷ್ಣ ಗಾರ್ಡನ್, ದುಬಾಸಿಪಾಳ್ಯ, ಕೋಡಿಪಾಳ್ಯ, ಕೆ.ಎಲ್. ಇ ಕಾಲೇಜ್ ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

'ಸೈಕ್ಲಿಂಗ್ ಚಾಲೆಂಜ್'

ಬೆಂಗಳೂರು: ಕೇಂದ್ರ ಸರ್ಕಾರದ ವಸತಿ ಮತ್ತು ನಗರ ಸಚಿವಾಲಯವು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ 'ಫ್ರೀಡಂ ಟು ಪಾರ್ಕ್' ಹಾಗೂ 'ಫ್ರೀಡಂ ಸೈಕಲ್' ಅಭಿಯಾನದಡಿ ಇದೇ 26ರವರೆಗೆ ಸೈಕ್ಲಿಂಗ್ ಚಾಲೆಂಜ್ ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿದೆ. ಸೈಕ್ಲಿಂಗ್ ಮಾಡುವವರು https://www.allforsport.in/challenges/challenge/132e6918-5d88-11ec-bad2-2faac1d415e4 ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ರಾಮನಗರ ವಿಭಾಗ, ಸಂಚಾರ ಶಾಖೆ,
ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ, ರಾಮನಗರ–562159.

ಸಂಖ್ಯೆ: ಕರಾಸಾ.ರಾನವಿ.ಸಂ.ವಾ/2881/21–22 ದಿ: 01–01–2022

"ಇ–ಟೆಂಡರ್ ಪ್ರಕಟಣೆ ಸಂಖ್ಯೆ: 13–2021–22"

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು, ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಮಾಗಡಿ, ಆನೇಕಲ್ ಹಾಗೂ ದೊಡ್ಡಮರಳವಾಡಿ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ದ್ವಿಚಕ್ರ ಹಾಗೂ ಕಾರುಗಳ ನಿಲುಗಡೆಯ ನಿರ್ವಹಣೆಗೆ 03 ವರ್ಷಗಳವರೆಗೆ ಇ–ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು ದಿ: 28–01–2022 ರಂದು 11.00 ಗಂಟೆಗೆ ಇ–ಟೆಂಡರ್ ನಡೆಸಲು/ತೆರೆಯಲು ಸಮಯವನ್ನು ನಿಗದಿಪಡಿಸಲಾಗಿರುತ್ತದೆ. ದಿ: 04–01–2022 ರಿಂದ ಇ–ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://www.eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ದಿನಾಂಕ: 25–01–2022 ರಂದು 17.00 ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 7760990852.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ, ರಾಮನಗರ

ವಾ.ಸಾ.ಸಂ.ಇ/ಬೆಂ.ನಗರ/2671/ಆಕಾರ್/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕುರುಗಲ್ ಗ್ರಾಮ ಪಂಚಾಯಿತಿ ಕಾರ್ಯಾಲಯ

ಕುರುಗಲ್–563101, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ
ಸಂ: ಕು.ಗ್ರಾ.ಪಂ.ಸ್ವ.ಬಾ;ವಾಹನ ಖರೀದಿ/21/2021–22 ದಿನಾಂಕ: 01.01.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೋಲಾರ ತಾಲ್ಲೂಕು, ಕುರುಗಲ್ ಗ್ರಾಮ ಪಂಚಾಯಿತಿಗೆ ಎಲ್ಲಾ ಗ್ರಾಮಗಳಿಂದ ಕಸ ಸಂಗ್ರಹಣೆ ಮಾಡಲು 4 ಚಕ್ರದ BSVI ಪೆಟ್ರೋಲ್ ಹೈಡ್ರಾಲಿಕ್ ಲಿಫ್ಟ್ 695 ಸಿಸಿ 2 ಸಿಲೆಂಡರ್ 2 Cum Mtr Tipper ವಾಹನ ಸರಬರಾಜು ಮಾಡಲು ಟೆಂಡರ್ ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **16.01.2022 ಸಂಜೆ 4.00 ಗಂಟೆಗೆ** ಟೆಂಡರ್ ಅಂದಾಜು ಮೊತ್ತ **ರೂ.5.00 ಲಕ್ಷ**. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 9448410079 ಮತ್ತು 9902961126 ಸಂಪರ್ಕಿಸಲು ಕೋರಿದೆ.

ಸಹಿ/– (ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು)
ಕುರುಗಲ್ ಗ್ರಾಮ ಪಂಚಾಯಿತಿ ಕೋಲಾರ ತಾಲ್ಲೂಕು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ314/ಎಂ.ಸಿ.ಎ/2021–22

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

THE KARNATAKA STATE CRICKET ASSOCIATION

M. Chinnaswamy Stadium, Cubbon Road, Bangalore - 560 001.

NOTIFICATION INVITING TENDERS/EOI

(1) The Karnataka State Cricket Association (KSCA) invites tenders from well established, GST compliant Decorators for undertaking, decorations and associated works at various party halls/lounges on the premises of the Sports Centre (KSCA), Bangalore. Interested parties who have adequate work experience in doing similar work can only apply. They may collect the tender documents from the Office of KSCA, Sports Centre at the M.Chinnaswamy Stadium from 10th Jan 2022 to 24th Jan 2022 during the office hours, on submission of a request letter on their letter head and on payment of Rs 500/- (Rupees Five Hundred Only) plus GST as the tender document fee (non-refundable). The tenders are to be submitted in a sealed cover on or before 4:30 PM, Tuesday, 31th Jan 2022.
For further details please contact Mr. B. Arun Hegde, Account Officer (KSCA Sports Centre) Mobile No :- 9945172322/9964606700

(2) A well planned salon-cum-beauty parlour space is available on the premises of M.Chinnaswamy Stadium, KSCA which include separate hairdressing, massage rooms, shower rooms and adequate number of toilets separately for ladies and gents sections. A reception and waiting lounge are also available.
Salon equipment and associated facilities including soft furnishings will need to be arranged and installed by the service provider.
Interested salon service providers with adequate experience may visit the site and forward their Expression of Interest to Mr Srikanth, mobile number: 9164206559 at email ID: srikanth.spc@ksca.co.in by Friday, the 21st January, 2022 before 5.00 pm.

Hon. Secretary, KSCA

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು (ಪೂರ್ವದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು), ಜಾಲ ಹೋಬಳಿ, ಬೆಟ್ಟಹಲಸೂರು ಗ್ರಾಮದಲ್ಲಿಯ ಸರ್ವೆ ನಂ. 90/5, 90/6, 90/7, 90/8, 90/9, 93/1, 93/5 ಮತ್ತು 94/3 ರ ಒಟ್ಟು 6 ಎಕರೆ 27 ಗುಂಟೆ ಮತ್ತು 15 ಗುಂಟೆ ಖರಾಬು ವಿಸ್ತೀರ್ಣದ ವ್ಯವಸಾಯದ ಜಮೀನನ್ನು ಷೆಡ್ಯೂಲ್ (1) ಐಟಂ ನಂ. 1 ರಿಂದ ಐಟಂ ನಂ. 8 ರಲ್ಲಿ ವಿವರಿಸಲಾಗಿರುವ ಹಾಗು ಬೆಂಗಳೂರು ಜಿಲ್ಲೆ, ಯಲಹಂಕ (ಪೂರ್ವದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು) ತಾಲ್ಲೂಕು, ಜಾಲ ಹೋಬಳಿ, ಚೊಕ್ಕನಹಳ್ಳಿ ಗ್ರಾಮದಲ್ಲಿಯ ಸರ್ವೆ ನಂ. 23 ವಿಸ್ತೀರ್ಣ 32 ಗುಂಟೆ ವ್ಯವಸಾಯದ ಜಮೀನನ್ನು ಷೆಡ್ಯೂಲ್ (2) ರಲ್ಲಿ ವಿವರಿಸಲಾಗಿರುವ, ಈ ಎಲ್ಲಾ ಜಮೀನುಗಳನ್ನು ಕೆಳಗೆ ವಿವರವಾಗಿ ತಿಳಿಸಲಾದ ಇನ್ನು ಮುಂದೆ **"ಷೆಡ್ಯೂಲ್ ಸ್ವತ್ತು"** ಎಂದು ಉಲ್ಲೇಖಿಸಲಾಗುವ ಜಮೀನನ್ನು ಈ ಕೆಳಗೆ ತಿಳಿಸಿರುವ ಮಾಲೀಕರುಗಳಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತು ಈ ಕೆಳಗೆ ಷೆಡ್ಯೂಲ್ ಸ್ವತ್ತಿನಲ್ಲಿ ವಿವರಿಸಿರುವ ಮಾಲೀಕರ ಮಾಲೀಕತ್ವದಲ್ಲಿರುತ್ತದೆ.

ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಅದರ ಯಾವುದೇ ಭಾಗಶಃ ಜಮೀನಿನ ಮೇಲೆ ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ, ಮಾಲೀಕತ್ವ, ಆಸಕ್ತಿ ಹೊಂದಿರುವ ಅಥವಾ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ, ವ್ಯಾಜ್ಯ, ಆಸಕ್ತಿ ಹೊಂದಿರುವ ಅಥವಾ ಅವುಗಳ ದಾಖಲೆಗಳ ಬಗ್ಗೆ ಅಥವಾ ಮಾಲೀಕರ ವಿರುದ್ಧ ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ ಮಾಡಲಿಚ್ಛಿಸುವ ಯಾವುದೇ ವ್ಯಕ್ತಿ ಇದ್ದಲ್ಲಿ ಅಥವಾ ನಮ್ಮ ಕಕ್ಷಿದಾರರ ಸದರಿ ಖರೀದಿಯ ವಿರುದ್ಧ ಅಥವಾ ಮಾಲೀಕತ್ವದ ವಿರುದ್ಧ ಆಕ್ಷೇಪಣೆ ಇದ್ದಲ್ಲಿ, ತಾವು ಯಾವ ಆಧಾರದ ಮೇಲೆ ಅಂತಹ ಹಕ್ಕು ಪ್ರತಿಪಾದನೆ, ವ್ಯಾಜ್ಯ, ಮಾಲೀಕತ್ವ, ಆಸಕ್ತಿ ಹೊಂದಿದ್ದಾರೆ ಎಂಬುದರ ಬಗ್ಗೆ ದಾಖಲೆಗಳ ಸಹಿತ, ಈ ಸಾರ್ವಜನಿಕ ಪ್ರಕಟಣೆ ಪ್ರಕಟಗೊಂಡ 10 (**ಹತ್ತು**) ದಿನಗಳೊಳಗೆ ಕೆಳಗೆ ಸಹಿ ಮಾಡಿರುವವರಿಗೆ ಲಿಖಿತ ರೂಪದಲ್ಲಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದು, ಸದರಿ ಅವಧಿಯಲ್ಲಿ ಅಂತಹ ಯವುದೇ ಹಕ್ಕು ಪ್ರತಿಪಾದನೆ, ಮಾಲೀಕತ್ವ ಅಥವಾ ಆಕ್ಷೇಪಣೆಗಳು ಬಾರದಿದ್ದ ಪಕ್ಷದಲ್ಲಿ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅಥವಾ ಅದರ ಯಾವುದೇ ಭಾಗಶಃ ಜಮೀನಿಗೆ ಸಂಬಂಧಿಸಿದಂತೆ ಮೇಲಿನ ಮಾಲೀಕರ ಹೊರತಾಗಿ ಮತ್ಯಾರಿಗೂ ಯಾವುದೇ ಹಕ್ಕು, ಅಧಿಕಾರ, ಆಸಕ್ತಿಗಳಿಲ್ಲ ಎಂದು ಪರಿಗಣಿಸಿ ಮತ್ತು ಷೆಡ್ಯೂಲ್ ಸ್ವತ್ತಿನ ಮೇಲೆ ಯವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಖರೀದಿಗೆ ಮುಂದಾಗುವರು. ಸದರಿ ಅವಧಿ ಮುಗಿದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ

ಷೆಡ್ಯೂಲ್ ಸ್ವತ್ತು

ಷೆಡ್ಯೂಲ್ – 1:
ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು (ಪೂರ್ವದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು), ಜಾಲ ಹೋಬಳಿ, ಬೆಟ್ಟಹಲಸೂರು ಗ್ರಾಮದಲ್ಲಿಯ ಕೆಳಗೆ ಐಟಂ ನಂ. 1 ರಿಂದ ಐಟಂ ನಂ. 8 ರಲ್ಲಿ ತೋರಿಸಿರುವ ಸರ್ವೆನಂಬರ್‌ನಲ್ಲಿ ಒಟ್ಟು 6 ಎಕರೆ 27 ಗುಂಟೆ ಮತ್ತು 15 ಗುಂಟೆ ಖರಾಬು ಇರುವ ವ್ಯವಸಾಯದ ಜಮೀನಿಗೆ ಚಕ್ಕುಬಂದಿ:–

ಐಟಂ ನಂ.	ಸರ್ವೆ ನಂ.	ವಿಸ್ತೀರ್ಣ ಎ	ಗು	ಖ	ಮಾಲೀಕರ ಹೆಸರು	ಚಕ್ಕುಬಂದಿ ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	90/5	0	19	7	ಕತ್ಯಾಯನಿ ಅಲಿಯಾಸ್ ಮಂಜುಳ ಕೋಂ ಪುಟ್ಟಲಿಂಗಯ್ಯ	ಚೊಕ್ಕನಹಳ್ಳಿ ಗಡಿ	ಸರ್ವೆ ನಂ. 89	ಸರ್ವೆ ನಂ. 90/4	ಸರ್ವೆ ನಂ. 90/6 ಮತ್ತು 90/7
2	90/6	0	9	1	ದೇವರಾಜೇಗೌಡ ಬಿನ್ ತಿಮ್ಮೇಗೌಡ	ಸರ್ವೆ ನಂ. 90/7	ಸರ್ವೆ ನಂ. 89	ಸರ್ವೆ ನಂ. 90/5	ಸರ್ವೆ ನಂ. 90/8
3	90/7	0	12	0	ದೇವರಾಜೇಗೌಡ ಬಿನ್ ತಿಮ್ಮೇಗೌಡ	ಚೊಕ್ಕನಹಳ್ಳಿ ಗಡಿ	ಸರ್ವೆ ನಂ. 90/6	ಸರ್ವೆ ನಂ. 90/5	ಸರ್ವೆ ನಂ.90/8
4	90/8	0	22	1	ದೇವರಾಜೇಗೌಡ ಬಿನ್ ತಿಮ್ಮೇಗೌಡ	ಚೊಕ್ಕನಹಳ್ಳಿ ಗಡಿ	ಸರ್ವೆ ನಂ. 89	ಸರ್ವೆ ನಂ. 90/6 ಮತ್ತು 90/7	ಸರ್ವೆ ನಂ. 90/9
5	90/9	0	11	0	ದೇವರಾಜೇಗೌಡ ಬಿನ್ ತಿಮ್ಮೇಗೌಡ	ಚೊಕ್ಕನಹಳ್ಳಿ ಗಡಿ	ಸರ್ವೆ ನಂ. 89	ಸರ್ವೆ ನಂ. 90/8	ಸರ್ವೆ ನಂ. 94
6	93/1	1	20	1	ರಾಮಾಂಜನಿ ಬಿನ್ ಮುನಿರಾಜಪ್ಪ	ಸರ್ವೆ ನಂ. 93/2	ಸರ್ವೆ ನಂ. 94/3	ಚೊಕ್ಕನಹಳ್ಳಿ ಗಡಿ	ಸರ್ವೆ ನಂ. 100
7	93/5	1	8	2	ಜಿ. ಕೆ. ಲಲಿತಮ್ಮ ಕೋಂ ವಿ. ಆರ್. ಜಯಪ್ಪ	ಸರ್ವೆ ನಂ. 93/6	ಸರ್ವೆ ನಂ. 93/4	ಸರ್ವೆ ನಂ. 92	ಸರ್ವೆ ನಂ. 100
8	94/3	2	6	3	ದೇವರಾಜೇಗೌಡ ಬಿನ್ ತಿಮ್ಮೇಗೌಡ	ಸರ್ವೆ ನಂ. 93/1	ಸರ್ವೆ ನಂ. 94/2	ಸರ್ವೆ ನಂ. 90/9	ಸರ್ವೆ ನಂ. 100

ಷೆಡ್ಯೂಲ್ – 2:
ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು (ಪೂರ್ವದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು), ಜಾಲ ಹೋಬಳಿ, ಚೊಕ್ಕನಹಳ್ಳಿ ಗ್ರಾಮದಲ್ಲಿಯ ಸರ್ವೆ ನಂಬರ್ 23, ವಿಸ್ತೀರ್ಣ 32 ಗುಂಟೆ ವ್ಯವಸಾಯದ ಜಮೀನಿಗೆ ಚಕ್ಕುಬಂದಿ:–

ಐಟಂ ನಂ.	ಸರ್ವೆ ನಂ.	ವಿಸ್ತೀರ್ಣ ಎ	ಗು	ಖ	ಮಾಲೀಕರ ಹೆಸರು	ಚಕ್ಕುಬಂದಿ ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	23	0	32	1	ಅನುರಾಧ ಕೋಂ ಕೆ. ವೀರಪ್ಪ	ಬೆಟ್ಟಹಲಸೂರು ಗ್ರಾಮದ ಗಡಿ	ಬೆಟ್ಟಹಲಸೂರು ಗ್ರಾಮದ ಗಡಿ	ಸರ್ವೆ ನಂ. 22	ಬೆಟ್ಟಹಲಸೂರು ಗ್ರಾಮದ ಗಡಿ

ದಿನಾಂಕ: 04.01.2022
ಸ್ಥಳ: ಬೆಂಗಳೂರು

ಗೆರಾಲ್ಡ್ ಮನೋಹರನ್, ಪಾಲುದಾರರು,
ವಕೀಲರು, ಜೆ. ಸಾಗರ್ ಅಸೋಸಿಯೇಟ್ಸ್, ಲೆವೆಲ್ 3,
ಪ್ರೆಸ್ಟೀಜ್ ಒಬೆಲಿಸ್ಕ್, 3, ಕಸ್ತೂರಬ ರಸ್ತೆ, ಬೆಂಗಳೂರು – 560 001,
ದೂ: 080–43503600/080–43503610, ಈ–ಮೇಲ್– gerald@jsalaw.com

PUBLIC NOTICE

Public are informed that our client have intent to purchase all that piece and parcel of property bearing **Present Sy.No.317/6** (Old 317/2), Measuring to an extent of **0.12 (Twelve) Guntas, plus 0.1 (One) Guntas of 'B' Kharab totally measuring 0-13 (Thirteen) Guntas,** Situated at : **AMANI DODDAKERE Village**, Kasaba Hobli, Hoskote Taluk, Bangalore Rural District and bounded on the:-
East by : Land belongs to Sri. Nanjundappa;
West by : Government Road;
North by : Property belongs to Sri. A.Basavaraju;
South by : Property belongs to Sri. Purushotham;
from its present Owner **Sri. A. Mahadevappa & Others**, he had acquired the same through registered Partition Deed Vide Document No. HSK-1-08250-2021-22 of Book I, Stored in CD No.HSKD1387, Dated: 29/10/2021, Registered at the office of the Sub Registrar office Hoskote, Subsequently the said Sri. A. Mahadevappa got changed and incorporated his name in all Revenue Records RTC & Mutation Vide MR H38/2021-2022.
Persons having any right over the said property may lodge their objections/claims with documentary evidence within **15 days** from this day to the undersigned. In the absence of any claims within the above said period, it shall be deemed that there are no such claims or that if there are any claims and they have not been made, it shall be deemed to have been waived.

P. NAGAMUNI REDDY,
Advocate, SNN Associates,
No.248, 2nd Floor, 10th Main, 1st Block, 100 Feet Road, HRBR Layout, Kalyan Nagar, Bengaluru - 560043, Land Mark - Near Horamavu Signal, Above Canara Bank & HDFC ATM.
M - 9945159840 / 9845475070

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/25/2021–22 ದಿನಾಂಕ: 01.01.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗು	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ	ಷರಾ
1	ಶ್ರೀ ವೇಣುಗೋಪಾಲ್ ಮುಂದಾದಾ ಬಿನ್ ಸತ್ಯನಾರಾಯಣ ಮುಂದಾದಾ	ಆನೇಕಲ್	ಕಸಬಾ	ಕುರುಬರಹಟ್ಟಿ	33	6–07	ಕೃಷಿ	ವಸತಿ	
2	ಶ್ರೀ ವಿಷ್ಣುಕಾಂತ್ ಭೂತಾಡ ಬಿನ್ ಚತುರ್ಬಜ ಭೂತಾಡ	ಆನೇಕಲ್	ಕಸಬಾ	ಕುರುಬರಹಟ್ಟಿ	35	5–15	ಕೃಷಿ	ವಸತಿ	
3	ಶ್ರೀ ವಿಷ್ಣುಕಾಂತ್ ಭೂತಾಡ ಬಿನ್ ಚತುರ್ಬಜ ಭೂತಾಡ	ಆನೇಕಲ್	ಕಸಬಾ	ಕುರುಬರಹಟ್ಟಿ	36	4–17	ಕೃಷಿ	ವಸತಿ	

ಷರಾ: ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಹಾಗೂ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸೃಷ್ಠಿಯಾಗುತ್ತದೆ. ಪ್ರಶ್ನಿತ ಜಮೀನನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಹಾಗೂ ಕಾನೂನು ಬದ್ಧವಾದ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ಉನಿನ/ಎಲ್‌ಸಿ/2658/2021–22

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಇಂಡಿಯನ್ ಓವರ್‌ಸೀಸ್ ಬ್ಯಾಂಕ್

ಎ.ಆರ್.ಎಂ. ಶಾಖೆ (2666), 3ನೇ ಮಹಡಿ, ಲಕ್ಷ್ಮೀ ನಾರಾಯಣ ಕಾಂಪ್ಲೆಕ್ಸ್, ನಂ. 10/1, ಪ್ಯಾಲೇಸ್ ರಸ್ತೆ, ವಸಂತನಗರ, ಬೆಂಗಳೂರು–560052 ಇ–ಮೇಲ್: iob2666@iob.in

ಭದ್ರತಾ ಸ್ಥಿರಾಸ್ತಿ ಸ್ವತುಗಳ ಮಾರಾಟದ ಮೆಗಾ ಮಾರಾಟ ಪ್ರಕಟಣೆ
(ಭದ್ರತಾ ಆಸಕ್ತಿಯ (Enforcement) ನಿಯಮಗಳ ನಿಯಮ 8(6)ರ ಅಡಿಯಲ್ಲಿ)

ಭದ್ರತೆ ಮತ್ತು ಆರ್ಥಿಕ ಸ್ವತ್ತುಗಳ ಪುನರ್‌ರಚನೆ ಮತ್ತು ಭದ್ರತಾ ಆಸಕ್ತಿಯ ಅಧಿನಿಯಮ 2002ರೊಂದಿಗೆ ಭದ್ರತಾ ಆಸಕ್ತಿಯ ಅಧಿನಿಯಮ (Enforcement), 2002ರ ನಿಯಮ 8(6) ಓದಿಕೊಂಡಂತೆ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ ಪ್ರಕಟಣೆ. ಸಮಸ್ತ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ (ರು) ಹಾಗೂ ಜಾಮೀನುದಾರ (ರು)ರಿಗೆ ಈ ನೋಟೀಸ್ ಮೂಲಕ ತಿಳಿಸುವುದೇನೆಂದರೆ, ಸುರಕ್ಷಿತ ಸಾಲಿಗರಿಗೆ ಅಡಮಾನಕ್ಕಿರಿಸಿದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿ ಸ್ವತ್ತುಗಳನ್ನು, ಸುರಕ್ಷಿತ ಸಾಲಿಗರಾದ ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಯವರು ರಚನಾತ್ಮಕ / ಭೌತಿಕ (ಅನ್ವಯವಾಗುವ) ಸ್ವಾಧೀನತೆಯನ್ನು ಪಡೆದಿದ್ದು, ಸಾಲಗಾರ (ರು) ಹಾಗೂ ಜಾಮೀನುದಾರ (ರು)ರಿಂದ ಬರಬೇಕಾದ ಬಾಕಿ ಮೊತ್ತ + ನಂತರದ ಬಡ್ಡಿ ಮತ್ತು ವೆಚ್ಚಗಳು ಹಾಗೂ ಯಾವುದಾದರೂ ಮರುಪಾವತಿಗಳಿದ್ದಲ್ಲಿ ಅದನ್ನು ಹೊರತುಪಡಿಸಿ ಹಿಂಪಡೆಯಲು ಸುರಕ್ಷಿತ ಸಾಲಿಗರಾದ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಇವರು ತಮ್ಮ ರಚನಾತ್ಮಕ ಸ್ವಾಧೀನತೆಯಲ್ಲಿರುವ ಸ್ಥಿರಾಸ್ತಿಯನ್ನು **20.01.2022ರಂದು "ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಏನಿದೆಯೋ ಹಾಗೆ" ಮತ್ತು "ಅಲ್ಲಿ ಏನೇನು ಇದೆಯೋ ಹಾಗೇ"** ಮಾರಾಟ ಮಾಡಲಿದ್ದಾರೆ. ಮೀಸಲು ಬೆಲೆಯು ಈ ಕೆಳಗೆ ತಿಳಿಸಿದಂತೆ (ಯಶಸ್ವಿ ಬಿಡ್‌ದಾರರಿಂದ ರೂ. 50 ಲಕ್ಷದ ಮೇಲ್ಪಟ್ಟು ಮಾರಾಟಕ್ಕೆ 1% ಆದಾಯ ತೆರಿಗೆ ರೂಪದಲ್ಲಿ ಪ್ರತ್ಯೇಕವಾಗಿ ಪಡೆಯಲಾಗುವುದು) ಮತ್ತು ಇಎಂಡಿ ಮೊತ್ತ ಈ ಕೆಳಗೆ ತಿಳಿಸಿದಂತೆ ಇರುತ್ತದೆ.

ಎಆರ್‌ಎಂ ಶಾಖೆ: ದೂ.: 9677825326

1 **ಖಾತೆಯ ಹೆಸರು:** 1. ರಾಘವೇಂದ್ರ ಕೆ.ಎಸ್. **ಸಾಲದ ಖಾತಾ ಸಂಖ್ಯೆ:** 006103351400002 **ಉಳಿದಿರುವ ಬಾಕಿ:** ರೂ. 21,18,627.00 + 01.08.2016ರಿಂದ ಖುಣಿಕೆಗೊಳ್ಳದ ಬಡ್ಡಿ ಮತ್ತು ವೆಚ್ಚಗಳು.
ಭದ್ರತಾ ವಿವರಗಳು: ಎಲ್ಲಾ ಭಾಗ ವಿಭಾಗಗಳೊಂದಿಗೆ ವಾಸದ ಮನೆಯ ಸ್ವತ್ತು (ಒಂದು ಮಹಡಿ) ನಂ. 466, ಖಾತಾ ನಂ. 614, ಕಡಕೋಳ ಗ್ರಾಮ, ಜಯಪುರ ಹೋಬಳಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ. **ಅಳತೆ:** 1360 ಚ.ಅ. (ಪೂರ್ವದಿಂದ ಪಶ್ಚಿಮಕ್ಕೆ: 34 ಅಡಿ, ಉತ್ತರದಿಂದ ದಕ್ಷಿಣಕ್ಕೆ: 40 ಅಡಿ), **ಚಕ್ಕುಬಂದಿ:** ಪೂರ್ವಕ್ಕೆ: ಗಲ್ಲಿ ಮತ್ತು ಶ್ರೀ ಸಾಹೇಬ್‌ರವರ ಮನೆ; ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಗಲ್ಲಿ ಮತ್ತು ಶ್ರೀ ಸಿದ್ದೂರಪ್ಪರವರ ಮನೆ. **ಈ ಸ್ವತ್ತು ಶ್ರೀ ರಾಘವೇಂದ್ರ ಕೆ.ಎಸ್.ರವರ ಹೆಸರಿನಲ್ಲಿದೆ.**
ಮೀಸಲು ಬೆಲೆ: ರೂ. 18,90,000.00 **ಇಎಂಡಿ:** ರೂ. 1,89,000.00 **ಬಿಡ್ ಗುಣಾಂಕ:** ರೂ. 25,000.00

2 **ಖಾತೆಯ ಹೆಸರು:** 1. ಶ್ರೀ ಸುನೀಲ್ ಜೈನ್ ಅಲಿಯಾಸ್ ಸುನೀಲ್ ಕುಮಾರ್ ಜೈನ್, 2. ಶ್ರೀ ಭರತೇಶ್ ಕುಮಾರ್ ಜೈನ್, **ಸಾಲದ ಖಾತಾ ಸಂಖ್ಯೆ:** 032303491100001. **ಉಳಿದಿರುವ ಬಾಕಿ:** ರೂ. 19,70,92,965.00 + 20.11.2015ರಿಂದ ಖುಣಿಕೆಗೊಳ್ಳದ ಬಡ್ಡಿ ಮತ್ತು ವೆಚ್ಚಗಳು.
ಭದ್ರತಾ ವಿವರಗಳು: [illegible]

	ಮೀಸಲು ಬೆಲೆ	ಇಎಂಡಿ	ಬಿಡ್ ಗುಣಾಂಕ
ಸ್ವತ್ತು ನಂ. 1	ರೂ. 5,56,50,000.00	ರೂ. 55,65,000.00	ರೂ. 50,000.00
ಸ್ವತ್ತು ನಂ. 2	ರೂ. 1,66,00,000.00	ರೂ. 16,60,000.00	ರೂ. 50,000.00
ಸ್ವತ್ತು ನಂ. 3	ರೂ. 3,60,00,000.00	ರೂ. 36,00,000.00	ರೂ. 50,000.00

3 **ಖಾತೆಯ ಹೆಸರು:** [illegible]
ಭದ್ರತಾ ವಿವರಗಳು: [illegible]
ಮೀಸಲು ಬೆಲೆ: ರೂ. 1,09,50,000.00 **ಇಎಂಡಿ:** ರೂ. 10,95,000.00 **ಬಿಡ್ ಗುಣಾಂಕ:** ರೂ. 50,000.00

[illegible]
1) www.iob.in[https://www.iob.in/TenderDetails.aspx?Tendertype=E_Auction]
2) https://www.mstcecommerce.com/auctionhome/ibapi
Contact Numbers: 080-22950320/205
ದಿನಾಂಕ : 31.12.2021
ಸ್ಥಳ : ಬೆಂಗಳೂರು

ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಪರವಾಗಿ
ಸಹಿ/–
ಅಧಿಕೃತ ಅಧಿಕಾರಿ

[illegible]

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Financial Services

NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

JOB OPPORTUNITIES

General

REQUIRMENT BANKING, Work from Home, Telecallers, Documents Collection, Salary 14000/-, 25000/- PUC any Degree. 9538450664.

Wanted

WANTED FEMALE Office Assistant Qualification any Degree, Good Communication Skills: Kannada, English, Hindi, in around Rajajinagar Contact: 23384085/ 9108458798

PERSONAL

Change of Name

I, GOVINDARAJU YASHVANTH, residing at No. FF4, Shivaganga Opal, 1st cross, BOB Layout, JP.Nagar 7th phase, Bengaluru-560078, have changed my name to GOVINDARAJU SRI HARI, vide affidavit dated 03.01.2022 before Notary C. Sasikala, Bangalore.

I, SHOBANA DEVI BALAKRISHNAN residing at No. 305, Navagruha Apartment, P&T Layout, Rachenahalli, Thanisandra, Bengaluru- 560045 have changed my name to SHOBANA BALAKRISHNAN affidavit dated 24.12.2021 notary V. Anjanappa, Bangalore.

CONNECT

Cotton & Silk EXHIBITION
ORG BY: MAARUTHI ENTERPRISES
HANDLOOM & JEWELLERY
SAREES, DRESS MATERIALS, KURTIES SUIT PIECES, HOME DECORATIVES
EXHIBITION CUM SALE
HANDICRAFT - HANDLOOM - JEWELLERY
29-12-2021 to 23-01-2022
• RAJASTHANI BEDSHEETS / BLANKETS • JAIPUR HAND BLOCK SHIRTS • CHANDERI SILK SAREES • MALMAL COTTON SAREES • KASHMIRI SAREES • HUBLI SAREES • KHADI SHIRTS • KHADI KURTIES • JAIPURI TOPS • STONE JEWELLERY • KODAGU SILK • KROWN SILK • BRASS ARTICLES
• RAJASTHANI HAND BAGS • JAIPUR COTTON • KEKDA • PATCHWORK • KANTHWORK • SANGAM BEDSHEETS • TOPS • BRASS ARTICLES • KASHMIRI SILK SAREES • PASHMINA • KALAMKARI SAREES & MANY • WINTER WEAR LADIES • KIDS TOYS/ FOOTWEAR
GRAND SHOPPING EXHIBITION
Mob: 78291 01092, 99299 11293
THE CANARA UNION
Building No, 42, 8th Main Rd, Mount Layout, Maruthi Extension Vinayaka Layout, Malleswara, Bengaluru, Karnataka 560003

I, YOGESHWAR Dothre @ Yogeshwar K Dothre Residing at 2-12-193/19, Naga Nilaya, Ward No. 7, Friends Colony, Lingsugur, Lingsugur Tq, Raichur District. have changed my name to YOGESHWAR CHANNUR S/o. Kareppa Channur vide affidavit dated: 03.01.2022 sworn before notary: Shashidhar H Somanal, Lingsugur

I, A. Sakaya Rajan, HAV, No. 14809435F, residing at No. 1009, Savariyarpuram, Chettiyapatti Post, Manapparai Tk, Tiruchirapalli Dt., Pin-621307, Tamil Nadu, declare that my son's name is wrongly entered in Army Records as CHRISTU RAJ instead of CHRISTHU RAJA .S., vide affidavit dated 07.10.2021 before Notary V.S. Baskaran, Trichy.

I, LAKSHMI Bai A.G alias Lakshmi Bai D/o. Arjun Naik. C.K residing at #105, 3rd main, 1st cross, MS Ramaiah Layout, Near Soundarya School, Bangalore North, Nagasandra, Bangalore-560073 have changed my name to NEHA R NAIK vide affidavit dated 30/12/2021 before notary N. Mahesha, Bangalore.

I, CHENGALA RAYA DHARMENDRA REDDY, have changed my name to DHARMENDRA REDDY CHENGALARAYA REDDY, vide affidavit dated 03-01-2022 sworn to before notary M.Rajendra, Bangalore.

PUBLIC NOTICE

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34. Ph:2553 4194.
TENDER NOTICE
Quotations are invited from reputed Companies/ Contractors for the supply of following items to KRJS Marasuru Hospital Building Project.
I)a)Z Purlin180x60x20 without holes
b) Gutter
c) Plain ridges Alfa std (0.45mm Thick)
d) Sandwich Roof Panel Puff Sheet – 50mm thick
II) Proposed Road work, Strom water drain and Entrance Wall cladding for the Marasuru Hospital Building at the Cost of Rs. 59,00,000/-.
For more details visit: www.reddyjanasangha.org
Quotations should be addressed to "The General Secretary" at the above address within 7 days from this advertisement.

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34. Ph:2553 4194.
TENDER NOTICE
Quotations are invited from authorised and experienced reputed firms
a) Exide Batteries to KRJS Institutions - 60 Nos.
b) Sports Equipments for RJS F.G. College and RJS – Institute of Management Studies.
c) Laboratory Equipments and Books to Vemana Institute of Physiotherapy
d) Non-Departmental books for the year 2022-2023 to DBM & RJS Schools.
For more details visit: www.reddyjanasangha.org
Quotations should be addressed to "The General Secretary" at the above address within 7 days from this advertisement.
General Secretary President

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds
BOOK YOUR PROPERTY TEXT AD FOR SATURDAY & SUNDAY
FOR JUST ₹ 1530/-*
For more information contact:
9880856233
9731810277 | 9901641752
9845114560 | 9886213331
*condition apply

ಬಜೆಟ್‌ನಲ್ಲಿ ನಿಗದಿಯಾಗಿದ್ದ ₹100 ಕೋಟಿ ಅನುದಾನ

• ಆರಂಭವೇ ಆಗದ ಪ್ರತ್ಯೇಕ ಪ್ರಾಧಿಕಾರ ರಚಿಸುವ ಪ್ರಕ್ರಿಯೆ

ಪೀಣ್ಯ ಅಭಿವೃದ್ಧಿ: ಬಿಡದ ಗ್ರಹಣ

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಹಾಳಾಗಿರುವ ರಸ್ತೆಯಲ್ಲಿ ಸಂಚರಿಸುತ್ತಿರುವ ವಾಹನಗಳು –ಪ್ರಜಾವಾಣಿ ಚಿತ್ರಗಳು/ ಅನೂಪ್ ರಾಘ ಟಿ.

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಪೀಣ್ಯ ಕೈಗಾರಿಕಾ ಪ್ರದೇಶದ ಅಭಿವೃದ್ಧಿಗೆ 2020-21ನೇ ಸಾಲಿನ ಬಜೆಟ್‌ನಲ್ಲಿ ₹100 ಕೋಟಿ ನಿಗದಿಯಾಗಿದ್ದರೂ ಅನುದಾನ ಬಳಕೆಗೆ ಈವರೆಗೆ ಯೋಜನೆಯೇ ರೂಪುಗೊಂಡಿಲ್ಲ. ಟೌನ್‌ಶಿಪ್ ಸ್ಥಾಪಿಸಬೇಕೋ, ಬಿಬಿಎಂಪಿ ಮೂಲಕ ಮೂಲಸೌಕರ್ಯ ಕಾಮಗಾರಿ ಆರಂಭಿಸಬೇಕೋ ಎಂಬ ಗೊಂದಲದಲ್ಲೇ ಸರ್ಕಾರವಿದ್ದು, ಕೈಗಾರಿಕಾ ಪ್ರದೇಶದ ಅಭಿವೃದ್ಧಿಗೆ ಹಿಡಿದಿರುವ ಗ್ರಹಣ ಸದ್ಯಕ್ಕೆ ಬಿಡುಗಡೆಯಾಗುವ ಲಕ್ಷಣ ಕಾಣಿಸುತ್ತಿಲ್ಲ.

‘ಉತ್ಪಾದನಾ ವಲಯದ ಇನ್ನಷ್ಟು ಕೈಗಾರಿಕೆಗಳನ್ನು ಆಕರ್ಷಿಸುವ ಉದ್ದೇಶದಿಂದ ಪೀಣ್ಯದಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಟೌನ್‌ಶಿಪ್) ಸ್ಥಾಪಿಸಲಾಗುವುದು. ₹100 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ ಕಲ್ಪಿಸಲಾಗುವುದು’ ಎಂದು 2021-22ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಆದರೆ, ಪ್ರಾಧಿಕಾರ ರಚನೆ ಮಾಡುವ ನಿಟ್ಟಿನಲ್ಲಿ ಯಾವ ಪ್ರಕ್ರಿಯೆಯೂ ಈವರೆಗೆ ಆರಂಭವಾಗಿಲ್ಲ.

ಎಲೆಕ್ಟ್ರಾನಿಕ್ ಸಿಟಿ ಕೈಗಾರಿಕಾ ಉಪನಗರ ಪ್ರಾಧಿಕಾರದ ಪ್ರತಿನಿಧಿ, ಎಂಎಸ್‌ಎಂಇ ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶಕ, ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಮತ್ತು ಬಿಬಿಎಂಪಿ ದಾಸರಹಳ್ಳಿ ವಲಯದ ಜಂಟಿ ನಿರ್ದೇಶಕರ ಸಮ್ಮುಖದಲ್ಲಿ ಒಂದು ಸುತ್ತಿನ ಪೂರ್ವಭಾವಿ ಸಭೆ ನಡೆದಿರುವುದು ಹೊರತುಪಡಿಸಿ ಟೌನ್‌ಶಿಪ್ ರಚನೆ ಸಂಬಂಧ ಯಾವುದೇ ಪ್ರಕ್ರಿಯೆಯೂ ಮುಂದುವರಿದಿಲ್ಲ.

‘ಒಟ್ಟು 1,570 ಎಕರೆ ಪ್ರದೇಶದಲ್ಲಿರುವ ಪೀಣ್ಯ ಕೈಗಾರಿಕಾ ಪ್ರದೇಶವನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ (ಕೆಎಸ್‌ಎಸ್‌ಐಡಿಸಿ) ಮೂಲಕ ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡಲಾಗುತ್ತಿದೆ. ಆಸ್ತಿ ತೆರಿಗೆ ಹೆಸರಿನಲ್ಲಿ ನೂರಾರು ಕೋಟಿ ವರಮಾನ ಬಿಬಿಎಂಪಿಗೂ ಸಂದಾಯವಾಗುತ್ತಿದೆ. ಆದರೆ, ವರ್ಷಕ್ಕೆ ₹20 ಕೋಟಿಯಷ್ಟು ಮೊತ್ತವೂ ಇಲ್ಲಿನ ಮೂಲಸೌಕರ್ಯ ಅಭಿವೃದ್ಧಿಗೆ ವಿನಿಯೋಗ ಆಗುತ್ತಿಲ್ಲ’ ಎಂದು ಪೀಣ್ಯ ಕೈಗಾರಿಕಾ ಸಂಘದ ನಿಕಟಪೂರ್ವ ಅಧ್ಯಕ್ಷ ಸಿ.ಪ್ರಕಾಶ್ ಬೇಸರ ವ್ಯಕ್ತಪಡಿಸುತ್ತಾರೆ.

ಸಿ. ಪ್ರಕಾಶ್

‘ಪ್ರತ್ಯೇಕ ಪ್ರಾಧಿಕಾರ ರಚನೆಯಾದರೆ ಅದರ ಮೂಲಕ ಸಂಗ್ರಹವಾಗುವ ಆಸ್ತಿ ತೆರಿಗೆಯಲ್ಲಿ ಸರ್ಕಾರಕ್ಕೂ ಶೇ 50ರಷ್ಟು ನೀಡಿ, ಉಳಿದ ಹಣವನ್ನು ಈ ಪ್ರದೇಶದ ಅಭಿವೃದ್ಧಿಗೆ ಬಳಸಿಕೊಳ್ಳಲು ಸಾಧ್ಯವಿದೆ. ಆಗ ಮಾತ್ರ ಈ ಪ್ರದೇಶದ ಅಭಿವೃದ್ಧಿ ಸಾಧ್ಯವಾಗಲಿದೆ. ಮೂಲಸೌಕರ್ಯ ಸಮರ್ಪಕವಾಗಿ ಕಲ್ಪಿಸಿಕೊಳ್ಳಲು ಸಾಧ್ಯ’ ಎಂಬುದು ಅವರ ಅಭಿಪ್ರಾಯ.

ಪೀಣ್ಯ ಕೈಗಾರಿಕಾ ಪ್ರದೇಶದ ರಸ್ತೆಯ ಸ್ಥಿತಿ

10 ಸಾವಿರ — ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಕೈಗಾರಿಕೆಗಳ ಸಂಖ್ಯೆ

45 ಚದರ ಕಿ. ಮೀ. — ಪೀಣ್ಯ ಕೈಗಾರಿಕಾ ಪ್ರದೇಶದ ವಿಸ್ತೀರ್ಣ

8 ಲಕ್ಷ — ಪೀಣ್ಯ ಕೈಗಾರಿಕಾ ಪ್ರದೇಶ ವ್ಯಾಪ್ತಿಯ ಜನಸಂಖ್ಯೆ

ಬಿಬಿಎಂಪಿ ಮೂಲಕವೇ ಕಾಮಗಾರಿ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದೇನೆ. ಪೀಣ್ಯ ಅಭಿವೃದ್ಧಿ ಪ್ರಾಧಿಕಾರ ರಚಿಸುವುದು, ಬಿಡುವುದು ಮುಖ್ಯಮಂತ್ರಿ ಅವರಿಗೆ ಬಿಟ್ಟ ವಿಷಯ.

–ಮುನಿರತ್ನ, ತೋಟಗಾರಿಕಾ ಸಚಿವ

ಪ್ರತ್ಯೇಕ ಪ್ರಾಧಿಕಾರ ರಚನೆ ಮಾಡಿ ಅದರ ಮೂಲಕ ₹100 ಕೋಟಿ ಅನುದಾನ ಬಳಸುವ ಬದಲು ಬಿಬಿಎಂಪಿ ಮೂಲಕವೇ ಮೂಲಸೌಕರ್ಯ ಕಾಮಗಾರಿ ಕೈಗೆತ್ತಿಕೊಳ್ಳಬೇಕು ಎಂದು ಈ ಭಾಗದ ಜನಪ್ರತಿನಿಧಿಗಳು ಒತ್ತಾಯಿಸಿದ್ದಾರೆ. ‘ಪ್ರಾಧಿಕಾರ ರಚಿಸಿ ಅದರ ಮೂಲಕ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳುವುದು ವಿಳಂಬವಾಗಲಿದೆ. ಪೀಣ್ಯ ಕೈಗಾರಿಕಾ ಪ್ರದೇಶವನ್ನು ಈಗಾಗಲೇ ಬಿಬಿಎಂಪಿ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ. ಪಾಲಿಕೆ ಮೂಲಕವೇ ಕಾಮಗಾರಿ ಕೈಗೆತ್ತಿಕೊಳ್ಳುವುದು ಸೂಕ್ತ’ ಎಂದು ತೋಟಗಾರಿಕಾ ಸಚಿವ ಎನ್. ಮುನಿರತ್ನ ಮತ್ತು ಶಾಸಕ ಆರ್. ಮಂಜುನಾಥ್ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

‘ಈ ಅನುದಾನವನ್ನು ಬಿಬಿಎಂಪಿಗೆ ವರ್ಗಾಯಿಸಲು ಸಾಧ್ಯವೇ ಎಂಬುದರ ಕುರಿತು ಅಭಿಪ್ರಾಯ ತಿಳಿಸುವಂತೆ ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದ್ದಾರೆ. ಈ ಬೆಳವಣಿಗೆ ಗಮನಿಸಿದರೆ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಪ್ರತ್ಯೇಕ ಪ್ರಾಧಿಕಾರ ರಚನೆ ಮಾಡುವ ಉದ್ದೇಶವನ್ನು ಸರ್ಕಾರ ಕೈಬಿಟ್ಟಂತಿದೆ’ ಎಂದು ಬೇಸರ ವ್ಯಕ್ತಪಡಿಸುತ್ತಾರೆ ಪೀಣ್ಯ ಪ್ರದೇಶದ ಕೈಗಾರಿಕೋದ್ಯಮಿಗಳು.

ಪ್ರತ್ಯೇಕ ಪ್ರಾಧಿಕಾರ ರಚನೆಯೊಂದೇ ಪರಿಹಾರ

ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಮೂಲ ಸೌಕರ್ಯ ಕಲ್ಪಿಸಲು ಪ್ರಾಧಿಕಾರ ರಚಿಸುವುದಾಗಿ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದನ್ನು ಬಿಟ್ಟರೆ ಯಾವ ಪ್ರಕ್ರಿಯೆಯೂ ಆರಂಭವೇ ಆಗಿಲ್ಲ. ಕೈಗಾರಿಕಾ ಪ್ರದೇಶದಲ್ಲಿ ಮತದಾರರು ಇಲ್ಲದಿರುವುದಕ್ಕೆ ಮೂಲಸೌಕರ್ಯ ಒದಗಿಸಲು ಜನ ಪ್ರತಿನಿಧಿಗಳು ಮನಸು ಮಾಡುವುದಿಲ್ಲ. ಪೀಣ್ಯ ಕೈಗಾರಿಕಾ ಪ್ರದೇಶದ ಅಭಿವೃದ್ಧಿಗೆ ಪ್ರತ್ಯೇಕ ಪ್ರಾಧಿಕಾರ ರಚನೆ ಮಾಡುವುದೊಂದೇ ಪರಿಹಾರ. ಆದರೆ, ಕೆಲ ಜನಪ್ರತಿನಿಧಿಗಳು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಪ್ರಾಧಿಕಾರ ರಚನೆ ಆಗಲೇಬೇಕು ಎಂದು ಕೈಗಾರಿಕೋದ್ಯಮಿಗಳು ಒತ್ತಡ ಹೇರುತ್ತಿದ್ದೇವೆ.

–ಡಿ.ಟಿ. ವೆಂಕಟೇಶ್, ಪೀಣ್ಯ ಕೈಗಾರಿಕಾ ಸಂಘದ ಮಾಜಿ ಅಧ್ಯಕ್ಷ

‘ತಡ ಮಾಡದೆ ಕಾಮಗಾರಿ ಆರಂಭಿಸಲಿ’

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಹಲವು ವರ್ಷಗಳಿಂದ ರಸ್ತೆಗಳು ಅಭಿವೃದ್ಧಿಯೇ ಆಗಿಲ್ಲ. ರಸ್ತೆಗಳೆಲ್ಲಾ ಗುಂಡಿ ಬಿದ್ದು ವಾಹನ ಸಂಚಾರಕ್ಕೆ ಕಷ್ಟವಾಗಿದೆ. ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಈ ಪ್ರದೇಶ ಅಭಿವೃದ್ಧಿಗೆ ಮಂಜೂರು ಮಾಡಿದ್ದ ಹಣವನ್ನೂ ಬಿಜೆಪಿ ನೇತೃತ್ವದ ಸರ್ಕಾರ ವಾಪಸ್ ಪಡೆಯಿತು. 2020–21ರ ಬಜೆಟ್‌ನಲ್ಲಿ ನಿಗದಿ ಮಾಡಿರುವ ₹100 ಕೋಟಿಯಲ್ಲಿ ಇನ್ನೂ ಕಾಮಗಾರಿ ಆರಂಭಿಸಿಲ್ಲ. ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಪ್ರತ್ಯೇಕ ಪ್ರಾಧಿಕಾರ ರಚಿಸಿ ಅದರ ಮೂಲಕ ಮೂಲ ಸೌಕರ್ಯ ಕಲ್ಪಿಸುವುದು ವಿಳಂಬವಾಗಲಿದೆ. ಬಿಬಿಎಂಪಿ ಮೂಲಕ ಕಾಮಗಾರಿಗಳನ್ನು ಆರಂಭಿಸಬೇಕು ಎಂದು ಏಪ್ರಿಲ್‌ನಲ್ಲೇ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದೇನೆ. ಈವರೆಗೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ಕಾಮಗಾರಿ ಆರಂಭಿಸಿ ಜನರಿಗೆ ಅನುಕೂಲ ಮಾಡಬೇಕು.

–ಆರ್. ಮಂಜುನಾಥ್, ಶಾಸಕ

‘ಬಿಬಿಎಂಪಿ ಮೂಲಕವೇ ಕಾಮಗಾರಿ ಆರಂಭಿಸಲಿ’

ಪೀಣ್ಯ ಕೈಗಾರಿಕಾ ಪ್ರದೇಶದ ಆಜುಬಾಜಿನಲ್ಲಿ ಕೆಲವು ಹಳ್ಳಿಗಳೂ ಹೊಂದಿಕೊಂಡಿವೆ. ಈ ಹಳ್ಳಿಗಳ ಅಭಿವೃದ್ಧಿಯ ಹೊಣೆಯನ್ನೂ ಪ್ರಾಧಿಕಾರ ಹೊರುವುದು ಕಷ್ಟವಾಗಲಿದೆ. ಈ ರೀತಿಯ ಹಲವು ತೊಡಕುಗಳಿವೆ. ಎಲ್ಲಾ ಸಾಧಕ– ಬಾಧಕ ಪರಿಶೀಲಿಸಿ ಪ್ರಾಧಿಕಾರ ರಚನೆಯಾಗಲು ಸಾಕಷ್ಟು ಸಮಯಾವಕಾಶ ಬೇಕಾಗಲಿದೆ. ಕಾಯುತ್ತಾ ಕುಳಿತರೆ ಬಜೆಟ್‌ನಲ್ಲಿ ಮೀಸಲಿಟ್ಟಿರುವ ಅನುದಾನ ವಾಪಸ್ ಹೋಗಲಿದೆ. ಆದ್ದರಿಂದ ಬಿಬಿಎಂಪಿ ಮೂಲಕವೇ ಕಾಮಗಾರಿ ಕೈಗೆತ್ತಿಕೊಂಡು ಆದಷ್ಟು ಬೇಗ ಮೂಲ ಸೌಕರ್ಯ ಒದಗಿಸುವಂತೆ ಸಚಿವ ಎನ್.ಮುನಿರತ್ನ ಮತ್ತು ಶಾಸಕ ಆರ್. ಮಂಜುನಾಥ್ ಅವರಿಗೆ ಮನವಿ ಸಲ್ಲಿಸಿದ್ದೆವು. ಹಾಳಾಗಿರುವ ರಸ್ತೆ ಮತ್ತು ಚರಂಡಿಗಳ ಅಭಿವೃದ್ಧಿ ಕಾರ್ಯವನ್ನು ಆದಷ್ಟು ಬೇಗ ಸರ್ಕಾರ ಕೈಗೆತ್ತಿಕೊಳ್ಳಬೇಕು.

–ಮುರಳಿಕೃಷ್ಣ ಬಿ., ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ

ಅಕ್ರಮ ಹಣ ಕಾಯ್ದೆಯಡಿ ಪ್ರಕರಣ ದಾಖಲು • ತನಿಖೆ ಆರಂಭಿಸಿದ ಜಾರಿ ನಿರ್ದೇಶನಾಲಯ

ಸ್ವಚ್ಛ ಭಾರತ ಯೋಜನೆ: ₹108 ಕೋಟಿ ದುರ್ಬಳಕೆ

• ಮಂಜುನಾಥ ಹೆಬ್ಬಾರ್

ಮುಖ್ಯಾಂಶಗಳು

- ಸ್ವಚ್ಛ ಭಾರತ ಯೋಜನೆಯ ₹92 ಕೋಟಿ ಅನ್ಯ ಉದ್ದೇಶಕ್ಕೆ ಬಳಕೆಯಾದ ಬಗ್ಗೆ ದೂರು
- ಕಾಮಗಾರಿಗಳ ವಿವರ ಕೇಳಿದ ಜಾರಿ ನಿರ್ದೇಶನಾಲಯ
- ತನಿಖೆಗೆ ಸಹಕರಿಸುವಂತೆ ನಗರಾಭಿವೃದ್ಧಿ ಇಲಾಖೆಯಿಂದ ಬಿಬಿಎಂಪಿಗೆ ಸೂಚನೆ

ಬೆಂಗಳೂರು: ಕಾಮಗಾರಿ ಭ್ರಷ್ಟಾಚಾರದ ವಿಷಯದಲ್ಲಿ ಸದಾ ಸದ್ದು ಮಾಡುತ್ತಲೇ ಇರುವ ಬಿಬಿಎಂಪಿಯಲ್ಲಿ ‘ಸ್ವಚ್ಛ ಭಾರತ್ ಅಭಿಯಾನ’ದ ಹಣವನ್ನೂ ದುರ್ಬಳಕೆ ಮಾಡಿಕೊಂಡಿರುವ ಪ್ರಕರಣ ಪತ್ತೆಯಾಗಿದೆ. ಕೇಂದ್ರ ಸರ್ಕಾರ ಈ ಉದ್ದೇಶಕ್ಕೆ ನೀಡಿದ್ದ ₹108 ಕೋಟಿ ಅನುದಾನ ದುರುಪಯೋಗವಾಗಿರುವ ಬಗ್ಗೆ ಜಾರಿ ನಿರ್ದೇಶನಾಲಯ (ಇ.ಡಿ) ತನಿಖೆ ಆರಂಭಿಸಿದೆ.

ಅಕ್ರಮ ಹಣ ವರ್ಗಾವಣೆ ಕಾಯ್ದೆ–2002ರಡಿ ಪ್ರಕರಣ ದಾಖಲಿಸಿಕೊಂಡಿರುವ ಇ.ಡಿ, ಆಂತರಿಕ ತನಿಖಾ ವರದಿಯನ್ನು ದಾಖಲೆ ಸಮೇತ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದೆ.

ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿಗಳ ಸಮಗ್ರ ಮಾಹಿತಿಯನ್ನು ತುರ್ತಾಗಿ ಒದಗಿಸುವಂತೆ ಜಾರಿ ನಿರ್ದೇಶನಾಲಯದ ಬೆಂಗಳೂರು ವಲಯದ ಉಪನಿರ್ದೇಶಕ ಮನಿ ಸಿಂಗ್ ಅವರು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ 2021ರ ಡಿಸೆಂಬರ್ 20ರಂದು ಪತ್ರ ಬರೆದಿದ್ದಾರೆ. ರಾಕೇಶ್ ಸಿಂಗ್ ಅವರು, ಬಿಬಿಎಂಪಿಯ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಡಿಸೆಂಬರ್ 30ರಂದು ಪತ್ರ ಬರೆದು, ಅಗತ್ಯ ಮಾಹಿತಿಯನ್ನು ತುರ್ತಾಗಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಜತೆಗೆ, ಈ ಪ್ರಕರಣದ ಬಗ್ಗೆ ಅರಿವು ಇರುವ ಅಧಿಕಾರಿಯನ್ನು ನಿಯೋಜಿಸಿ, ಜಾರಿ ನಿರ್ದೇಶನಾಲಯದ ತನಿಖೆಗೆ ಸಹಕರಿಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದಾರೆ.

ಇ.ಡಿ. ಪತ್ರದಲ್ಲಿ ಏನಿದೆ?: ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಿದ ಪ್ರಕರಣದಲ್ಲಿ ಪಾಲಿಕೆಯ ಅಧಿಕಾರಿಗಳು ಭಾಗಿಯಾಗಿದ್ದು, ಈ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಆಂತರಿಕ ತನಿಖೆಯ ವರದಿಯನ್ನು ದಾಖಲೆ ಸಮೇತ ಸಲ್ಲಿಸಬೇಕು. ಸ್ವಚ್ಛ ಭಾರತ ಅಭಿಯಾನದ ₹108 ಕೋಟಿ ಅನುದಾನ ಬಿಡುಗಡೆಯಾದ ವಿವಿಧ ಹಂತಗಳ ವಿವರಗಳನ್ನು ಮತ್ತು ವೆಚ್ಚದ ಮಾಹಿತಿಯನ್ನೂ ಒದಗಿಸಬೇಕು. ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಿದ ಅಧಿಕಾರಿಗಳ ಹೆಸರು, ಹುದ್ದೆ, ಈಗ ಕಾರ್ಯನಿರ್ವಹಿಸುತ್ತಿರುವ ಸ್ಥಳ, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯ ವಿವರಗಳನ್ನೂ ನೀಡಬೇಕು ಎಂದು ಜಾರಿ ನಿರ್ದೇಶನಾಲಯ ಸೂಚಿಸಿದೆ.

ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಿ ಕೈಗೊಂಡ ಕಾಮಗಾರಿಗಳ ವಿವರ, ಕಾರ್ಯಾದೇಶ, ಮೊತ್ತ, ಗುತ್ತಿಗೆದಾರರ ಹೆಸರನ್ನು ಒದಗಿಸಬೇಕು. ಈ ಕಾಮಗಾರಿಗಳು ಪೂರ್ಣ ಆಗಿವೆಯೇ ಇಲ್ಲವೇ ಎಂಬ ಬಗ್ಗೆ ಮಾಹಿತಿ ಕೊಡಬೇಕು. ಈ ದಾಖಲೆಗಳ ಬಗ್ಗೆ ಮಾಹಿತಿ ನೀಡಲು ಹಾಗೂ ತನಿಖೆಗೆ ಸಹಕಾರ ನೀಡಲು ಅಧಿಕಾರಿಯೊಬ್ಬರನ್ನು ನಿಯೋಜಿಸಬೇಕು ಎಂದು ಮನಿ ಸಿಂಗ್ ಅವರು ಪತ್ರದಲ್ಲಿ ಕೋರಿದ್ದರು.

ಪ್ರಜಾವಾಣಿ ವಿಶೇಷ

2015–16ರಿಂದ 2017–18ರ ಅವಧಿಯಲ್ಲಿ ಸ್ವಚ್ಛ ಭಾರತ ಯೋಜನೆಗೆ ಬಿಡುಗಡೆಯಾದ ₹108 ಕೋಟಿಯಲ್ಲಿ ₹92 ಕೋಟಿಯನ್ನು ಬೇರೆ ಕಾರ್ಯಕ್ರಮಗಳಿಗೆ ಬಳಸಿ ಅಧಿಕಾರಿಗಳು ಅಧಿಕಾರ ದುರುಪಯೋಗ ಮಾಡಿದ್ದಾರೆ ಎಂದು ರಾಜ್ಯ ಸರ್ಕಾರಕ್ಕೆ ಹಾಗೂ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ದೂರು ಸಲ್ಲಿಕೆಯಾಗಿತ್ತು. ಈ ಅನುದಾನವನ್ನು ರಸ್ತೆ ಅಭಿವೃದ್ಧಿ, ಪಾದಚಾರಿ ಮಾರ್ಗ, ಚರಂಡಿ ಅಭಿವೃದ್ಧಿಗೆ ಬಳಸಲಾಗಿದೆ. ಇದರಲ್ಲಿ ನಗರದ ಕೆಲವು ಜನಪ್ರತಿನಿಧಿಗಳು ಸಹ ಭಾಗಿಯಾಗಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿತ್ತು. ಈ ಬಗ್ಗೆ ನಗರಾಭಿವೃದ್ಧಿ ಇಲಾಖೆ ಆಂತರಿಕ ತನಿಖೆ ನಡೆಸಿತ್ತು. ಬಳಿಕ ಪ್ರಕರಣವನ್ನು ಎಸಿಬಿಗೆ ವಹಿಸಲಾಗಿತ್ತು. ಈ ನಡುವೆ, ಜಾರಿ ನಿರ್ದೇಶನಾಲಯವೂ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿದೆ.

ಬಿಬಿಎಂಪಿ: 29 ಸಾವಿರ ಮಕ್ಕಳಿಗೆ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 15ರಿಂದ 18 ವರ್ಷದ ಒಳಗಿನ 29,423 ಮಕ್ಕಳಿಗೆ ಸೋಮವಾರ ಕೋವಿಡ್ ವಿರುದ್ಧದ ಲಸಿಕೆ ನೀಡಲಾಯಿತು.

5,482 ಶಾಲೆಗಳು ಮತ್ತು 577 ಪದವಿಪೂರ್ವ ಕಾಲೇಜಿನ 4.41 ಲಕ್ಷ ವಿದ್ಯಾರ್ಥಿಗಳಿಗೆ ಲಸಿಕೆ ನೀಡಲು ಉದ್ದೇಶಿಸಲಾಗಿದೆ. ಶಿಕ್ಷಣ ಇಲಾಖೆ ಮತ್ತು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಗಳ ಸಮನ್ವಯದೊಂದಿಗೆ ಬಿಬಿಎಂಪಿಯು ಲಸಿಕಾ ಅಭಿಯಾನವನ್ನು ಹಮ್ಮಿಕೊಂಡಿದೆ.

ನಗರದ ಭೈರವೇಶ್ವರ ನಗರದಲ್ಲಿರುವ ಪಾಲಿಕೆಯ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ ಎಸ್ಸೆಸ್ಸೆಲ್ಸಿಯ ಎಂಟು ವಿದ್ಯಾರ್ಥಿಗಳಿಗೆ ಮೊದಲ ಡೋಸ್ ನೀಡಲಾಯಿತು.

196 ಶಾಲೆಗಳು ಮತ್ತು 59 ಕಾಲೇಜುಗಳಲ್ಲಿ ಲಸಿಕೆ ನೀಡಲಾಯಿತು. ಸೋಮವಾರ 40,639 ಮಕ್ಕಳಿಗೆ ಲಸಿಕೆ ನೀಡುವ ಬಗ್ಗೆ ಗುರಿ ನಿಗದಿಪಡಿಸಲಾಗಿತ್ತು. ಇವರಲ್ಲಿ 29,423 ಲಸಿಕೆ ನೀಡಲಾಗಿದೆ.

ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಲಸಿಕೆ ನೀಡುವ ಕುರಿತು ಜಾಗೃತಿ ಶಿಬಿರಗಳನ್ನು ನಡೆಸಲಾಗುತ್ತಿದೆ. ವಿದ್ಯಾರ್ಥಿಗಳು ತಮ್ಮ ಸ್ವಂತ ಅಥವಾ ಪೋಷಕರ ಮೊಬೈಲ್ ಸಂಖ್ಯೆಗಳನ್ನು ಬಳಸಿ ನೋಂದಾಯಿಸಿಕೊಳ್ಳಬಹುದು. ಸಂಸ್ಥೆಯ ಮುಖ್ಯಸ್ಥರ ಮೊಬೈಲ್ ಸಂಖ್ಯೆಯನ್ನು ಸಹ ಬಳಸಬಹುದು. ಒಂದು ಮೊಬೈಲ್ ಸಂಖ್ಯೆಯಿಂದ ಆರು ಮಕ್ಕಳು ನೋಂದಾಯಿಸಿಕೊಳ್ಳಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.





ಹೊರಗೆ ಹೋಗುವಾಗ ಮುಖಗವಸು ಧರಿಸಿ

ಸಂಕ್ಷಿಪ್ತ ಸುದ್ದಿ

ಲಸಿಕೆ ಕಡ್ಡಾಯ: ಕೆಲ ಶಾಲೆಗಳ ನಿರ್ದೇಶನ

ಬೆಂಗಳೂರು: ‘ವಿದ್ಯಾರ್ಥಿಗಳು ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳಬೇಕು’ ಎಂದು ಕೆಲ ಖಾಸಗಿ ಅನುದಾನರಹಿತ ಶಾಲೆಗಳು ಸಂದೇಶ ಕಳುಹಿಸಿವೆ.

15ರಿಂದ 18 ವರ್ಷದ ಒಳಗಿನ ಮಕ್ಕಳಿಗೆ ಲಸಿಕೆ ನೀಡುವ ಅಭಿಯಾನ ಆರಂಭವಾಗುತ್ತಿದ್ದಂತೆಯೇ ಶಾಲೆಗಳು ಈ ಕ್ರಮಕೈಗೊಂಡಿವೆ. ಆದರೆ, ಪೋಷಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ನನ್ನ ಮಗಳು ಓದುವ ಶಾಲೆಯಲ್ಲಿ ಲಸಿಕೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಶಾಲೆಗಳಲ್ಲಿ ಅಥವಾ ಯಾವುದಾದರೂ ಕೇಂದ್ರಗಳಲ್ಲಿ ಲಸಿಕೆ ಪಡೆದುಕೊಳ್ಳಬೇಕು. ಜನವರಿ 2ನೇ ವಾರದಿಂದ ಆನ್‌ಲೈನ್ ಅಥವಾ ಆಫ್‌ಲೈನ್‌ನಲ್ಲಿ ತರಗತಿಗಳಿಗೆ ಹಾಜರಾಗಬೇಕಾದರೆ ಕಡ್ಡಾಯವಾಗಿ ಲಸಿಕೆ ಪಡೆದಿರುವ ಪ್ರಮಾಣಪತ್ರ ಸಲ್ಲಿಸಲು ಸೂಚಿಸಲಾಗಿದೆ’ ಎಂದು ಪೋಷಕರೊಬ್ಬರು ತಿಳಿಸಿದ್ದಾರೆ.

ಲಸಿಕೆ ಪಡೆಯದಿದ್ದರೆ ಕೆಲವು ಶಾಲೆಗಳಲ್ಲಿ ವಾರ್ಷಿಕ ಪರೀಕ್ಷೆ ಬರೆಯಲು ಸಹ ಅವಕಾಶ ನೀಡುವುದಿಲ್ಲ ಎಂದು ಎಚ್ಚರಿಕೆ ನೀಡಿವೆ.

‘ಶಾಲೆಗಳು ಈ ರೀತಿ ಕಳುಹಿಸುತ್ತಿರುವ ಸಂದೇಶಗಳಿಂದ ಆಘಾತವಾಗಿದೆ. ಇದು ಯಾವ ನಿಯಮ? ಈ ಬಗ್ಗೆ ಅಧಿಕಾರಿಗಳು ಶಾಲೆಗಳಿಗೆ ನಿರ್ದೇಶನ ನೀಡಬೇಕು’ ಎಂದು ಇನ್ನೊಬ್ಬ ಪೋಷಕರು ಒತ್ತಾಯಿ ಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಶಿಕ್ಷಣ ಇಲಾಖೆ ಆಯುಕ್ತ ಡಾ.ಆರ್. ವಿಶಾಲ್, ‘ಲಸಿಕೆ ಕಡ್ಡಾಯವಲ್ಲ. ಆದರೆ, ಸಕಾರಾತ್ಮಕ ಮನೋಭಾವದಿಂದ ಮಕ್ಕಳಿಗೆ ಲಸಿಕೆ ಹಾಕಿಸಲು ಪೋಷಕರು ಹೆಚ್ಚಿನ ಆಸಕ್ತಿ ವಹಿಸಬೇಕು’ ಎಂದು ಸಲಹೆ ನೀಡಿದ್ದಾರೆ.

ಸಹಾಯವಾಣಿ ಆರಂಭ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತೆ ಹೆಚ್ಚಳವಾಗುತ್ತಿದ್ದಂತೆಯೇ ಬಿಬಿಎಂಪಿ ಪ್ರತಿ ವಲಯದಲ್ಲೂ ಸಹಾಯವಾಣಿ ಆರಂಭಿಸಿದೆ.

‘ಪಾಲಿಕೆ ವ್ಯಾಪ್ತಿಯಲ್ಲಿ ಕೋವಿಡ್ ನಿರ್ವಹಣೆಗಾಗಿ ಎಲ್ಲಾ ಎಂಟು ವಲಯಗಳಲ್ಲಿ ನಿಯಂತ್ರಣಾ ಕೊಠಡಿಗಳನ್ನು ತೆರೆಯಲಾಗಿದ್ದು, ಅದರಲ್ಲಿ ಸಹಾಯವಾಣಿಯನ್ನೂ ಆರಂಭಿಸಲಾಗಿದೆ.

ಕೋವಿಡ್ ಪರೀಕ್ಷೆ, ಲಸಿಕೆ ಪಡೆಯುವಿಕೆ, ಚಿಕಿತ್ಸೆ ನಿರ್ಧಾರ ಪ್ರಕ್ರಿಯೆ (ಟ್ರಯಾಜಿಂಗ್), ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಆಸ್ಪತ್ರೆಗೆ ದಾಖಲಾತಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ನಿಯಂತ್ರಣ ಕೊಠಡಿಯ ಸಿಬ್ಬಂದಿಯು ದಿನದ 24 ಗಂಟೆಯೂ ಅಗತ್ಯ ಮಾಹಿತಿ ನೀಡಲಿದ್ದಾರೆ’ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಸಹಾಯವಾಣಿ ವಿವರ:
ಬೊಮ್ಮನಹಳ್ಳಿ: 8884666670
ದಾಸರಹಳ್ಳಿ: 9480683132
ಪೂರ್ವ: 9480685163
ಮಹದೇವಪುರ: 080-23010102
ಆರ್.ಆರ್.ನಗರ: 080-28601050.
ದಕ್ಷಿಣ: 8431816718
ಪಶ್ಚಿಮ: 080-68248454
ಯಲಹಂಕ: 9480685961

Bharat Petroleum
इंडियनऑयल IndianOil
हिन्दुस्तान पेट्रोलियम HP

ಪ್ರಕಟಣೆ

ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (IOC) ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (BPC) ಮತ್ತು ಹಿಂದುಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (HPC) ಇವರು ಈ ಮೂಲಕ ತಿಳಿಸುವುದೇನೆಂದರೆ, ಗ್ರಾಮೀಣ / ರೂರ್ಬನ್/ ದುರ್ಗಮ ಕ್ಷೇತ್ರ (DKV) ಗಳಿಗೆ ಎಲ್ ಪಿ ಜಿ ವಿತರಕರ ನೇಮಕಾತಿಗೆ ಮರು–ಡ್ರಾ ಮೂಲಕ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆಯನ್ನು ದಿನಾಂಕ 07th January 2022 ರಂದು ಈ ಕೆಳಗೆ ನಮೂದಿಸಲಾಗಿರುವ ವಿವರದಂತೆ ನಡೆಸುತ್ತಾರೆ :

ಕ್ರ.ಸಂ.	ಆಯಿಲ್ ಕಂಪೆನಿ	ಸ್ಥಳ	ಜಿಲ್ಲೆ	ವರ್ಗ	ಮಾರುಕಟ್ಟೆಯ ವಿಧ	ಮರು ಡ್ರಾ ಸಮಯ
1	ಐಓಸಿ	ಲಿಂಗಪುರ	ಶಿವಮೊಗ್ಗ	ಮುಕ್ತ	ಡಿಕೆವಿ	10:00 AM
2	ಐಓಸಿ	ತೂಬಿನಕೆರೆ	ಮಂಡ್ಯ	ಮುಕ್ತ(ಮ)	ಗ್ರಾಮೀಣ	10:15 AM
3	ಐಓಸಿ	ಹಾನಬಳ	ಹಾಸನ	ಎಸ್‌ಸಿ	ಗ್ರಾಮೀಣ	10:30 AM
4	ಐಓಸಿ	ರಂಗಸಮುದ್ರ	ತುಮಕೂರು	ಮುಕ್ತ(ಜಿಪಿ)	ಗ್ರಾಮೀಣ	10:45 AM
5	ಐಓಸಿ	ಕರಿಮುದ್ದನಹಳ್ಳಿ	ಮೈಸೂರು	ಎಸ್‌ಸಿ	ಗ್ರಾಮೀಣ	11:00 AM
6	ಐಓಸಿ	ತುಗಾವಹಲ್ಲಿ	ಬೀದರ್	ಎಸ್‌ಸಿ	ಡಿಕೆವಿ	11:15 AM
7	ಐಓಸಿ	ಅನಗವಾಡಿ	ಬಾಗಲಕೋಟೆ	ಮುಕ್ತ(ಪಿಹೆಚ್)	ಗ್ರಾಮೀಣ	11:30 AM
8	ಐಓಸಿ	ಹುನ್ನರಗಿ	ಬೆಳಗಾವಿ	ಎಸ್‌ಸಿ(ಮ)	ಗ್ರಾಮೀಣ	11:45 AM
9	ಐಓಸಿ	ಗೊಲ್ಗೇರಿ	ಬಿಜಾಪುರ	ಓಬಿಸಿ	ಗ್ರಾಮೀಣ	12:00 PM
10	ಐಓಸಿ	ಬೊಮ್ಮನಹಳ್ಳಿ	ಹಾವೇರಿ	ಓಬಿಸಿ	ಗ್ರಾಮೀಣ	12:15 PM
11	ಬಿಪಿಸಿ	ಅಡಲಗೆರೆ	ತುಮಕೂರು	ಓಬಿಸಿ	ಗ್ರಾಮೀಣ	12:30 PM
12	ಬಿಪಿಸಿ	ಸುಣಕಲ್‌ಬಿದ್ರಿ	ಹಾವೇರಿ	ಮುಕ್ತ(ಮ)	ಗ್ರಾಮೀಣ	12:45 PM
13	ಬಿಪಿಸಿ	ನಬಾಪುರ	ಬೆಳಗಾವಿ	ಓಬಿಸಿ	ಗ್ರಾಮೀಣ	01:00 PM
14	ಹೆಚ್‌ಪಿಸಿ	ದಬ್ಬೆಘಟ್ಟ	ತುಮಕೂರು	ಎಸ್‌ಟಿ(ಮ)	ಗ್ರಾಮೀಣ	02:15 PM
15	ಹೆಚ್‌ಪಿಸಿ	ಕೆಸಗೋಡು	ಹಾಸನ	ಮುಕ್ತ	ಡಿಕೆವಿ	02:30 PM

ಡ್ರಾ ನಡೆಯುವ ಸ್ಥಳ :

ಎಲ್ಲಾ ಸ್ಥಳಗಳಿಗೆ	**HPCL ಬೆಂಗಳೂರು LPG ಪ್ರಾ ದೇಶಿಕ ಕಚೇರಿ 3&4, ವೈಟ್‌ಫೀಲ್ಡ್ ರಸ್ತೆ ಮಹದೇವಪುರ ಪೋಸ್ಟ್ ಬೆಂಗಳೂರು – 560048**

ಮರು–ಡ್ರಾ ಗೆ ಅರ್ಹರಾದಂತಹ ಅಭ್ಯರ್ಥಿಗಳು ಭಾರತ ಸರ್ಕಾರ ನೀಡಿದಂತಹ ಯಾವುದೇ ಫೋಟೋ ಐಡೆಂಟಿಟಿ ಕಾರ್ಡ್ ನೊಂದಿಗೆ ಮೇಲೆ ತಿಳಿಸಲಾದ ದಿನಾಂಕ, ಸ್ಥಳ ಮತ್ತು ಸಮಯಕ್ಕೆ ಸರಿಯಾಗಿ ವೈಯಕ್ತಿಕವಾಗಿ ಹಾಜರಿರಲು ಕೋರಲಾಗಿದೆ.

ಬಿಬಿಎಂಪಿ ಕಟ್ಟಡ ಉಪವಿಧಿ ತಿದ್ದುಪಡಿಗೆ ನಗರಾಭಿವೃದ್ಧಿ ಇಲಾಖೆ ಸಮ್ಮತಿ? • ಅಕ್ರಮ ಹೆಚ್ಚಳ– ತಜ್ಞರ ಕಳವಳ

ಉಲ್ಲಂಘನೆ ಸಕ್ರಮ: ಮಿತಿ ಶೇ 5ರಿಂದ 15ಕ್ಕೆ ಹೆಚ್ಚಳ?

• ಮಂಜುನಾಥ ಹೆಬ್ಬಾರ್/ ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಮಂಜೂರಾತಿ ಪಡೆದ ಕಟ್ಟಡ ಯೋಜನೆಯಲ್ಲಿ ಶೇ 15ರಷ್ಟು ಉಲ್ಲಂಘನೆ ಮಾಡಿ ನಿರ್ಮಿಸಿರುವ ಕಟ್ಟಡಗಳಿಗೂ ಮುಕ್ತಾಯ ಪ್ರಮಾಣಪತ್ರ ನೀಡಲು ತಯಾರಿ ನಡೆದಿದೆ.

ಈ ಕುರಿತು ಬಿಬಿಎಂಪಿ ಸಲ್ಲಿಸಿದ್ದ ಪ್ರಸ್ತಾವಕ್ಕೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ನೇತೃತ್ವದಲ್ಲಿ 2021ರ ಡಿ. 29ರಂದು ನಡೆದ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ ಎಂದು ಬಿಬಿಎಂಪಿಯ ಮೂಲಗಳು ತಿಳಿಸಿವೆ.

ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿ ಶೇ 5ರಷ್ಟು ಮಿತಿಯವರೆಗೆ ಉಲ್ಲಂಘನೆಗಳಿಗೆ ದಂಡ ವಿಧಿಸಿ, ಮುಕ್ತಾಯ ಪ್ರಮಾಣಪತ್ರ (ಸಿ.ಸಿ) ನೀಡಲು ಬಿಬಿಎಂಪಿ ಕಟ್ಟಡ ಉಪವಿಧಿಗಳಲ್ಲಿ ಅವಕಾಶವಿದೆ. 2020 ಬಿಬಿಎಂಪಿ ಕಾಯ್ದೆಗೆ ಅನುಗುಣವಾಗಿ ಬಿಬಿಎಂಪಿ ಕಟ್ಟಡ ಉಪವಿಧಿಯನ್ನು ಪರಿಷ್ಕರಣೆ ಮಾಡುವ ಪ್ರಸ್ತಾವವನ್ನು ಬಿಬಿಎಂಪಿಯು ನಗರಾಭಿವೃದ್ಧಿ ಇಲಾಖೆಗೆ ವರ್ಷದ ಹಿಂದೆಯೇ ಸಲ್ಲಿಸಿತ್ತು. ಮಂಜೂರಾತಿ ಪಡೆದ ಕಟ್ಟಡ ಯೋಜನೆಯಿಂದ ಶೇ 15ರಷ್ಟು ಉಲ್ಲಂಘನೆಯಾಗಿದ್ದರೂ, ಅಂತಹ ಕಟ್ಟಡಗಳಿಗೆ ದಂಡ ವಿಧಿಸಿ, ಮುಕ್ತಾಯ ಪ್ರಮಾಣಪತ್ರ ನೀಡಲು ಅವಕಾಶ ಕಲ್ಪಿಸಬೇಕು ಎಂದು ಬಿಬಿಎಂಪಿ ಕೋರಿತ್ತು.

ನಗರಾಭಿವೃದ್ಧಿ ಇಲಾಖೆಯ ಎಸಿಎಸ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಬಿಬಿಎಂಪಿಯ ನಗರ ಯೋಜನೆ ಹೆಚ್ಚುವರಿ ನಿರ್ದೇಶಕ ರಘು, ಜಂಟಿ ನಿರ್ದೇಶಕರಾದ ಬಿ.ಮಂಜೇಶ್, ರಾಘವೇಂದ್ರ ಪ್ರಸಾದ್, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಜಂಟಿ ನಿರ್ದೇಶಕಿ ಶಾಂತಲಾ, ನಗರಾಭಿವೃದ್ಧಿ ಇಲಾಖೆ ಜಂಟಿ ನಿರ್ದೇಶಕಿ ಎಂ.ಗೀತಾ ಭಾಗವಹಿಸಿದ್ದರು.

ಲಂಗುಲಗಾಮಿಲ್ಲದೇ ಕಟ್ಟಡ ನಿರ್ಮಿಸುವುದನ್ನು ನಿಯಂತ್ರಿಸಲು ಹಾಗೂ ನಗರದ ಬೆಳವಣಿಗೆ ವ್ಯವಸ್ಥಿತವಾಗಿ ಇರಲಿ ಎಂಬ ಕಾರಣಕ್ಕೆ ಬಿಬಿಎಂಪಿಯು ಕಟ್ಟಡ ಉಪವಿಧಿಗಳನ್ನು (ಬೈಲಾ) ರೂಪಿಸಿದೆ. ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವ ಹೊಣೆ ಹೊತ್ತ ಬಿಬಿಎಂಪಿ ಇದರಲ್ಲಿ ವೈಫಲ್ಯ ಕಂಡಿದೆ. ತನ್ನ ವೈಫಲ್ಯವನ್ನು ಮುಚ್ಚಿಕೊಳ್ಳಲು ಈಗ ಈ ಕಟ್ಟಡ ಉಪವಿಧಿಯ ನಿಯಮವನ್ನೇ ಸಡಿಲಗೊಳಿಸುವುದು ಸರಿಯಲ್ಲ ಎಂಬ ಟೀಕೆ ವ್ಯಕ್ತವಾಗಿದೆ.

ಕಾನೂನು ಪಾಲಕರಿಗೆ ಮಾಡುವ ಅವಮಾನ: 'ಶೇ 5ರಷ್ಟು ಉಲ್ಲಂಘನೆಯನ್ನು ಸಕ್ರಮಗೊಳಿಸುವುದೇ ತಪ್ಪು. ಈಗ ಶೇ 15ರಷ್ಟು ಉಲ್ಲಂಘನೆ ಮಾಡಿರುವವರಿಗೂ ಮುಕ್ತಾಯದ ಪ್ರಮಾಣಪತ್ರ ನೀಡಲು ಹೊರಟಿರುವುದು ಕಾನೂನು ಪಾಲನೆ ಮಾಡುವವರಿಗೆ ಮಾಡುವ ಅವಮಾನ' ಎಂದು ನಗರ ಯೋಜನಾ ತಜ್ಞ ವಿ.ರವಿಚಂದರ್ ಅಭಿಪ್ರಾಯಪಟ್ಟರು.

'ಉಲ್ಲಂಘನೆ ಅನೇಕ ರೀತಿಯಲ್ಲಿ ನಡೆಯುತ್ತದೆ. ಮಾಲೀಕರು ನಿಗದಿತ ಸೆಟ್ ಬ್ಯಾಕ್ ಬಿಡದೇ ಕಟ್ಟಡ ನಿರ್ಮಿಸಿರಬಹುದು, ಕಟ್ಟಡದ ಎತ್ತರದ ಮಿತಿಯನ್ನು ಅಥವಾ ನೆಲ ಮತ್ತು ವಿಸ್ತೀರ್ಣದ ಅನುಪಾತಕ್ಕೆ (ಎಫ್ಎಆರ್) ಸಂಬಂಧಿಸಿದ ಷರತ್ತುಗಳನ್ನು ಉಲ್ಲಂಘಿಸಿರಬಹುದು ಅಥವಾ ಈ ಮೂರೂ ರೀತಿಯ ಉಲ್ಲಂಘನೆಗಳು ಆಗಿರಬಹುದು. ಅದರಲ್ಲಿ ಎಷ್ಟು ಉಲ್ಲಂಘನೆ ಆಗಿದೆ, ಅದು ಶೇ 15ರ ಮಿತಿಯ ಒಳಗೆ ಬರುತ್ತದೆಯೇ ಎಂಬುದನ್ನು ಲೆಕ್ಕ ಹಾಕಲು ಬಿಬಿಎಂಪಿ ಬಳಿ ಯಾವುದಾದರೂ ಮಾನದಂಡಗಳು ಇವೆಯೇ' ಎಂದೂ ಅವರು ಪ್ರಶ್ನಿಸಿದರು.

ಕಳ್ಳಹಾದಿ ಮೂಲಕ ಜಾರಿ: 'ಈ ಹಿಂದೆ ಬಿಜೆಪಿ ನೇತೃತ್ವದ ಸರ್ಕಾರವು ಅಕ್ರಮ ಕಟ್ಟಡಗಳಿಗೆ ಒಂದು ಬಾರಿ ದಂಡ ವಿಧಿಸಿ ಸಕ್ರಮಗೊಳಿಸಲು ಮಸೂದೆ ರೂಪಿಸಿತ್ತು. ನಾವು ಅದನ್ನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೆವು. ಅದಕ್ಕೆ ಸರ್ಕಾರ ಪ್ರಮಾಣಪತ್ರವನ್ನೂ ಸಲ್ಲಿಸಿಲ್ಲ. ಅಕ್ರಮ ಸಕ್ರಮ ಮಸೂದೆಗೆ ವಿರುದ್ಧವಾಗಿ ತೀರ್ಪು ಬರುವ ಸಾಧ್ಯತೆ ಹೆಚ್ಚು ಇದೆ. ಹಾಗಾಗಿ ಆ ಮಸೂದೆಯ ಆಶಯಗಳನ್ನೇ ಕಳ್ಳದಾರಿ ಮೂಲಕ ಜಾರಿಗೊಳಿಸಲು ಬಿಬಿಎಂಪಿ ಕಟ್ಟಡ ಉಪವಿಧಿಗಳಿಗೆ ತಿದ್ದುಪಡಿ ತರಲು ಸಿದ್ಧತೆ ನಡೆದಿದೆ' ಎಂದು ಬೆಂಗಳೂರು ಪ್ರಜಾ ವೇದಿಕೆಯ ಸಂಸ್ಥಾಪಕ ಸದಸ್ಯ ಎನ್.ಎಸ್.ಮುಕುಂದ್ ಹೇಳಿದರು.

ಜಗತ್ತಿನಲ್ಲೇ 26ನೇ ಅತಿ ದೊಡ್ಡ ನಗರ ಬೆಂಗಳೂರು. ಉಲ್ಲಂಘನೆಯನ್ನು ಸಕ್ರಮಗೊಳಿಸುತ್ತಾ ಹೋದರೆ ಈ ನಗರವನ್ನು ವ್ಯವಸ್ಥಿತವಾಗಿ ಕಟ್ಟಲು ಸಾಧ್ಯವೇ?
ಎನ್.ಎಸ್.ಮುಕುಂದ್, ಬೆಂಗಳೂರು ಪ್ರಜಾ ವೇದಿಕೆ ಸಂಸ್ಥಾಪಕ ಸದಸ್ಯ

ಉಲ್ಲಂಘನೆಯನ್ನು ಒಮ್ಮೆ ಸಕ್ರಮಗೊಳಿಸಿದರೆ, ಈ ತಪ್ಪನ್ನು ಮತ್ತೆಂದೂ ಸರಿಪಡಿಸಲು ಸಾಧ್ಯವಿಲ್ಲ. ಇದಕ್ಕೆ ಭವಿಷ್ಯದಲ್ಲಿ ಭಾರಿ ಬೆಲೆ ತೆರಬೇಕಾಗುತ್ತದೆ
ವಿ.ರವಿಚಂದರ್, ನಗರ ಯೋಜನಾ ತಜ್ಞ

ಪ್ರಜಾವಾಣಿ ವಿಶೇಷ

'ಉಲ್ಲಂಘನೆಯನ್ನು ಉತ್ತೇಜಿಸಿದಂತೆ'

'ಮಂಜೂರಾತಿ ಪಡೆದ ಕಟ್ಟಡ ಯೋಜನೆಯನ್ನು ಶೇ 15ರವರೆಗೂ ಉಲ್ಲಂಘನೆ ಮಾಡಿದರೂ, ಅದನ್ನು ಸರಿಪಡಿಸಲು ನಿಯಮಗಳಲ್ಲೇ ಅವಕಾಶ ಕಲ್ಪಿಸಿದರೆ, ಅದು ಉಲ್ಲಂಘನೆಗೆ ಉತ್ತೇಜನ ನೀಡಿದಂತೆ' ಎಂದು ನಗರ ಯೋಜನಾ ತಜ್ಞ ವಿ.ರವಿಚಂದರ್ ಅಭಿಪ್ರಾಯಪಟ್ಟರು.

ಕರ್ತವ್ಯ ನಿಭಾಯಿಸದ ಅಧಿಕಾರಿಗಳಿಗೆಷ್ಟು ದಂಡ?

'ಮಂಜೂರಾತಿ ಪಡೆದ ಕಟ್ಟಡ ಯೋಜನೆ ಉಲ್ಲಂಘಿಸಿ ಕಟ್ಟಡ ನಿರ್ಮಿಸಿದವರಿಗೆ ಒಂದು ಬಾರಿ ದಂಡ ವಿಧಿಸಿ ಅದನ್ನು ಸಕ್ರಮಗೊಳಿಸಲಾಗುತ್ತಿದೆ. ನಗರದ ಶೇ 80ರಷ್ಟು ಕಟ್ಟಡಗಳು ನಿಯಮ ಉಲ್ಲಂಘಿಸಿಯೇ ನಿರ್ಮಾಣವಾಗಿವೆ. ಉಲ್ಲಂಘನೆ ತಪ್ಪಿಸುವಲ್ಲಿ ವಿಫಲವಾದ ಅಧಿಕಾರಿಗಳೂ ಅಷ್ಟೇ ತಪ್ಪಿತಸ್ಥರು. ತಮ್ಮ ಉತ್ತರದಾಯಿತ್ವ ನಿಭಾಯಿಸದ ಅವರಿಗೆ ಎಷ್ಟು ದಂಡ ವಿಧಿಸಲಾಗುತ್ತದೆ' ಎಂದು ಎನ್.ಎಸ್.ಮುಕುಂದ್ ಪ್ರಶ್ನಿಸಿದರು.

'ಶೇ 15ರಷ್ಟು ಉಲ್ಲಂಘನೆಯನ್ನು ಸಕ್ರಮಗೊಳಿಸಿದರೆ ಕಟ್ಟಡ ಯೋಜನೆಗೆ ಮಂಜೂರಾತಿ ನೀಡುವ ವ್ಯವಸ್ಥೆಯನ್ನೇ ಅವಹೇಳನ ಮಾಡಿದಂತೆ. ಇದರಿಂದ ಬಿಬಿಎಂಪಿಗೆ ದಂಡದ ರೂಪದಲ್ಲಿ ಹಣ ಹರಿದುಬರಬಹುದು. ಆದರೆ, ಇದರಿಂದ ಉಂಟಾಗುವ ಶಾಶ್ವತ ಅನನುಕೂಲಗಳಿಂದಾಗುವ ನಷ್ಟದ ಮುಂದೆ ಇದು ಏನೂ ಅಲ್ಲ' ಎಂದರು.

'ಪ್ರತಿವರ್ಷವೂ ದಂಡ ಸಂಗ್ರಹಿಸಿ'

'ನಕ್ಷೆ ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಿಸಿದವರು ಪ್ರತಿವರ್ಷವೂ ದಂಡ ಕಟ್ಟುವಂತಹ ವ್ಯವಸ್ಥೆ ಜಾರಿ ಆಗಬೇಕು. ಆಗ ನಿಯಮ ಉಲ್ಲಂಘನೆ ಮಾಡುವವರ ಪ್ರಮಾಣವೂ ಕಡಿಮೆಯಾಗುತ್ತದೆ. ಬಿಬಿಎಂಪಿ ಈಗ ಎಷ್ಟು ವರಮಾನ ನಿರೀಕ್ಷೆ ಮಾಡಿದೆಯೋ ಅದಕ್ಕಿಂತ ಹೆಚ್ಚು ವರಮಾನವೂ ಬರುತ್ತದೆ' ಎಂದು ಎನ್.ಎಸ್.ಮುಕುಂದ್ ಸಲಹೆ ನೀಡಿದರು.

ಪತ್ರಕರ್ತ ಸುಗತ ಶ್ರೀನಿವಾಸರಾಜು (ಎಡಭಾಗದಲ್ಲಿ) ಅವರ 'ಫರೋಸ್ ಇನ್ ಎ ಫೀಲ್ಡ್' ಪುಸ್ತಕದ ಕುರಿತು ನಗರದ 'ದಿ ಬುಕ್‌ವರ್ಮ್'ನಲ್ಲಿ ಸೋಮವಾರ ನಡೆದ ಸಂವಾದದ ಸಂದರ್ಭದಲ್ಲಿ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಅವರು ಪುಸ್ತಕಕ್ಕೆ ಹಸ್ತಾಕ್ಷರ ಹಾಕಿದರು –ಪ್ರಜಾವಾಣಿ ಚಿತ್ರ

ಪಾದಚಾರಿ ಮಾರ್ಗವೇರಿದ ಬಸ್

ಬೆಂಗಳೂರು: ಚಾಲಕನಿಗೆ ಎದೆನೋವು ಕಾಣಿಸಿಕೊಂಡಿದ್ದರಿಂದ ಬಸ್‌ವೊಂದು ಪಾದಚಾರಿ ಮಾರ್ಗದ ಮೇಲೆ ಅಣತಿ ದೂರದವರೆಗೂ ಸಾಗಿ ಬಳಿಕ ನಿಂತಿದೆ.

ನಗರದ ನಾಗಾವರ–ಹೆಣ್ಣೂರು ಮುಖ್ಯ ರಸ್ತೆಯಲ್ಲಿ ಸೋಮವಾರ ಘಟನೆ ನಡೆದಿದೆ. 'ಖಾಸಗಿ ಬಸ್‌ವೊಂದು ನಾಗಾವರ–ಹೆಣ್ಣೂರು ರಸ್ತೆಯಲ್ಲಿ ಸಾಗುತ್ತಿತ್ತು. ಈ ವೇಳೆ ಚಾಲಕನಿಗೆ ಎದೆನೋವು ಕಾಣಿಸಿಕೊಂಡಿದ್ದರಿಂದ ಬಸ್ ಪಾದಚಾರಿ ಮಾರ್ಗದ ಮೇಲೆ ಸಾಗಿದೆ. ಬಸ್‌ನಲ್ಲಿ ನಾಲ್ವರು ಪ್ರಯಾಣಿಕರಿದ್ದರು. ಯಾರಿಗೂ ತೊಂದರೆಯಾಗಿಲ್ಲ. ಚಾಲಕನನ್ನು ಕೂಡಲೇ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ತ್ಯಾಜ್ಯ: ಬಿಬಿಎಂಪಿ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಚೇನಹಳ್ಳಿ ವಾರ್ಡ್‌ನ ಕನಕನಗರ ಬಡಾವಣೆಯ ರಸ್ತೆ ಬದಿಯಲ್ಲಿ ರಾಶಿ ರಾಶಿ ಕಸ ಬಿದ್ದಿದ್ದು, ಅದನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳದ ಬಿಬಿಎಂಪಿ ವಿರುದ್ಧ ಸ್ಥಳೀಯರು ಪ್ರತಿಭಟನೆ ನಡೆಸಿದರು.

'ದುಷ್ಕರ್ಮಿಗಳು ಪ್ರತಿದಿನ ಕಸದ ರಾಶಿಗೆ ಬೆಂಕಿ ಹಾಕುತ್ತಾರೆ. ಅದರಿಂದ ವಿಷಯುಕ್ತ ಹೊಗೆ ಹೊರಸೂಸುತ್ತಿದ್ದು, ಕಲುಷಿತ ಗಾಳಿ ಸೇವನೆಯಿಂದ ಹಲವು ರೋಗಗಳಿಗೆ ತುತ್ತಾಗುತ್ತಿದ್ದೇವೆ. ಕಸವು ಕೊಳೆತು ದುರ್ನಾತ ಬೀರುತ್ತಿರುವುದರಿಂದ ಸಾಂಕ್ರಾಮಿಕ ರೋಗದ ಭೀತಿಯೂ ಶುರುವಾಗಿದೆ' ಎಂದು ಪ್ರತಿಭಟನಕಾರರು ದೂರಿದರು.

'ಬಿಬಿಎಂಪಿ ಸಿಬ್ಬಂದಿ ವಾಹನಗಳಲ್ಲಿ ಬಂದು ಕಸ ಸಂಗ್ರಹಿಸುತ್ತಿಲ್ಲ. ಹೀಗಾಗಿ ಮಾಂಸದ ಅಂಗಡಿಗಳ ತ್ಯಾಜ್ಯವನ್ನು ರಸ್ತೆ ಬದಿಯಲ್ಲಿನ ಖಾಲಿ ಜಾಗದಲ್ಲಿ ಸುರಿಯಲಾಗುತ್ತಿದೆ. ಅಲ್ಲಿ ಬೀದಿ ನಾಯಿಗಳ ಕಾಟ ಹೆಚ್ಚುತ್ತಿದೆ. ಮಕ್ಕಳು ಹಾಗೂ ವೃದ್ಧರು ಈ ರಸ್ತೆಯಲ್ಲಿ ಓಡಾಡುವಾಗ ಅವರ ಮೇಲೆ ನಾಯಿಗಳು ದಾಳಿ ನಡೆಸುತ್ತಿವೆ. ಸಮಸ್ಯೆಯ ಕುರಿತು ಸ್ಥಳೀಯ ಶಾಸಕ ಎಂ.ಕೃಷ್ಣಪ್ಪ ಅವರ ಗಮನಕ್ಕೂ ತಂದಿದ್ದೇವೆ. ಗುತ್ತಿಗೆದಾರರ ಜೊತೆ ಶಾಮೀಲಾಗಿರುವ ಅವರು ಯಾವ ಕ್ರಮವನ್ನೂ ಕೈಗೊಂಡಿಲ್ಲ' ಎಂದು ಆರೋಪಿಸಿದರು. ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್, ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಡಿ.ಅಬ್ದುಲ್ ಮುಜೀದ್, ಮುಖಂಡ ಓ.ಮಂಜುನಾಥ್, ಯಲಚೇನಹಳ್ಳಿ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ವಸಂತರೆಡ್ಡಿ, ಗೊಟ್ಟಿಗೆರೆ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಟಿ.ನಾಗರಾಜ್, ಕಾಂಗ್ರೆಸ್ ಕಿಸಾನ್ ಘಟಕದ ಅಧ್ಯಕ್ಷ ಚುಂಚಘಟ್ಟ ಬಾಬು, ಮುಖಂಡ ಈಶ್ವರ್, ಸ್ಥಳೀಯರಾದ ಫಯಾಜ್ ಖಾನ್, ಸೈಯದ್ ಅಕ್ರಂ, ಮಂಜುನಾಥ್ ಇದ್ದರು.

ಕಸ ಬಿದ್ದಿರುವ ಸ್ಥಳದಲ್ಲಿ ಸ್ಥಳೀಯರು ಪ್ರತಿಭಟನೆ ನಡೆಸಿದರು

ಸುದ್ದಿ 2 ನಿಮಿಷ

ಗೂಡ್ಸ್ ವಾಹನ ಚಾಲಕನ ಮನೆಯಲ್ಲಿ ಕಳ್ಳತನ

ಬೆಂಗಳೂರು: ಶಾಸ್ತ್ರಿನಗರದಲ್ಲಿ ಗೂಡ್ಸ್ ವಾಹನ ಚಾಲಕರೊಬ್ಬರ ಮನೆಗೆ ನುಗ್ಗಿರುವ ದುಷ್ಕರ್ಮಿಗಳು ಸುಮಾರು ₹6 ಲಕ್ಷ ಮೌಲ್ಯದ ಚಿನ್ನಾಭರಣ, ಮೊಬೈಲ್ ಹಾಗೂ ಸ್ಕೂಟರ್ ಕದ್ದು ಪರಾರಿಯಾಗಿದ್ದಾರೆ. ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಗೂಡ್ಸ್ ವಾಹನ ಚಾಲಕ ಸಿದ್ದಪ್ಪ ಅವರು 2021ರ ಡಿಸೆಂಬರ್ 30ರಂದು ಕೆಲಸದ ನಿಮಿತ್ತ ಮನೆಯಿಂದ ಆಚೆ ಹೋಗಿದ್ದರು. ಕುಟುಂಬದ ಇತರ ಸದಸ್ಯರೂ ಬೇರೆ ಊರಿಗೆ ತೆರಳಿದ್ದರು. ಈ ವೇಳೆ ದುಷ್ಕರ್ಮಿಗಳು ಕಳ್ಳತನ ಮಾಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಸಿದ್ದಪ್ಪ ಅವರು ಮನೆಗೆ ಬಂದು ನೋಡಿದಾಗ ಬಾಗಿಲು ತೆರೆದಿತ್ತು. ₹70 ಸಾವಿರ ಮೌಲ್ಯದ ಚಿನ್ನದ ಉಂಗುರ, ₹1.3 ಲಕ್ಷ ಬೆಲೆ ಬಾಳುವ ಬೆಳ್ಳಿಯ ವಸ್ತುಗಳು, ₹1 ಲಕ್ಷ ಮೌಲ್ಯದ 10 ಸೀರೆಗಳು, ₹2.2 ಲಕ್ಷ ನಗದು, ₹20 ಸಾವಿರ ಮೌಲ್ಯದ ಮೊಬೈಲ್ ಹಾಗೂ ಮನೆಯ ಮುಂಭಾಗದಲ್ಲಿ ನಿಲುಗಡೆ ಮಾಡಲಾಗಿದ್ದ ಸ್ಕೂಟರ್ ಕಳವಾಗಿದ್ದವು. ಈ ಸಂಬಂಧ ಅವರು ಠಾಣೆಗೆ ಬಂದು ದೂರು ನೀಡಿದ್ದರು' ಎಂದು ತಿಳಿಸಿದರು.

ಪಟ್ಟಂದೂರು ಅಗ್ರಹಾರ: ಗೋಮಾಳ ಜಮೀನು ವಶಕ್ಕೆ

ಕೆ.ಆರ್.ಪುರ: ಪಟ್ಟಂದೂರು ಅಗ್ರಹಾರ ಗ್ರಾಮದಲ್ಲಿ ₹6 ಕೋಟಿ ಮೌಲ್ಯದ 4.08 ಗುಂಟೆ ಸರ್ಕಾರಿ ಗೋಮಾಳದ ಜಮೀನನ್ನು ತಹಶೀಲ್ದಾರ್ ಅಜಿತ್ ಕುಮಾರ್ ನೇತೃತ್ವದಲ್ಲಿ ಕಂದಾಯ ಅಧಿಕಾರಿಗಳು ಸರ್ಕಾರದ ವಶಕ್ಕೆ ಪಡೆದರು.

ಕೆ.ಆರ್.ಪುರ ಹೋಬಳಿಯ ಪಟ್ಟಂದೂರು ಅಗ್ರಹಾರ ಗ್ರಾಮದ ಸರ್ವೆ ನಂಬರ್ 107ರಲ್ಲಿ ನಕಲಿ ದಾಖಲೆ ಸೃಷ್ಟಿಸಿ ಒತ್ತುವರಿ ಮಾಡಿಕೊಂಡಿದ್ದ ಜಮೀನನ್ನು ಜಿಲ್ಲಾಧಿಕಾರಿ ಆದೇಶದ ಮೇರೆಗೆ ವಶಕ್ಕೆ ಪಡೆಯಲಾಯಿತು.

ಗ್ರಾಮದ ದಿ.ಬಿ.ಮುನಿಯಪ್ಪ ಎಂಬುವರ ಮಕ್ಕಳಾದ ಎಂ. ರಾಮಾಂಜನೇಯ, ಎಂ.ಮಹೇಂದ್ರ ಕುಮಾರ್ ಮತ್ತು ಪ್ರಮೀಳಾ ಎಂಬುವವರು ಸರ್ವೆ ಸಂಖ್ಯೆ 107ರಲ್ಲಿ ವಿಸ್ತೀರ್ಣ 4,980 ಅಡಿಗಳಷ್ಟು ಜಮೀನನ್ನು ಭೂಕಬಳಿಕೆ ಮಾಡಿ ಜಮೀನಿಗೆ ಓಡಾಡಲು ರಸ್ತೆ ಮತ್ತು ಕಾಂಪೌಂಡ್ ನಿರ್ಮಿಸಿಕೊಂಡಿದ್ದರು.

ಒತ್ತುವರಿ ತೆರವು ಮಾಡುವಂತೆ ಆಗ್ರಹಿಸಿ ಪಟ್ಟಂದೂರಿನ ನಿವಾಸಿ ಆರ್. ನಾರಾಯಣಸ್ವಾಮಿ ಹಾಗೂ ಆರ್. ಮಂಜುನಾಥ್ ಅವರು ವಿಶೇಷ ಜಿಲ್ಲಾಧಿಕಾರಿ (ಜಾರಿದಳ) ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರಿಗೆ ದೂರು ಸಲ್ಲಿಸಿದ್ದರು.



ಚೀನಾ ನಿರ್ಮಿಸುತ್ತಿರುವ ಸೇತುವೆಯ ಉಪಗ್ರಹ ಚಿತ್ರ (ಚಿತ್ರಕೃಪೆ: ಟ್ವಿಟರ್)

ಪಾಂಗಾಂಗ್ ಸರೋವರದ ಬದಿಯಲ್ಲಿ ಚೀನಾ ಸೇತುವೆ ನಿರ್ಮಾಣ

ನವದೆಹಲಿ (ಪಿಟಿಐ): 'ಪೂರ್ವ ಲಡಾಖ್‌ನ ಪಾಂಗಾಂಗ್ ಸರೋವರದ ಬದಿಯಲ್ಲಿ ಚೀನಾ ಸೇತುವೆಯನ್ನು ನಿರ್ಮಿಸುತ್ತಿರುವ ಮಾಹಿತಿಯು ಸೋಮವಾರ ಉಪಗ್ರಹವು ಸೆರೆ ಹಿಡಿದಿರುವ ಚಿತ್ರದ ಮೂಲಕ ಪತ್ತೆಯಾಗಿದೆ' ಎಂದು ಮೂಲಗಳು ತಿಳಿಸಿವೆ.

ಗಡಿ ಪ್ರದೇಶದಲ್ಲಿ ಭಾರತ ಮತ್ತು ಚೀನಾದ ನಡುವಣ ಸುದೀರ್ಘ ಮಿಲಿಟರಿ ಬಿಕ್ಕಟ್ಟಿನ ನಡುವೆಯೇ ಈ ಬೆಳವಣಿಗೆ ನಡೆದಿದೆ.

ಜಿಯೊ ಇಂಟಲಿಜೆನ್ಸ್ ತಜ್ಞ ಡೇಮಿಯನ್ ಸೈಮನ್ ಅವರು ತಮ್ಮ ಟ್ವಿಟರ್ ಖಾತೆಯಲ್ಲಿ ಉಪಗ್ರಹ ಚಿತ್ರವನ್ನು ಪೋಸ್ಟ್ ಮಾಡಿದ್ದು, 'ಪಾಂಗಾಂಗ್ ಸರೋವರದ ಉತ್ತರ ಮತ್ತು ದಕ್ಷಿಣ ದಂಡೆಗಳನ್ನು ಸಂಪರ್ಕಿಸಲು ಚೀನಾ ಹೊಸ ಸೇತುವೆಯನ್ನು ನಿರ್ಮಿಸುತ್ತಿದೆ ಎನ್ನುವ ಕುರಿತು ಮಾಧ್ಯಮಗಳು ವರದಿಯಲ್ಲಿ ಆರೋಪಿಸಿವೆ. ಈ ಸ್ಥಳದಲ್ಲಿ ಚೀನಾದ ಸೇತುವೆ ನಿರ್ಮಾಣದ ಹಂತದ ಚಿತ್ರವನ್ನು ಜಿಯೊ ಇಂಟಲಿಜೆನ್ಸ್ ಸೆರೆಹಿಡಿದಿದೆ' ಎಂದೂ ಟ್ವೀಟ್ ಮಾಡಿದ್ದಾರೆ.

'ಉಪಗ್ರಹವು ಸೆರೆ ಹಿಡಿದಿರುವ ಚಿತ್ರದಲ್ಲಿನ ಪ್ರದೇಶವು, ಗಾಲ್ವಾನ್ ಕಣಿವೆ ಪ್ರದೇಶ ಸಮೀಪದಲ್ಲಿರುವ ವಾಸ್ತವ ಗಡಿ ನಿಯಂತ್ರಣ ರೇಖೆಯ (ಎಲ್‌ಎಸಿ) ಚೀನಾದ ಭಾಗದಲ್ಲಿದೆ' ಎಂದು ಈ ಬೆಳವಣಿಗೆಯ ಬಗ್ಗೆ ಮಾಹಿತಿ ಇರುವ ಜನರು ತಿಳಿಸಿದ್ದಾರೆ.

ಗೊತ್ತಿದೆ: 'ಭಾರತವು ಎಲ್‌ಎಸಿಯ ಎಲ್ಲಾ ಪ್ರಮುಖ ಪ್ರದೇಶಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸುತ್ತಿದೆ ಮತ್ತು ಈ ಪ್ರದೇಶದಲ್ಲಿ ಚೀನಾದ ಚಟುವಟಿಕೆಗಳ ಬಗ್ಗೆ ಭಾರತಕ್ಕೆ ತಿಳಿದಿದೆ' ಎಂದು ಭಾರತೀಯ ಮಿಲಿಟರಿ ಮೂಲಗಳು ತಿಳಿಸಿವೆ.

ಅತ್ತಿಗುಪ್ಪೆ: ಸಿಲಿಂಡರ್ ಸ್ಫೋಟ– 7 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ತಿಗುಪ್ಪೆಯ ಮನೆಯೊಂದರಲ್ಲಿ ಸಿಲಿಂಡರ್ ಸ್ಫೋಟಗೊಂಡು 7 ಮಂದಿ ಗಾಯಗೊಂಡಿದ್ದಾರೆ. ಚಂದ್ರಾ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸುಕುಮಾರ್ (48), ಹರ್ಷಾ (41), ಗಾನಶ್ರೀ (13), ಹೇಮೇಶ್ವರ್ (7), ಮನೆ ಮಾಲೀಕರಾದ ರಾಮಕ್ಕ (65), ಅನಿತಾ (31) ಹಾಗೂ ರಚನಾ (21) ಗಾಯಗೊಂಡವರು. ಈ ಪೈಕಿ ರಾಮಕ್ಕ ಸ್ಥಿತಿ ಗಂಭೀರವಾಗಿದೆ. ಎಲ್ಲರನ್ನೂ ರಾಜಾಜಿನಗರದ ಇಎಸ್‌ಐ ಹಾಗೂ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಅತ್ತಿಗುಪ್ಪೆ 2ನೇ ತಿರುವಿನಲ್ಲಿರುವ ಮನೆಯಲ್ಲಿ ಸೋಮವಾರ ರಾತ್ರಿ 8.45ರ ಸುಮಾರಿಗೆ ಸ್ಫೋಟವಾಗಿತ್ತು. ಮನೆಯ ನೆಲ ಮಹಡಿಯಲ್ಲಿ ವಾಸವಿದ್ದ ಹರ್ಷಾ ಎಂಬುವರು ಆಹಾರ ಬಿಸಿ ಮಾಡಲು ಅಡುಗೆ ಕೋಣೆಗೆ ಹೋಗಿದ್ದಾಗ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗುತ್ತಿರುವುದು ಗೊತ್ತಾಗಿದೆ. ಕೂಡಲೇ ಅವರು ಮನೆಯವರಿಗೆಲ್ಲಾ ಮಾಹಿತಿ ನೀಡಿದ್ದು ಎಲ್ಲರೂ ಹೊರಗೆ ಓಡಿ ಬಂದಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ನೆಲ ಮಹಡಿಯಲ್ಲಿ ಜನರು ಕೂಗುತ್ತಿರುವುದನ್ನು ಕೇಳಿ ಮೊದಲ ಮಹಡಿಯಲ್ಲಿದ್ದ ರಾಮಕ್ಕ ಅವರು ಕೆಳಗೆ ಇಳಿದು ಬಂದಿದ್ದಾರೆ. ಹೊರ ಓಡಿಬಂದಿದ್ದವರೆಲ್ಲಾ ಮನೆಯೊಳಗೆ ಏನಾಗುತ್ತಿದೆ ಎಂದು ಇಣುಕಿ ನೋಡಿದ್ದಾರೆ. ಈ ವೇಳೆ ದೇವರ ಮನೆಯಲ್ಲಿ ಇಟ್ಟಿದ್ದ ದೀಪದಿಂದ ಬೆಂಕಿ ಹೊತ್ತಿಕೊಂಡು ಸಿಲಿಂಡರ್ ಸ್ಫೋಟಗೊಂಡಿದೆ. ಬೆಂಕಿಯ ಜ್ವಾಲೆ ಕೊಠಡಿಯಲ್ಲೆಲ್ಲಾ ವ್ಯಾಪಿಸಿದೆ. ಮನೆಯಲ್ಲಿದ್ದ ಎಲ್ಲಾ ವಸ್ತುಗಳು ಸುಟ್ಟು ಕರಕಲಾಗಿವೆ. 7 ಮಂದಿಗೆ ಸುಟ್ಟ ಗಾಯಗಳಾಗಿವೆ' ಎಂದು ವಿವರಿಸಿದರು.

'ಬೆಂಕಿ ಹೊತ್ತಿ ಉರಿಯುತ್ತಿರುವುದನ್ನು ಗಮನಿಸಿದ ಸ್ಥಳೀಯರು ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ತಿಳಿಸಿದ್ದಾರೆ. ಸ್ಥಳಕ್ಕೆ ಬಂದ ಸಿಬ್ಬಂದಿ ನಿರಂತರ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ' ಎಂದೂ ಹೇಳಿದರು.

ಸಿಲಿಂಡರ್ ಸ್ಫೋಟದಿಂದ ಮನೆಯಲ್ಲಿರುವ ವಸ್ತುಗಳಿಗೆ ಹಾನಿಯಾಗಿರುವುದು

ಅನಿಲ ಸೋರಿಕೆಯಿಂದ ಹೊತ್ತಿಕೊಂಡ ಬೆಂಕಿ; ಒಬ್ಬರಿಗೆ ಗಾಯ

ಬೆಂಗಳೂರು: ಅಡುಗೆ ಮನೆಯಲ್ಲಿ ಇಟ್ಟಿದ್ದ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿದ್ದು, ಘಟನೆಯಲ್ಲಿ ಹೋಟೆಲ್ ಮಾಲೀಕರಿಗೆ ಗಂಭೀರ ಗಾಯಗಳಾಗಿವೆ. ಚಂದ್ರಾ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಹೇಶ್ (28) ಎಂಬುವವರಿಗೆ ಸುಟ್ಟ ಗಾಯಗಳಾಗಿವೆ. ಚಿಕಿತ್ಸೆಗಾಗಿ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಠಾಣೆ ವ್ಯಾಪ್ತಿಯ ಗಣಪತಿ ವೃತ್ತದ ಬಳಿ 'ಸಂತೃಪ್ತಿ ಉತ್ತರ ಕರ್ನಾಟಕ ಜವಾರಿ ಊಟದ ಮನೆ' ಎಂಬ ಹೋಟೆಲ್ ಇದೆ. ಭಾನುವಾರ ರಾತ್ರಿ ಕೆಲಸಗಾರರೆಲ್ಲಾ ಕೆಲಸ ಮುಗಿಸಿ ಹೋಟೆಲ್‌ಗೆ ಬೀಗ ಹಾಕಿ ಮನೆಗೆ ಹೋಗಿದ್ದಾರೆ. ಬಳಿಕ ಅಡುಗೆ ಕೋಣೆಯಲ್ಲಿದ್ದ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿರಬಹುದು. ಬೆಳಿಗ್ಗೆ 7 ಗಂಟೆ ಸುಮಾರಿಗೆ ಹೋಟೆಲ್ ಬಾಗಿಲು ತೆಗೆದಿದ್ದ ಮಹೇಶ್, ಅಡುಗೆ ಮಾಡಲು ಒಳಗೆ ಹೋಗಿದ್ದಾರೆ. ಅನಿಲ ಸೋರಿಕೆಯಾಗಿರುವುದು ಅವರ ಗಮನಕ್ಕೆ ಬಂದಿಲ್ಲ. ಅವರು ಸ್ಟೌ ಹಚ್ಚಲು ಮುಂದಾದಾಗ ಬೆಂಕಿ ಹೊತ್ತಿಕೊಂಡಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಮಹೇಶ್ ಅವರ ಮೈಗೆ ಬೆಂಕಿ ಹತ್ತಿಕೊಂಡಿದೆ. ಅವರು ಅದನ್ನು ಆರಿಸುತ್ತಲೇ ಹೋಟೆಲ್‌ನಿಂದ ಹೊರಗೆ ಓಡಿಬಂದಿದ್ದಾರೆ. ಸ್ಥಳೀಯರು ಕೂಡಲೇ ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸಿದ್ದಾರೆ' ಎಂದು ತಿಳಿಸಿದರು.

ಆಕಸ್ಮಿಕ ಬೆಂಕಿ: ಉರಿದ ಕಾರ್ಖಾನೆ

ಬೆಂಗಳೂರು: ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದ್ದರಿಂದ ಕುಂಬಳಗೋಡು ಕೈಗಾರಿಕಾ ಪ್ರದೇಶದಲ್ಲಿನ ಔಷಧ ತಯಾರಿಕಾ ಕಾರ್ಖಾನೆಯೊಂದು ಸೋಮವಾರ ಹೊತ್ತಿ ಉರಿದಿದೆ.

'ಕಾರ್ಮಿಕರೆಲ್ಲಾ ಕೆಲಸ ಮುಗಿಸಿ ಮನೆಗೆ ಹೋಗಿದ್ದರು. ಮೂವರು ಮಾತ್ರ ಕಾರ್ಖಾನೆಯೊಳಗೆ ಇದ್ದರು. ಬೆಂಕಿ ಕಾಣಿಸಿಕೊಂಡ ಕೂಡಲೇ ಅವರು ಹೊರಗೆ ಓಡಿ ಬಂದಿದ್ದಾರೆ. ಹೀಗಾಗಿ ಯಾವುದೇ ಸಾವು–ನೋವು ಸಂಭವಿಸಿಲ್ಲ. ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡಿರುವ ಶಂಕೆ ಇದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಆರಂಭದಲ್ಲಿ ಸಣ್ಣ ಪ್ರಮಾಣದಲ್ಲಿದ್ದ ಜ್ವಾಲೆ ಬಳಿಕ ಇಡೀ ಕಾರ್ಖಾನೆಗೆ ವ್ಯಾಪಿಸಿಕೊಂಡಿತ್ತು. ಸ್ಥಳೀಯರು ಕೂಡಲೇ ಅಗ್ನಿಶಾಮಕ ದಳದ ಸಿಬ್ಬಂದಿಗೆ ಕರೆ ಮಾಡಿ ಮಾಹಿತಿ ರವಾನಿಸಿದ್ದಾರೆ. ಮೂರು ವಾಹನಗಳಲ್ಲಿ ಬಂದ ಸಿಬ್ಬಂದಿ ಸುಮಾರು ಒಂದು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ' ಎಂದು ಮಾಹಿತಿ ನೀಡಿದರು.

ಗಡಿ ಭಾಗದಲ್ಲಿ ಕನ್ನಡ ಪ್ರೌಢಶಾಲೆ: ಸಚಿವರಿಗೆ ಪತ್ರ

ಬೆಂಗಳೂರು: ಬೆಳಗಾವಿ ಜಿಲ್ಲೆಯ ಗಡಿ ಭಾಗದ ಗ್ರಾಮಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಕನ್ನಡ ಮಾಧ್ಯಮ ಪ್ರೌಢಶಾಲೆ ಆರಂಭಿಸಲು ಕ್ರಮವಹಿಸಬೇಕು ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ ಅವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಒತ್ತಾಯಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಪ್ರಕಟವಾದ 'ಮರಾಠಿ ಮಾಧ್ಯಮದತ್ತ ಮುಖ ಮಾಡುತ್ತಿರುವ ಅಸಹಾಯಕ ವಿದ್ಯಾರ್ಥಿಗಳು' ವರದಿಯನ್ನು ಉಲ್ಲೇಖಿಸಿ ಪತ್ರ ಬರೆದಿದ್ದಾರೆ. ಈ ಸಂಬಂಧ ಹಿರಿಯ ಶಿಕ್ಷಣಾಧಿಕಾರಿಗಳಿಗೆ ಸೂಚನೆ ನೀಡಿ ಪ್ರೌಢಶಾಲೆ ಆರಂಭಿಸಲು ಕ್ರಮ ವಹಿಸಬೇಕು. ಈ ಮೂಲಕ ಕನ್ನಡದ ಅಸ್ಮಿತೆಯನ್ನು ಉಳಿಸಬೇಕು ಎಂದು ಮನವಿ ಮಾಡಿದ್ದಾರೆ.

ಅವರು, ಕನ್ನಡ ಮಾಧ್ಯಮದ ಪ್ರೌಢ ಶಾಲೆಗಳು ಇಲ್ಲದೇ ಕನ್ನಡಿಗ ವಿದ್ಯಾರ್ಥಿಗಳು ಅನಿವಾರ್ಯವಾಗಿ ಮರಾಠಿ ಮಾಧ್ಯಮ ಶಾಲೆಗಳಿಗೆ ಸೇರಬೇಕಾಗಿರುವ ಸ್ಥಿತಿ ಶೋಚನೀಯ ಎಂದಿದ್ದಾರೆ.

ಬೆಳಗಾವಿ ತಾಲ್ಲೂಕಿನ ಉಚ್ಚಗಾವಿ, ಬೆಕ್ಕಿನಕೆರೆ, ಗೋಜಗಾ, ಕುದ್ರೇಮನಿ, ಮಣ್ಣೂರ, ಹಿಂಡಲಗಾ ಗ್ರಾಮಗಳ ವಿದ್ಯಾರ್ಥಿಗಳು 10 ರಿಂದ 20 ಕಿ.ಮೀ ಬರಬೇಕು.ಅದರಲ್ಲೂ ಕುದ್ರೇಮನಿಯ ವಿದ್ಯಾರ್ಥಿಗಳು ಮಹಾರಾಷ್ಟ್ರದ ಹಳ್ಳಿಗಳನ್ನು ದಾಟಿ ಬರಬೇಕಾಗಿದೆ.

ಈ ಭಾಗದಲ್ಲಿ ಕನ್ನಡ ಭಾಷೆಯನ್ನು ಉಳಿಸಲು ಮತ್ತು ಕನ್ನಡ ಭಾಷೆಯ ಮೇಲೆ ಅಭಿಮಾನವುಳ್ಳವರ ಭಾವನೆಗಳಿಗೆ ಸರ್ಕಾರ ಸ್ಪಂದಿಸುತ್ತದೆ ಎಂಬ ಭಾವನೆ ಮೂಡಲು ಕಾರಣವಾಗುತ್ತದೆ ಎಂದು ಅವರು ಹೇಳಿದ್ದಾರೆ.

ಆಮಿಷವೊಡ್ಡಿ ₹12.59 ಲಕ್ಷ ವಂಚನೆ

ಬೆಂಗಳೂರು: ವ್ಯಕ್ತಿಯೊಬ್ಬರಿಗೆ ದುಪ್ಪಟ್ಟು ಲಾಭದ ಆಮಿಷವೊಡ್ಡಿ ₹12.59 ಲಕ್ಷ ಹಣ ವಂಚಿಸಿರುವ ಆರೋಪಿ ವಿರುದ್ಧ ಯಲಹಂಕ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯಲಹಂಕ ನಿವಾಸಿಯೊಬ್ಬರು ನೀಡಿರುವ ದೂರಿನ ಆಧಾರದಲ್ಲಿ ಪ್ರಮೋದ್ ಎಂಬಾತನ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

'ದೂರುದಾರ ವ್ಯಕ್ತಿಗೆ ಕೆಲ ವರ್ಷಗಳ ಹಿಂದೆ ಆರೋಪಿಯ ಪರಿಚಯವಾಗಿತ್ತು. ತಾನು ಟ್ರಾವೆಲ್ ಏಜೆನ್ಸಿಯೊಂದನ್ನು ನಡೆಸುತ್ತಿದ್ದು, ವಿದೇಶಿ ಹಣ ವಿನಿಮಯ, ವಿಮಾನ ಟಿಕೆಟ್ ಮಾರಾಟ ಸೇರಿದಂತೆ ವಿವಿಧ ಸ್ಕೀಂಗಳಲ್ಲಿ ಹಣ ಹೂಡಿಕೆ ಮಾಡಿ ಲಾಭ ಮಾಡುತ್ತಿದ್ದೇನೆ. ನೀವು ಅವುಗಳಲ್ಲಿ ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಗಳಿಸಬಹುದೆಂದು ನಂಬಿಸಿದ್ದ ಆರೋಪಿಯು ವ್ಯಕ್ತಿಯಿಂದ ₹1.32 ಲಕ್ಷ ಹಣ ಪಡೆದಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ಹಂತ ಹಂತವಾಗಿ ₹12.59 ಲಕ್ಷ ಹಣ ಪಡೆದಿದ್ದ. ಆದರೆ ಲಾಭಾಂಶ ನೀಡಿರಲಿಲ್ಲ. ವ್ಯಕ್ತಿಯು ಆರೋಪಿಗೆ ಕರೆ ಮಾಡಿ ಹಣ ಹಿಂದಿರುಗಿಸುವಂತೆ ಸೂಚಿಸಿದ್ದರು. ಬಳಿಕ ಆತ ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡಿದ್ದ' ಎಂದಿದ್ದಾರೆ.

ಕಾನ್‌ಸ್ಟೆಬಲ್ ಮೇಲೆ ಹಲ್ಲೆ: ರೌಡಿ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸ್ಥಳ ಮಹಜರಿಗೆ ಕರೆದುಕೊಂಡು ಹೋಗಿದ್ದ ವೇಳೆ ಕಾನ್‌ಸ್ಟೆಬಲ್ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ್ದ ಆರೋಪಿ ಪರ್ವೇಜ್ ಪಾಷಾ ಯಾನೆ ಪರೂ (21) ಎಂಬಾತನ ಕಾಲಿಗೆ ಸಿದ್ದಾಪುರ ಠಾಣೆ ಪೊಲೀಸರು ಗುಂಡು ಹಾರಿಸಿ ಬಂಧಿಸಿದ್ದಾರೆ.

'ಫಯಾಜ್ ಮೊಹಮ್ಮದ್ (23) ಎಂಬುವವರು 2021ರ ಡಿಸೆಂಬರ್ 30ರಂದು ಕೇರಳದಿಂದ ನಗರಕ್ಕೆ ಬಂದಿದ್ದರು. ಬೆಳಿಗ್ಗೆ 6 ಗಂಟೆ ಸುಮಾರಿಗೆ ಡಬಲ್ ರೋಡ್ ಬಳಿಯ ಲಾಲ್‌ಬಾಗ್ ದ್ವಾರದ ಹತ್ತಿರ ನಿಂತುಕೊಂಡು ಮನೆಗೆ ಹೋಗಲು ಕ್ಯಾಬ್ ಕಾಯ್ದಿರಿಸಲು ಪ್ರಯತ್ನಿಸುತ್ತಿದ್ದರು. ಈ ವೇಳೆ ಡಿಯೊ ಸ್ಕೂಟರ್‌ನಲ್ಲಿ ಸ್ಥಳಕ್ಕೆ ಬಂದಿದ್ದ ಆರೋಪಿಗಳಿಬ್ಬರು ಫಯಾಜ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಮೊಬೈಲ್ ಹಾಗೂ ₹1,000 ನಗದು ಕಿತ್ತುಕೊಂಡು ಪರಾರಿಯಾಗಿದ್ದರು. ಇದೇ 2ರಂದು ರಾತ್ರಿ 11 ಗಂಟೆ ಸುಮಾರಿಗೆ ಆರೋಪಿ ಪರ್ವೇಜ್‌ನನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಸ್ನೇಹಿತನಾದ ಅಬೂಬಕರ್ ಸಿದ್ದಿಕಿ ಯಾನೆ ಯಾಣಾ ಜೊತೆ ಸೇರಿಕೊಂಡು ಹಲ್ಲೆ ಮಾಡಿದ್ದನ್ನು ಒಪ್ಪಿಕೊಂಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಕೃತ್ಯಕ್ಕೆ ಬಳಸಿದ್ದ ಡ್ರ್ಯಾಗರ್ ಅನ್ನು ಬನಶಂಕರಿ 6ನೇ ಹಂತದ ಚಿಕ್ಕೇಗೌಡನಪಾಳ್ಯದ ಬಿಡಿಎ ಲೇಔಟ್‌ನಲ್ಲಿರುವ ಖಾಲಿ ನಿವೇಶನದಲ್ಲಿ ಎಸೆದಿದ್ದಾಗಿ ಆರೋಪಿ ಹೇಳಿದ್ದ. ಸ್ಥಳ ಮಹಜರಿಗಾಗಿ ಸೋಮವಾರ ಬೆಳಿಗ್ಗೆ 6 ಗಂಟೆಗೆ ಆರೋಪಿಯನ್ನು ಸ್ಥಳಕ್ಕೆ ಕರೆದೊಯ್ಯಲಾಗಿತ್ತು. ಡ್ರ್ಯಾಗರ್ ವಶಕ್ಕೆ ಪಡೆದು, ಪಂಚನಾಮೆ ಮುಗಿಸಿ ಹಿಂದಿರುಗುವ ವೇಳೆ ಆತ ಅಲ್ಲೇ ಇದ್ದ ಕಟ್ಟಿಗೆಯೊಂದನ್ನು ಎತ್ತಿಕೊಂಡು ಕಾನ್‌ಸ್ಟೆಬಲ್ ಪರಮೇಶ್ವರ ಮಬ್ರುಕರ್ ಎಂಬುವವರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ್ದ. ಸ್ಥಳದಲ್ಲಿದ್ದ ಇನ್‌ಸ್ಪೆಕ್ಟರ್ ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿ ಶರಣಾಗುವಂತೆ ಸೂಚಿಸಿದ್ದರು. ಹೀಗಿದ್ದರೂ ಆತ ಮತ್ತೆ ಹಲ್ಲೆಗೆ ಮುಂದಾಗಿದ್ದ. ಆತ್ಮರಕ್ಷಣೆಗಾಗಿ ಆತನ ಎಡಗಾಲಿಗೆ ಗುಂಡು ಹೊಡೆದು ಬಂಧಿಸಲಾಯಿತು' ಎಂದು ವಿವರಿಸಿದ್ದಾರೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪರ್ವೇಜ್ ಪಾಷಾ

ಮಡಿವಾಳ ಠಾಣೆ ಇನ್‌ಸ್ಪೆಕ್ಟರ್ ಅಮಾನತು

ಬೆಂಗಳೂರು: ಆರೋಪಿಯಿಂದ ಲಂಚ ಪಡೆದ ಆರೋಪ ಎದುರಿಸುತ್ತಿರುವ ಮಡಿವಾಳ ಠಾಣೆ ಇನ್‌ಸ್ಪೆಕ್ಟರ್ ಸುನೀಲ್ ನಾಯಕ್ ಅವರನ್ನು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅಮಾನತು ಮಾಡಿದ್ದಾರೆ.

'ವರದಕ್ಷಿಣೆ ಕಿರುಕುಳ ಸಂಬಂಧ ಮುಂಬೈ ಮೂಲದ ಅಜಯ್ ವಿರುದ್ಧ ಮಡಿವಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಕುರಿತು ತನಿಖೆ ನಡೆಸಿದ್ದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆಗೆ ಪದೇ ಪದೇ ಗೈರಾಗಿದ್ದರಿಂದ ಅಜಯ್ ವಿರುದ್ಧ ವಾರಂಟ್ ಜಾರಿಗೊಳಿಸಲಾಗಿತ್ತು. ಮುಂಬೈಗೆ ಹೋಗಿ ಆರೋಪಿಯನ್ನು ಬಂಧಿಸಿದ್ದ ಪೊಲೀಸರು, ನಗರಕ್ಕೆ ಬಂದ ಮೇಲೆ ಹಣ ಪಡೆದು ಆತನನ್ನು ಬಿಟ್ಟು ಕಳುಹಿಸಿದ್ದರು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಸಿಬ್ಬಂದಿಗೆ ಲಂಚ ನೀಡುತ್ತಿರುವ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿದುಕೊಂಡಿದ್ದ ಆರೋಪಿ ಅದನ್ನು ಕಮಿಷನರ್ ಸೇರಿದಂತೆ ಇತರ ಅಧಿಕಾರಿಗಳಿಗೆ ಕಳುಹಿಸಿದ್ದ. ಡಿಸಿಪಿ ಶ್ರೀನಾಥ್ ಜೋಶಿ ಸಲ್ಲಿಸಿದ್ದ ತನಿಖಾ ವರದಿ ಆಧಾರದಲ್ಲಿ ಸುನೀಲ್ ಅವರನ್ನು ಅಮಾನತು ಮಾಡಲಾಗಿದೆ' ಎಂದು ಹೇಳಿದ್ದಾರೆ.

7ಕ್ಕೆ ಹಾಸ್ಯ ಮೇಳ

ಬೆಂಗಳೂರು: ನಗರದ ಅಂತರಂಗ ಹವ್ಯಾಸಿ ನಾಟಕ ತಂಡವು ಜ.7ರಂದು ಬಸವನಗುಡಿಯ ಕೆ.ಆರ್. ರಸ್ತೆಯ ಗಾಯನ ಸಮಾಜದಲ್ಲಿ '21ನೇ ಹಾಸ್ಯಮೇಳ, ನಗುವಿಗೇಕೆ ರೇಷನ್' ಕಾರ್ಯಕ್ರಮವನ್ನು ಆಯೋಜಿಸಿದೆ.

ಸಂಜೆ 5ರಿಂದ 9 ಗಂಟೆಯವರೆಗೆ ಕಾರ್ಯಕ್ರಮ ನಡೆಯಲಿದೆ. ಹಾಸ್ಯ ಕಲಾವಿದರಾದ ಗಂಗಾವತಿ ಪ್ರಾಣೇಶ್, ಎಂ.ಎಸ್. ನರಸಿಂಹಮೂರ್ತಿ, ವೈ.ವಿ. ಗುಂಡೂರಾವ್, ಡುಂಡಿರಾಜ್, ಮಿಮಿಕ್ರಿ ಗೋಪಿ, ಎನ್. ರಾಮನಾಥ್, ಅಚ್ಯುತರಾವ್ ಪದಕಿ, ಎಚ್.ವಿ. ನಟರಾಜ್ ಪಾಲ್ಗೊಳ್ಳಲಿದ್ದಾರೆ.

ಎಸ್. ಷಡಕ್ಷರಿ ಮತ್ತು ಪತ್ರಿ ಶ್ರೀಧರ್ ಅವರು ಹಾಸ್ಯಮೇಳ ಉದ್ಘಾಟಿಸಲಿದ್ದಾರೆ. 'ಕೈಲಾಸಂ ಕೆಳಗಿಳಿದು ಬಂದರೆ' (ಎನ್. ರಾಮನಾಥ್ ಲೇಖನ ಆಧಾರಿತ) ಪ್ರಹಸನವನ್ನು ಅಂತರಂಗದ ಶ್ರೀಧರ್ ಎಡ್ರಾವಿ ಮತ್ತು ರಂಗನಾಥರಾವ್ ಗೆಳೆಯರು ಪ್ರಸ್ತುತಪಡಿಸಲಿದ್ದಾರೆ.

'ಬುಲ್ಲಿ ಬಾಯಿ' ಆ್ಯಪ್ ಪ್ರಕರಣ: ಬೆಂಗಳೂರಿನ ಯುವಕ ಬಂಧನ

ಮುಂಬೈ: 'ಬುಲ್ಲಿ ಬಾಯಿ' ಆ್ಯಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈ ಸೈಬರ್ ಘಟಕದ ಪೊಲೀಸರು ಬೆಂಗಳೂರಿನ 21 ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಯನ್ನು ಸೋಮವಾರ ಬಂಧಿಸಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ. ಬೆಂಗಳೂರಿನಲ್ಲಿ ಬಂಧಿತನಾಗಿರುವ ಶಂಕಿತ ವ್ಯಕ್ತಿಯ ವಯಸ್ಸನ್ನು ಹೊರತುಪಡಿಸಿ ಮುಂಬೈ ಪೊಲೀಸರು ಯಾವ ಗುರುತನ್ನೂ ಬಹಿರಂಗಪಡಿಸಿಲ್ಲ. ಪೊಲೀಸರು ಅಪರಾಧಿಗಳ ವಿರುದ್ಧ ಐಪಿಸಿ ಮತ್ತು ಐಟಿ ಕಾಯ್ದೆಯ ವಿವಿಧ ಕಲಂಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಪಶ್ಚಿಮ ಮುಂಬೈನ ಸೈಬರ್ ಪೊಲೀಸ್ ಠಾಣೆಯು 'ಬುಲ್ಲಿ ಬಾಯಿ' ಅಪ್ಲಿಕೇಷನ್ ರೂಪಿಸಿದವರು ಮತ್ತು ಅಪ್ಲಿಕೇಷನ್ ಅನ್ನು ಪ್ರಚಾರ ಮಾಡಿದ ಟ್ವಿಟರ್ ಬಳಕೆದಾರರ ವಿರುದ್ಧ ಪ್ರಕರಣ ದಾಖಲಿಸಿದೆ. ಈ ಮಧ್ಯೆ, ವಿವಾದಿತ 'ಬುಲ್ಲಿ ಬಾಯಿ' ಮೊಬೈಲ್ ಆ್ಯಪ್ ಅನ್ನು ಅಭಿವೃದ್ಧಿಪಡಿಸಿರುವವರ ಕುರಿತು ದೆಹಲಿ ಪೊಲೀಸರು ಗಿಟ್‌ಹಬ್ ವೇದಿಕೆಯಿಂದ ಮಾಹಿತಿ ಕೇಳಿದ್ದು, ಆ್ಯಪ್ ಬಗ್ಗೆ ಮೊದಲು ಟ್ವೀಟ್ ಮಾಡಿರುವ ವ್ಯಕ್ತಿಯ ಖಾತೆಯ ಬಗ್ಗೆ ವಿವರ ನೀಡುವಂತೆ ಟ್ವಿಟರ್ ಸಂಸ್ಥೆಗೂ ಸೋಮವಾರ ಪತ್ರ ಬರೆದಿದ್ದಾರೆ.

ಕೆಂಪಣ್ಣ ಆಯೋಗದಿಂದ ಸಿದ್ದರಾಮಯ್ಯ ಅಕ್ರಮ ಬಯಲು ನಿಶ್ಚಿತ: ಸಿ.ಟಿ.ರವಿ

ನವದೆಹಲಿ: ಬೆಂಗಳೂರಿನ ಅರ್ಕಾವತಿ ಬಡಾವಣೆಯಲ್ಲಿ ನಡೆದ ಅಕ್ರಮ ಡಿನೋಟಿಫಿಕೇಷನ್ ಪ್ರಕರಣದ ತನಿಖೆ ನಡೆಸಿರುವ ನ್ಯಾಯಮೂರ್ತಿ ಎಚ್. ಎಸ್.ಕೆಂಪಣ್ಣ ಆಯೋಗವು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಕ್ರಮಗಳನ್ನು ಬಹಿರಂಗಪಡಿಸಲಿದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಸೋಮವಾರ ಹೇಳಿದ್ದಾರೆ.

'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸ್ವಾಧೀನಪಡಿಸಿಕೊಂಡಿರುವ ಜಮೀನುಗಳನ್ನು ಸಿದ್ದರಾಮಯ್ಯ ಅವರು ಅಧಿಕಾರದಲ್ಲಿದ್ದಾಗ ಹೇಗೆ ಡಿನೋಟಿಫಿಕೇಶನ್ ಮಾಡಿದ್ದಾರೆ ಎಂಬ ಬಗ್ಗೆ ವರದಿಯು ಸತ್ಯವನ್ನು ಹೇಳುತ್ತದೆ. ಹಿಂದಿನ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರವನ್ನು ಈ ವರದಿ ಸಂಪೂರ್ಣವಾಗಿ ಬಹಿರಂಗಪಡಿಸುತ್ತದೆ' ಎಂದು ರವಿ ಸುದ್ದಿಗಾರರಿಗೆ ತಿಳಿಸಿದರು.

11 ಸಾವಿರ ದಾಟಿದ ಸಕ್ರಿಯ ಪ್ರಕರಣಗಳು

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದ್ದು, ಸದ್ಯ ಸೋಂಕಿತರಾದ 11,345 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕು ದೃಢ ಪ್ರಮಾಣ ಶೇ 1.60ರಷ್ಟಿದೆ.

ಕೋವಿಡ್ ಪ್ರಕರಣಗಳ ಸಂಖ್ಯೆಯೂ ಏರುಗತಿಯಲ್ಲಿದೆ. ಸತತ ಮೂರನೇ ದಿನವೂ ಸಾವಿರಕ್ಕಿಂತ ಅಧಿಕ ಪ್ರಕರಣಗಳು ವರದಿಯಾಗಿವೆ. ಸೋಮವಾರ 1,290 ಪ್ರಕರಣ ದೃಢಪಟ್ಟಿದ್ದು, ಐವರು ಸಾವಿಗೀಡಾಗಿದ್ದಾರೆ. ಭಾನುವಾರ 1,187 ಮತ್ತು ಶನಿವಾರ 1,033 ಪ್ರಕರಣಗಳು ದೃಢಪಟ್ಟಿದ್ದವು. ಬೆಂಗಳೂರಿನಲ್ಲಿ 1,041 ಪ್ರಕರಣಗಳು ದೃಢಪಟ್ಟಿದ್ದು, ಮೂವರು ಮೃತಪಟ್ಟಿದ್ದಾರೆ. ಹತ್ತು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಮತ್ತು 15 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

30,10,847 ಒಟ್ಟು ಸೋಂಕಿತರು (30,09,557 ನಿನ್ನೆಯ ವಿವರ)

11,345 ಸಕ್ರಿಯ ಪ್ರಕರಣಗಳು

29,61,122 ಗುಣಮುಖರಾದವರು

38,351 ಒಟ್ಟು ಸಾವು

ದಿನದ ಏರಿಕೆ	
ಹೊಸ ಪ್ರಕರಣ	1,290
ಗುಣಮುಖ	232
ಸಾವು	05

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ

Ref. VTU/BGM/SAP/CW6/T-570/2021-22/4777 dtd.01.01.2022

ಟೆಂಡರ ಪ್ರಕಟಣೆ

ಕುಲಸಚಿವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ ಲಕೋಟೆ ಪದ್ಧತಿಯಲ್ಲಿ) ಇ-ಟೆಂಡರ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಅಹ್ವಾನಿಸಲಾಗಿದೆ. ಕೆಲಸದ ಹೆಸರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ವಾರ್ಷಿಕ ದರ ಒಪ್ಪಂದದ ಮೇರೆಗೆ ಜನರಲ್/ಸ್ಟೇಶನರಿ ಸಾಮಗ್ರಿಗಳನ್ನು ಪೂರೈಸುವುದು. ಟೆಂಡರಿಗಿಟ್ಟ ಮೊತ್ತ: ರೂ. 30,00,000/–, ಮುಂಗಡ ಠೇವಣಿ: ರೂ.60,000/–, ಟೆಂಡರ ಸಲ್ಲಿಸಲು ಕೊನೆಯ ದಿನಾಂಕ:15–01–2022 ರ 2.30 ರ ವರೆಗೆ. ಟೆಂಡರ ತೆರೆಯುವ ದಿನಾಂಕ: 17–01–2022 ರ 4.00 ಘಂಟೆಗೆ. ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ಮತ್ತು www.vtu.ac.in ನೋಡಬಹುದು.

DIPR/BGM/RO-NO-1150/MCA/2021-22 ಸಹಿ/–ಕುಲಸಚಿವರು

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರ ಕಛೇರಿ, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಹಾವೇರಿ

ನಂ,ಪಂರಾಇಂವಿ/ಹಾವೇರಿ/ಪಿಬಿ–4/ಟೆಂಡರ್/2021–22/4302 ದಿನಾಂಕ:29–12–2021

ಅಲ್ಪಾವಧಿ ಟೆಂಡರ ಪ್ರಕಟಣೆ ನಂ: 30/2021–22 (E.GOK ಇ–ಪ್ರಕ್ಯೂರಮೆಂಟ್ ಮುಖಾಂತರ ಮಾತ್ರ)

ಲೆಕ್ಕ ಶೀರ್ಷಿಕೆ 5054 ಮಳೆಹಾನಿಯೋಜನೆಯಡಿ ರಾಣೇಬೆನ್ನೂರ ತಾಲೂಕಿನ ರಸ್ತೆ ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ.

(1) ಜೋಯಿಸರಹರಳಹಳ್ಳಿ–ಸರವಂದ ಮುಖ್ಯ ರಸ್ತೆಯಿಂದ ಗ್ರಾಮದ ಸ.ಪ್ರಾ. ಶಾಲೆಯ ವರೆಗೆ ಸಿ.ಸಿ ರಸ್ತೆ/ಪಕ್ಕಾ ಗಟರ ನಿರ್ಮಾಣ (INDENT87699) (2) ಸುಣಕಲ್ಲಬಿದರಿ ಗ್ರಾಮದಿಂದ ಕುಸಗೂರು ಕೂಡು ರಸ್ತೆ ಸುಧಾರಣೆ (INDENT87700) (3) ಯತ್ತಿನಹಳ್ಳಿ–ಕೆರೆಮಲ್ಲಾಪುರ ಕೂರು ರಸ್ತೆ ಸುಧಾರಣೆ (INDENT87701)

(1) ಇ–ಪ್ರಕ್ಯೂರಮೆಂಟ್ ಮೂಲಕ ಟೆಂಡರಗಳನ್ನು ಡೌನಲೋಡ್ ಮಾಡುವ ದಿನಾಂಕ : **30–12–2021** (2) ಇ–ಪ್ರಕ್ಯೂರಮೆಂಟ್ ಮೂಲಕ ಭರ್ತಿಮಾಡಿದ ಟೆಂಡರಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **07–01–2022**ರ 16:00 ಗಂಟೆವರೆಗೆ (3) ಇ–ಪ್ರೋಕ್ಯೂರಮೆಂಟ್ ತಾಂತ್ರಿಕ ಮತ್ತು ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) (ಕ್ರ.ಸಂ. 1ಕ್ಕೆ ಆರ್ಥಿಕ ಬಿಡ್) (ಕ್ರ.ಸಂ. 2 & 3ಕ್ಕೆ ತಾಂತ್ರಿಕ ಬಿಡ್) ದಿನಾಂಕ : **10–01–2022** ರ 11:00 ಗಂಟೆಗೆ (4) ಇ–ಪ್ರೋಕ್ಯೂರಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) (ಕ್ರ.ಸಂ. 2 & 3ಕ್ಕೆ ಆರ್ಥಿಕ ಬಿಡ್) ದಿನಾಂಕ : **14–01–2022**ರ 10:30 ಗಂಟೆಗೆ

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-GOK ಇ–ಪ್ರಕ್ಯೂರಮೆಂಟ್ ಪ್ಲಾಟ್‌ಫಾರಂನಲ್ಲಿ www.eproc.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಹಾವೇರಿ

ವಾಸಾಸಂಇ/ಹಾವೇರಿ/ಎಂ.ಸಿ.ಎ/347/2021–22

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

ಪಿ.ಹೆಚ್.ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರು, ಕೆ.ಆರ್. ಸರ್ಕಲ್, ಶೇಷಾದ್ರಿ ರಸ್ತೆ, ಬೆಂಗಳೂರು–560 001. ದೂರವಾಣಿ ಸಂಖ್ಯೆ: +91–80–29619801

ಮಿಂಚ್ ಅಂಚೆ: latha.mdksmscl@gmail.com

No: HFW/KSMSCL/TND/3Drugs/65/2021-22 Dated: 03.01.2022

ಟೆಂಡರ್ ಪ್ರಕಟಣೆ

ಉಲ್ಲೇಖ: 1. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/TND/03Drugs/65/2021-22 Dated: 03.01.2022 (IND-894)/Call-2.
2. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/TND/11Drugs/64/2021-22 Dated: 03.01.2022 (IND-895)/Call-2.
3. ಈ ಕಛೇರಿಯ ದರಪಟ್ಟಿ ಅಧಿಸೂಚನೆ ಸಂಖ್ಯೆ: HFW/KSMSCL/Covid-19/IFQ-52/ 06Drugs/2021-22, Date: 03.01.2022.

ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಕೆ.ಟಿ.ಪಿ.ಪಿ. ನಿಯಮಾನುಸಾರ ಈ ಕೆಳಕಂಡ ರಾಷ್ಟ್ರವ್ಯಾಪ್ತಿ ಇ–ಟೆಂಡರ್ ಮತ್ತು ದರಪಟ್ಟಿಯನ್ನು ಕರೆಯಲಾಗಿದೆ.

1) 2020–21ನೇ ಸಾಲಿನ ಔಷಧ, ರಾಸಾಯನಿಕ ಮತ್ತು ಇತರೆ ವಸ್ತುಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ. 2) ಕೋವಿಡ್–19 3ನೇ ಅಲೆಯ ಸೋಂಕಿತರ ಚಿಕಿತ್ಸೆಗಾಗಿ ಅವಶ್ಯವಿರುವ 6 ಔಷಧಿಗಳನ್ನು ಖರೀದಿಸಿ ಪೂರೈಸಲು 4(a) ಅಡಿಯಲ್ಲಿ ದರಪಟ್ಟಿಯನ್ನು ಕರೆಯುವ ಬಗ್ಗೆ.

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ **ದಿನಾಂಕ: 03.01.2022** ರಿಂದ ಔಷಧಿ ಟೆಂಡರ್‌ಗಳ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಕೆ.ಎಸ್.ಎಂ.ಎಸ್.ಸಿ.ಎಲ್ ವೆಬ್‌ಸೈಟ್ ಮುಖಾಂತರ: **http://www.kdlws.kar.nic.in/** ನಲ್ಲಿ ತಾಂತ್ರಿಕ ವಿವರಣೆ, ನಿಯಮಾವಳಿ ಹಾಗೂ ದರಪಟ್ಟಿಗೆ ಸಂಬಂಧಿಸಿದ ಇತರೆ ಮಾಹಿತಿಯನ್ನು **ದಿನಾಂಕ: 03.01.2022** ರಿಂದ **10.01.2022** ರ ಒಳಗಾಗಿ ಪಡೆಯಬಹುದು. ಅರ್ಹ ಸಂಸ್ಥೆಗಳು ಆನ್‌ಲೈನ್ ಮೂಲಕ ದರಪಟ್ಟಿಯನ್ನು Password Protected PDF ನಲ್ಲಿ ಇ–ಮೇಲ್ ಐಡಿ **ksdlwscovid19.procurement@gmail.com**ಗೆ **ದಿನಾಂಕ: 10.01.2022** ರ ಕ್ರಮವಾಗಿ ಸಂಜೆ **5:00 ಗಂಟೆಯೊಳಗೆ** ದರಪಟ್ಟಿಯನ್ನು ಸಲ್ಲಿಸಬಹುದು.

ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಂ.ಎಸ್.ಸಿ.ಎಲ್., ಬೆಂಗಳೂರು.

DIPR/DDU/AAPL/RO2655/21-22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

IN THE COURT OF THE ADDITIONAL CITY CIVIL AND SESSIONS JUDGE AT BENGALURU (CCH 92)

MISC No.1108/2019

BETWEEN:

The State of Karnataka, represented by Competent Authority Assistant Commissioner, Bengaluru North Sub Division, 2nd Floor, Kandaya Bhavana, K.G. Road, Bengaluru - 560 009. ...Petitioner

AND

M/s. Burraqh Unity L.L.P., No.18, Sri Maruthi Plaza, 3rd Cross, Sakamma Hanumanthappa Layout, Ambedkar Medical College Road, M.M. Layout, Kavalbyrasandra,Bengaluru - 560032.
& Others ...Respondents

NOTICE TO RESPONDENT NO. 1 TO 4

Respondent No.1

M/s. Burraqh Unity L.L.P., No.18, Sri Maruthi Plaza, 3rd Cross, Sakamma Hanumanthappa Layout, Ambedkar Medical College Road, M.M. Layout, Kavalbyrasandra, Bengaluru - 560032

Respondent No.2

M/s. Burraqh Groups., No. M-18, Sri Maruthi Plaza, Ambedkar Medical College Road, M.M. Layout, R.T. Nagara, Bengaluru - 560032.

Respondent No.3

Syed Niyaz, S/o Syed Ismail, No.18, Sri Maruthi Plaza, 3rd Cross, Sakamma Hanumanthappa Layout, Ambedkar Medical College Road, M.M. Layout, Kavalbyrasandra,Bengaluru - 560032.

Respondent No.4

Syed Mosin Pasha, S/o Syed Niyaz, No.18, Sri Maruthi Plaza, 3rd Cross, Sakamma Hanumanthappa Layout, Ambedkar Medical College Road, M.M. Layout, Kavalbyrasandra,Bengaluru - 560032.

Whereas the Petitioner has filed the Misc. Petition No.1108/2019 under Section 5(2) of the Karnataka Protection of Interest of Depositors in Financial Establishments Act 2004 against respondents.

The Respondent No. 1 to 4 are hereby summoned to appear in the Additional Court of the City Civil & Sessions Judge at Bengaluru (CCH No.92), in person or by a pleader duly instructed and able to answer all material questions relating to Misc. Petition No.1108/2019 **on 21-01-2022 at 11:00 'O' Clock** in the forenoon to answer the claim.

Take notice that in default of your appearance on the date above mentioned the Misc. Petition will be heard and determined in your absence.

Given under my hand and seal of the court this day on 03-01-2022.

Sd/- Shantha B Mullur, Special Public Prosecutor, City Civil Court, Bengaluru.

By Order of the Court, Sd/- Assistant Registrar, City Civil Court, Bengaluru.

DIPR/DDU/2666/MAA/2021-22

ಮೊದಲ ದಿನ 40 ಲಕ್ಷ ಮಕ್ಕಳಿಗೆ ಲಸಿಕೆ

ಹುಡುಗಿಯೊಬ್ಬಳು ರಾಜೀವ ಲಸಿಕಾ ಕೇಂದ್ರವೊಂದರಲ್ಲಿ ಲಸಿಕೆ ಹಾಕಿಸಿಕೊಳ್ಳುವಾಗ ಸೆಲ್ಫಿ ತೆಗೆದುಕೊಂಡಳು –ಪಿಟಿಐ ಚಿತ್ರ

ನವದೆಹಲಿ/ಮುಂಬೈ/ಜಮ್ಮು (ಪಿಟಿಐ): ಹದಿಹರೆಯದ ಲಕ್ಷಾಂತರ ಮಕ್ಕಳು ಕೋವಿಡ್–19 ತಡೆ ಲಸಿಕೆಗಾಗಿ ಸರತಿ ಸಾಲಲ್ಲಿ ನಿಂತಿದ್ದ ದೃಶ್ಯಗಳು ದೇಶದ ವಿವಿಧ ಭಾಗಗಳಲ್ಲಿ ಸೋಮವಾರ ಕಂಡು ಬಂತು. 15–18ರ ವಯೋಮಾನದ ಮಕ್ಕಳಿಗೆ ಲಸಿಕೆ ನೀಡಿಕೆ ಸೋಮವಾರದಿಂದ ಆರಂಭವಾಗಿದೆ. ಸೋಮವಾರ ರಾತ್ರಿ 8 ಗಂಟೆಯ ಹೊತ್ತಿಗೆ ಸುಮಾರು 40 ಲಕ್ಷ ಮಕ್ಕಳು ಲಸಿಕೆ ಹಾಕಿಸಿಕೊಂಡಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಟ್ವೀಟ್ ಮಾಡಿದ್ದಾರೆ. 15–18ರ ವಯೋಮಾನದ ಒಟ್ಟು 7.4 ಕೋಟಿ ಮಕ್ಕಳು ದೇಶದಲ್ಲಿ ಇದ್ದಾರೆ ಎಂದು ಅಂದಾಜಿಸಲಾಗಿದೆ.

ಲಸಿಕಾ ಕೇಂದ್ರಗಳಲ್ಲಿ ಆಕರ್ಷಕವಾದ ಸೆಲ್ಫಿ ತಾಣಗಳನ್ನು ರೂಪಿಸಲಾಗಿತ್ತು. ಚಂದದ ಪೋಸ್ಟರ್‌ಗಳು ಮತ್ತು ವರ್ಣಮಯ ಬಲೂನ್‌ಗಳನ್ನು ಇರಿಸಲಾಗಿತ್ತು. ಶಾಲೆಗಳು ಮತ್ತು ಶೈಕ್ಷಣಿಕ ಸಂಸ್ಥೆಗಳು ಯುವ ಜನರನ್ನು ಸ್ವಾಗತಿಸಲು ಅಲಂಕಾರಗೊಂಡು ಸಜ್ಜಾಗಿದ್ದವು. ಕೆಲವು ಮಕ್ಕಳು ಶಾಲಾ ಸಮವಸ್ತ್ರದಲ್ಲಿಯೇ ಬಂದರೆ, ಇನ್ನುಳಿದವರು ತಮ್ಮ ಆಯ್ಕೆಯ ಬಟ್ಟೆ ಧರಿಸಿ ಬಂದಿದ್ದರು. ಲಸಿಕೆ ಹಾಕಿಸಿಕೊಂಡ ಮಕ್ಕಳಿಗೆ ಕೆಲವೆಡೆ ಉಡುಗೊರೆಗಳನ್ನೂ ನೀಡಲಾಗಿದೆ.

ಲಸಿಕೆಗೆ ನೋಂದಣಿ ಪ್ರಕ್ರಿಯೆ ಶನಿವಾರವೇ ಆರಂಭವಾಗಿತ್ತು. ನೋಂದಣಿ ಮಾಡಿಸದೆ ನೇರವಾಗಿ ಲಸಿಕಾ ಕೇಂದ್ರಕ್ಕೆ ಹೋದವರಿಗೂ ಲಸಿಕೆ ಹಾಕಿಸಿಕೊಳ್ಳಲು ಅವಕಾಶ ಇದೆ.

ಲಸಿಕಾ ಅಭಿಯಾನವು ಕಳೆದ ವರ್ಷದ ಜನವರಿ 16ರಂದು ಆರಂಭವಾಗಿತ್ತು. ಆರೋಗ್ಯ ಕಾರ್ಯಕರ್ತರು ಮತ್ತು ಕೋವಿಡ್ ಮುಂಚೂಣಿ ಹೋರಾಟಗಾರರು, ಹಿರಿಯ ನಾಗರಿಕರಿಗೆ ಮೊದಲ ಹಂತದಲ್ಲಿ ಲಸಿಕೆ ಹಾಕಿಸಿಕೊಳ್ಳಲು ಅವಕಾಶ ನೀಡಲಾಗಿತ್ತು. ನಂತರ, ಅದನ್ನು 18 ವರ್ಷ ದಾಟಿದ ಎಲ್ಲರಿಗೂ ವಿಸ್ತರಿಸಲಾಗಿತ್ತು.

ಹೆಚ್ಚಿನ ಶಾಲೆಗಳಲ್ಲಿ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿಯೇ ಲಸಿಕೆ ಕೇಂದ್ರಗಳನ್ನು ತೆರೆಯಲಾಗಿದೆ. ವಿದ್ಯಾರ್ಥಿಗಳು ಮತ್ತು ಹೆತ್ತವರಿಂದ ಲಸಿಕೆ ಅಭಿಯಾನಕ್ಕೆ ಸಕಾರಾತ್ಮಕ ಪ್ರತಿಕ್ರಿಯೆ ಬಂದಿದೆ ಎಂದು ಶಾಲೆ ಮತ್ತು ಕಾಲೇಜುಗಳ ಪ್ರಾಂಶುಪಾಲರು ಹೇಳಿದ್ದಾರೆ.

'ಸಾಂಕ್ರಾಮಿಕದ ನಡುವೆಯೇ ಶಾಲೆಗಳು ತೆರೆದಾಗ ಮಗನನ್ನು ಕಳುಹಿಸಲು ಹಿಂಜರಿಕೆ ಇತ್ತು. ಈಗ, ಅವನಿಗೂ ಲಸಿಕೆ ಸಿಕ್ಕಿದ್ದರಿಂದ ನಿರಾಳವಾಗಿದೆ' ಎಂದು ಸವಿತಾ ದೇವಿ ಎಂಬುವರು ಹೇಳಿದ್ದಾರೆ. ಅವರ ಮಗ ದೆಹಲಿಯ ಸರ್ಕಾರಿ ಶಾಲೆಯಲ್ಲಿ ಲಸಿಕೆ ಹಾಕಿಸಿಕೊಂಡಿದ್ದಾನೆ. ಲಸಿಕೆ ಹಾಕಿಸಿಕೊಳ್ಳದವರಿಗೆ ಹಲವು ನಿರ್ಬಂಧಗಳು ಇವೆ. ಲಸಿಕೆ ಹಾಕಿಸಿಕೊಂಡಿಲ್ಲ ಎಂಬ ಕಾರಣಕ್ಕೆ ವಿವಿಧ ಚಟುವಟಿಕೆಗಳಿಂದ ವಂಚಿತರಾಗುವುದು ಇಷ್ಟವಿಲ್ಲ ಎಂದು ಹಲವು ವಿದ್ಯಾರ್ಥಿಗಳು ಹೇಳಿದ್ದಾರೆ.

ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್ ತೀವ್ರವಾಗಿ ಹರಡುವ ಭೀತಿ ಇರುವುದರಿಂದ 15-18ರ ವಯಸ್ಸಿನವರಲ್ಲಿ ಲಸಿಕೆ ಹಾಕಿಸಿಕೊಳ್ಳುವ ಹುರುಪು ಹೆಚ್ಚು ಕಾಣಿಸುತ್ತಿದೆ.

1,700 ಓಮೈಕ್ರಾನ್ ಪ್ರಕರಣಗಳು: ಸೋಮವಾರ ಬೆಳಿಗ್ಗೆ 8ರವರೆಗೆ ದೇಶದಾದ್ಯಂತ ಒಟ್ಟು 1,700 ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿವೆ.

ಮಹಾರಾಷ್ಟ್ರದಲ್ಲಿ 510, ದೆಹಲಿಯಲ್ಲಿ 351, ಕೇರಳದಲ್ಲಿ 156, ಗುಜರಾತ್‌ನಲ್ಲಿ 136, ತಮಿಳುನಾಡಿನಲ್ಲಿ 121 ಮತ್ತು ರಾಜಸ್ಥಾನದಲ್ಲಿ 120 ಓಮೈಕ್ರಾನ್ ಪ್ರಕರಣಗಳು ದಾಖಲಾಗಿವೆ.

- ಸೋಮವಾರ ಬೆಳಿಗ್ಗೆ 8ರ ಹಿಂದಿನ 24 ತಾಸುಗಳಲ್ಲಿ ದೇಶದಲ್ಲಿ 33,750 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ
- ಗೋವಾದಲ್ಲಿ ಕೋವಿಡ್ ದೃಢಪಡುವಿಕೆ ಪ್ರಮಾಣವು ಸೋಮವಾರ ಶೇ 26.43ಕ್ಕೆ ಏರಿಕೆಯಾಗಿದೆ. ಹಿಂದೆ ಇದು ಶೇ 16ರಷ್ಟಿತ್ತು
- ಕೇಂದ್ರ ಸರ್ಕಾರದ ಕಚೇರಿಗಳಲ್ಲಿ, ನೌಕರರಿಗೆ ಬಯೊಮೆಟ್ರಿಕ್ ಹಾಜರಾತಿಯನ್ನು ಜನವರಿ 31ರವರೆಗೆ ರದ್ದುಪಡಿಸಲಾಗಿದೆ
- ಕೋವಿಡ್ ಚಿಕಿತ್ಸೆಯ ವೆಚ್ಚ ಭರಿಸುವ ಆರೋಗ್ಯ ವಿಮಾ ಪಾಲಿಸಿಗಳು, ಓಮೈಕ್ರಾನ್‌ನಿಂದ ತಗುಲಿದ ಕೋವಿಡ್ ಚಿಕಿತ್ಸೆಯ ವೆಚ್ಚವನ್ನೂ ಭರಿಸುತ್ತವೆ ಎಂದು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಹೇಳಿದೆ
- ದೇಶದಲ್ಲಿ ಕೋವಿಡ್‌ನ ಮೂರನೇ ಅಲೆ ಆರಂಭವಾಗಿದೆ. ದೇಶದಲ್ಲಿ ಪತ್ತೆಯಾಗಿರುವ ಒಟ್ಟು ಓಮೈಕ್ರಾನ್ ಪ್ರಕರಣಗಳಲ್ಲಿ ಶೇ 75ರಷ್ಟು ಮುಂಬೈ, ದೆಹಲಿ, ಕೋಲ್ಕತ್ತದಂತಹ ದೊಡ್ಡ ನಗರಗಳಲ್ಲೇ ಪತ್ತೆಯಾಗಿದೆ ಎಂದು ಕೇಂದ್ರ ಸರ್ಕಾರದ ಕೋವಿಡ್ ಕಾರ್ಯಪಡೆ ಮುಖ್ಯಸ್ಥ ಡಾ.ಎನ್.ಕೆ.ಅರೋರಾ ಹೇಳಿದ್ದಾರೆ
- ದೆಹಲಿಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯನ್ನು ನಿಯಂತ್ರಿಸುವ ಸಂಬಂಧ ಕ್ರಮ ತೆಗೆದುಕೊಳ್ಳಲು ದೆಹಲಿ ವಿಪತ್ತು ನಿರ್ವಹಣಾ ಪ್ರಾಧಿಕಾರವು ಮಂಗಳವಾರ ಸಭೆ ನಡೆಸಲಿದೆ
- ದೆಹಲಿಯಲ್ಲಿ ಸೋಮವಾರ 4,099 ಪ್ರಕರಣಗಳು ಪತ್ತೆಯಾಗಿವೆ. ರಾಜಧಾನಿಯಲ್ಲಿ ಕೋವಿಡ್ ದೃಢಪಡುವ ಪ್ರಮಾಣವು ಶೇ 6.46ಕ್ಕೆ ಏರಿಕೆಯಾಗಿದೆ. ಈಗ ಪತ್ತೆಯಾಗುತ್ತಿರುವ ಕೋವಿಡ್ ಪ್ರಕರಣಗಳಲ್ಲಿ ಶೇ 81ರಷ್ಟು ಓಮೈಕ್ರಾನ್ ಪ್ರಕರಣಗಳೇ ಆಗಿವೆ ಎಂದು ದೆಹಲಿ ಸರ್ಕಾರ ಹೇಳಿದೆ
- ಜಾರ್ಖಂಡ್ ಸರ್ಕಾರವು ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಮತ್ತು ಪ್ರವಾಸಿ ಸ್ಥಳಗಳನ್ನು ಜನವರಿ 15ರವರೆಗೆ ಮುಚ್ಚಲು ಆದೇಶಿಸಿದೆ. ಸರ್ಕಾರಿ ಖಾಸಗಿ ಕಚೇರಿಗಳಲ್ಲಿ ಶೇ 50ರಷ್ಟು ಸಿಬ್ಬಂದಿ ಮಾತ್ರವೇ ಹಾಜರಿರಬೇಕು ಎಂದು ಹೇಳಿದೆ
- ಮುಂಬೈ: ಶಾಲೆಗಳಲ್ಲಿ ಭೌತಿಕ ತರಗತಿಗಳನ್ನು ಜನವರಿ 31ರವರೆಗೆ ರದ್ದುಪಡಿಸಲಾಗಿದೆ
- ಗೋವಾ: ಜನವರಿ 26ವರೆಗೆ ಶಾಲಾ–ಕಾಲೇಜುಗಳನ್ನು ಮುಚ್ಚಲಾಗಿದೆ

CORRIGENDUM

Inviting a reference to the "PUBLIC NOTICE" given in "Prajavani" dt. 03.01.2022, the following corrigendum is issued: Name of the owner should be read as "Sri NIKHIL.K" instead of "Sri NIKHI.K". All other details mentioned therein remain same.

K.N. SRINIVASA, Advocate, M/s. KNS LAW Firm, No. 39/2, ASVNV Bhavana, 3rd Floor, Opposite to SBI, K.G. Road, BENGALURU - 560 009 Cell: 9845167008 email: knsrinivasa317@gmail.com

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

ಪೋಷಕರ ಪತ್ತೆಗಾಗಿ ಪ್ರಕಟಣೆ

ಈ ಭಾವಚಿತ್ರದಲ್ಲಿರುವ ಸುಮಾರು 2 ದಿನದ ಹೆಣ್ಣು ಮಗುವು ದಿನಾಂಕ: 24.12.2021ರಂದು ಕುಣಿಗಲ್ ತಾಲ್ಲೂಕಿನ ಭಕ್ತರಹಳ್ಳಿ, ವಾಣಿಗೆರೆ ಗ್ರಾಮದ ಸೆಂಟ್ ಗ್ರೆಗೋರಿಯಸ್ ದಯಾಭವನ ಸಂಸ್ಥೆಯ ಆವರಣದಲ್ಲಿರುವ ಮಮತೆಯ ತೊಟ್ಟಿಲಲ್ಲಿ ದೊರೆತಿದ್ದು, ಸದರಿ ಮಗುವು ಕಂದು ಬಣ್ಣ, ದುಂಡು ಮುಖವುಳ್ಳದ್ದಾಗಿದ್ದು, ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿರುತ್ತದೆ. ಸದರಿ ಮಗುವಿನ ಪೋಷಕರು ಯಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, 5ನೇ ಅಡ್ಡರಸ್ತೆ, ಅಶೋಕನಗರ, ತುಮಕೂರು. ದೂರವಾಣಿ ಸಂಖ್ಯೆ: 0816–2956699, ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸ್ಥಳ: ತುಮಕೂರು

ದಿನಾಂಕ: 30–12–2021

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

DIPR/TUM/506/MCA/2021-22

ಕರ್ನಾಟಕ ಸರ್ಕಾರ

ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು

ಡಾ.ಬಾಬು ಜಗಜೀವನ್‌ರಾಮ್ ಭವನ ಕಟ್ಟಡ, ಆದಿಪಂಪ ರಸ್ತೆ, ನಾರಾಯಣಸ್ವಾಮಿ ಬ್ಲಾಕ್, ವಿನಾಯಕನಗರ, ಮೈಸೂರು.

E-mail- dswomysore9@gmail.com Ph. No. 0821-2344661

ಸಂಖ್ಯೆ:ನಿಪಕೇ.ಮೈ/ಆಡಳಿತ/ಸಿಆರ್–1/2021–22 ದಿನಾಂಕ:03–01–2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ನಿರಾಶ್ರಿತರ ಪರಿಹಾರ ಕೇಂದ್ರ, ಜ್ಯೋತಿನಗರ, ಮೈಸೂರು ಇಲ್ಲಿನ ನಿರಾಶ್ರಿತರುಗಳ ಊಟದ ನಿರ್ವಹಣೆಗಾಗಿ 2021–22ನೇ ಸಾಲಿಗೆ ಬೇಕಾಗಿರುವ ಆಹಾರ ಪದಾರ್ಥಗಳು ಮತ್ತು ಇತರೆ ಅಗತ್ಯ ವಸ್ತುಗಳ ಪೂರೈಕೆಗಾಗಿ ಇ-ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್) ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ **www.eproc.karnataka.gov.in** ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.

1. ಇ–ಟೆಂಡರ್ ನಮೂನೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ: 03–01–2022** ರಿಂದ **02–02–2022**ರ **ಬೆಳಿಗ್ಗೆ 11.00** ಗಂಟೆಯವರೆಗೆ. **2.** ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್‌ಗೆ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 02–02–2022ರ ಸಂಜೆ 04.00** ಗಂಟೆಯವರೆಗೆ. **3.** Prebid ಸಭೆ **ದಿನಾಂಕ: 25–01–2022** ರ **ಬೆಳಿಗ್ಗೆ 11.00** ಗಂಟೆಯ ನಂತರ. (ಇದಕ್ಕೆ ಯಾವುದೇ ಸೂಚನ ಪತ್ರ ಕಳುಹಿಸುವುದಿಲ್ಲ) **4.** ಇ–ಟೆಂಡರ್ ತೆರೆಯುವ **ದಿನಾಂಕ: 04–02–2022**ರ ಬೆಳಿಗ್ಗೆ 11.00 ಗಂಟೆಯ ನಂತರ.

ಸಹಿ/– ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಹಾಗೂ ಕಾರ್ಯದರ್ಶಿ, ನಿರಾಶ್ರಿತರ ಪರಿಹಾರ ಕೇಂದ್ರ, ಮೈಸೂರು.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಗ್ರಾಮೀಣಾಭಿವೃದ್ಧಿ ಯೋಜನಾ ವಿಭಾಗ ಕಲಬುರಗಿ

ಸಂಖ್ಯೆ : ಕಾನಿಅ/ಗ್ರಾಯೋ/ವಿಕ/ತಾಶಾ/ಟೆಂಡರ/ KKRDB /2021–22/942 ದಿನಾಂಕ: 03–01–2022

:: ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ ::

1) ಕಾಮಗಾರಿಯ ವಿವರ : Improvements to Road from Awaralli to Jogur village in Afzalpur taluk of Kalabuargi District under KKRDB 2021-22 (Micro), INDENT No:5265, 2) ಲೆಕ್ಕ ಶೀರ್ಷಿಕೆ : KKRDB 2021-22(Micro), 3) ಟೆಂಡರಿಗಿಟ್ಟ ಮೊತ್ತ : Rs. 44101379.61, 4) ಗುತ್ತಿಗೆದಾರರ ಅರ್ಹತೆ : 1ನೇ ದರ್ಜೆ & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ಹಾಗೂ ಸಲ್ಲಿಸುವ ಅಂತಿಮ ದಿನಾಂಕ : **03/01/2022 ರಿಂದ 17/01/2022 ರ ಸಾಯಂಕಾಲ 4:30 ಗಂಟೆವರೆಗೆ,** 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಟೆಂಡರ ಫಾರಂ ಬೆಲೆ & ಇ.ಎಂ.ಡಿ. ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿರುವಂತೆ, 7) ಟೆಂಡರ ಸಲ್ಲಿಸುವ ಅಂತಿಮ ದಿನಾಂಕ : 17/01/2022 ಸಾಯಂಕಾಲ 4:30 ಗಂಟೆವರೆಗೆ, 8) ಟೆಂಡರ ತೆರೆಯುವ ದಿನಾಂಕ : 18/01/2022 ಸಾಯಂಕಾಲ 4:35 ಗಂಟೆ ನಂತರ, 9) ಆರ್ಥಿಕ ಬಿಡ್ಡ ತೆರೆಯುನ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣಾಭಿವೃದ್ಧಿ ಪಂಚಾಯತ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ ಅಂಬೇಡ್ಕರ ವಸತಿ ನಿಲಯದ ಎದುರಿಗೆ ರಾಜಾಪೂರ ರಸ್ತೆ ಕಲಬುರಗಿ, 11) ಅಂತರಜಾಲ ತಾಣದ ವಿಳಾಸ : www.eproc.karnataka.gov.in 12) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ : ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.eproc.karnataka.gov.in ಮಾಡಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/896/ಎಂ.ಸಿ.&ಎ/2021–22

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ

ಮುಖ್ಯ ಅಭಿಯಂತರವರ ಕಾರ್ಯಾಲಯ, ಜಲಮಂಡಳಿ ಆವರಣ, ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ–580001.

ದೂರವಾಣಿ :0836–2447090 ಫ್ಯಾಕ್ಸ್ : 0836–2446890

ಅಲ್ಪಾವಧಿ ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗಳಿಗೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕೆಳಗೆ ವಿವರಿಸಿದ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಪೂರೈಸುವ ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕೆಳಕಂಡ ಇಡುಗಂಟು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) ಕಾಮಗಾರಿಯ ಹೆಸರು: ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಕಾರ್ಯಕ್ರಮದಡಿಯಲ್ಲಿ ಚಿಂಚಲಿ ಪಟ್ಟಣಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ, ಬಿಡ್‌ಗೆ ಇಟ್ಟ ಬಂಡವಾಳ ಮೊತ್ತ ರೂ.701.06 ಲಕ್ಷಗಳು; ನಿರ್ವಹಣೆ ಮತ್ತು ದುರಸ್ತಿ ಮೊತ್ತ ರೂ.86.53 ಲಕ್ಷಗಳು. ಇಎಂಡಿ: ರೂ: 11.81 ಲಕ್ಷಗಳು, ಹೆಚ್ಚಿನ ವಿವರಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು.

ವರ್ಕ್–ಇಂಡೆಂಟ್/3074 (2nd call)

2) ಕಾಮಗಾರಿಯ ಹೆಸರು: ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಕಾರ್ಯಕ್ರಮದಡಿಯಲ್ಲಿ ಉಗಾರಖುರ್ದ ಪಟ್ಟಣಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ, ಬಿಡ್‌ಗೆ ಇಟ್ಟ ಬಂಡವಾಳ ಮೊತ್ತ ರೂ.923.37 ಲಕ್ಷಗಳು; ನಿರ್ವಹಣೆ ಮತ್ತು ದುರಸ್ತಿ ಮೊತ್ತ ರೂ.98.10 ಲಕ್ಷಗಳು. ಇಎಂಡಿ: ರೂ: 15.00 ಲಕ್ಷಗಳು, ಹೆಚ್ಚಿನ ವಿವರಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು.

ವರ್ಕ್–ಇಂಡೆಂಟ್/3076 (2nd call)

ಟೆಂಡರ್ ದಿನಾಂಕಗಳು:

1) ಬಿಡ್ ದಾಖಲೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಮತ್ತು ಸಮಯ: 04–01–2022 11:00 ಗಂಟೆಯ ನಂತರ **2)** ಟೆಂಡರ್ ಆಕ್ಷೇಪಣೆ / ಸ್ಪಷ್ಟೀಕರಣಗಳಿಗಾಗಿ ನಿಗದಿಪಡಿಸಿದ ದಿನಾಂಕ ಮತ್ತು ಸಮಯ11–01–2022 11:00 ಗಂಟೆಗೆ **3)** ಟೆಂಡರ್ ಪೂರ್ವ ಸಭೆ ದಿನಾಂಕ: 11–01–2022 11:00 ಗಂಟೆಗೆ **4)** ಬಿಡ್ ಸಲ್ಲಿಸಲು / ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ18–01–2022 17:30 ಗಂಟೆಯ ವರೆಗೆ **5)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ20–01–2022 11:00 ಗಂಟೆಯ ನಂತರ

ಹೆಚ್ಚಿನ ವಿವರಗಳಿಗಾಗಿ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ದಯವಿಟ್ಟು ಸಂಪರ್ಕಿಸಬಹುದು.

ಸಹಿ/–(ಕೆ. ವಿ. ಶ್ರೀಕೇಶವ) ಮುಖ್ಯ ಅಭಿಯಂತರು, ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ಧಾರವಾಡ

ವಾ.ಸಾ.ಇ./ಧಾರವಾಡ/829/2021–22ದೇಶಪಾಂಡೆಪಬ್ಲಿಸಿಟಿ

ಅವಧಿ ಮುಗಿದ ಲಸಿಕೆ ಬಾಟಲಿಗೆ ಹೊಸ ಲೇಬಲ್?

ಭಾರತ್ ಬಯೊಟೆಕ್ ತನ್ನ ಕೋವಿಡ್ ಲಸಿಕೆ ಕೋವ್ಯಾಕ್ಸಿನ್‌ನ, ಅವಧಿ ಮುಗಿದ ಬಾಟಲ್‌ಗಳಿಗೆ ಹೊಸ ಲೇಬಲ್ ಹಾಕಿ ಪೂರೈಕೆ ಮಾಡುತ್ತಿದೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾದ ಬೆನ್ನಲ್ಲೇ ಕೇಂದ್ರ ಆರೋಗ್ಯ ಸಚಿವಾಲಯವು ಸ್ಪಷ್ಟನೆ ನೀಡಿದೆ.

'ಅವಧಿ ಮುಗಿದ ಕೋವ್ಯಾಕ್ಸಿನ್ ಲಸಿಕೆಗಳನ್ನು ಪೂರೈಕೆ ಮಾಡುತ್ತಿಲ್ಲ. ತಯಾರಿಕೆಯ ದಿನದಿಂದ 9 ತಿಂಗಳು ಮೊದಲು ಈ ಲಸಿಕೆಯನ್ನು ಬಳಸಬೇಕಿತ್ತು. ಈ ಅವಧಿಯನ್ನು 12 ತಿಂಗಳಿಗೆ ವಿಸ್ತರಿಸುವಂತೆ ಕಂಪನಿಯು ಪತ್ರ ಬರೆದಿತ್ತು. ಆ ಪ್ರಕಾರ ಅವಧಿಯನ್ನು ವಿಸ್ತರಿಸಲಾಗಿದೆ. ದೀರ್ಘಾವಧಿಯಲ್ಲಿ ವೈಜ್ಞಾನಿಕವಾಗಿ ವಿಶ್ಲೇಷಣೆ ನಡೆಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕಂಪನಿಯು, ತನ್ನ ಬಳಿ ಇರುವ ಬಾಟಲಿಗಳ ಲೇಬಲ್‌ಗಳನ್ನು ಬದಲಿಸಿ, ಪೂರೈಕೆ ಮಾಡುತ್ತಿದೆ. ಒಂಬತ್ತು ತಿಂಗಳು ಎಂದು ಇದ್ದ ಅವಧಿಯನ್ನು 12 ತಿಂಗಳು ಎಂದು ಬದಲಿಸಲಾಗಿದೆ ಅಷ್ಟೆ' ಎಂದು ಆರೋಗ್ಯ ಸಚಿವಾಲಯವು ಸ್ಪಷ್ಟನೆ ನೀಡಿದೆ.

ಕೋವ್ಯಾಕ್ಸಿನ್ ಬಳಕೆಗೆ ಅನುಮತಿ ದೊರೆತಾಗ, ಅದರ ಅವಧಿ ಗರಿಷ್ಠ 6 ತಿಂಗಳು ಆಗಿತ್ತು. 2021ರ ಫೆಬ್ರುವರಿಯಲ್ಲಿ ಅದನ್ನು 9 ತಿಂಗಳಿಗೆ ವಿಸ್ತರಿಸಲಾಗಿತ್ತು.

ನಿರ್ಬಂಧ: ಇಂದು ನಿರ್ಧಾರ?

ಒಂದನೇ ಪುಟದಿಂದ

ಸೋಮವಾರ ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಇಡೀ ದೇಶದಲ್ಲಿ ಕೋವಿಡ್ ಮತ್ತು ಒಮೈಕ್ರಾನ್ ವೈರಾಣು ವೇಗವಾಗಿ ಹರಡುತ್ತಿದೆ. ಈ ಬಗ್ಗೆ ತಜ್ಞರ ಜೊತೆ ಸಭೆ ನಡೆಸಲಾಗುವುದು. ಬಳಿಕ, ಸಂಪುಟ ಸಹೋದ್ಯೋಗಿಗಳ ಜೊತೆ ಚರ್ಚಿಸಿ, ದೀರ್ಘಾವಧಿ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು' ಎಂದರು.

'ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಮತ್ತು ಆರೋಗ್ಯ ತಜ್ಞರು ನೀಡಲಿರುವ ಸಲಹೆ–ಶಿಫಾರಸುಗಳನ್ನು ಗುರುವಾರ (ಜ.6) ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ರಾಜ್ಯದಲ್ಲಿ ಯಾವೆಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಕೊಳ್ಳಬೇಕೆಂದು ನಿರ್ಧರಿಸುತ್ತೇವೆ' ಎಂದರು.

'ಕೋವಿಡ್ ಮೊದಲ ಮತ್ತು ಎರಡನೇ ಅಲೆಗಳನ್ನು ನಿಭಾಯಿಸಿರುವ ಅನುಭವದ ಹಿನ್ನೆಲೆಯಲ್ಲಿ, ಜನಜೀವನಕ್ಕೆ ತೊಂದರೆ ಆಗದಂತೆ ಸೋಂಕು ನಿಯಂತ್ರಣಕ್ಕೆ ಏನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಸಲಹೆ ನೀಡುವಂತೆ ತಜ್ಞರಿಗೆ ಸೂಚನೆ ನೀಡಲಾಗಿದೆ' ಎಂದರು.

> 15ರಿಂದ 18 ವರ್ಷದ ಮಕ್ಕಳ ಆರೋಗ್ಯ ಬಹಳ ಮುಖ್ಯ. ಕೋವಿಡ್ ವಿರುದ್ಧ ಸುರಕ್ಷಾ ಚಕ್ರವನ್ನು ವಿಶೇಷವಾಗಿ ಮಕ್ಕಳಿಗೆ ನೀಡಬೇಕು.
>
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> ಲಸಿಕೆ ನೀಡುವಲ್ಲಿ ವಿಶ್ವದಲ್ಲೇ ಭಾರತ ಅತಿ ದೊಡ್ಡ ಸಾಧನೆ ಮಾಡಿದೆ. ರಾಜ್ಯದಲ್ಲಿ 8.65 ಕೋಟಿ ಡೋಸ್ ಲಸಿಕೆ ನೀಡಲಾಗಿದೆ.
>
> **ಡಾ.ಕೆ. ಸುಧಾಕರ್,** ಆರೋಗ್ಯ ಸಚಿವ

ಒಂದೇ ದಿನ 4.03 ಲಕ್ಷ ಮಕ್ಕಳಿಗೆ ಲಸಿಕೆ

ಮಕ್ಕಳಿಗೆ ಲಸಿಕೆ ನೀಡುವುದನ್ನು ಆರಂಭಿಸಿದ ಮೊದಲ ದಿನವೇ ರಾಜ್ಯದಲ್ಲಿ 15 ರಿಂದ 18 ವರ್ಷದ ಒಳಗಿನ 4.03 ಲಕ್ಷ ಮಕ್ಕಳಿಗೆ ಲಸಿಕೆ ನೀಡಲಾಗಿದೆ.

ರಾಜ್ಯದಲ್ಲಿ ಈ ವಯೋಮಾನದ 31.75 ಲಕ್ಷ ಮಕ್ಕಳನ್ನು ಗುರುತಿಸಲಾಗಿದೆ. ಮೊದಲ ದಿನವಾದ ಸೋಮವಾರ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಲಸಿಕೆ ನೀಡಲಾಯಿತು. ಮೊದಲ ದಿನ 6.38 ಲಕ್ಷ ಮಕ್ಕಳಿಗೆ ಲಸಿಕೆ ನೀಡುವ ಗುರಿ ಇತ್ತು. ಸಂಜೆ 7.30ರವರೆಗಿನ ಮಾಹಿತಿಯಂತೆ 4,03,928 ಮಕ್ಕಳಿಗೆ ಲಸಿಕೆ ನೀಡುವ ಮೂಲಕ ಶೇ 63ರಷ್ಟು ಗುರಿ ಸಾಧಿಸಲಾಗಿದೆ. ನಾಲ್ಕು ಸಾವಿರಕ್ಕಿಂತ ಹೆಚ್ಚು ಕೇಂದ್ರಗಳಲ್ಲಿ ಲಸಿಕೆ ನೀಡಲಾಯಿತು. ಮೊದಲ ಡೋಸ್ ಪಡೆದವರಿಗೆ 28 ದಿನಗಳ ನಂತರ ಎರಡನೇ ಡೋಸ್ ನೀಡಲಾಗುವುದು ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಎಲ್ಲರೂ ಲಸಿಕೆ ಹಾಕಿಸಿಕೊಳ್ಳಿ: ನಾಗೇಶ್ ಮನವಿ

ಬೆಂಗಳೂರು: 'ಕೋವಿಡ್ ಕಾರಣಕ್ಕೆ ಯಾವ ಮಗುವಿನ ಶಿಕ್ಷಣವೂ ಅಪೂರ್ಣ ಆಗಬಾರದು. 15ರಿಂದ 18 ವರ್ಷ ವಯೋಮಾನದ ಎಲ್ಲ ಮಕ್ಕಳಿಗೆ ಲಸಿಕೆ ನೀಡುವ ಪ್ರಕ್ರಿಯೆ ಸೋಮವಾರ (ಜ. 3) ಆರಂಭಗೊಂಡಿದ್ದು, ಎಲ್ಲರೂ ಲಸಿಕೆ ಹಾಕಿಸಿಕೊಳ್ಳಬೇಕು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮನವಿ ಮಾಡಿದ್ದಾರೆ. ಕೋವಿಡ್ ದೃಢಪಟ್ಟ ಕಾರಣ ಕ್ವಾರಂಟೈನ್‌ನಲ್ಲಿರುವ ಸಚಿವರು, ವಿಡಿಯೊ ಸಂದೇಶದ ಮೂಲಕ ಈ ಮನವಿ ಮಾಡಿದ್ದಾರೆ.

ಅಣಕು ಕಾರ್ಯಾಚರಣೆ: ಸನ್ನದ್ಧವಾಗಿರಲು ತರಬೇತಿ

190 ಆಮ್ಲಜನಕ ಘಟಕಗಳ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ವಹಣೆಗಾಗಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 224 ವೈದ್ಯಕೀಯ ಆಮ್ಲಜನಕ ತಯಾರಿಕಾ ಘಟಕಗಳ ಸ್ಥಾಪನೆಗೆ ಅನುಮೋದನೆ ಸಿಕ್ಕಿದೆ. ಈಗಾಗಲೇ 190 ಘಟಕಗಳು ಸ್ಥಾಪನೆಗೊಂಡು, ಕಾರ್ಯಾರಂಭಕ್ಕೆ ಸಜ್ಜಾಗಿವೆ. ಇನ್ನೂ 34 ಘಟಕಗಳು ಸ್ಥಾಪನೆಯಾಗಿಲ್ಲ.

ಕೇಂದ್ರ ಸರ್ಕಾರದ ಕಟ್ಟುನಿಟ್ಟಿನ ಸೂಚನೆಯ ಮೇರೆಗೆ ಎಲ್ಲ ಘಟಕಗಳ ಕಾರ್ಯನಿರ್ವಹಣೆಯ ಕ್ಷಮತೆಯ ಬಗ್ಗೆ ಆರೋಗ್ಯ ಇಲಾಖೆ ಅಣಕು ಕಾರ್ಯಾಚರಣೆ (ಮಾಕ್ ಡ್ರಿಲ್) ಕೂಡಾ ಆರಂಭಿಸಿದೆ. ಆಮ್ಲಜನಕ ತಯಾರಿಕಾ ಘಟಕಗಳ 'ಪ್ರೆಷರ್ ಸ್ವಿಂಗ್ ಅಬ್ಸಾರ್ಪಷನ್' (ಪಿಎಸ್‌ಎ) ಅಂದರೆ, ಪ್ರತಿಯೊಬ್ಬ ರೋಗಿಯ ಹಾಸಿಗೆಗೆ ಅಗತ್ಯ ಪ್ರಮಾಣ, ಒತ್ತಡ ಮತ್ತು ಶುದ್ಧತೆಯ ಆಮ್ಲಜನಕ ಪೂರೈಕೆ ಆಗುತ್ತದೆಯೇ ಎಂಬುದರ ಪರೀಕ್ಷೆಯನ್ನೂ ನಡೆಸಲಾಗುತ್ತಿದೆ.

ಎರಡನೇ ಅಲೆ ವೇಳೆಯಲ್ಲಿ ಆಮ್ಲಜನಕ ನಿರ್ವಹಣೆಯೇ ದೊಡ್ಡ ಸಮಸ್ಯೆ ಆಗಿತ್ತು. ಮೂರನೇ ಅಲೆ ಕಾಣಿಸಿಕೊಂಡಲ್ಲಿ ಈ ಸಮಸ್ಯೆ ಆಗದಂತೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ.

'ರಾಜ್ಯಕ್ಕೆ 262 ಆಮ್ಲಜನಕ ತಯಾರಿಕಾ ಘಟಕಗಳು ಹಂಚಿಕೆಯಾಗಿದ್ದವು. ಅವುಗಳಲ್ಲಿ 224 ಘಟಕಗಳ ಸ್ಥಾಪನೆಗೆ ಒಪ್ಪಿಗೆ ಸಿಕ್ಕಿದೆ. 190 ಘಟಕಗಳನ್ನು ವಿವಿಧ ಜಿಲ್ಲೆಗಳಲ್ಲಿ ಅಳವಡಿಸಲಾಗಿದೆ. ಇವುಗಳ ಒಟ್ಟು ಉತ್ಪಾದನಾ ಸಾಮರ್ಥ್ಯ 1,08,077 ಎಲ್‌ಎಂಪಿ (ಪ್ರತಿ ನಿಮಿಷಕ್ಕೆ ತಯಾರಾಗುವ ಲೀಟರ್‌ಗಳು), ದಿನಕ್ಕೆ 187 ಟನ್‌ಗಳಷ್ಟು ಆಮ್ಲಜನಕ ಉತ್ಪಾದನೆ ಮಾಡಬಹುದಾಗಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರ ಕಚೇರಿಯ ಮೂಲಗಳು ತಿಳಿಸಿವೆ.

ಔದ್ಯಮಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಡಿ ಆಮ್ಲಜನಕ ಘಟಕಗಳ ಸ್ಥಾಪನೆಗೆ ಹಣ ನೀಡುವುದಾಗಿ ಕೆಲವು ಸಂಸ್ಥೆಗಳು ಭರವಸೆ ನೀಡಿದ್ದವು. ಅದಿನ್ನೂ ಈಡೇರಿಲ್ಲ. ಆಮ್ಲಜನಕ ಘಟಕಗಳ ನಿರ್ವಹಣೆಗೆ ಸಂಬಂಧಿಸಿದಂತೆ ಮೂರು ತಂಡಗಳಲ್ಲಿ 245 ಜನರಿಗೆ ತರಬೇತಿ ನೀಡಲಾಗಿದೆ. ಇನ್ನೂ ಐದು ತಂಡಗಳಿಗೆ ತರಬೇತಿ ನೀಡಲು ಕೌಶಲ ಅಭಿವೃದ್ಧಿ ಇಲಾಖೆಯ ಜತೆ ಸಮಾಲೋಚನೆ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ.

ಕೇಂದ್ರ ಆರೋಗ್ಯ ಇಲಾಖೆ ಡಿಸೆಂಬರ್ ಮೊದಲ ವಾರದಲ್ಲಿ ಆಮ್ಲಜನಕ ಘಟಕಗಳ ನಿರ್ವಹಣೆಗೆ ಸಂಬಂಧಿಸಿದಂತೆ ತಂತ್ರಜ್ಞರು, ಅರೆ ವೈದ್ಯಕೀಯ ಸಿಬ್ಬಂದಿ, ವೈದ್ಯರು, ನರ್ಸ್‌ಗಳು ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಸಿಬ್ಬಂದಿಗೆ ಆನ್‌ಲೈನ್ ಮೂಲಕವೂ ತರಬೇತಿ ನೀಡಿದೆ.

'ಸಮಸ್ಯೆ ನಿವಾರಣೆಗೆ ನಿರಂತರ ಯತ್ನ'

'ಆಮ್ಲಜನಕ ಘಟಕಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಆಗಿಂದ್ದಾಗ್ಗೆ ಅಣಕು ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಕೆಲ ಘಟಕಗಳಲ್ಲಿ ಆಮ್ಲಜನಕದ ಶುದ್ಧತೆ, ಒತ್ತಡ, ಸಾಂದ್ರತೆಯ ಸಮಸ್ಯೆ ಇದೆ' ಎಂದು ಆರೋಗ್ಯ ಇಲಾಖೆ ಮೂಲಗಳು ಹೇಳಿವೆ.

'ನಗರದ ಆಸ್ಪತ್ರೆಯೊಂದರಲ್ಲಿ ಹೊಸ ಘಟಕದಲ್ಲಿ ಕಾರ್ಯಾಚರಣೆ ನಡೆಸಿದಾಗ ಸಂಜೆ 4ರವರೆಗೆ ಅಗತ್ಯ ಪ್ರಮಾಣದ ಆಮ್ಲಜನಕದ ಸಾಂದ್ರತೆ ಸಿಗಲಿಲ್ಲ. ಟ್ಯಾಂಕ್‌ನಲ್ಲಿನ ಹಳೆ ಆಮ್ಲಜನಕವನ್ನು ಖಾಲಿ ಮಾಡಿ, ಹೊಸ ಆಮ್ಲಜನಕ ಭರ್ತಿ ಮಾಡಬೇಕು. ಆಗಷ್ಟೇ ಅಗತ್ಯ ಪ್ರಮಾಣದ ಸಾಂದ್ರತೆ ಪಡೆಯಲು ಸಾಧ್ಯ. ಘಟಕಗಳಿಂದ ಶುದ್ಧ ಆಮ್ಲಜನಕ ಪಡೆಯಲು ಇರುವ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನ ನಡೆಸಲಾಗುತ್ತಿದೆ. ಸಮಸ್ಯೆಗಳನ್ನು ಸರಿಪಡಿಸುವ ಯತ್ನ ನಡೆದಿದೆ' ಮೂಲಗಳು ಹೇಳಿವೆ.

'ಗಡಿಯಲ್ಲಿ ಕನ್ನಡ ಶಾಲೆ ನಿಯಮ ಸಡಿಲಿಸಿ'

ಹುಬ್ಬಳ್ಳಿ: 'ಬೆಳಗಾವಿಯ ಗಡಿಭಾಗದಲ್ಲಿ ಕನ್ನಡ ಮಾಧ್ಯಮ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ನಿಯಮಗಳನ್ನು ಸಡಿಲಗೊಳಿಸಬೇಕು' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಲಹೆ ಮಾಡಿದ್ದಾರೆ.

'ಪ್ರಜಾವಾಣಿ'ಯಲ್ಲಿ ಜ.3ರಂದು ಪ್ರಕಟವಾಗಿರುವ 'ಕನ್ನಡ ಮಾಧ್ಯಮ ಪ್ರೌಢಶಾಲೆಯೇ ಇಲ್ಲ!' ಎಂಬ ವಿಶೇಷ ವರದಿ ಉಲ್ಲೇಖಿಸಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸೋಮವಾರ ಪತ್ರ ಬರೆದಿದ್ದಾರೆ.

'ಗಡಿಭಾಗದ ಮಕ್ಕಳು ಕನ್ನಡ ಕಲಿಕೆಯಿಂದ ವಂಚಿತರಾದರೆ, ಆ ಭಾಗದಲ್ಲಿ ಕನ್ನಡ ನಶಿಸುತ್ತದೆ. ಶಾಲೆ ಆರಂಭಿಸಲು 70 ವಿದ್ಯಾರ್ಥಿಗಳಿರಬೇಕು ಹಾಗೂ ಐದು ಕಿ.ಮೀ ವ್ಯಾಪ್ತಿಯಲ್ಲಿ ಬೇರೆ ಪ್ರೌಢಶಾಲೆ ಇರಬಾರದು ಎಂಬ ನಿಯಮವಿದೆ. ಈ ನಿಯಮಗಳನ್ನು ಸಡಿಲಗೊಳಿಸಬೇಕು' ಎಂದು ಹೇಳಿದ್ದಾರೆ.

'ಉಚಗಾವಿ, ಹಿಂಡಲಗಾ ಹಾಗೂ ಕುದ್ರೇಮನಿಯಲ್ಲಿ ಶಾಲೆ ಆರಂಭಕ್ಕೆ ಸಲ್ಲಿಕೆಯಾಗಿರುವ ಪ್ರಸ್ತಾವಕ್ಕೆ ಅನುಮತಿ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

ಐಎಸ್ ನಂಟು: ಇದಿನಬ್ಬ ಮೊಮ್ಮಗನ ಪತ್ನಿ ಬಂಧನ

ಪ್ರಜಾವಾಣಿ ವಾರ್ತೆ

ದೀಪ್ತಿ ಮಾರ್ಲ

ಮಂಗಳೂರು: ಐಎಸ್ ಸಂಘಟನೆಯ ಜತೆ ನಂಟು ಹೊಂದಿದ್ದಾರೆ ಎಂಬ ಶಂಕೆಯಡಿ ಉಳ್ಳಾಲದ ದೀಪ್ತಿ ಮಾರ್ಲ ಯಾನೆ ಮರಿಯಂ ಎಂಬುವವರನ್ನು ಎನ್‌ಐಎ ಅಧಿಕಾರಿಗಳು ಸೋಮವಾರ ಬಂಧಿಸಿದ್ದಾರೆ. ಇವರು ಮಾಜಿ ಶಾಸಕ ದಿ.ಇದಿನಬ್ಬ ಅವರ ಮೊಮ್ಮಗನ ಪತ್ನಿ.

2021ರ ಆಗಸ್ಟ್ 4ರಂದು ಇದಿನಬ್ಬ ಅವರ ಪುತ್ರ ಬಿ.ಎಂ. ಬಾಷಾ ಅವರ ಮನೆ ಮೇಲೆ ದಾಳಿ ನಡೆಸಿದ್ದ ಎನ್‌ಐಎ ಅಧಿಕಾರಿಗಳು, ಇದಿನಬ್ಬ ಅವರ ಮೊಮ್ಮಗ ಅಬ್ದುಲ್ ರಹಿಮಾನ್ ಅವರನ್ನು ಬಂಧಿಸಿದ್ದರು. ಇವರ ಸಹೋದರ ಅನಾಸ್ ಹಾಗೂ ಅವರ ಪತ್ನಿ ದೀಪ್ತಿಯನ್ನೂ ವಿಚಾರಣೆಗೆ ಒಳಪಡಿಸಿದ್ದರು. ದೀಪ್ತಿ ಐಎಸ್ ಸಂಘಟನೆಯ ಜತೆಗೆ ನಂಟಿರುವ ಶಂಕೆ ಆಗ ವ್ಯಕ್ತವಾಗಿತ್ತು. ಆಗ ಅವರಿಗೆ ಚಿಕ್ಕ ಮಗು ಇದೆ ಎಂಬ ಕಾರಣಕ್ಕೆ ಬಂಧಿಸಿರಲಿಲ್ಲ. ಸೋಮವಾರ ಬೆಳಿಗ್ಗೆ ಉಳ್ಳಾಲದ ಮಾಸ್ತಿಕಟ್ಟೆಯಲ್ಲಿರುವ ಮನೆಯ ಮೇಲೆ ದಾಳಿ ನಡೆಸಿದ ಅಧಿಕಾರಿಗಳು ಬಂಧಿಸಿದರು.

ನವದೆಹಲಿಯಿಂದ ಬಂದಿದ್ದ ಸಹಾಯಕ ತನಿಖಾಧಿಕಾರಿ, ಡಿಎಸ್‌ಪಿ ಕೃಷ್ಣಕುಮಾರ್, 'ಇನ್‌ಸ್ಪೆಕ್ಟರ್ ಅಜಯ್ ಸಿಂಗ್, ಹಾಗೂ ಮೋನಿಕಾ ಧಿಕ್ವಾಲ್ ಅವರ ತಂಡ ಬಂಧಿಸಿದೆ. ಇಲ್ಲಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆ ಬಳಿಕ ದೀಪ್ತಿ ಅವರನ್ನು ಕೋರ್ಟ್‌ಗೆ ಹಾಜರುಪಡಿಸಲಾಗಿದೆ. ವಿಚಾರಣೆಗಾಗಿ ಅವರನ್ನು ದೆಹಲಿಗೆ ಕರೆದೊಯ್ಯಲಾಗಿದೆ ಎಂದು ಮೂಲಗಳು ಹೇಳಿವೆ.

'ಬಡ್ತಿ ನಿರಾಕರಿಸುವ ನೌಕರರು ಆರ್ಥಿಕ ಸೌಲಭ್ಯಕ್ಕೆ ಅರ್ಹರು'

ನವದೆಹಲಿ (ಪಿಟಿಐ): ನಿಯಮಿತ ಬಡ್ತಿಯನ್ನು ನಿರಾಕರಿಸಿದ ನೌಕರರು ಕೇಂದ್ರದ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಸಚಿವಾಲಯ 1999ರ ಆಗಸ್ಟ್‌ನಲ್ಲಿ ಹೊರಡಿಸಿದ ಕಚೇರಿ ಮೆಮೊ ಅಡಿಯಲ್ಲಿ ಆರ್ಥಿಕ ಸೌಲಭ್ಯಗಳನ್ನು ಪಡೆಯಲು ಅರ್ಹರಾಗುತ್ತಾರೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಕೇಂದ್ರದ ಅಶ್ಯೂರ್ಡ್ ಕೆರಿಯರ್ ಪ್ರೋಗ್ರೆಷನ್ ಸ್ಕೀಮ್‌ನ ಪ್ರಯೋಜನ ಒದಗಿಸುವಂತೆ ಉದ್ಯೋಗಿಗಳು ಸಲ್ಲಿಸಿದ್ದ ಕ್ಲೇಮುಗಳ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ಈ ರೀತಿ ಹೇಳಿದೆ.

12 ವರ್ಷಗಳ ಸೇವೆಯ ನಂತರ ಬಡ್ತಿ ಪಡೆಯಲು ಸಾಧ್ಯವಾಗದ ಉದ್ಯೋಗಿಗಳಿಗೆ ಮುಂದಿನ ಉನ್ನತ ಶ್ರೇಣಿಯ ವೇತನಕ್ಕಾಗಿ ಒದಗಿಸಲಾದ ಅಶ್ಯೂರ್ಡ್ ಕೆರಿಯರ್ ಪ್ರೋಗ್ರೆಷನ್ ಸ್ಕೀಮ್, ಎರಡನೇ ಉನ್ನತೀಕರಣದ ಪ್ರಯೋಜನ ಪಡೆಯಬಹುದಾಗಿದೆ ಎಂದು ಪೀಠ ಹೇಳಿದೆ.

ನಮ್ಮಲ್ಲಿ ಎಲ್ಲ ಸಾಕ್ಷ್ಯಗಳಿವೆ–ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ

ಕಮಿಷನ್: ಪ್ರಧಾನಿ ಬಳಿಗೆ ನಿಯೋಗ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ವಿವಿಧ ಯೋಜನೆಗಳ ಗುತ್ತಿಗೆ ಕಾಮಗಾರಿಗಳ ಮೊತ್ತದ ಶೇ 40 ರಷ್ಟು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಜೇಬು ಸೇರುತ್ತಿರುವ ದೂರಿಗೆ ಸಂಬಂಧಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈಗಲೂ ನಮ್ಮನ್ನು ಕರೆದು ಮಾತನಾಡದಿದ್ದರೆ ನೇರವಾಗಿ ಪ್ರಧಾನಿ ಬಳಿಗೆ ಹೋಗಿ ನಮ್ಮ ಅಹವಾಲು ಹೇಳಿಕೊಳ್ಳುತ್ತೇವೆ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಡಿ. ಅವರು ಹೇಳಿದ್ದಾರೆ.

'ಕಮಿಷನ್' ಕುರಿತು ನಾವು ಆರು ತಿಂಗಳ ಹಿಂದೆ ಪ್ರಧಾನಿಗೆ ಪತ್ರ ಬರೆದಿದ್ದೆವು. ಬಿ.ಎಸ್.ಯಡಿಯೂರಪ್ಪ ಅವರು ಸಿ.ಎಂ.ಆಗಿದ್ದಾಗ ಭೇಟಿಗೆ ನಾಲ್ಕು ಬಾರಿ ಸಮಯ ಕೇಳಿದ್ದೆವು. ಅವರು ಸಮಯ ಕೊಡಲಿಲ್ಲ. ಹೀಗಾಗಿ ಅನಿವಾರ್ಯವಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯಬೇಕಾಯಿತು. ಪ್ರಧಾನಿ ಕಚೇರಿಯಿಂದ ಇಲ್ಲಿಯವರೆಗೆ ಪ್ರತಿಕ್ರಿಯೆ ಬಂದಿಲ್ಲ. ಮುಖ್ಯಮಂತ್ರಿ ಬೊಮ್ಮಾಯಿ ನಮ್ಮ ದೂರಿಗೆ ಸ್ಪಂದಿಸದಿದ್ದರೆ ನೇರವಾಗಿ ಪ್ರಧಾನಿ ಅವರನ್ನೇ ಭೇಟಿಯಾಗಿ ಅಹವಾಲು ಸಲ್ಲಿಸಲಿದ್ದೇವೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ವಿವಿಧ ಇಲಾಖೆಗಳ ಕಾಮಗಾರಿಗಳಲ್ಲಿ ಶೇ 40ರಷ್ಟು ಕಮಿಷನ್ ನಡೆಯುತ್ತಿದೆ. ಬಹುತೇಕ ಸಚಿವರು, ಶಾಸಕರು ಭ್ರಷ್ಟರಾಗಿದ್ದಾರೆ. ಈ ಬಗ್ಗೆ ನಮ್ಮ ಬಳಿ ಎಲ್ಲ ಸಾಕ್ಷ್ಯಗಳು ಇವೆ' ಎಂದು ಕೆಂಪಣ್ಣ ಆರೋಪವನ್ನು ಪುನರುಚ್ಚರಿಸಿದರು.

'ರಾಜ್ಯದ ವಿವಿಧ ಕಾಮಗಾರಿಗಳಿಗೆ ಸ್ಥಳೀಯರನ್ನು ಹೊರಗಿಟ್ಟು ಬೇರೆ ರಾಜ್ಯದವರಿಗೆ ಗುತ್ತಿಗೆ ಕೊಡಲಾಗುತ್ತಿದೆ. ಇದರಿಂದ ರಾಜ್ಯದ ಗುತ್ತಿಗೆದಾರರು ಜೀವನ ಮಾಡಲು ಕಷ್ಟವಾಗುತ್ತಿದೆ. ಆರ್.ಅಶೋಕ ದುರಹಂಕಾರಿ ಸಚಿವ. ನಾವು ಕಾಂಗ್ರೆಸ್ ಪರ ಅಂತ ಹೇಳುತ್ತಿದ್ದಾರೆ. ನಾವು ಯಾವುದೇ ಪಕ್ಷದ ಪರ ಹೋರಾಟ ಮಾಡುತ್ತಿಲ್ಲ' ಎಂದರು.

'ಅಧಿಕಾರಿಗಳು ಕಾನೂನು ಮರೆತಿದ್ದಾರೆ. ಶಾಸಕರು, ಸಚಿವರು ಹೇಳಿದವರಿಗೆ ಮಾತ್ರ ಗುತ್ತಿಗೆ ನೀಡುತ್ತಿದ್ದಾರೆ' ಎಂದೂ ದೂರಿದರು.

'ಕಮಿಷನ್ ವ್ಯವಹಾರ ಕುರಿತು ಸುಪ್ರೀಂಕೋರ್ಟ್ ಅಥವಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳಿಂದ ತನಿಖೆ ಆಗಬೇಕು. ಸ್ವತಂತ್ರ ತನಿಖೆ ನಡೆದರೆ ಎಲ್ಲಾ ದಾಖಲಾತಿ ನೀಡಲು ಸಿದ್ಧರಿದ್ದೇವೆ. ರಾಜ್ಯದಲ್ಲಿ ₹ 22 ಸಾವಿರ ಕೋಟಿ ಬಿಲ್ ಬಾಕಿ ಇದೆ. ಮೊದಲು ಶೇ 10ರಿಂದ ಶೇ 15ರಷ್ಟು ಕಮಿಷನ್ ನಡೆಯುತ್ತಿತ್ತು. 2019ರ ನಂತರ ಈ ಪ್ರಮಾಣ ಶೇ 40ಕ್ಕೆ ಏರಿಕೆಯಾಗಿದೆ' ಎಂದು ಹೇಳಿದರು.

ಬಹು ಮಾಧ್ಯಮ ಪ್ರಜಾವಾಣಿ LIVE

ಪ್ರಜಾವಾಣಿ ಕನ್ನಡ ಧ್ವನಿ

Prajavani.net/podcast

ಪಾಡ್‌ಕಾಸ್ಟ್:
ಪ್ರಚಲಿತ: ಬೆಳಿಗ್ಗೆ 9,
ಸಂಪಾದಕೀಯ: ಬೆಳಿಗ್ಗೆ 9.30,
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

Prajavani.net · Prajavani · Prajavani

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಮಹಾಲಕ್ಷ್ಮೀಪುರಂ ವಿಭಾಗ, 12ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು.

ಸಂಖ್ಯೆ:ಕಾಪಾಅ/ಮಲಪು/ಟೆಂಡರ್/ಇ-ಪ್ರೊ/10/2021-22 ದಿನಾಂಕ: 01-01-2022

ಅಲ್ಪಾವಧಿ ಟೆಂಡರ್‌ಗೆ ಆಹ್ವಾನ (ಐಎಫ್‌ಟಿ) (ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ, ಬಿ.ಬಿ.ಎಂ.ಪಿ ಬೆಂಗಳೂರು ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗೆ ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂಇಎಸ್/ರೈಲ್ವೇಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ದರ್ಜೆ-1ರ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಕಾಮಗಾರಿಯ ಅಂದಾಜು ವೆಚ್ಚ (ಲಕ್ಷ ರೂ. ಗಳಲ್ಲಿ)	ಇಎಂಡಿ ಮೊತ್ತ (ಲಕ್ಷ ರೂ. ಗಳಲ್ಲಿ)
1)	ಮಹಾಲಕ್ಷ್ಮಿ ಬಡಾವಣೆ ವಿಧಾನ ಸಭಾ ಕ್ಷೇತ್ರದಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಕಾಮಗಾರಿ (ಪ್ಯಾಕೇಜ್-3) ಕ್ರ.ಸಂ.750 ಅನೆಕ್ಸ್-2.	1000.00	15.00

ಟೆಂಡರ್ ಕಾರ್ಯಸೂಚಿ: 1) ಟೆಂಡರ್ ದಾಖಲೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 13-01-2022 ರಿಂದ ಡೌನ್‌ಲೋಡ್ ಮಾಡಬಹುದು. 2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ಸಲ್ಲಿಸಲು ದಿನಾಂಕ: 29-01-2022 ಸಂಜೆ 4:00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ. 3) ಪೂರ್ವ-ಬಿಡ್ ಸಭೆಯು ದಿನಾಂಕ: 17-01-2022 ಬೆಳಗ್ಗೆ 11:30 ಗಂಟೆಗೆ ನಡೆಸಲಾಗುವುದು. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 31-01-2022ರ ಬೆಳಗ್ಗೆ 11:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ ಭೇಟಿನೀಡಿ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ, ಬಿ.ಬಿ.ಎಂ.ಪಿ.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ · 6 ಅಡಿ ದೈಹಿಕ ಅಂತರ ಪಾಲಿಸಿ · ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸುವರ್ಣ ಕರ್ನಾಟಕ

ನಗರ ಸಭೆ ಕಾರ್ಯಾಲಯ, ಬಾಗಲಕೋಟ-587103

E-mail ID: itstaff_ulb_bagalkote@yahoo.co.in, WebSite: www.bagalkotecity.mrc.gov.in
Post Box No.19 STD: 08354 :235011 FAX No: 200335, Help Line: 235792
ಜಿಲ್ಲಾ: ಬಾಗಲಕೋಟ District : Bagalkot · ಕರ್ನಾಟಕ ರಾಜ್ಯ State: Karanataka

ಕ್ರ.ಸಂ:ನಸಬಾ/ಆಶಾ/ಘವನಿ/ಟೆಂಡರ/2021-22/1038 ದಿನಾಂಕ :01-01-2022

ಟೆಂಡರ್ ಪ್ರಕಟಣೆ
E-Proceurement portal http://eproc.karnataka.gov.in

ಕರ್ನಾಟಕ ಪಾರದರ್ಶಕ ಸಂಗ್ರಹಣೆಯ ಆದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟೆ ನಗರಸಭೆಗೆ ಈ ಕೆಳಗೆ ನಮೂದಿಸಿದ ಸ್ವಚ್ಛ ಭಾರತ್ ಮಿಷನ್ ಯೋಜನೆಡಿಯಲ್ಲಿ (ಡಿ.ಪಿ.ಆರ್) ಮಂಜೂರಾದ ಅನುದಾನದಲ್ಲಿ ವಾಹನವನ್ನು ಖರೀದಿಸುವ ಕುರಿತು ನೋಂದಾಯಿತ ಗುತ್ತಿಗೆದಾರರು ಹಾಗೂ ಪೂರೈಕೆದಾರರಿಂದ ಮಾತ್ರ E-Proceurement ದಲ್ಲಿ KG-2, ಟೆಂಡರಗಳನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ http://eproc.karnataka.gov.in ನಲ್ಲಿ ಸಂಪರ್ಕಿಸಬಹುದಾಗಿದೆ.

1.DMA-2019-20 IND No.9926

ಆಸಕ್ತಿಯುಳ್ಳ ಪೂರೈಕೆದಾರರು ಆನ್‌ಲೈನ್‌ದಲ್ಲಿ E-Proceurement portal ಮುಖಾಂತರ ಮಾತ್ರ ಸಲ್ಲಿಸುವದು ಮತ್ತು ಇತರ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್‌ದಲ್ಲಿ ಸಲ್ಲಿಸುವುದು ಹಾಗೂ ಇ.ಎಂ.ಡಿ. ಮತ್ತು ಟೆಂಡರ ಪ್ರೊಸೆಸಿಂಗ ಫೀಯನ್ನು ಇ-ಪೋರ್ಟಲ್ ಮುಖಾಂತರ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in ದಲ್ಲಿ ಅಥವಾ ಈ ಕಛೇರಿಯ ಆರೋಗ್ಯ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ.

1) Last date of submission of Technical and Financial bid seperately through E-procurement portal before : 01-02-2022 At 16.30 hours, It extended upto 7 days if no bidders participate.
2) Opening of Technical & price(financial) bid is on :-03-02-2022 at 16.30AM.

ಸಹಿ/-ಪೌರಾಯುಕ್ತರು, ನಗರಸಭೆ,ಬಾಗಲಕೋಟ

ವಾ.ಸಾ.ಇ/ಬಾಗಲಕೋಟೆ/452/2021-22/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ · 6 ಅಡಿ ದೈಹಿಕ ಅಂತರ ಪಾಲಿಸಿ · ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ: ಕಾನಿಇಂ/ಲೋ.ಇ/ವಿ.ಜೆ.ಪಿ/ಪಿ.ಬಿ/5054-3054-2059-8443/2021-22/3858 ದಿನಾಂಕ:01.01.2022

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-3 & 4 ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 8 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ **ರೂ. 439.14 ಲಕ್ಷಗಳು ಹಾಗೂ ರೂ. 56.26 ಲಕ್ಷಗಳು & ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ 6,58,800/- ರೂ.ಗಳು ಹಾಗೂ 1,12,600/- ರೂಗಳು**. ಸದರ ಕಾಮಾಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತøತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. ಗುತ್ತಿಗೆದಾರರ ಪೂರ್ವ ಭಾವಿ ಸಭೆ **ದಿನಾಂಕ:-10-01-2022** ರ ಮುಂಜಾನೆ 11.00 ಗಂಟೆಗೆ, ಟೆಂಡರಗಳನ್ನು ಸ್ವೀಕರಿಸುವ **ದಿನಾಂಕ:-14.01.2022** ರ ಸಂಜೆ 4.30 ಗಂಟೆಯವರೆಗೆ, ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ **ದಿನಾಂಕ: 17.01.2022** ರ ಮುಂಜಾನೆ 11.00 ಘಂಟೆಯ ನಂತರ ಮತ್ತು ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ **ದಿನಾಂಕ: 18.01.2022** ರ ಮುಂಜಾನೆ 11.00 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/438/ಎಂಸಿಎ/2021-22

ಕರ್ನಾಟಕ ಸರ್ಕಾರ

ಜಲ ಸಂಪನ್ಮೂಲ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ.
E-mail: eemidnkst@rediffmail.com

ಸಂ: ಕಾನಿಇಂ/ಸನೀ&ಅಂ.ಅವಿ/ಕೊಪ್ಪಳ/ತಾಶಾ/2021-22/3072 ದಿನಾಂಕ:30.12.2021

ತಿದ್ದುಪಡಿ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಉಲ್ಲೇಖ:ಈ ಕಛೇರಿ ಅಲ್ಪಾವಧಿ ಟೆಂಡರ ಪ್ರಕಟಣೆ ಸಂಖ್ಯೆ: 2982 ದಿನಾಂಕ: 18.12.2021.

ಮೇಲಿನ ಉಲ್ಲೇಖದಲ್ಲಿ ಪ್ರಕಟಣೆಗೊಂಡ ಟೆಂಡರನ್ನು ಈ ಕೆಳಗಿನಂತೆ ಮಾರ್ಪಾಡಿಸಿ ತಿದ್ದುಪಡಿ ಟೆಂಡರ ಪ್ರಕಟಣೆಯನ್ನು ಹೊರಡಿಸಲಾಗಿದೆ.

1. **ಮೂಲ ಟೆಂಡರ ಪ್ರಕಟಣೆ:** ಕಾಮಗಾರಿ ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಧಿ 24 ತಿಂಗಳು (ಮಳೆಗಾಲ ಸೇರಿ): **ತಿದ್ದುಪಡಿ:** ಕಾಮಗಾರಿ ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಧಿ 18 ತಿಂಗಳು (ಮಳೆಗಾಲ ಸೇರಿ)
2. **ಮೂಲ ಟೆಂಡರ ಪ್ರಕಟಣೆ:** ಗುತ್ತಿಗೆದಾರರು ಡೌನಲೋಡ್ ಮಾಡಿಕೊಳ್ಳುವ ದಿನಾಂಕ:27-12-2021: **ತಿದ್ದುಪಡಿ:** ಗುತ್ತಿಗೆದಾರರು ಡೌನಲೋಡ್ ಮಾಡಿಕೊಳ್ಳುವ ದಿನಾಂಕ:07-01-2022
3. **ಮೂಲ ಟೆಂಡರ ಪ್ರಕಟಣೆ:** ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ :17-01-2022: **ತಿದ್ದುಪಡಿ:** ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ :28-01-2022ರ
4. **ಮೂಲ ಟೆಂಡರ ಪ್ರಕಟಣೆ:** ಪೂರ್ವಭಾವಿ ಸಭೆ ದಿನಾಂಕ :10-01-2022ರಂದು ಬೆಳ್ಳಿಗ್ಗೆ 11.00 ಗಂಟೆಗೆ.: **ತಿದ್ದುಪಡಿ:** ಪೂರ್ವಭಾವಿ ಸಭೆ ದಿನಾಂಕ :20-01-2022ರಂದು ಬೆಳ್ಳಿಗ್ಗೆ 11.00 ಗಂಟೆಗೆ.
5. **ಮೂಲ ಟೆಂಡರ ಪ್ರಕಟಣೆ:** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:19-01-2022ರ ಬೆಳಿಗ್ಗೆ 11.00 ಗಂಟೆಗೆ.: **ತಿದ್ದುಪಡಿ:** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:31-01-2022ರ ಬೆಳಿಗ್ಗೆ 11.00 ಗಂಟೆಗೆ.
6. **ಮೂಲ ಟೆಂಡರ ಪ್ರಕಟಣೆ:** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:21-01-2022 ಬೆಳಿಗ್ಗೆ 11.00 ಗಂಟೆಗೆ.: **ತಿದ್ದುಪಡಿ:** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:02-02-2022 ಬೆಳಿಗ್ಗೆ 11.00 ಗಂಟೆಗೆ.

ಮೇಲಿನ ಟೆಂಡರ ಅಧಿಸೂಚನೆಯ ಎಲ್ಲಾ ನಿಯಮಗಳು ಮತ್ತು ಷರತ್ತುಗಳು ಬದಲಾವಣೆಯಾಗಿರುವುದಿಲ್ಲ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/447/ಎಂಸಿಎ/2021-22

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ

ಸಂಖ್ಯೆ:ಕಾಇಂ/ಲೋವಿಚಿ/ಜೆಇ-3/ಟೆಂಡರ್-75/2021-22 ದಿನಾಂಕ:01.01.2022

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) (ಏಕ-ಲಕೋಟೆ & ದ್ವಿ-ಲಕೋಟೆ ಪದ್ಧತಿ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ಹಾಗೂ ಆಕ್ಟ್ 2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಏಕ ಲಕೋಟೆ ಮತ್ತು ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್: www.eproc.karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
	ಇ-ಪ್ರೊಕ್ಯೂರ್‌ಮೆಂಟ್ ಮೂಲಕ-ದ್ವಿ-ಲಕೋಟೆ ಪದ್ಧತಿ	
	ಲೆಕ್ಕ ಶೀರ್ಷಿಕೆ 5054-04-337-0-01-423 ಜಿಲ್ಲಾ ಮತ್ತು ಇತರೆ ರಸ್ತೆಗಳು ಗಿರಿಜನ ಉಪಯೋಜನೆ (ಟಿ.ಎಸ್.ಪಿ)	
1	ಹಿರಿಯೂರು ತಾಲ್ಲೂಕು ಮಸ್ಕಲ್‌ಮಟ್ಟಿ ದೇವಿ ಕಾಲೋನಿಯಿಂದ ಹೇಮದಳ ಎಸ್.ಟಿ ಕಾಲೋನಿಯವರೆಗೆ ರಸ್ತೆ ಅಭಿವೃದ್ಧಿ (ಮುಂದುವರೆದ ಕಾಮಗಾರಿ) (ವ.ಇಂ. 145624)	90.89
	ಇ-ಪ್ರೊಕ್ಯೂರ್‌ಮೆಂಟ್ ಮೂಲಕ - ಏಕ ಲಕೋಟೆ ಪದ್ಧತಿ	
	ಸಾಮಾನ್ಯ	
	ಲೆಕ್ಕ ಶೀರ್ಷಿಕೆ 5054-04-337-0-01-422 ಜಿಲ್ಲಾ ಮತ್ತು ಇತರೆ ರಸ್ತೆಗಳು ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಟಿ.ಪಿ)	
2	ಹಿರಿಯೂರು ತಾಲ್ಲೂಕು ಮ್ಯಾಕ್ಲೂರಹಳ್ಳಿ ಎಸ್.ಸಿ.ಕಾಲೋನಿಯಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ (ವ.ಇಂ. 145111)	25.00
3	ಹಿರಿಯೂರು ತಾಲ್ಲೂಕು ಗೂಳ್ಯ ಎಸ್.ಸಿ.ಕಾಲೋನಿಯಿಂದ ಮುಂಗಸವಳ್ಳಿ ಗೊಲ್ಲರಹಟ್ಟಿವರೆಗೆ ರಸ್ತೆ ಅಭಿವೃದ್ಧಿ (ವ.ಇಂ. 145879)	50.00
4	ಹಿರಿಯೂರು ತಾಲ್ಲೂಕು ಕೋಡಿಹಳ್ಳಿ ತಾಂಡದಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ (ವ.ಇಂ. 145882)	15.00
5	ಹಿರಿಯೂರು ತಾಲ್ಲೂಕು ಮಾರೇನಹಳ್ಳಿ ಎಸ್.ಸಿ.ಕಾಲೋನಿಯಲ್ಲಿ ಗಲೆಮಾರಮ್ಮನ ದೇವಸ್ಥಾನದ ಬಳಿ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ (ವ. ಇಂ. 145884)	6.00
6	ಹಿರಿಯೂರು ತಾಲ್ಲೂಕು ಹಳೇಯಳನಾಡು ಲಂಬಾಣಿ ತಾಂಡದ ಮೀಟ್ಯಾನಾಯ್ಕ ದೇವಸ್ಥಾನದಿಂದ ಲಕ್ಷ್ಮಣ ನಾಯ್ಕನ ಮನೆಯವರೆಗೆ ಸಿ.ಸಿ.ರಸ್ತೆ ನಿರ್ಮಾಣ (ವ.ಇಂ. 145886)	18.00
7	ಹಿರಿಯೂರು ತಾಲ್ಲೂಕು ಜೆ.ಜಿ.ಹಳ್ಳಿ ಎಸ್.ಸಿ ಕಾಲೋನಿಯ ಜ್ಯೋತಿ ಕಾಲೋನಿ ಮತ್ತು ಮಂಜುನಾಥ ನಗರದಲ್ಲಿ 'ಎಸ್.ಸಿ ಕಾಲೋನಿಯಲ್ಲಿ ಸಿಸಿ ರಸ್ತೆ ಮತ್ತು ಸಿ.ಸಿ.ಚರಂಡಿ ನಿರ್ಮಾಣ (ವ.ಇಂ. 145889)	25.00
8	ಹಿರಿಯೂರು ತಾಲ್ಲೂಕು ಬೋರನಕುಂಟೆ 'ಎಸ್‌ಸಿ.ಕಾಲೋನಿಯ ನಾಗಭೋವಿ ಮತ್ತು ಅರಳಿಮರದ ರಸ್ತೆಯಲ್ಲಿ ಸಿಸಿರಸ್ತೆ ಮತ್ತು ಚರಂಡಿ ನಿರ್ಮಾಣ (ವ.ಇಂ. 145891)	20.00
9	ಹಿರಿಯೂರು ತಾಲ್ಲೂಕು ಇಕ್ಕನೂರು ಮಂಡಲ ಹನುಮಂತಪ್ಪನವರ ಮನೆಯಿಂದ ಮಾರ್ಗಣ್ಣನ ಮನೆಯವರೆಗೆ (ಲಕ್ಷ್ಮೀ ದೇವಸ್ಥಾನದ ರಸ್ತೆ) ಸಿ.ಸಿ ಚರಂಡಿ ಮತ್ತು ಸಿ.ಸಿ. ರಸ್ತೆ ನಿರ್ಮಾಣ (ವ. ಇಂ. 145892)	20.00
10	ಹಿರಿಯೂರು ತಾಲ್ಲೂಕು ಆರನಕಟ್ಟೆ ಎಸ್.ಸಿ.ಕಾಲೋನಿಯಲ್ಲಿ ಸಿ.ಸಿ ಚರಂಡಿ ಮತ್ತು ಸಿ.ಸಿ. ರಸ್ತೆ ನಿರ್ಮಾಣ (ವ.ಇಂ. 145893)	30.00
11	ಹಿರಿಯೂರು ತಾಲ್ಲೂಕು ಹಳೇಯಳನಾಡು ಗ್ರಾಮದಿಂದ ಎ.ಕೆ.ಕಾಲೋನಿವರೆಗೆರಸ್ತೆ ಅಭಿವೃದ್ಧಿ (ವ.ಇಂ. 145895)	46.86
12	ಹಿರಿಯೂರು ತಾಲ್ಲೂಕು ಹಿಂಡಸಕಟ್ಟೆ ಎ.ಕೆ ಕಾಲೋನಿಯಿಂದ ಅಜ್ಜಯ್ಯನಹಟ್ಟಿಗೆ ಸೇರುವ ರಸ್ತೆ ಅಭಿವೃದ್ಧಿ (ವ.ಇಂ. 145896)	40.00
	ಲೆಕ್ಕ ಶೀರ್ಷಿಕೆ 3054-04-337-1-10- ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ 422 - ಪರಿಶಿಷ್ಟ ಜಾತಿ ಉಪಯೋಜನೆ(ಎಸ್.ಸಿ.ಪಿ)	
13	ಹಿರಿಯೂರು ತಾಲ್ಲೂಕು ರಂಗೇನಹಳ್ಳಿ ಎಸ್.ಸಿ ಕಾಲೋನಿ ಮುಖಾಂತರ ಮುಖ್ಯ ರಸ್ತೆಗೆ ಸೇರುವ ರಸ್ತೆ ಸಿ.ಸಿ ರಸ್ತೆ ನಿರ್ಮಾಣ (ವ.ಇಂ. 145919)	40.82
	ಲೆಕ್ಕ ಶೀರ್ಷಿಕೆ : 5054-04-337-0-01-423 ಜಿಲ್ಲಾ ಮತ್ತು ಇತರೆ ರಸ್ತೆಗಳು - ಗಿರಿಜನ ಉಪಯೋಜನೆ (ಟಿ.ಎಸ್.ಪಿ)	
14	ಹಿರಿಯೂರು ತಾಲ್ಲೂಕು ಯಲಕೂರನಹಳ್ಳಿ ಎಸ್.ಟಿ.ಕಾಲೋನಿಯಲ್ಲಿ ಸಿ.ಸಿರಸ್ತೆ ನಿರ್ಮಾಣ (ವ.ಇಂ. 145897)	20.00
15	ಹಿರಿಯೂರು ತಾಲ್ಲೂಕು ಆಲೂರಿನಿಂದ ಕೃಷ್ಣರಾಜಪುರ ಎಸ್.ಟಿ.ಕಾಲೋನಿ ವರೆಗೆ ರಸ್ತೆ ಅಭಿವೃದ್ಧಿ (ವ.ಇಂ. 145912)	50.00
16	ಹಿರಿಯೂರು ತಾಲ್ಲೂಕು ಸೊಂಡೆಕೆರೆ ಗ್ರಾಮದ ಎಸ್.ಟಿ.ಕಾಲೋನಿಯಿಂದ ಶ್ರೀ ಬಸವೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ (ವ.ಇಂ. 145915)	25.00
17	ಹಿರಿಯೂರು ತಾಲ್ಲೂಕು ಬಗ್ಗನಾಡು ಎಸ್.ಟಿ.ಕಾಲೋನಿಯಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ (ವ.ಇಂ. 145916)	25.00
	ಲೆಕ್ಕ ಶೀರ್ಷಿಕೆ : 3054-04-337-1-10- ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ 423 - ಗಿರಿಜನ ಉಪಯೋಜನೆ ಉಪಯೋಜನೆ (ಟಿ.ಎಸ್.ಪಿ)	
18	ಹಿರಿಯೂರು ತಾಲ್ಲೂಕು ತಾಳವಟ್ಟಿ ಎಸ್.ಟಿ ಕಾಲೋನಿಯಿಂದ ಮುಖ್ಯ ರಸ್ತವರಗ ಸಿ.ಸಿ. ರಸ್ತೆ ನಿರ್ಮಾಣ (ವ.ಇಂ. 145921)	15.88
	ಪರಿಶಿಷ್ಟ ಜಾತಿ	
	ಲೆಕ್ಕ ಶೀರ್ಷಿಕೆ : 5054-04-337-0-01-422 ಜಿಲ್ಲಾ ಮತ್ತು ಇತರೆ ರಸ್ತೆಗಳು - ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಸಿ.ಪಿ)	
19	ಹಿರಿಯೂರು ತಾಲ್ಲೂಕು ಭೂತಯ್ಯನಹಟ್ಟಿ (ಗುಡಿಹಳ್ಳಿ ಭೂತಯ್ಯನಹಟ್ಟಿ) ಎಸ್.ಸಿ.ಕಾಲೋನಿಯಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ (ವ.ಇಂ. 145877)	20.00
20	ಹಿರಿಯೂರು ತಾಲ್ಲೂಕು ಮಾರೇನಹಳ್ಳಿ ಎಸ್.ಸಿ.ಕಾಲೋನಿಯಿಂದ ಕಪಿಲೇಹಟ್ಟಿಗೆ ಹೋಗುವ ರಸ್ತೆ ಅಭಿವೃದ್ಧಿ (ವ.ಇಂ. 145881)	30.00
21	ಹಿರಿಯೂರು ತಾಲ್ಲೂಕು ಕೂಡ್ಲಹಳ್ಳಿ ಎ.ಡಿ.ಕಾಲೋನಿಯಿಂದ ಸುವರ್ಣಮುಖಿ ನದಿಯವರೆಗೂ ಸಿ.ಸಿ.ರಸ್ತೆ ನಿರ್ಮಾಣ (ವ.ಇಂ. 145888)	20.00
22	ಹಿರಿಯೂರು ತಾಲ್ಲೂಕು ಕೆ.ಆರ್.ಹಳ್ಳಿ ಎಸ್.ಸಿ.ಕಾಲೋನಿಯಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ (ವ.ಇಂ. 145890)	10.00
23	ಹಿರಿಯೂರು ತಾಲ್ಲೂಕು ಮುಂಗಸವಳ್ಳಿ ಎಸ್.ಸಿ.ಕಾಲೋನಿಯಿಂದ ಸಾಲುಹುಣಸೆ ಎಸ್.ಸಿ.ಕಾಲೋನಿವರೆಗೂ ರಸ್ತೆ ಅಭಿವೃದ್ಧಿ (ವ.ಇಂ. 145880)	50.00
	ಪರಿಶಿಷ್ಟ ಪಂಗಡ	
	ಲೆಕ್ಕ ಶೀರ್ಷಿಕೆ : 5054-04-337-0-01-422 ಜಿಲ್ಲಾ ಮತ್ತು ಇತರೆ ರಸ್ತೆಗಳು - ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಸಿ.ಪಿ)	
24	ಹಿರಿಯೂರು ತಾಲ್ಲೂಕು ಟಿ.ಜಿ.ಕಾಲೋನಿಯಿಂದ ವಿ.ವಿ.ಸಾಗರ ಚಾನಲ್‌ನಿಂದ ಟಿ.ಜಿ.ಕಾಲೋನಿ ಎಸ್.ಸಿ.ಕಾಲೋನಿವರೆಗೆ ರಸ್ತೆ ಅಭಿವೃದ್ಧಿ (ವ.ಇಂ. 145894)	15.00
25	ಹಿರಿಯೂರು ತಾಲ್ಲೂಕು ಯಲ್ಲದಕೆರೆ ಗ್ರಾಮದ ಎಸ್.ಸಿ.ಕಾಲೋನಿಯಲ್ಲಿ ಸಿ.ಸಿ.ರಸ್ತೆ ನಿರ್ಮಾಣ (ವ.ಇಂ. 145887)	15.00
	ಲೆಕ್ಕ ಶೀರ್ಷಿಕೆ: 5054-04-337-0-01-423 ಜಿಲ್ಲಾ ಮತ್ತು ಆತರೆ ರಸ್ತೆಗಳು-ಗಿರಿಜನ ಉಪಯೋಜನೆ (ಟಿ.ಎಸ್.ಪಿ)	
26	ಹಿರಿಯೂರು ತಾಲ್ಲೂಕು ಉಪ್ಪಳಗೆರೆ ಎಸ್.ಟಿ.ಕಾಲೋನಿಯಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ (ವ.ಇಂ. 145917)	15.00

ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ: 1) ಟೆಂಡರ್ ಬಗ್ಗೆ ವಿಚಾರಿಸಲು / ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ: **07.01.2022ರ 17:30 ಗಂಟೆಯವರೆಗೆ.** 2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: **10.01.2022ರ 16:00 ಗಂಟೆಯವರೆಗೆ. ಕ್ರ. ಸಂ. 1ರ:** 1) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: **11.01.2022ರಂದು 16:01 ಗಂಟೆಗೆ.** 2) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: **13.01.2022ರಂದು 11.00 ಗಂಟೆಗೆ. ಕ್ರ. ಸಂ. 2 ರಿಂದ 26ರ** ಕಾಮಗಾರಿಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: **11.01.2022ರಂದು 16.01 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂ. ಸಂಖ್ಯೆ: 08194-222446) ಹಾಗೂ ಹೆಚ್.ಪಿ. ಕಂಪನಿಯಿಂದ ಸಹಾಯಕ ದೂ. ಸಂಖ್ಯೆ: 080-25501216 ಮತ್ತು 080-25501227 ಯನ್ನು ಸಂಪರ್ಕಿಸಿ

ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಇಲಾಖೆ, ವಿಭಾಗ ಚಿತ್ರದುರ್ಗ

ವಾಸಾಸಂಇ/ಚಿತ್ರದುರ್ಗ/ಜಿಎ/711/2021-22

ಭಾರತ ಸರ್ಕಾರ
ಭೂ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಹೊಸ ದೆಹಲಿ

सत्यमेव जयते

ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ
#678/3, ನೀರುಭಾವಿ ಕೆಂಪಣ್ಣ ಲೇಔಟ್, ಹೆಬ್ಬಾಳ, ಬೆಂಗಳೂರು-560024

ಸಂ: ಎಲ್.ಎ.ಕ್ಯೂ/ಎನ್.ಹೆಚ್.ಎ.ಐ/ರಾಹೆ-7/ಕೆ.ಎನ್.ಟಿ-02/ಸಿಎ/ಸಿಆರ್/105/18-19 ದಿನಾಂಕ: 28.12.2021

ಸಾರ್ವಜನಿಕ ತಿಳುವಳಿಕೆ ಪತ್ರ

ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 ಕಲಂ 3-ಜಿ (3) ಮತ್ತು (4)ರಂತೆ

ಭಾರತ ಸರ್ಕಾರವು ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956(1956ರ 48) ಮತ್ತು ತಿದ್ದುಪಡಿ ಕಾಯ್ದೆ 1997ರ ಸೆಕ್ಷನ್ 3ಡಿ(1) ಮತ್ತು 3ಡಿ(2)ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭಾರತ ಸರ್ಕಾರದವರು ತಮ್ಮ ಅಸಾಧಾರಣ ಗೆಜೆಟ್ ನೋಟಿಫಿಕೇಷನ್ ನಂ.ಎಸ್.ಓ.3835(ಇ) ದಿನಾಂಕ:23/10/2019ರಲ್ಲಿ ಈ ಕೆಳಗೆ ನಮೂದಿಸಿರುವ ಷೆಡ್ಯೂಲ್‌ನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿ ಹೈದರಾಬಾದ್-ಬೆಂಗಳೂರು ಕಿ.ಮೀ.534.720 ರಿಂದ ಕಿ.ಮೀ.556.840 ರವರೆಗೆ ಕರ್ನಾಟಕ ರಾಜ್ಯದ ಬೆಂಗಳೂರು ನಗರ ಜಿಲ್ಲೆಗಳಲ್ಲಿ (ನಾಲ್ಕು ಪಥಗಳು ವಗ್ಯೆರೆ) ರಸ್ತೆ ನಿರ್ಮಾಣ, ನಿರ್ವಹಣೆ, ಸಂರಕ್ಷಣೆ ಮತ್ತು ಕಾರ್ಯನಿರ್ವಹಣೆ ಸಲುವಾಗಿ ಭೂಸ್ವಾಧೀನಪಡಿಸಿಕೊಂಡಿರುತ್ತಾರೆ.

ರಾಷ್ಟ್ರಿಯ ಹೆದ್ದಾರಿ ಕಾಯ್ದೆ 1956ರ ಕಲಂ 3ಡಿ(1) ಹಾಗೂ (2) ರ ಅನ್ವಯ, ಹೈದರಾಬಾದ್-ಬೆಂಗಳೂರು ರಸ್ತೆ ನಿರ್ಮಾಣಕ್ಕಾಗಿ ಬೇಕಾಗಿರುವ ಈ ಕೆಳಗಿನ ಷೆಡ್ಯೂಲ್ ನಲ್ಲಿನ ಎಲ್ಲಾ ಜಮೀನುಗಳು ಸರ್ಕಾರದ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದ ಎಲ್ಲಾ ಋಣಭಾರದಿಂದ ವಿಮುಕ್ತಿ ಹೊಂದಿ ಭಾರತ ಸರ್ಕಾರದಲ್ಲಿ ವಿಹಿತಗೊಂಡಿರುತ್ತದೆ. ಆದ ಕಾರಣ, ರಾಷ್ಟ್ರೀಯ ಹೆದ್ದಾರಿ (1956ರ 48) ಮತ್ತು ತಿದ್ದುಪಡಿ ಕಾಯ್ದೆ 1997ರ ಅಧಿನಿಯಮ 3ಜಿ(1), 3ಜಿ(2), 3ಜಿ(3) ಮತ್ತು 3ಜಿ(4)ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು ಮಾಲೀಕರುಗಳಿಗೆ ಮತ್ತು ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅವರುಗಳ ಜಮೀನುಗಳನ್ನು ಕೇಂದ್ರ ಸರ್ಕಾರಕ್ಕೆ ಸ್ವಾಧೀನಪಡಿಸಿಕೊಂಡಿರುವುದರಿಂದ ಬಗ್ಗೆ ಅವರಿಗೆ ಪರಿಹಾರ ಧನ ನಿರ್ಧರಿಸಿ ಪಾವತಿಸಲು ಸಂಬಂಧಪಟ್ಟ ಅಧಿಕೃತ ದಾಖಲೆಗಳನ್ನು ಅಂದರೆ (1) 13ವರ್ಷಗಳ ಋಣಭಾರ ಪತ್ರ. (2) ಕ್ರಯ/ವಿಭಾಗ ಪತ್ರ ವಗ್ಯೆರೆ. (3) ಪಹಣಿ 2021-22ನೇ ಸಾಲು. (4) ಕಂದಾಯ ಪಾವತಿ ರಶೀದಿ. (5) ಸಂಬಂಧಪಟ್ಟ ಮುಟೇಶನ್. (6) ಭೂಪರಿವರ್ತನೆ ಆದೇಶ. (7) ನಗರ ಯೋಜನೆ ಇಲಾಖೆ/ನಗರಾಭಿವೃದ್ಧಿ ಪ್ರಾಧಿಕಾರ/ಗ್ರಾಮ ಪಂಚಾಯಿತಿಗೆ ಪಾವತಿಗೆ ಮಾಡಲಾದ ಅಭಿವೃದ್ಧಿ ಶುಲ್ಕ ರಶೀದಿ. (8) ಅನುಮೋದಿತ ನಿವೇಶನಗಳ ಲೇಔಟ್ ಪ್ಲಾನ್. (9) ಗ್ರಾಮ ಪಂಚಾಯ್ತಿ/ಮುನಿಸಿಪಲ್/ಸಿಟಿ ಕಾರ್ಪೊರೇಷನ್‌ನಲ್ಲಿ ನಿವೇಶನ ಅಥವಾ ಮನೆಗೆ ಸಂಬಂಧಿಸಿದ ಖಾತೆ. (10) ಸರ್ಕಾರಿ ಜಮೀನು ಮಂಜೂರಾಗಿದ್ದಲ್ಲಿ ಸಾಗುವಳಿ ಚೀಟಿ ಮತ್ತು (11) ಇತರೆ ಅಗತ್ಯ ದಾಖಲೆ ಪ್ರತಿಗಳೊಡನೆ ಪ್ರತಿ ಸ.ನಂ./ಸಬ್ ಸ.ನಂ./ನಿವೇಶನ/ಕಟ್ಟಡವಾರು ಅಲಾಯಿದಾ ಮನವಿಗಳನ್ನು ನೀವಾಗಲೀ ನಿಮ್ಮ ಅಧಿಕೃತ ಪ್ರತಿನಿಧಿಯ ಮೂಲಕವಾಗಲೀ, ಈ ಕೆಳಗೆ ನಮೂದಿಸಿರುವ ದಿನಾಂಕದಂದು ಕೆಲಸದ ವೇಳೆಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, #678/3, ನೀರುಭಾವಿ ಕೆಂಪಣ್ಣ ಲೇಔಟ್, ಹೆಬ್ಬಾಳ ಬೆಂಗಳೂರು-560024 (ಹೈದರಾಬಾದ್-ಬೆಂಗಳೂರು ಕಿ.ಮೀ.534.720 ರಿಂದ ಕಿ.ಮೀ.556.840ರವರೆಗೆ), ಇವರಿಗೆ ಸಲ್ಲಿಸಬಹುದೆಂದು ಈ ಮೂಲಕ ಪ್ರಕಟಿಸಿದೆ.

ತಪ್ಪಿದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಅರ್ಹತಾನುಸಾರ ಪರಿಹಾರ ನಿಗಧಿಪಡಿಸಿ ವಿತರಿಸಲಾಗುವುದು.

ಕ್ರಮ ಸಂಖ್ಯೆ / ಗ್ರಾಮದ ಹೆಸರು	ದಿನಾಂಕ ಮತ್ತು ಸಮಯ	ಅರ್ಜಿ ಸಲ್ಲಿಸಬಹುದಾದ ಸ್ಥಳ
ಜಿಲ್ಲೆ: ಬೆಂಗಳೂರು ನಗರ ತಾಲ್ಲೂಕು: ಬೆಂಗಳೂರು ಉತ್ತರ ಅಪರ 1. ಮೀನುಕುಂಟೆ 2. ಚಿಕ್ಕಜಾಲ 3. ಕಾಡಿಗಾನಹಳ್ಳಿ 4. ಹುಣಸಮಾರನಹಳ್ಳಿ 5. ವೆಂಕಟಾಲ 6. ಯಲಹಂಕ ಅಮಾನಿಕೆರೆ 7. ಯಲಹಂಕ ತಾಲ್ಲೂಕು: ಬೆಂಗಳೂರು ಉತ್ತರ 8. ಹೆಬ್ಬಾಳ	10.01.2022ರಂದು ಬೆಳಗ್ಗೆ 10.30ರಿಂದ ಸಂಜೆ 05.30ರ ವರೆಗೆ (ಸಾರ್ವತ್ರಿಕ ರಜೆಯನ್ನು ಹೊರತುಪಡಿಸಿ ಕಛೇರಿಯ ಸಮಯ).	ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (ಹೈದರಾಬಾದ್-ಬೆಂಗಳೂರು ಕಿ.ಮೀ.534.720 ರಿಂದ ಕಿ.ಮೀ.556.840ರವರೆಗೆ), #678/3, ನೀರುಭಾವಿ ಕೆಂಪಣ್ಣ ಲೇಔಟ್, ಹೆಬ್ಬಾಳ, ಬೆಂಗಳೂರು-560024.

ಸಹಿ/-
ಕೆ.ಎಂ. ಮನೋರಮ ಕೆ.ಎ.ಎಸ್.
ವಿಶೇಷ ಭೂಸ್ವಾಧೀನಾಧಿಕಾರಿಗಳು, ಹಾಗೂ ಸಕ್ಷಮ ಪ್ರಾಧಿಕಾರಿಗಳು,
ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಹೆಬ್ಬಾಳ, ಬೆಂಗಳೂರು - 560 024.

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 23ನೇ ಅಕ್ಟೋಬರ್ 2019

ಎಸ್.ಓ. 3835(ಇ).- ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿನ ವಿವರಿಸಿರುವ ಜಮೀನುಗಳನ್ನು ಕರ್ನಾಟಕ ರಾಜ್ಯದ ಬೆಂಗಳೂರು ನಗರ ಜಿಲ್ಲೆಯಲ್ಲಿರುವ ರಾಷ್ಟ್ರೀಯ ಹೆದ್ದಾರಿ ನಂ 7 ರಲ್ಲಿ ಕಿ.ಮೀ. 534.720 ರಿಂದ ಕಿ.ಮೀ. 556.840 ರವರೆಗೆ (ಹೈದರ್‌ಬಾದ್-ಬೆಂಗಳೂರು ವಿಭಾಗ) ಕಟ್ಟಡ ನಿರ್ಮಾಣ, (ಅಗಲೀಕರಣ, ನಾಲ್ಕು-ಪಥ ಇತ್ಯಾದಿ), ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆಂದು ಇಚ್ಚಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ರ ಕಲಂ 3ಎ (1)ರ ಪ್ರಕಾರ (ಇನ್ನು ಮುಂದೆ ಮೇಲೆ ಉಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್ ಭಾಗ 2, ಸೆಕ್ಷನ್ 3 ಮತ್ತು ಸಬ್ ಸೆಕ್ಷನ್ (ii) ರಂತೆ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಎಸ್.ಓ. 5388(ಇ) ದಿನಾಂಕ: 24ನೇ ಅಕ್ಟೋಬರ್ 2018 ಮೂಲಕ ಘೋಷಿಸಲಾಗಿತ್ತು.

ಈ ಕಾಯಿದೆ ಸೆಕ್ಷನ್ 3(ಎ)ರ ಸಬ್ ಸೆಕ್ಷನ್ 3ರಂತೆ ಅಧಿಸೂಚನೆಯನ್ನು ವಿಜಯ ಕರ್ನಾಟಕ (ಕನ್ನಡ) ಮತ್ತು ದಿ ಟೈಮ್ಸ್ ಆಫ್ ಇಂಡಿಯಾ (ಇಂಗ್ಲಿಷ್) ದಿನಪತ್ರಿಕೆಗಳಲ್ಲಿ ದಿನಾಂಕ: 23ನೇ ನವಂಬರ್ 2018 ರಂದು ಪ್ರಕಟಿಸಲಾಗಿರುತ್ತದೆ.

ಈ ಪ್ರಕಾರ ತಕರಾರುಗಳು ಸ್ವೀಕೃತವಾಗಿದ್ದು ಅ ತಕರಾರುಗಳನ್ನು ಸಕ್ಷಮ ಪ್ರಾಧಿಕಾರಿವರು ಪರಿಗಣಿಸಿ ವಿಚಾರಣೆ ನಂತರ ಅರ್ಜಿಗಳನ್ನು ತಿರಸ್ಕರಿಸಿ ಆದೇಶ ಮಾಡಲಾಗಿರುತ್ತದೆ.

ಆದ್ದರಿಂದ ಈಗ ಕೇಂದ್ರ ಸರ್ಕಾರವು ಸಕ್ಷಮ ಪ್ರಾಧಿಕಾರಿಗಳ ವರದಿಯನ್ನು ಆಧರಿಸಿ ಸಬ್-ಸೆಕ್ಷನ್ 3ಡಿ (1) ರಲ್ಲಿರುವ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆಯಲ್ಲಿ ಹೇಳಲಾದ ಉದ್ದೇಶಕ್ಕೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಘೋಷಿಸಿದೆ.

ಇನ್ನೂ ಮುಂದೆ ಇದೇ ಕಾಯ್ದೆ ಸೆಕ್ಷನ್ 3ಡಿ (2) ರಂತೆ ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಣೆಯಾದ ದಿನಾಂಕದಿಂದ ಅನ್ವಯವಾಗುವಂತೆ ಭೂಸ್ವಾಧೀನಕ್ಕೆ ಒಳಪಟ್ಟಿರುವ ಜಮೀನುಗಳು ಎಲ್ಲಾ ಋಣಭಾರಗಳಿಂದ ಮುಕ್ತವಾಗಿ ಕೇಂದ್ರ ಸರ್ಕಾರದಲ್ಲಿ ವಿಹಿತವಾಗಿದ್ದು, ಕೇಂದ್ರ ಸರ್ಕಾರದ ಸ್ವಾಧೀನಕ್ಕೆ ಒಳಪಟ್ಟಿರುತ್ತದೆ ಎಂದು ಘೋಷಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ-7 (ಹೈದರ್‌ಬಾದ್-ಬೆಂಗಳೂರು ವಿಭಾಗ) ರಲ್ಲಿ ಕಿ.ಮೀ. 534.720 ರಿಂದ ಕಿ.ಮೀ. 556.840 ರವರೆಗೆ ರೂಪಿತಗಳ ಸಹಿತ ಅಥವಾ ರೂಪಿತಗಳ ರಹಿತ ಭೂಸ್ವಾಧೀನಗೊಳಿಸಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ

ರಾಜ್ಯ: ಕರ್ನಾಟಕ · ಜಿಲ್ಲೆ: ಬೆಂಗಳೂರು ನಗರ

ಕ್ರ.ಸಂ.	ಸರ್ವೆ ನಂಬರ್	ಜಮೀನಿನ ತರಹೆ	ಜಮೀನಿನ ಸ್ವರೂಪ	ವಿಸ್ತೀರ್ಣ	ಭೂಮಾಲೀಕರ ಹೆಸರು/ ಹಿತಾಸಕ್ತಿ ಉಳ್ಳವರು
1	2	3	4	5	6
ತಾಲ್ಲೂಕು: ಯಲಹಂಕ					
ಹೋಬಳಿ: ಜಾಲ					ಗ್ರಾಮ: ಮೀನಕುಂಟೆ
1	39 /P Block 16	ಖಾಸಗಿ	ಎನ್‌ಎಕೆ	0.025	ಶಶಿಕಾಂತ ಬಿನ್ ಲೇಟ್ ಗಂಗಪ್ಪ
ಹೋಬಳಿ: ಜಾಲ					ಗ್ರಾಮ: ಚಿಕ್ಕಜಾಲ
2	78 /12	ಖಾಸಗಿ	ಎನ್‌ಎಕೆ	0.0027	ಅಂಜನಮ್ಮ ಕೋಂ ಹೆಚ್ ಎ ಮುನಿರಾಜು
ಹೋಬಳಿ: ಜಾಲ					ಗ್ರಾಮ: ಕಾಡಿಗಾನಹಳ್ಳಿ
3	29 /2	ಖಾಸಗಿ	ಎನ್‌ಎಕೆ	0.01	ಬಿ ಪಿ ಬಸವರಾಜು
4	33	ಖಾಸಗಿ	ಗ್ರಾಮಠಾಣ	0.001486	ಎಸ್ ಟಿ ಕುಮಾರ್ ಬಿನ್ ತಮ್ಮಣ್ಣ
5	63	ಖಾಸಗಿ	ಎನ್‌ಎಕೆ	0.02	ಬಿ ರವಿಕುಮಾರ್ ರೆಡ್ಡಿ ಬಿನ್ ಲೇಟ್ ಗೋಪಾಲ ರೆಡ್ಡಿ ಎಲ್ ರವೀಂದ್ರ
ಹೋಬಳಿ: ಜಾಲ					ಗ್ರಾಮ: ಹುಣಸಮಾರನಹಳ್ಳಿ
6	10 /1	ಸರ್ಕಾರಿ (ಖರಾಬು)	ಖುಷ್ಕಿ	0.08	ಸರ್ಕಾರಿ ಖರಾಬ್ ಸಮಾಧಿ ಭೂಮಿ
ಹೋಬಳಿ: ಯಲಹಂಕ					ಗ್ರಾಮ: ವೆಂಕಟಾಲ
7	15 /3	ಖಾಸಗಿ	ತರಿ	0.005	ಅಬ್ದುಲ್ ಸತಾರ್ ಬಿನ್ ಅಬ್ದುಲ್ ರಹೀಂ
8	15 /4	ಖಾಸಗಿ	ತರಿ	0.005	ಮುನಿಯಮ್ಮ ಕೋಂ ಲೇಟ್ ಗುಳ್ಳಪ್ಪ
9	25 /4A	ಖಾಸಗಿ	ಗ್ರಾಮಠಾಣ	0.0152	ಶ್ರೀನಿವಾಸ್ ಬಿನ್ ಲೇಟ್ ವೆಂಕಟರಮಣಪ್ಪ
ಹೋಬಳಿ: ಯಲಹಂಕ					ಗ್ರಾಮ: ಯಲಹಂಕ ಅಮಾನಿಕೆರೆ
10	11 /1	ಖಾಸಗಿ	ಖುಷ್ಕಿ	0.0101	ವೈ ಎಂ ಶ್ರೀನಿವಾಸಮೂರ್ತಿ ಬಿನ್ ಲೇಟ್ ಎಂ ವಿ ಮುನಿಯಪ್ಪ
11	11 /2	ಖಾಸಗಿ	ಖುಷ್ಕಿ	0.0202	ಎಂ ವೆಂಕಟರಾಮಯ್ಯ ಬಿನ್ ಲೇಟ್ ರಾಮಪ್ಪ ಜಯಮ್ಮ ಕೋಂ ವೆಂಕಟರಾಮಯ್ಯ
12	8 /2	ಖಾಸಗಿ	ಎನ್‌ಎಕೆ	0.02	ಕೆ ಲಕ್ಷ್ಮೀಪತಿ ರೆಡ್ಡಿ ಬಿನ್ ದೊಡ್ಡಪ್ಪಯ್ಯಣ್ಣ
ಹೋಬಳಿ: ಯಲಹಂಕ					ಗ್ರಾಮ: ಯಲಹಂಕ
13	139 /3A	ಖಾಸಗಿ	ಖುಷ್ಕಿ	0.0101	ಬೈರಪ್ಪ ಬಿನ್ ಮೋಟಪ್ಪ
14	57	ಖಾಸಗಿ	ಖುಷ್ಕಿ	0.0101	ಎಂ ವೆಂಕಟರಾಮಯ್ಯ ಬಿನ್ ಲೇಟ್ ಎಂ ರಾಮಪ್ಪ ಜಯಮ್ಮ ಕೋಂ ವೆಂಕಟರಾಮಯ್ಯ
15	85 /3	ಖಾಸಗಿ	ಎನ್‌ಎಕೆ/ ಗ್ರಾಮಠಾಣ	0.0075	ನಂಜಾಮರಿ ಬಿನ್ ಲೇಟ್ ಮುನಿಶಾಮಪ್ಪ
ತಾಲ್ಲೂಕು: ಬೆಂಗಳೂರು ಉತ್ತರ					
ಹೋಬಳಿ: ಕಸಬಾ					ಗ್ರಾಮ: ಹೆಬ್ಬಾಳ
16	107 /2	ಖಾಸಗಿ	ತರಿ	0.03	ಎಂ ಎಸ್ ಮಹಾದೇವಯ್ಯ ಬಿನ್ ಎಂ ಶಿವಣ್ಣ
17	107 /3	ಖಾಸಗಿ	ತರಿ	0.03	ಬೈರಮ್ಮ ಬಿನ್ ಲೇಟ್ ತಮ್ಮಣ್ಣ ಎಚ್ ಯಶವಂತ್ ಶಣ್ಯೆ ಬಿನ್ ಎಚ್ ವಿ ಶಣ್ಯೆ
18	108 /1	ಖಾಸಗಿ	ತರಿ	0.0816	ಮಾರಪ್ಪ ಬಿನ್ ಸೊಣ್ಣಪ್ಪ ಪುಟ್ಟಪ್ಪ ಬಿನ್ ಸೊಣ್ಣಪ್ಪ ಲಕ್ಷ್ಮಮ್ಮ ಬಿನ್ ಹೆಚ್ ಎಂ ಸಿದ್ದಪ್ಪ
19	108/2	ಖಾಸಗಿ	ತರಿ	0.0368	ಎಸ್ ಬಿ ರಾಮಚಂದ್ರಪ್ಪ ಬಿನ್ ಬೈರಮ್ಮ, ಎಂ ಎಸ್ ಮಹಾದೇವಯ್ಯ ಬಿನ್ ಎಂ ಶಿವಣ್ಣ, ಎನ್‌ಹೆಚ್‌ಎಐ
20	109 /2	ಖಾಸಗಿ	ತರಿ	0.012	ಸಿ ಮುನಿಯಪ್ಪ ಬಿನ್ ಚಿಕ್ಕಪಾಪಯ್ಯ ಕೆಐಎಡಿಬಿ ಎನ್‌ಹೆಚ್‌ಎಐ ಮುನಿಯಪ್ಪ ಬಿನ್ ಪಾಪಣ್ಣ
21	109 /3	ಖಾಸಗಿ	ತರಿ	0.009	ಪಿಳ್ಳಪ್ಪ ಬಿನ್ ತಮ್ಮಣ್ಣ ಕೆಐಎಡಿಬಿ
22	109 /4	ಖಾಸಗಿ	ತರಿ	0.0056	ಮುನಿವೆಂಕಟಪ್ಪ ಎಂ ರಾಮಯ್ಯ ಬಿನ್ ಮುನಿಯಪ್ಪ ಎಂ ಎಸ್ ಮಹಾದೇವಯ್ಯ ಬಿನ್ ಶಿವಣ್ಣ
23	109/1	ಖಾಸಗಿ	ತರಿ	0.017	ವೆಂಕಟಗಿರಿಯಮ್ಮ ಕೋಂ ಚಿಕ್ಕಮುನಿನಾಗಪ್ಪ ಕೆಐಎಡಿಬಿ
24	38	ಸರ್ಕಾರಿ	ಖರಾಬು ಟ್ಯಾಂಕ್	0.08658	ಟ್ಯಾಂಕ್ ಫೀಲ್ಡ್ ಅರಣ್ಯ ಇಲಾಖೆ
25	Road	ಸರ್ಕಾರಿ	ಖರಾಬು ರಸ್ತೆ	0.028564	ಸರ್ಕಾರಿ
ಒಟ್ಟು				0.57953	

[ಎಫ್.ನಂ.ಎನ್‌ಹೆಚ್‌ಎಐ/ಟೆಕ್/ಎನ್‌ಎಸ್-2/ಎಲ್‌ಎ/ಕೆಎನ್‌ಟಿ-2/2008/3ಎ/3ಡಿ]
ರಾಜೇಶ್ ಗುಪ್ತ, ಉಪ ಕಾರ್ಯದರ್ಶಿ

ದೇವಾಲಯಗಳ ಸ್ವಾಯತ್ತತೆಗೆ ತೊಂದರೆ ಎಲ್ಲಿದೆ?

ಹುಬ್ಬಳ್ಳಿ: 'ದೇವಸ್ಥಾನಗಳು ಸಾರ್ವಜನಿಕ ಆಸ್ತಿಯಲ್ಲ; ಅವು ಶ್ರದ್ಧಾ ಕೇಂದ್ರಗಳು. ಆದಾಯ ಮತ್ತು ದೇವಸ್ಥಾನ ನಿರ್ವಹಣೆಯಲ್ಲಿ ಪಾರದರ್ಶಕತೆ ಕಂಡುಕೊಳ್ಳಲು ಕೆಲವು ನಿರ್ದಿಷ್ಟ ಬದಲಾವಣೆಗಳನ್ನು ತರಲು ಸರ್ಕಾರ ಯೋಜನೆ ರೂಪಿಸುವುದಾದರೆ ಅದಕ್ಕೆ ಯಾರ ಅಭ್ಯಂತರವೂ ಇಲ್ಲ'. 'ಈಗಾಗಲೇ ಸ್ವಾತಂತ್ರ್ಯ ಇದೆ. ಸ್ವಾಯತ್ತತೆ ನೀಡುವುದು ರಾಜಕೀಯ ನಾಯಕರ ಹಿಂಬಾಲಕರಿಗೆ ಸ್ವಾತಂತ್ರ್ಯ, ಹಣ ನೀಡುವ ಹುನ್ನಾರದಂತೆ ಕಾಣುತ್ತಿದೆ'.

–ಇವು, 'ಪ್ರಜಾವಾಣಿ' ಸೋಮವಾರ ಆಯೋಜಿಸಿದ್ದ 'ದೇವಸ್ಥಾನಗಳಿಗೆ ಸ್ವಾತಂತ್ರ್ಯ ಬೇಕೆ? ಬೇಡವೆ?' ವಿಷಯ ಕುರಿತ ಫೇಸ್‌ಬುಕ್ ಲೈವ್ ಸಂವಾದದಲ್ಲಿ ಅತಿಥಿಗಳಿಂದ ವ್ಯಕ್ತವಾದ ಪರ–ವಿರೋಧದ ಅಭಿಪ್ರಾಯ.

ಸಂವಾದದಲ್ಲಿ ಸಂಶೋಧಕಿ ಶಕುಂತಲಾ ಅಯ್ಯರ್, ಬರಹಗಾರ ಬಂಜಗೆರೆ ಜಯಪ್ರಕಾಶ ಹಾಗೂ ಸಂಶೋಧಕ ದೇವರಕೊಂಡಾ ರೆಡ್ಡಿ ಪಾಲ್ಗೊಂಡಿದ್ದರು.

ಪ್ರಜಾವಾಣಿ ಸಂವಾದ

ಆಡಳಿತ ಹಸ್ತಕ್ಷೇಪದಿಂದ ದೂರ...



ರಾಜರ ಕಾಲದಿಂದಲೂ ದೇವಸ್ಥಾನಗಳು ಆಡಳಿತದ ಹಸ್ತಕ್ಷೇಪದಿಂದ ದೂರವೇ ಉಳಿದಿವೆ. ರಾಜರು ದೇವಸ್ಥಾನದ ಸಾಮಾಜಿಕ ಕಾರ್ಯಗಳನ್ನು ಪರಿಶೀಲಿಸಿ ದೇಣಿಗೆ ನೀಡುತ್ತಿದ್ದರು. ಆ ಕಾಲದಲ್ಲಿ ಕೊಡುಗೆ ಇತ್ತು, ಆದರೆ ರಾಜರ ನಿಯಂತ್ರಣ ಇರಲಿಲ್ಲ.

ದೇವಸ್ಥಾನ ಕೇವಲ ಪೂಜಾ ಕೇಂದ್ರವಾಗಿರಲಿಲ್ಲ. ಅಂದು ವಿದ್ಯಾದಾನ, ಅನ್ನದಾನ, ವೈದ್ಯಕೀಯ ಸೇವೆ, ಸಾಂಸ್ಕೃತಿಕ ಸಂಘಟನೆ, ನಿರಾಶ್ರಿತರಿಗೆ ಆಶ್ರಯ ತಾಣ, ವಸ್ತ್ರದಾನ ಮತ್ತು ನ್ಯಾಯದಾನದ ಕೇಂದ್ರವಾಗಿತ್ತು. ಈಗ ಮೂರ್ತಿಪೂಜಾ ಕೇಂದ್ರಗಳನ್ನಾಗಿ ಮಾತ್ರ ನೋಡುತ್ತಿದ್ದೇವೆ. ಈ ಹಿಂದೆ ದೇವಸ್ಥಾನಗಳು ದೊಡ್ಡ ಸಮುದಾಯವನ್ನು ಸಲಹುತ್ತಿದ್ದವು. ಈ ಹಿಂದೆ ದೇವಸ್ಥಾನಕ್ಕೆ ಬರುವ ಆದಾಯ ಸಾರ್ವಜನಿಕರಿಗೆ ತಿಳಿಯುತ್ತಿತ್ತು. ಗುಪ್ತದಾನ ಎನ್ನುವುದು ಇರುತ್ತಿರಲಿಲ್ಲ. ಈಗ ಕೆಲವು ನಿರ್ದಿಷ್ಟ ದೇವಸ್ಥಾನಗಳು ಮಾತ್ರ ದೇವಸ್ಥಾನದ ಆದಾಯದ ಬಗ್ಗೆ ಪಾರದರ್ಶಕತೆ ಕಾಪಾಡಿಕೊಂಡಿವೆ.

ದೇವರಕೊಂಡಾ ರೆಡ್ಡಿ, ಸಂಶೋಧಕ

ಪ್ರಭಾವಶಾಲಿ ಸಂಪ್ರದಾಯಕ್ಕೆ ಮಣೆ ಹಾಕುವ ಸಾಧ್ಯತೆ

ದೇವಸ್ಥಾನಗಳಿಗೆ ಸ್ವಾಯತ್ತತೆ ನೀಡುವುದರಿಂದ ಅವುಗಳ ನಿರ್ವಹಣೆ ಕೆಲವು ನಿರ್ದಿಷ್ಟ ಜಾತಿಗಳ ನಿಯಂತ್ರಣಕ್ಕೆ ಒಳಪಡುವ ಸಾಧ್ಯತೆ ಇದೆ. ಒಮ್ಮೆ ಖಾಸಗಿ ಆಡಳಿತಕ್ಕೆ ಒಳಪಟ್ಟರೆ ಎಲ್ಲರ ಪ್ರವೇಶಕ್ಕೆ ಮುಕ್ತವಾಗದಿರಬಹುದು. ಸಾಮಾಜಿಕ ವ್ಯವಸ್ಥೆಯಲ್ಲಿ ಕೆಲವರನ್ನು ದೇವಸ್ಥಾನದಿಂದ ಹೊರಗಿಡುವ ಅಪಾಯವೂ ಇದೆ. ಆಯಾ ಪ್ರದೇಶದ ಪ್ರಭಾವಿ ಭಕ್ತರ ನಿಯಂತ್ರಣಕ್ಕೆ ಬಿಡುವ, ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಭಾವಶಾಲಿ ಸಂಪ್ರದಾಯಕ್ಕೆ ಮಣೆ ಹಾಕುವ ಸಾಧ್ಯತೆಯನ್ನೂ ಅಂದಾಜಿಸಬಹುದು.

ಸ್ವಾಯತ್ತತೆ ಎನ್ನುವುದು ರಾಜಕೀಯ ನಾಯಕರ ಹಿಂಬಾಲಕರಿಗೆ ಸ್ವಾತಂತ್ರ್ಯ, ಹಣ ನೀಡಿ ರಾಜಕೀಯಕರಣಕ್ಕೆ ಅವಕಾಶ ಮಾಡಿಕೊಡುವ ಹುನ್ನಾರದಂತೆ ಕಾಣುತ್ತಿದೆ. ಪ್ರಸ್ತುತ ದೇವಸ್ಥಾನಗಳಲ್ಲಿ ಧಾರ್ಮಿಕ ಆಚರಣೆ ಮತ್ತು ಸಂಪ್ರದಾಯಕ್ಕೆ ಯಾವುದೇ ಲೋಪ ಎದುರಾಗಿಲ್ಲ. ಎಲ್ಲವೂ ಶಾಸ್ತ್ರೋಕ್ತವಾಗಿ ನಡೆಯುತ್ತಿದೆ. ಅರ್ಚಕರು ಸೇರಿದಂತೆ ವಿವಿಧ ನೇಮಕಾತಿಗಳಲ್ಲಿ ಈಗ ತಾರತಮ್ಯವೂ ಆಗುತ್ತಿಲ್ಲ. ಈಗ ಇರುವಂತೆ ಮುಜರಾಯಿ ಇಲಾಖೆಯ ವ್ಯವಸ್ಥೆಯೇ ಇರಲಿ.

ಬಂಜಗೆರೆ ಜಯಪ್ರಕಾಶ, ಬರಹಗಾರ

ಸರ್ಕಾರ ಮೂಗು ತೂರಿಸುವುದು ವಿಷಾದಕರ

ದೇವಸ್ಥಾನಗಳು ಸಾರ್ವಜನಿಕ ಆಸ್ತಿಯಲ್ಲ; ಅವು ಶ್ರದ್ಧಾ ಕೇಂದ್ರಗಳು; ಸಾಂಸ್ಕೃತಿಕ ಸಂಸ್ಥೆಗಳು. ದೇವಸ್ಥಾನದ ಪ್ರತಿ ವಿದ್ಯಮಾನದಲ್ಲೂ ಸರ್ಕಾರದ ಸಮ್ಮತಿ ಇರಬೇಕು ಎನ್ನುವುದನ್ನು ಹಿಂದೂ ಶ್ರದ್ಧಾಳುಗಳು ಒಪ್ಪಲು ಸಾಧ್ಯವಿಲ್ಲ. ಸರ್ಕಾರ ಮೂಗು ತೂರಿಸುವುದು ವಿಷಾದಕರ.

ಆದಾಯ ಮತ್ತು ದೇವಸ್ಥಾನ ನಿರ್ವಹಣೆಯಲ್ಲಿ ಪಾರದರ್ಶಕತೆ ಕಂಡುಕೊಳ್ಳಲು ಕೆಲವು ನಿರ್ದಿಷ್ಟ ಬದಲಾವಣೆಗಳನ್ನು ಸರ್ಕಾರ ತರಲು ಯೋಜನೆ ರೂಪಿಸುವುದಾದರೆ, ಅದಕ್ಕೆ ಯಾರ ಅಭ್ಯಂತರವೂ ಇಲ್ಲ. ಸರ್ಕಾರಕ್ಕೆ ಧರ್ಮವನ್ನು ಬೆಳೆಸಲು ಸಾಧ್ಯವಿಲ್ಲ. ಹೀಗಾಗಿ, ಈ ವಿಚಾರದಲ್ಲಿ ಗೊಂದಲ ಸೃಷ್ಟಿ ಮಾಡಬಾರದು. ಯಥಾಸ್ಥಿತಿ ಕಾಯ್ದುಕೊಂಡು ಹೋಗಬೇಕು. ದೇವಸ್ಥಾನಗಳನ್ನು ಕೇವಲ ಆದಾಯಮೂಲಗಳಾಗಿ ಮಾತ್ರ ನೋಡಬಾರದು. ಈ ದೃಷ್ಟಿಕೋನ ಬದಲಾಗಬೇಕು. ಹಿಂದೂ ದೇವಾಲಯಗಳನ್ನು ಮಾತ್ರ ನಿಯಂತ್ರಣಕ್ಕೆ ತರಲು ಪ್ರಯತ್ನಿಸುತ್ತಿದ್ದೀರಿ. ಇತರರಿಗೆ ತಂದಿಲ್ಲ ಎಂದು ಪ್ರಶ್ನೆ ಮಾಡುವುದಿಲ್ಲ. ನಮ್ಮನ್ನೂ ಸ್ವತಂತ್ರವಾಗಿರಲು ಬಿಡಿ.

ಶಕುಂತಲಾ ಅಯ್ಯರ್, ಸಂಶೋಧಕಿ

ವಿವರಗಳಿಗೆ ಲಿಂಕ್ ನೋಡಿ. Fb.com/Prajavani.net, twitter.com/prajavani, youtube.com/prajavani

ಸುದ್ದಿ 2 ನಿಮಿಷ

'ಯುಗಾದಿಯೊಳಗೆ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ'

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): 'ಯುಗಾದಿಯೊಳಗೆ ಲಿಂಗಾಯತ ಪಂಚಮಸಾಲಿ ಜನಾಂಗಕ್ಕೆ 2ಎ ಮೀಸಲಾತಿ ದೊರೆಯುವ ವಿಶ್ವಾಸವಿದೆ' ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಸೋಮವಾರ ಹೇಳಿದರು.

ಪಟ್ಟಣದಲ್ಲಿ ಲಿಂಗಾಯತ ಪಂಚಮಸಾಲಿ ಸಮಾಜದ ಕೂಡಲಸಂಗಮ ಪೀಠದ ಜಿಲ್ಲಾ ಘಟಕ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿದ ಅವರು, 'ಈಚೆಗೆ ಬೆಳಗಾವಿಯಲ್ಲಿ ಸಚಿವ ಸಿ.ಸಿ. ಪಾಟೀಲ ಮತ್ತು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ನೇತೃತ್ವದಲ್ಲಿ ನಡೆದ ಸಮಾಜದ ಶಾಸಕರ ಸಭೆಯಲ್ಲಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆ' ಎಂದರು.

'ಅತಿ ಮುಖ್ಯವಾದ ಬೇಡಿಕೆ 2ಎ ಮೀಸಲಾತಿಯನ್ನು ಶೀಘ್ರವೇ ಘೋಷಿಸಲಿದ್ದಾರೆ. ಕೂಡಲಸಂಗದಲ್ಲಿ ಜ.14ರಂದು ಪಾದಯಾತ್ರೆ ವರ್ಷಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಭಾಗವಹಿಸಿ, ಬೇಡಿಕೆಗಳಿಗೆ ಸ್ಪಂದಿಸಲಿದ್ದಾರೆ' ಎಂದರು.

'ಪಂಚಮಸಾಲಿಗಳಿಗೆ 2ಎ ಮೀಸಲಾತಿ ನೀಡಲು ಕುಲಶಾಸ್ತ್ರ ಅಧ್ಯಯನ ಅಗತ್ಯ ಇಲ್ಲ. ಶಾಶ್ವತ ಹಿಂದುಳಿದ ವರ್ಗಗಳ ಸಮಿತಿ ವರದಿಯೇ ಅಂತಿಮ. ಸಮಾಜವನ್ನು ಈಗಾಗಲೇ 3ಬಿಗೆ ಸೇರಿಸಲಾಗಿದೆ. ಸಮಾಜದ ಕೆಲವರು ಹೋರಾಟದ ದಿಕ್ಕುತಪ್ಪಿಸುವ ಕೆಲಸಕ್ಕೆ ಮುಂದಾಗಿದ್ದಾರೆ' ಎಂದರು.

ವಾಟ್ಸ್ ಆ್ಯಪ್: ಅರ್ಜಿ ಒಪ್ಪದ ಹೈಕೋರ್ಟ್

ಬೆಂಗಳೂರು: 'ವಾಟ್ಸ್ ಆ್ಯಪ್ ಗ್ರೂಪ್ ಅಡ್ಮಿನ್ ಸ್ಥಾನದಿಂದ ತೆಗೆದು ಹಾಕಿದ ಕಾರಣಕ್ಕೆ ಮೂಲಭೂತ ಹಕ್ಕು, ಅದರಲ್ಲೂ ವಾಕ್ ಸ್ವಾತಂತ್ರ್ಯದ ಹರಣವಾಗಿದ್ದು ನ್ಯಾಯ ದೊರಕಿಸಿ ಕೊಡಿ ಎಂದು ಯಾರಾದರೂ ರಿಟ್ ಸಲ್ಲಿಸಿ ಕೋರ್ಟ್ ಕದ ಬಡಿದರೆ ಅಂತಹ ಕೋರಿಕೆಯನ್ನು ಪುರಸ್ಕರಿಸಲು ಸಾಧ್ಯವಿಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಖಾಸಗಿ ಟ್ರಸ್ಟ್‌ಗೆ ಸಂಬಂಧಿಸಿದ ವಾಟ್ಸ್ ಆ್ಯಪ್ ಗ್ರೂಪಿನ ಅಡ್ಮಿನ್ ಮತ್ತು ಸದಸ್ಯ ಸ್ಥಾನದಿಂದ ತೆಗೆದು ಹಾಕಿದ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿ ಬೆಂಗಳೂರಿನ ಗುರಪ್ಪನ ಪಾಳ್ಯ ನಿವಾಸಿ 30 ವರ್ಷದ ಅರ್ಜಿದಾರ ಮೊಹಮ್ಮದ್ ಮಾಝ್ ಶರೀಫ್ ರಿಟ್ ಅರ್ಜಿ ಸಲ್ಲಿಸಿದ್ದರು.

ಸೋಮವಾರ ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಸಾರ್ವಜನಿಕ ಕಾನೂನಿನ ಅಂಶ ಹೊಂದಿರದ ಖಾಸಗಿ ಹಕ್ಕಿನ ವಿಚಾರದಲ್ಲಿ ರಿಟ್ ನ್ಯಾಯಾಲಯ ಯಾವುದೇ ಪರಿಹಾರ ಕಲ್ಪಿಸಲು ಸಾಧ್ಯವಿಲ್ಲ. ಅರ್ಜಿದಾರರು ಸಿವಿಲ್ ಕೋರ್ಟ್ ಅಥವಾ ಇತರೆ ನ್ಯಾಯಾಲಯದಲ್ಲಿ ತಮ್ಮ ಕುಂದುಕೊರತೆಗೆ ಪರಿಹಾರ ಪಡೆಯಬಹುದು' ಎಂದು ತಿಳಿಸಿ ವಿಲೇವಾರಿ ಮಾಡಿದೆ.

ಅಶ್ವತ್ಥನಾರಾಯಣ – ಸುರೇಶ್ ಜಟಾಪಟಿ

ಒಂದನೇ ಪುಟದಿಂದ

ಮುಖ್ಯಮಂತ್ರಿ ಸಹಿತ ವೇದಿಕೆಯಲ್ಲಿದ್ದವರು ಇಬ್ಬರನ್ನೂ ಸಮಾಧಾನ ಪಡಿಸುವ ಪ್ರಯತ್ನ ಮಾಡಿದರು.

ಈ ವೇಳೆ ವಿಧಾನ ಪರಿಷತ್ ಸದಸ್ಯ ಎಸ್. ರವಿ ಮೈಕ್‌ನಲ್ಲಿ ಮಾತನಾಡಲು ಯತ್ನಿಸಿದ್ದು, ಅಶ್ವತ್ಥನಾರಾಯಣ ಅದಕ್ಕೆ ಅವಕಾಶ ನೀಡಲಿಲ್ಲ. ಇದರಿಂದ ಸಿಟ್ಟಿಗೆದ್ದ ರವಿ ಮೈಕ್ ಕಿತ್ತೆಸೆದರು. ನಂತರ ಡಿ.ಕೆ. ಸುರೇಶ್, ರವಿ ಮತ್ತಿತರರು ಮುಖ್ಯಮಂತ್ರಿ ಎದುರು ಧರಣಿ ಕುಳಿತರು.

ಡಿ.ಕೆ. ಸುರೇಶ್ ಹೇಳಿದ್ದೇನು?: 'ಪ್ರತಿಮೆಗಳ ನಿರ್ಮಾಣದ ಹಿಂದೆ ಇಡೀ ಜಿಲ್ಲೆಯ ನಾಗರಿಕರ ಕೊಡುಗೆ ಇದೆ. ಹೀಗಾಗಿ ಸಾಕಷ್ಟು ಮುಂಚಿತವಾಗಿಯೇ ಎಲ್ಲ ಜನಪ್ರತಿನಿಧಿಗಳ ಸಭೆ ಕರೆದು ಚರ್ಚಿಸಿ ಕಾರ್ಯಕ್ರಮ ರೂಪಿಸಿದ್ದರೆ ನಾವು ಪಕ್ಷಾತೀತವಾಗಿ ಬೆಂಬಲ ನೀಡುತ್ತಿದ್ದೆವು. ಆದರೆ ಕೇವಲ ಮೂರು ದಿನಗಳ ಹಿಂದೆ ಕಾಟಾಚಾರಕ್ಕೆ ಆಹ್ವಾನಪತ್ರಿಕೆ ಕಳುಹಿಸಿ ಕಾರ್ಯಕ್ರಮಕ್ಕೆ ಬನ್ನಿ ಎಂದು ಅವಮಾನ ಮಾಡಿದ್ದಾರೆ' ಎಂದು ಡಿ.ಕೆ. ಸುರೇಶ್ ದೂರಿದರು.

'ರಾಮನಗರವೂ ಸೇರಿದಂತೆ ಇಡೀ ರಾಜ್ಯಕ್ಕೆ ನೀವು ಯಾವ ಜಿಲ್ಲೆಗೂ ಉಸ್ತುವಾರಿ ಸಚಿವರನ್ನು ಅಧಿಕೃತವಾಗಿ ನೇಮಿಸಿಲ್ಲ. ಹೀಗಿರುವಾಗ ಇವರನ್ನು ಉಸ್ತುವಾರಿ ಸಚಿವ ಎಂದು ಹೇಗನ್ನುತ್ತೀರಿ' ಎಂದು ಅಶ್ವತ್ಥನಾರಾಯಣ ಕುರಿತು ಮುಖ್ಯಮಂತ್ರಿಯನ್ನು ಪ್ರಶ್ನಿಸಿದರು.

'ಕಾರ್ಯಕ್ರಮಕ್ಕೆ ಕನಿಷ್ಠ ಈ ಭಾಗದ ಸ್ವಾಮೀಜಿಗಳನ್ನು ಕರೆಯಿಸಬೇಕಿತ್ತು. ಇದೇನಾ ನಿಮ್ಮ ಆರ್‌ಎಸ್‌ಎಸ್ ಕಲಿಸಿದ ಸಂಸ್ಕೃತಿ' ಎಂದು ಪ್ರಶ್ನಿಸಿದರು. ಇದಕ್ಕೆ ವೇದಿಕೆಯ ಕೆಳಭಾಗದಲ್ಲಿದ್ದ ಬಿಜೆಪಿ ಕಾರ್ಯಕರ್ತರು ಆಕ್ಷೇಪ ವ್ಯಕ್ತಪಡಿಸಿ 'ಆರ್‌ಎಸ್‌ಎಸ್ ಬಗ್ಗೆ ಏಕೆ ಮಾತನಾಡುತ್ತೀರಿ' ಎಂದು ಪ್ರಶ್ನಿಸಿದರು.

ಬೊಮ್ಮಾಯಿ ಕಿವಿಮಾತು:

ಮುಖ್ಯಮಂತ್ರಿ ಬೊಮ್ಮಾಯಿ ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸುವ ಪ್ರಯತ್ನ ಮಾಡಿದರು. 'ರಾಜಕೀಯ ಇದ್ದದ್ದೇ. ಆದರೆ ನಾವು ಜನಪರವಾಗಿ ಕೆಲಸ ಮಾಡಬೇಕೇ ಹೊರತು ಭಿನ್ನಾಭಿಪ್ರಾಯವನ್ನೇ ದೊಡ್ಡದು ಮಾಡಬಾರದು. ಜನರು ಮುಗ್ಧರು. ನಮ್ಮ ವರ್ತನೆಗಳು ಅವರ ಮೇಲೆ ಪರಿಣಾಮ ಬೀರುತ್ತದೆ' ಎಂದು ಇಬ್ಬರಿಗೂ ಕಿವಿಮಾತು ಹೇಳಿದರು.

'ಹಳೆ ಮೈಸೂರು ಭಾಗದಿಂದ ಎಚ್.ಡಿ. ದೇವೇಗೌಡ, ಎಸ್.ಎಂ. ಕೃಷ್ಣ, ಎಚ್.ಡಿ. ಕುಮಾರಸ್ವಾಮಿ, ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾರೆ. ಇವರೆಲ್ಲ ನಮ್ಮ ಉತ್ತರ ಕರ್ನಾಟಕ ಭಾಗಕ್ಕೆ ಬಂದಾಗ ಅಪಾರ ಪ್ರೀತಿ ತೋರಿಸಿದ್ದೇವೆ' ಎಂದೂ ಹೇಳಿದರು.

ಮಾಗಡಿಯಲ್ಲೂ ಮುಂದುವರಿಕೆ

ಸಚಿವ ಅಶ್ವತ್ಥನಾರಾಯಣ ಅವರ ಹುಟ್ಟೂರಾದ ಮಾಗಡಿ ತಾಲ್ಲೂಕಿನ ಚಿಕ್ಕಕಲ್ಯಾ ಗ್ರಾಮದಲ್ಲಿ ಮಧ್ಯಾಹ್ನ ನಡೆದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮದಲ್ಲೂ ಗಲಾಟೆ ಮುಂದುವರಿಯಿತು.

ಅಶ್ವತ್ಥನಾರಾಯಣ ಭಾಷಣದ ವೇಳೆ ಕಾಂಗ್ರೆಸ್ ಕಾರ್ಯಕರ್ತರು 'ಡಿ.ಕೆ... ಡಿ.ಕೆ' ಎಂದು ಘೋಷಣೆ ಕೂಗಿದರು. ಆಗ ಸುರೇಶ್ ತಮ್ಮ ಬೆಂಬಲಿಗರನ್ನು ಗದರಿಸಿದರು. ಸುರೇಶ್ ಮಾತನಾಡುವ ವೇಳೆ ಬಿಜೆಪಿ ಬೆಂಬಲಿಗರು ಅಲ್ಲಿಂದ ಹೊರಡಲು ಮುಂದಾದಾಗ ಜೆಡಿಎಸ್ ಶಾಸಕ ಎ.ಮಂಜುನಾಥ ಮಧ್ಯ ಪ್ರವೇಶಿಸಿ 'ಇದು ಬಲಾಬಲದ ವೇದಿಕೆಯಲ್ಲ. ಯಾರೂ ಹೋಗಬೇಡಿ' ಎಂದು ಮನವಿ ಮಾಡಿದರು.

ಪರ–ವಿರೋಧ ಪ್ರತಿಭಟನೆ

ಸಚಿವ ಅಶ್ವತ್ಥನಾರಾಯಣ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಚನ್ನಪಟ್ಟಣದಲ್ಲಿ ಪ್ರತಿಭಟನೆ ಮಾಡಿದರು. ರಾಮನಗರದ ಜಿಲ್ಲಾ ಕಚೇರಿಗಳ ಸಂಕೀರ್ಣದ ಮುಂಭಾಗ ಸಂಜೆ ಬಿಜೆಪಿ ಜಿಲ್ಲಾ ಕಾರ್ಯಕರ್ತರು ಡಿ.ಕೆ. ಸುರೇಶ್ ನಡೆ ಖಂಡಿಸಿ ರಸ್ತೆ ತಡೆ ನಡೆಸಿ ಪ್ರತಿಭಟನೆ ಮಾಡಿದರು. ರಾಮನಗರದಲ್ಲಿ ಕಾರ್ಯಕ್ರಮದ ಮುಕ್ತಾಯದ ಬಳಿಕ ಹೆದ್ದಾರಿ ಮಧ್ಯದಲ್ಲಿ ಕಟ್ಟಿದ್ದ ಬಿಜೆಪಿ ನಾಯಕರ ಸ್ವಾಗತದ ಬ್ಯಾನರ್‌ಗಳನ್ನು ಡಿ.ಕೆ. ಸುರೇಶ್ ಬೆಂಬಲಿಗರು ಹರಿದುಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಏನಿದು ಪ್ರತಿಮೆ ವಿವಾದ

ಜಿಲ್ಲಾ ಕೇಂದ್ರವಾದ ರಾಮನಗರದಲ್ಲಿ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಿಸಬೇಕು ಎಂದು ಸಂಘಟನೆಗಳು ಒತ್ತಾಯಿಸುತ್ತ ಬಂದಿದ್ದವು. ಮತ್ತೊಂದೆಡೆ, ಮಾಗಡಿಯವರೇ ಆದ ನಾಡಪ್ರಭು ಕೆಂಪೇಗೌಡರ ಪ್ರತಿಮೆ ನಿರ್ಮಾಣಕ್ಕೂ ಒತ್ತಾಯ ಕೇಳಿಬಂದಿತ್ತು. ನಂತರ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಪ್ರತಿಮೆ ನಿರ್ಮಾಣಕ್ಕೆ ಸರ್ಕಾರ ಅನುಮತಿ ನೀಡಿ, ನಿರ್ಮಾಣದ ಉಸ್ತುವಾರಿಗಾಗಿ ಸಮಿತಿಯನ್ನೂ ರಚಿಸಲಾಯಿತು. ₹59.60 ಲಕ್ಷ ವೆಚ್ಚದಲ್ಲಿ ಅಂಬೇಡ್ಕರ್ ಪ್ರತಿಮೆ ಹಾಗೂ ₹63.82 ಲಕ್ಷ ವೆಚ್ಚದಲ್ಲಿ ಕೆಂಪೇಗೌಡರ ಪ್ರತಿಮೆ ಸಿದ್ಧವಾಗಿದ್ದು, ಇವುಗಳನ್ನು 2019ರ ಅಕ್ಟೋಬರ್‌ನಲ್ಲಿಯೇ ಜಿಲ್ಲಾ ಕಚೇರಿಗಳ ಸಂಕೀರ್ಣದ ಮುಂಭಾಗ ನಿಲ್ಲಿಸಲಾಗಿತ್ತು. ಆದರೆ ಜನಪ್ರತಿನಿಧಿಗಳ ದಿನಾಂಕ ಹೊಂದಾಣಿಕೆ ಆಗದ ಕಾರಣಕ್ಕೆ ಉದ್ಘಾಟನೆಯನ್ನು ಮುಂದೂಡುತ್ತಲೇ ಬರಲಾಗಿತ್ತು.

ಗೂಂಡಾ ರಾಜಕಾರಣ: ನಳಿನ್‌ಕುಮಾರ್ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರ ಮೇಲೆ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಮತ್ತು ವಿಧಾನಪರಿಷತ್ ಸದಸ್ಯ ಎಸ್.ರವಿ ಹಲ್ಲೆಗೆ ಮುಂದಾಗಿರುವುದು ಗೂಂಡಾ ರಾಜಕಾರಣಕ್ಕೆ ನಿದರ್ಶನ. ಈ ಘಟನೆ ಖಂಡನೀಯ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ತಿಳಿಸಿದ್ದಾರೆ.



ನಳೀನ್ ಕುಮಾರ್

ಈ ಕುರಿತು ಹೇಳಿಕೆ ನೀಡಿರುವ ಅವರು, 'ಕಾಂಗ್ರೆಸಿಗರು ಪ್ರಜಾಪ್ರಭುತ್ವಕ್ಕೆ ಅವಮಾನಿಸುವ ರೀತಿ ತೋಳ್ಬಲದ ರಾಜಕೀಯ ಪ್ರದರ್ಶಿಸಿದ್ದಾರೆ. ಇದಕ್ಕೆ ಮುಂದಿನ ದಿನಗಳಲ್ಲಿ ಜನರು ಪಾಠ ಕಲಿಸಲಿದ್ದಾರೆ ಎಂದು ಕಿಡಿಕಾರಿದ್ದಾರೆ.

'ಕಾಂಗ್ರೆಸ್‌ನ ಈ ಗೂಂಡಾಗಿರಿ ಸಹಿಸಲಾಗುವುದಿಲ್ಲ ಮತ್ತು ರಾಜ್ಯವೇ ತಮ್ಮ ಜಹಗೀರ್ ಎಂದು ಪಾಳೆಗಾರಿಕೆ ನಡೆಸಲು ರಾಜ್ಯದ ಜನ ಬಿಡುವುದಿಲ್ಲ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟ್ವೀಟ್ ಮಾಡಿದ್ದಾರೆ.

'ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಹೀಗೆ ರಾಜಕೀಯ ಶಕ್ತಿ ಪ್ರದರ್ಶನ ಅಥವಾ ತೋಳ್ಬಲಕ್ಕೆ ಮುಂದಾದರೆ ತಕ್ಕ ಶಾಸ್ತಿ ಮಾಡುತ್ತಾರೆ ಎಂಬ ಎಚ್ಚರಿಕೆ ಅಗತ್ಯ. ಡಿ.ಕೆ.ಸುರೇಶ್ ಮತ್ತು ಎಸ್.ರವಿ ಸಚಿವರ ಮೇಲೆ ಹಲ್ಲೆಗೆ ಮುಂದಾಗಿದ್ದು ಖಂಡನೀಯ' ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಹೇಳಿದ್ದಾರೆ.

ವರದಿ ಕೇಳಿದ್ದೇನೆ: ಗೃಹ ಸಚಿವ ಆರಗ

'ಸಚಿವರ ಮೇಲೆ ಕಾಂಗ್ರೆಸ್ ನಾಯಕರ ಅನಾಗರಿಕ ವರ್ತನೆಯನ್ನು ಖಂಡಿಸುತ್ತೇನೆ. ಕಾಂಗ್ರೆಸ್ ನಾಯಕರ ಇಂದಿನ ದುಂಡಾವರ್ತನೆ ಜನ ಸಹಿಸುವುದಿಲ್ಲ. ಈ ಘಟನೆಯ ಬಗ್ಗೆ ಜಿಲ್ಲಾ ಪೊಲೀಸರಿಂದ ವರದಿ ಕೇಳಿದ್ದೇನೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

'ಮುಖ್ಯಮಂತ್ರಿ ಬದಲಾವಣೆ ಬರೀ ಊಹಾಪೋಹ'

ಸಿಂಧನೂರು (ರಾಯಚೂರು): 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬದಲಾವಣೆ ಕೇವಲ ಊಹಾಪೋಹ. ರಾಜ್ಯ ಬಿಜೆಪಿಯಲ್ಲಿ ಅರಾಜಕತೆ ಸೃಷ್ಟಿಸಲು ಕಾಂಗ್ರೆಸ್ ನಾಯಕರು ಈ ರೀತಿ ಸುಳ್ಳು ಸುದ್ದಿಗಳನ್ನು ಹರಡಿಸುತ್ತಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು, '2023ರ ಚುನಾವಣೆಯವರೆಗೂ ಬೊಮ್ಮಾಯಿ ಅವರೇ ರಾಜ್ಯದ ಮುಖ್ಯಮಂತ್ರಿ. ಸುಳ್ಳು ಸುದ್ದಿಗಳನ್ನೇ ಜೀವಂತವಾಗಿಡುವುದು ಕಾಂಗ್ರೆಸ್ ಪಕ್ಷದ ರಾಜಕೀಯ ಷಡ್ಯಂತ್ರ. ಕೆ.ಎಸ್. ಈಶ್ವರಪ್ಪ ಅವರೂ ಪ್ರಸ್ತುತ ಸಿ.ಎಂ ಬದಲಾವಣೆ ಕುರಿತು ಹೇಳಿಲ್ಲ' ಎಂದರು.

'ಸಂಕ್ರಾಂತಿ ನಂತರ ರಾಜ್ಯ ಸರ್ಕಾರದ ಸಂಪುಟದಿಂದ ಕೆಲವು ಸಚಿವರನ್ನು ಕೈಬಿಡುವ ವಿಚಾರ ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಬಿಟ್ಟದ್ದು. ಈ ಬಗ್ಗೆ ಯತ್ನಾಳ ಹೇಳಿಕೆ ಸಲ್ಲದು' ಎಂದೂ ಹೇಳಿದರು.

ಸಂಪುಟ ಪುನಾರಚನೆ ಚರ್ಚೆ ನಡೆದಿದೆ: ಸಚಿವ

ಹಾಸನ: 'ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಚರ್ಚೆ ಇಲ್ಲ. ಆದರೆ ಸಂಪುಟ ಪುನಾರಚನೆ ಕುರಿತು ಚರ್ಚೆ ನಡೆದಿದೆ' ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣ ಸ್ವಾಮಿ ತಿಳಿಸಿದರು.

ಸಕಲೇಶಪುರದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪುನಾರಚನೆ ಯಾವಾಗ ಎಂದು ಹೈಕಮಾಂಡ್ ನಿರ್ಧರಿಸಲಿದೆ. ರಾಜ್ಯ ರಾಜಕೀಯದಲ್ಲಿ ಮೂಗು ತೂರಿಸುವುದೂ ಇಲ್ಲ' ಎಂದು ಹೇಳಿದರು.

'ರಾಮನಗರ ಅಭಿವೃದ್ಧಿಗೆ ನನ್ನದೇ ದೊಡ್ಡ ಕೊಡುಗೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಮನಗರ ಅಭಿವೃದ್ಧಿಗೆ ದೊಡ್ಡ ಕೊಡುಗೆ ನೀಡಿದ್ದು ನಾನು. ಆದರೆ, ವೇದಿಕೆ ಮೇಲೆ ಕಾಂಗ್ರೆಸ್, ಬಿಜೆಪಿ ಮುಖಂಡರು ಕಚ್ಚಾಡುತ್ತಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ದೂರಿದರು.

ಕುಮಾರಸ್ವಾಮಿ

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಮನಗರ ಜಿಲ್ಲೆ ಮಾಡಿದ್ದು ನಾನು. 2006ರಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಹೈಟೆಕ್ ಆಸ್ಪತ್ರೆ, ನರ್ಸಿಂಗ್ ಕಾಲೇಜು ನಿರ್ಮಾಣಕ್ಕೆ ಚಾಲನೆ ನೀಡಿ ಹಣ ಬಿಡುಗಡೆ ಮಾಡಿದ್ದೆ. ಬಿಜೆಪಿ ಸರ್ಕಾರದಿಂದ ಕೆಲಸ ನಡೆಯಲಿಲ್ಲ. ಕಾಂಗ್ರೆಸ್ ಕೂಡ ಏನೂ ಮಾಡಲಿಲ್ಲ' ಎಂದು ಟೀಕಿಸಿದರು.

'2012ರಲ್ಲಿ ಕಾಂಗ್ರೆಸ್ ನಡಿಗೆ ಕೃಷ್ಣ ಕಡೆಗೆ ಯಾತ್ರೆ ಮಾಡಿ ಏನು ಸಾಧನೆ ಮಾಡಿದರು? ಮೇಕೆದಾಟು ಪಾದಯಾತ್ರೆ ಮಾತ್ರವಲ್ಲ; ಇನ್ನೂ ನೂರು ಪಾದಯಾತ್ರೆ ಮಾಡಲಿ. ನನಗೇನೂ ಆತಂಕವಿಲ್ಲ. ಆದರೆ, ಓಮೈಕ್ರಾನ್ ಹೆಚ್ಚುತ್ತಿರುವ ಕಾಲಘಟ್ಟದಲ್ಲಿ ಕಾಂಗ್ರೆಸ್ ಸ್ವಾರ್ಥಕ್ಕಾಗಿ ಪಾದಯಾತ್ರೆ ಅಗತ್ಯವಿದೆಯೇ?' ಎಂದು ಪ್ರಶ್ನಿಸಿದರು.

'ರಾಜ್ಯದ ನೀರಾವರಿ ಯೋಜನೆಗಳಿಗೆ ದೇವೇಗೌಡರ ಕೊಡುಗೆ ದೊಡ್ಡದು. ಐದು ನೀರಾವರಿ ಯೋಜನೆಗಳಿಗೆ ಸಂಬಂಧಿಸಿ ನಾನು ರೂಪಿಸಿದ ಕಾರ್ಯಕ್ರಮಗಳ ಪೈಕಿ ಮೇಕೆದಾಟು ಕೂಡ ಒಂದು. ಅದನ್ನು ಕಾಂಗ್ರೆಸ್ ಈಗ ಕೈಗೆತ್ತಿಕೊಂಡಿದೆ. ಅದು ಹೈಜಾಕ್ ಆಗಿದೆ ಎಂದು ಹೇಳುವುದಿಲ್ಲ' ಎಂದರು.

'ಸಚಿವ ಅಶ್ವತ್ಥನಾರಾಯಣಗೂ ರಾಮನಗರಕ್ಕೂ ಏನು ಸಂಬಂಧ?'

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಮನಗರಕ್ಕೂ, ಸಚಿವ ಅಶ್ವತ್ಥನಾರಾಯಣ ಅವರಿಗೂ ಏನು ಸಂಬಂಧ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಶಿವಕುಮಾರ್

'ಅಲ್ಲಿಗೆ ಸುಳ್ಳು ಹೇಳಲು ಹೋಗಿರಬೇಕು. ಅಲ್ಲಿನ ವಿಚಾರ ಮಾತನಾಡಲು ಅಶ್ವತ್ಥನಾರಾಯಣ ಯಾರು? ನಮ್ಮನ್ನು ಇದುವರೆಗೆ ಸೌಜನ್ಯಕ್ಕೂ ಮಾತನಾಡಿಸಿಲ್ಲ. ಅವರೇನು ಅಭಿವೃದ್ಧಿ ಕೆಲಸ ಮಾಡಿದ್ದಾರೆ ಎಂದು ಹೇಳಲಿ' ಎಂದು ಸವಾಲೆಸೆದರು.

'ರಾಜಕೀಯ ಏನೇ ಇರಲಿ ಎಚ್.ಡಿ.ಕುಮಾರಸ್ವಾಮಿ ರಾಮನಗರವನ್ನು ಜಿಲ್ಲೆ ಮಾಡಿದರು. ಜಿಲ್ಲಾ ಕೇಂದ್ರದಲ್ಲಿ ಒಂದಷ್ಟು ಕಟ್ಟಡ ಕಟ್ಟಿಸಿದ್ದರು. ಆದರೆ, ಅಲ್ಲಿ ಪ್ರತಿಮೆಗಳನ್ನು ನಿರ್ಮಿಸಿದ್ದು ನಾವು' ಎಂದರು.

'ವೃಷಭಾವತಿ ನದಿಯನ್ನು ಸ್ವಚ್ಛಗೊಳಿಸಿದ್ದರೆ ಹೇಳಲಿ. ಯಾವುದಾದರೂ ಕಟ್ಟಡ ಕಟ್ಟಿಸಿದ್ದರೆ ತೋರಿಸಲಿ. ಕೋವಿಡ್‌ನಿಂದ ಮೃತಪಟ್ಟವರಿಗೆ ಪರಿಹಾರವನ್ನಾದರೂ ನೀಡಿದ್ದರೆ ತಿಳಿಸಲಿ' ಎಂದು ಹೇಳಿದರು.

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಸದಸ್ಯರು ಎಐಯುಟಿಯುಸಿ ಸಂಘಟನೆ ನೇತೃತ್ವದಲ್ಲಿ ಧಾರವಾಡದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಸರ್ವಾಧ್ಯಕ್ಷರಾಗಿ ಡಾ.ಬಸವಲಿಂಗ ಪಟ್ಟದ್ದೇವರು ಆಯ್ಕೆ

ಭಾಲ್ಕಿ (ಬೀದರ್ ಜಿಲ್ಲೆ): ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ದಶಮಾನೋತ್ಸವ ಸಂಭ್ರಮದ ರಾಜ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಅನುಭವ ಮಂಟಪದ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದ್ದೇವರನ್ನು ಆಯ್ಕೆ ಮಾಡಲಾಗಿದೆ ಎಂದು ರಾಜ್ಯ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ, ಜಿಲ್ಲಾ ಘಟಕದ ಅಧ್ಯಕ್ಷ ಸಂಗಮೇಶ ಎನ್. ಜವಾದಿ ತಿಳಿಸಿದ್ದಾರೆ.

ಡಾ.ಬಸವಲಿಂಗ ಪಟ್ಟದ್ದೇವರು

'ಹುಂಡಿ ಹಣ ಚರ್ಚ್, ಮಸೀದಿ ಅಭಿವೃದ್ಧಿಗೆ ಏಕೆ ಬಳಸಬೇಕು?'

ಮೈಸೂರು: 'ಹಿಂದೂಗಳು ದೇಗುಲಕ್ಕೆ ನೀಡುವ ಹರಕೆ ಕಾಣಿಕೆಯನ್ನು ಆ ದೇಗುಲದ ಅಭಿವೃದ್ಧಿಗೇ ಬಳಸಬೇಕು. ಅದಕ್ಕೆ ಯಾವ ದೊಣ್ಣೆ ನಾಯಕರ ಅಪ್ಪಣೆ ಬೇಕು? ಹುಂಡಿ ಹಣವನ್ನು ಚರ್ಚ್, ಮಸೀದಿ ಅಭಿವೃದ್ಧಿಗೆ ಏಕೆ ಬಳಸಬೇಕು' ಎಂದು ಸಂಸದ ಪ್ರತಾಪಸಿಂಹ ಪ್ರಶ್ನಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಊರೂರಲ್ಲಿ, ನಾಲ್ವರು ಕ್ರೈಸ್ತರು ಇರುವೆಡೆ ಭವ್ಯವಾದ ಚರ್ಚ್ ನಿರ್ಮಿಸಲಾಗುತ್ತಿದೆ. ಅವರಿಗೆ ದುಡ್ಡು ಎಲ್ಲಿಂದ ಬರುತ್ತಿದೆ? ದೇಗುಲಗಳಲ್ಲಿ ಸಂಗ್ರಹವಾದ ಹಣವನ್ನು ಏಕೆ ಚರ್ಚ್ ಅಭಿವೃದ್ಧಿಗೆ ಕೊಡಬೇಕು? ಮಸೀದಿ ನಿರ್ಮಾಣಕ್ಕೆ, ಹಜ್ ಯಾತ್ರೆಗೆ, ವಕ್ಫ್ ಬೋರ್ಡ್‌ಗೆ ದೇಗುಲದ ಹಣವನ್ನೇಕೆ ನೀಡಬೇಕು' ಎಂದು ಕೇಳಿದರು.

ಸಂಕ್ಷಿಪ್ತ ಸುದ್ದಿ

ಶಾಲೆ ಮುಚ್ಚಬೇಡಿ: ಖಾಸಗಿ ಆಡಳಿತ ಮಂಡಳಿಗಳ ಆಗ್ರಹ

ಬೆಂಗಳೂರು: 'ರಾಜ್ಯದಲ್ಲಿ ಕೊರೊನಾ ರೂಪಾಂತರಿ ಸೋಂಕು ಓಮೈಕ್ರಾನ್ ಪ್ರಕರಣಗಳು ಹೆಚ್ಚುತ್ತಿರುವ ಭೀತಿಯಲ್ಲಿ ಆತುರದಿಂದ ಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು ತೆಗೆದುಕೊಳ್ಳಬಾರದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘಟನೆಗಳು ಮನವಿ ಸಲ್ಲಿಸಿವೆ.

'ಕೋವಿಡ್ ಮೊದಲ ಮತ್ತು ಎರಡನೇ ಅಲೆಯ ಸಂದರ್ಭದಲ್ಲಿ ಸುಮಾರು 20 ತಿಂಗಳು ವಿದ್ಯಾರ್ಥಿಗಳು ಕಲಿಕೆಯಿಂದ ವಂಚಿತರಾಗಿದ್ದರು. ಇದೀಗ ಮತ್ತೆ ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದು, ಅದೇ ನೆಪ ಮುಂದಿಟ್ಟು ಶಾಲೆಗಳನ್ನು ಮುಚ್ಚಿದರೂ ಮಕ್ಕಳು ತಮ್ಮ ಪಾಲಕರ ಜೊತೆ ಸಭೆ, ಸಮಾರಂಭಗಳಲ್ಲಿ ಭಾಗವಹಿಸುತ್ತಾರೆ. ಪೋಷಕರು ತಮ್ಮ ಮಕ್ಕಳನ್ನು ಅವೈಜ್ಞಾನಿಕ, ಅನಧಿಕೃತ ಕೋಚಿಂಗ್ ಕ್ಲಾಸ್‌ಗಳಿಗೆ ತಳ್ಳುತ್ತಾರೆ. ಇದರಿಂದ ಏನೂ ಸಾಧಿಸಿದಂತಾಗದು' ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘದ (ರುಪ್ಸ) ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಮನವಿ ಸಲ್ಲಿಸಿದ್ದಾರೆ.

'ಕೋವಿಡ್ ಸೋಂಕು ತಡೆಗಟ್ಟಲು ಎಲ್ಲ ಕ್ರಮಗಳನ್ನು ತೆಗೆದುಕೊಂಡು, ಅನಿವಾರ್ಯವಾದರೆ ಮಾತ್ರ ಶಿಕ್ಷಣ ಸಂಸ್ಥೆಗಳನ್ನು ಮುಚ್ಚುವ ಬಗ್ಗೆ ಸರ್ಕಾರ ಚಿಂತಿಸಬೇಕು' ಎಂದು ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟಗಳ (ಕ್ಯಾಮ್ಸ್) ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಮನವಿ ಸಲ್ಲಿಸಿದ್ದಾರೆ.

15–18 ವಯಸ್ಸಿನ ಮಕ್ಕಳಿಗೆ ಕೋವಿಡ್ ಲಸಿಕೆಗೆ ಚಾಲನೆ

ಶ್ರೀನಗರ: 15ರಿಂದ 18 ವಯೋಮಾನದ ಮಕ್ಕಳಿಗೆ ಕೋವಿಡ್ ಲಸಿಕೆ ನೀಡುವ ಅಭಿಯಾನಕ್ಕೆ ಜಮ್ಮು ಮತ್ತು ಕಾಶ್ಮೀರ ಆಡಳಿತವು ಸೋಮವಾರ ಚಾಲನೆ ನೀಡಿದೆ.

ಶ್ರೀನಗರದ ಕೋಠಿಬಾಗ್‌ನ ಬಾಲಕಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಅಭಿಯಾನಕ್ಕೆ ಜಮ್ಮು ಮತ್ತು ಕಾಶ್ಮೀರದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ವಿವೇಕ್ ಭಾರಧ್ವಾಜ್ ಅವರು ಚಾಲನೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರಾಡಳಿತ ಪ್ರದೇಶ ವ್ಯಾಪ್ತಿಯ 20 ಜಿಲ್ಲೆಗಳ 822 ಕೇಂದ್ರಗಳಲ್ಲಿ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. 8.33 ಲಕ್ಷ ಮಕ್ಕಳಿಗೆ (15ರಿಂದ 18 ವರ್ಷ) ಲಸಿಕೆ ನೀಡಲು ಉದ್ದೇಶಿಸಲಾಗಿದ್ದು, ಪ್ರತಿದಿನ ಒಂದು ಲಕ್ಷ ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ' ಎಂದು ಅವರು ಹೇಳಿದರು.

ಕೋವಿಡ್ ನೆಪದಲ್ಲಿ ಪಾದಯಾತ್ರೆ ತಡೆಯಲು ಹುನ್ನಾರ: ಸಿದ್ದರಾಮಯ್ಯ

ಜೈಲಿಗೆ ಕಳುಹಿಸಿದರೂ ಪಾದಯಾತ್ರೆ ನಡೆಸಿಯೇ ಸಿದ್ಧ: ಶಿವಕುಮಾರ್

ಪ್ರಜಾವಾಣಿ ವಾರ್ತೆ

ಮೈಸೂರು: 'ಮೇಕೆದಾಟು ಪಾದಯಾತ್ರೆಯನ್ನು ಕೋವಿಡ್ ನೆಪದಲ್ಲಿ ತಡೆಯಲು ಬಿಜೆಪಿ ಸರ್ಕಾರ ಹುನ್ನಾರ ನಡೆಸಿದೆ'. ಆದರೆ, ಪಾದಯಾತ್ರೆಯನ್ನು ತಡೆಯಲು ಆಗಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೋಮವಾರ ಇಲ್ಲಿ ಗುಡುಗಿದರು.

'ಲಾಕ್‌ಡೌನ್ ಜೊತೆಗೆ, ಬೇರೆ ಏನೇ ಮಾಡಲಿ. ಜೈಲಿಗೆ ಕಳುಹಿಸಿದರೂ ಪರವಾಗಿಲ್ಲ ಪಾದಯಾತ್ರೆ ನಡೆಸಿಯೇ ಸಿದ್ಧ. ಕೋವಿಡ್ ನಿಯಮ ಉಲ್ಲಂಘಿಸಿದ್ದೇನೆಂದು ಈಗಾಗಲೇ ನನ್ನ ಮೇಲೆ ಮೊಕದ್ದಮೆ ದಾಖಲಾಗಿದ್ದು, ಸಮನ್ಸ್ ಕೂಡ ಬಂದಿದೆ. ಕೋವಿಡ್ ಇದ್ದರೂ ಮದುವೆಯಲ್ಲಿ ಪಾಲ್ಗೊಂಡು ಮಾರ್ಗಸೂಚಿ ಉಲ್ಲಂಘಿಸಿರುವ ಮುಖ್ಯಮಂತ್ರಿ, ಮಂತ್ರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ' ಎಂದು ಶಿವಕುಮಾರ್ ಜಂಟಿ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

'ಮುಂಜಾಗ್ರತೆ ಕ್ರಮಕೈಕೊಂಡು ಪಾದಯಾತ್ರೆ ನಡೆಸುತ್ತೇವೆ. ಒಂದು ಲಕ್ಷ ಮಾಸ್ಕ್ ತರಿಸಲಿದ್ದೇವೆ. 10 ವೈದ್ಯಕೀಯ ತಂಡ ಇರಲಿದ್ದು, 100 ವೈದ್ಯರು ಪಾಲ್ಗೊಳ್ಳುತ್ತಾರೆ. ಸ್ವಚ್ಛತೆಗೆ ಆದ್ಯತೆ ನೀಡಲಾಗುವುದು' ಎಂದು ತಿಳಿಸಿದರು.

'ಕುಮಾರಸ್ವಾಮಿ ಅವರ ಹಿತವಚನ ಜೀರ್ಣಿಸಿಕೊಳ್ಳುವ ಶಕ್ತಿ ನನಗಿದೆ. ನಮ್ಮದು ನೀರಿಗಾಗಿ ನಡೆಯುತ್ತಿರುವ ಹೋರಾಟ. ಯಾವುದೋ ಪ್ರಾಂತ್ಯದ ಮೇಲಿನ ಹಿಡಿತಕ್ಕಾಗಿ ಅಲ್ಲ. ನಾನು ಮೈಸೂರು ಭಾಗದವನು ನಿಜ. ಆದರೆ, ಹಾಸನದಿಂದ ಬಂದವರನ್ನು ರಾಮನಗರದ ಜನ ಮುಖ್ಯಮಂತ್ರಿ, ಪ್ರಧಾನ ಮಂತ್ರಿ ಮಾಡಿದರು. ಪಂಚೆ ತೊಟ್ಟ ಮಾತ್ರಕ್ಕೆ ರೈತರ ಮಗ ಎಂದು ಹೇಳಿಕೊಳ್ಳಲು ಆಗುವುದಿಲ್ಲ' ಎಂದರು.

ಸಿದ್ದರಾಮಯ್ಯ ಮಾತನಾಡಿ, 'ಕೋವಿಡ್ ನಿಯಮ ಮುರಿಯುವವರು ಬಿಜೆಪಿಯವರೇ. ಉತ್ತರ ಪ್ರದೇಶದ ಚುನಾವಣೆ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ನಡೆಸುತ್ತಿರುವ ಸಭೆಗಳಲ್ಲಿ ಸೇರುವ ಜನ ಮಾಸ್ಕ್ ಹಾಕಿಕೊಂಡು ಬರುತ್ತಿದ್ದಾರೆಯೇ?' ಎಂದು ಹರಿಹಾಯ್ದರು.

'ಎರಡೂವರೆವರ್ಷಗಳಲ್ಲಿಬಿಜೆಪಿಯ 25 ಸಂಸದರಾಗಲಿ, ಮುಖ್ಯಮಂತ್ರಿಯಾಗಲಿ, ಸಚಿವರಾಗಲಿ ಮೇಕೆದಾಟು ಯೋಜನೆ ಜಾರಿಗೆ ಅನುಮತಿ ಕೊಡಿ ಎಂದು ಕೇಂದ್ರ ಸರ್ಕಾರದ ಬಳಿ ಹೋಗಿ ಕೇಳಿದ್ದಾರೆಯೇ' ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿ ನಂತರ, ಮೇಕೆದಾಟು ಯೋಜನೆಗಾಗಿ ನಗರದಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಜನಾಂದೋಲನ ಸಮಾವೇಶದ ಪಾದಯಾತ್ರೆಯಲ್ಲಿ ಐದು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಪಾಲ್ಗೊಂಡಿದ್ದರು.

'ಸರ್ಕಾರ ಅಸ್ಥಿರಗೊಳಿಸಲ್ಲ'

'2023ರ ಏಪ್ರಿಲ್‌ನಲ್ಲೇ ವಿಧಾನಸಭೆ ಚುನಾವಣೆ ನಡೆಯಲೆಂದು ನಾವು ಬಯಸುತ್ತೇವೆ. ಈಗ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಬಿಜೆಪಿಯಲ್ಲಿ ಚರ್ಚೆ ನಡೆಯುತ್ತಿದೆ. ಒಂದು ವೇಳೆ ಇವರ ಕಚ್ಚಾಟದಿಂದ ಸರ್ಕಾರ ಪತನವಾಗಿ ಚುನಾವಣೆ ಬಂದರೆ ಎದುರಿಸಲು ಸಿದ್ಧರಿದ್ದೇವೆ. ಆದರೆ, ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸುವ ಕಾರ್ಯಕ್ಕೆ ಕಾಂಗ್ರೆಸ್ ಮುಂದಾಗುವುದಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

'ಇದೊಂದು ಎಮ್ಮೆ ಚರ್ಮದ ಸರ್ಕಾರ. ಇವರಿಗೆ ಬಡವರ ಬಗ್ಗೆ ಕಾಳಜಿ ಇಲ್ಲ. ಬಿಜೆಪಿ ಆಡಳಿತ ನಡೆಸುತ್ತಿದ್ದರೂ ಜನ ಕಾಂಗ್ರೆಸ್ ಪಕ್ಷವನ್ನು ವಿವಿಧ ಚುನಾವಣೆಗಳಲ್ಲಿ ಗೆಲ್ಲಿಸುತ್ತಿದ್ದಾರೆ' ಎಂದು ಶಿವಕುಮಾರ್ ತಿಳಿಸಿದರು.

'ಕಾಂಗ್ರೆಸ್ ನಾಯಕರು ಮೈಮೇಲೆ ದೆವ್ವ ಬಂದವರಂತೆ ವರ್ತಿಸುತ್ತಿದ್ದಾರೆ'

ಬೆಳಗಾವಿ: 'ಮೇಕೆದಾಟು ಯೋಜನೆ ವಿಚಾರವಾಗಿ ಸ್ಫೋಟಕ ಮಾಹಿತಿ ನೀಡುವುದಾಗಿ ಹೇಳಿದ್ದೇ ತಡ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ನಾಯಕರು ಮೈಮೇಲೆ ದೆವ್ವ ಬಂದವರಂತೆ ವರ್ತಿಸುತ್ತಿದ್ದಾರೆ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಸೋಮವಾರ ವ್ಯಂಗ್ಯವಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್‌ನ ಪುಡಿ ರಾಜಕಾರಣಿಗಳಿಗೆ ಉತ್ತಮ ಸಂಸ್ಕಾರವಿಲ್ಲ. ನನ್ನ ವಿರುದ್ಧ ಮನಬಂದಂತೆ ಮಾತನಾಡುತ್ತಿದ್ದಾರೆ. ಆದರೆ, ನಾನು ಹೊಣೆಗೇಡಿತನದಿಂದ ಮಾತನಾಡಲ್ಲ. ಮೇಕೆದಾಟು ವಿಷಯ ನ್ಯಾಯಾಲಯದಲ್ಲಿದೆ. ತೀರ್ಪು ಪ್ರಕಟವಾದ ನಂತರ ದಾಖಲೆ ಬಿಡುಗಡೆಗೊಳಿಸುತ್ತೇನೆ' ಎಂದು ಸವಾಲೆಸೆದರು.

ಮೇಕೆದಾಟು ಯೋಜನೆ ಸಂಬಂಧ ತಮಿಳುನಾಡಿನ ವಿರುದ್ಧ ಹೋರಾಡಿ ಅನುಷ್ಠಾನಗೊಳಿಸಬೇಕಾಗಿದೆ. ರಾಜಕಾರಣ ಬಿಟ್ಟು ಸರ್ಕಾರಕ್ಕೆ ಸಹಕಾರ ನೀಡಿ

ಜಗದೀಶ ಶೆಟ್ಟರ್, ಶಾಸಕ

ಮೇಕೆದಾಟು ಯೋಜನೆಯನ್ನು ಬಿಜೆಪಿ ಕಾರ್ಯಗತಗೊಳಿಸಲಿದೆ ಎಂದು ತಿಳಿದು ಕಾಂಗ್ರೆಸ್ ನಾಯಕರು ಪಾದಯಾತ್ರೆ ನಡೆಸಿ, ರಾಜಕೀಯ ಲಾಭಗಳಿಸಲು ಹೊರಟಿದ್ದಾರೆ

ಬಿ.ಸಿ.ಪಾಟೀಲ, ಕೃಷಿ ಸಚಿವ

> ಮನಸ್ಸಿನಲ್ಲಿ ಮೂಡಿದ ಅನಿಸಿಕೆಗಳನ್ನು ಜಗತ್ತಿಗೆ ತೋರಿಸುವ ಕನ್ನಡಿಯೇ ನಾವಾಡುವ ಮಾತು. ವ್ಯಕ್ತಿಯೊಬ್ಬನ ವಿಚಾರದ ಸ್ವಚ್ಛತೆ, ಭಾವನೆಗಳ ಘನತೆ ಮತ್ತು ಅವನ ಚಾರಿತ್ರ್ಯದ ನಿರ್ಮಲತೆ ಅವನ ಮಾತಿನಲ್ಲಿ ಪ್ರತಿಫಲನ ಹೊಂದುತ್ತದೆ.

ಮಾತಿನಿಂದಲೇ ಮಿತ್ರರು...

ಪ್ರಜ್ಞಾ ಮತ್ತಿಹಳ್ಳಿ

ನಮ್ಮ ಪರಿಚಯದ ಒಬ್ಬ ಮಹಿಳೆ ತನ್ನ ಸಂಪರ್ಕಕ್ಕೆ ಬರುವ ಎಲ್ಲರೊಂದಿಗೆ ತುಂಬಾ ಚೆನ್ನಾಗಿ ಹರಟುತ್ತಿದ್ದರು. ಅವರ ಕಷ್ಟ-ಸುಖ ವಿಚಾರಿಸಿ ಕೈಲಾದ ನೆರವು ಕೊಡುತ್ತಿದ್ದರು. ಎಷ್ಟೇ ಅವಸರವಿದ್ದರೂ ಹಾಲಿನವನು, ಪೇಪರಿನವನು, ತರಕಾರಿಯಾಕೆ, ಅಂಗಡಿಯಾತ - ಹೀಗೆ ಅವರಿವರೆನ್ನದೇ ಎಲ್ಲರನ್ನೂ ಮಾತಾಡಿಸುತ್ತಿದ್ದರು. ಲಾಕ್‌ಡೌನ್ ಆದಾಗ ಅವರ ಮನೆಯವರೆಲ್ಲರೂ ಬೇರೆ ಊರುಗಳಿಗೆ ಹೋದವರು ಅಲ್ಲಿಯೇ ಉಳಿಯುವಂತಾಗಿ ಈಕೆ ಒಂಟಿಯಾಗಿ ಬಿಟ್ಟರು. ಆದರೆ ಆಕೆಯ ಸಂಪರ್ಕಜಾಲದಿಂದಾಗಿ ಪ್ರತಿಯೊಬ್ಬರೂ ಆಕೆಯನ್ನು ಹುಡುಕಿಕೊಂಡು ಬಂದು ನೆರವಾದರು. ಎರಡು ತಿಂಗಳುಗಳವರೆಗೂ ಆಕೆಗೆ ಚೂರೂ ಕಷ್ಟವಾಗದಂತೆ ಜನಬೆಂಬಲ ದೊರಕಿತು. ಸಂತೋಷದಿಂದ ಆಕೆ ಉದ್ಗರಿಸಿದರು: 'ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು'.

ಕಳೆದ ನಾಲ್ಕೈದು ದಿನಗಳಿಂದ ನಾವೆಲ್ಲರೂ ನಮ್ಮ ಪರಿಚಯದವರಿಗೆ ಹೊಸ ವರ್ಷದ ಶುಭಾಶಯಗಳನ್ನು ತಿಳಿಸುತ್ತಿದ್ದೇವೆ. ಇನ್ನು ಹತ್ತು ದಿನ ಕಳೆದ ನಂತರ 'ಎಳ್ಳು ಬೆಲ್ಲ ತಿಂದು ಒಳ್ಳೊಳ್ಳೆ ಮಾತಾಡೋಣ' ಎಂದು ಹಾರೈಸಿಕೊಳ್ಳುತ್ತೇವೆ. ಏನಿದು ಒಳ್ಳೆಯ ಮಾತು? ಎದುರಿಗಿನ ವ್ಯಕ್ತಿಗೆ ಒಳ್ಳೆಯದನ್ನು ಬಯಸುವ ಮಾತೆ? ಎದುರಿಗಿನ ವ್ಯಕ್ತಿ ಒಳ್ಳೆಯ ಭಾವ ತಳೆಯುವಂತೆ ಮಾಡುವ ಮಾತೆ? ಅಥವಾ ಎದುರಿಗಿನ ವ್ಯಕ್ತಿಯನ್ನು ಒಳಗೊಂಡಂತೆ ಸಮಸ್ತ ಲೋಕದ ಒಳಿತಿಗಾಗಿ ಹಂಬಲಿಸುವ ಮಾತೆ?

ಇವೆಲ್ಲವೂ ಹೌದು. ನಾವು ಮನಸ್ಸಿನಲ್ಲಿ ಮೂಡಿದ ಅನಿಸಿಕೆಗಳನ್ನು ಜಗತ್ತಿಗೆ ತೋರಿಸುವ ಕನ್ನಡಿಯೇ ನಾವಾಡುವ ಮಾತು. ವ್ಯಕ್ತಿಯೊಬ್ಬನ ವಿಚಾರದ ಸ್ವಚ್ಛತೆ, ಭಾವನೆಗಳ ಘನತೆ ಮತ್ತು ಅವನ ಚಾರಿತ್ರ್ಯದ ನಿರ್ಮಲತೆ ಅವನ ಮಾತಿನಲ್ಲಿ ಪ್ರತಿಫಲನ ಹೊಂದುತ್ತದೆ.

ಸ್ವಾಮಿ ವಿವೇಕಾನಂದರ ಮಾತು ಕೇಳಿ ವಿಶ್ವಧರ್ಮ ಸಮ್ಮೇಳನದ ಸಮಸ್ತ ಪ್ರತಿನಿಧಿಗಳೂ ಕಿವಿಗಡಚಿಕ್ಕುವಂತೆ ಚಪ್ಪಾಳೆ ತಟ್ಟಿದರು. ಪ್ರತಿಯೊಬ್ಬನ ಮಾತು ಆತನ ವ್ಯಕ್ತಿತ್ವವನ್ನು ಕಾಣಿಸುತ್ತದೆ. ಮಾತಿನಲ್ಲಿ ಏನಿದೆ? ಮನುಷ್ಯನ ಮಾತಿನಲ್ಲಿ ಕೇವಲ ಶಬ್ದ ಇರುವುದಿಲ್ಲ. ಶಬ್ದದ ಜೊತೆಗೆ ಅರ್ಥ ಇರುತ್ತದೆ. ಆ ಅರ್ಥವು ಸೂಚಿಸುವ ಭಾವಪ್ರಪಂಚವಿರುತ್ತದೆ. ಸತ್ಯವಾನನ ಜೀವ ತೆಗೆಯಲು ಬಂದ ಯಮನನ್ನು ಹಿಂಬಾಲಿಸಿದ ಸಾವಿತ್ರಿ ತನ್ನ ಮಾತಿನಿಂದಲೇ ಅವನನ್ನು ಸೋಲಿಸುತ್ತಾಳೆ; ಪತಿಯ ಪ್ರಾಣವನ್ನು ಹಿಂದೆ ಪಡೆಯುತ್ತಾಳೆ. ಮಹಾತ್ಮ ಗಾಂಧಿಯವರು ಊರೂರಿಗೆ ಹೋಗಿ ಕರೆ ಕೊಟ್ಟೊಡನೆ ಅವರ ಮಾತು ಕೇಳಿದ ಜನರು

ಮನೆ ಬಿಟ್ಟು ಚಳವಳಿಗೆ ಧುಮುಕುತ್ತಿದ್ದರು. ದೇಶಪ್ರೇಮ ಉಕ್ಕೇರಿ ಒಡವೆ-ವಸ್ತುಗಳನ್ನು ದಾನ ಮಾಡುತ್ತಿದ್ದರು. ಮಾತು ಬಲ್ಲವನಿಗೆ ಜಗವೆಲ್ಲ ನೆಂಟರು ಎಂಬ ಒಂದು ಗಾದೆ. ಬಂಧುತ್ವಕ್ಕಾಗಿ ನಾವೇನು ಒಬ್ಬರಿಗೊಬ್ಬರಿಗೆ ಆಸ್ತಿ-ಹಣ ಕೊಟ್ಟುಕೊಳ್ಳಬೇಕಾಗಿಲ್ಲ; ಅವರ ಕಷ್ಟ-ಸುಖವನ್ನು ಕೇಳಿದರೂ ಸಾಕು ಅವರಿಗೆ ಎಷ್ಟೋ ನಿರಾಳವೆನಿಸುತ್ತದೆ. ಪ್ರೀತಿ ತುಂಬಿದ ಎರಡು ಮಾತು ನುಡಿದರೆ ಹಾಯೆನಿಸುತ್ತದೆ.

ವಿಶ್ವಾಸದ ನಾಲ್ಕು ಮಾತುಗಳು ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತವೆ. ಹಾಗೆಯೇ ಆಕ್ರೋಶದ ಒಂದು ನುಡಿ ಕೇಳಿದಾಗ ದ್ವೇಷ ಕೆರಳಿ ಕೊಲೆ-ಆತ್ಮಹತ್ಯೆಯಂತಹ ಪಾತಕಗಳು ನಡೆದಿವೆ. ವರಕವಿ ದ.ರಾ. ಬೇಂದ್ರೆಯವರು 'ಮಾತು ಮಾತು ಮಥಿಸಿ ಬಂದ ನಾದದ ನವನೀತ' ಎಂದರು. ಕಡೆದಾಗ ಬೆಣ್ಣೆ ಬರಬೇಕೆಂದರೆ ಮೊಸರಿನಲ್ಲಿ ಹೈನು ಅಥವಾ ಕೆನೆಯ ಅಂಶ ಚೆನ್ನಾಗಿರಬೇಕು. ಸಂಭಾಷಣೆ ಎನ್ನುವ ಮಂಥನದಿಂದ ಅತ್ಯುತ್ತಮ ಯೋಜನೆಯೊಂದು ಹುಟ್ಟಬೇಕೆಂದರೆ ಎರಡು ಮನಸ್ಸುಗಳೂ ನಿರ್ಮಲ ಅಂತಃಕರಣವನ್ನು ಹೊಂದಿರಬೇಕು. ನಮ್ಮ ನಾಡಿನ ಬಹಳಷ್ಟು ಉದ್ದಿಮೆಗಳ ಕನಸುಗಳು ಇಂತಹ ಸಂಭಾಷಣೆಯಲ್ಲಿಯೇ ಕಸುವು ಪಡೆದುಕೊಂಡು ಮೈತಾಳಿವೆ. ಚರಿತ್ರೆಯುದ್ದಕ್ಕೂ ಗಮನಿಸಿದರೆ ಸಂಧಾನವೇ ಇರಲಿ, ಸಂಗ್ರಾಮವೇ ಇರಲಿ, ಮಾತಿನಿಂದಲೇ ಸಂಭವಿಸಿವೆ. ಹಠದ, ಸಿಟ್ಟಿನ ದೊಡ್ಡ ದೊಡ್ಡ ಬೆಟ್ಟಗಳನ್ನು ಅನುನಯದ ಮಾತಿನಿಂದ ಕರಗಿಸಿದಾಗ ಕರುಣೆಯ ಹೊಳೆಯೇ ಹರಿದದ್ದು ಇತಿಹಾಸದಲ್ಲಿ ದಾಖಲಾಗಿದೆ. ಪರಿಣಾಮಕಾರಿಯಾದ ಮಾತನ್ನು ಮಾತಿಗೆ ಪೋಣಿಸುತ್ತ ವಾದ ಮಂಡಿಸಿದಾಗ ನೀಡಬೇಕಾದ ಗಲ್ಲುಶಿಕ್ಷೆಯೂ ರದ್ದಾದ ಪ್ರಕರಣಗಳಿವೆ. ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕನಾದ ಪರಮಾತ್ಮನಿಗೂ ಒಳ್ಳೆಯ ಮಾತುಗಳಿಂದ ಮಾಡುವ ಸ್ತುತಿ-ಸ್ತೋತ್ರಗಳೆಂದರೆ ಇಷ್ಟವಂತೆ. ಹಾಗಿದ್ದರೆ ಮನುಷ್ಯನಿಗೆ ಪ್ರೀತಿ-ಕಾಳಜಿ ತುಂಬಿದ ನುಡಿಗಳ ಅವಶ್ಯಕತೆ ಇರದಿರುತ್ತದೆಯೆ?

ದುಡುಕಿನ ಹೇಳಿಕೆಗಳಿಂದ ಅನೇಕರು ಹುದ್ದೆಗಳನ್ನೇ ಕಳೆದುಕೊಂಡಿದ್ದಾರೆ. ಆದ್ದರಿಂದ ಮಾತು ತುಟಿ ಮೀರುವುದಕ್ಕಿಂತಲೂ ಮೊದಲೇ ಅದರ ಪರಿಣಾಮದ ಕುರಿತು ಒಮ್ಮೆ ಆಲೋಚಿಸಿಕೊಳ್ಳುವುದು ಜಾಣರ ಲಕ್ಷಣ. ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು ಅನ್ನುತ್ತಾರೆ. ನಾವಿರುವ ದೇಶ-ಕಾಲ-ಸಂದರ್ಭಗಳನ್ನು ಸದಾ ನೆನಪಿನಲ್ಲಿಟ್ಟುಕೊಂಡು ನಮ್ಮ ಮಾತು ಉಂಟು ಮಾಡಬಹುದಾದ ಸಾಮಾಜಿಕ, ನೈತಿಕ ಪರಿಣಾಮಗಳನ್ನು ಊಹಿಸಿಕೊಂಡು ಶಬ್ದಗಳನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತ. ಸಂಭಾಷಣೆಯಲ್ಲಿ ಮಾತು ಎಂದರೆ ಅದು ಕೇವಲ ಶಬ್ದವಲ್ಲ, ಅದು ಧ್ವನಿಯ ಏರಿಳಿತ, ಶಾರೀರಿಕ ಚಲನೆ, ಅಂಗವಿನ್ಯಾಸ ಇವೆಲ್ಲವನ್ನೂ ಒಡಗೂಡಿದ ಒಂದು ಪ್ರಕ್ರಿಯೆಯಾಗಿದೆ. ಕೆಲವು ಸಂದರ್ಭಗಳಲ್ಲಿ ಒಂದು ಸ್ಪರ್ಶವೇ ಮಾತಿನ ಪರಿಣಾಮವನ್ನು ದಾಟಿಸಿಬಿಡಬಹುದು. ಆತ್ಮೀಯರ ಸಾವಿನಲ್ಲಿ ಒಂದು ಹಸ್ತಲಾಘವ ಅಥವಾ ಅಪ್ಪುಗೆ ಅಥವಾ ತಲೆಸವರುವಿಕೆಯೇ ಮೌನದಲ್ಲಿ ನಮ್ಮ ಸಾಂತ್ವನವನ್ನು ದಾಟಿಸುತ್ತವೆ. ಈ ಎಲ್ಲ ಕಾರಣಗಳಿಂದ ಮಾತಿಗೂ ಒಂದು ಪೂರ್ವ ತಯಾರಿಯಿದೆ ಎಂದಾಯಿತು.

ನಮ್ಮ ಮನಸ್ಸಿನ ಭಾವವನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸುವುದಕ್ಕೆ ಸೂಕ್ತವಾದ ಶಬ್ದಗಳ ಆಯ್ಕೆ, ಸಂದರ್ಭಕ್ಕೆ ಯೋಗ್ಯವಾದ ಧ್ವನಿಯ ಏರಿಳಿಸುವಿಕೆ, ಎದುರಿಗಿನ ವ್ಯಕ್ತಿಗೆ ಸಮರ್ಥವಾಗಿ ಅರ್ಥ ಮಾಡಿಸಲು ಅಗತ್ಯವಾದ ಹಾವಭಾವಗಳು ಇವೆಲ್ಲವನ್ನೂ ಆಯ್ಕೆ ಮಾಡಿಕೊಳ್ಳುವುದು ಬಹುಮುಖ್ಯವಾದ ಸಂಗತಿಗಳು. ❖

ಮಕ್ಕಳ ಆಟ-ಪಾಠ ನಮಗೂ ಜೀವನಪಾಠ

ರಮ್ಯಾ ಶ್ರೀಹರಿ

ಮನೆಯಂಗಳದ ಮಣ್ಣಿನಲ್ಲಿ ನೆಟ್ಟು ನೀರೆರೆದ ಬೀಜ ಮೊಳಕೆಯೊಡೆದು ಚಿಗುರಿ ಸಸಿಯಾಗುವುದನ್ನು ನೋಡುವ ಸುಖಕ್ಕಿಂತ ಮಿಗಿಲಾದ ಸುಖ ಬೇರೆ ಏನುಂಟು? ಸಸಿಯು ಬೆಳೆದು ಹಸಿರೆಲೆಗಳಿಂದ ಮೈತುಂಬಿ ನಳನಳಿಸುವುದನ್ನು ಕಣ್ತುಂಬಿಕೊಳ್ಳುವ ಆನಂದಕ್ಕೆ ಸರಿಸಾಟಿಯಾದುದು ಮತ್ತೇನಿದೆ? ಸುಮ್ಮನೆ ಹೂದೋಟದಲ್ಲಿ ಅರಳಿನಿಂತ ಹೂಗಳನ್ನು, ಹರಿಯುವ ನೀರನ್ನು, ನೀರೊಳಗೆ ಸರಿದಾಡುವ ಮೀನನ್ನು, ಸಾಕುಪ್ರಾಣಿ, ಪಕ್ಷಿಗಳನ್ನು ನೋಡುತ್ತಾ ಕುಳಿತಿದ್ದರೆ ಮನಸ್ಸು ಒಂದು ಧ್ಯಾನಸ್ಥ ಸ್ಥಿತಿಯನ್ನು ತಲುಪಿದೆಯೇನೋ ಎನಿಸುತ್ತದೆ. ಇಂಥದ್ದೇ ಶಾಂತಿ, ಸುಖ, ಆನಂದ ಎಳೆಯ ಮಕ್ಕಳನ್ನು ಕಂಡಾಗಲೂ ಆಗುವುದುಂಟು. ಈಗಷ್ಟೇ ಪ್ರಪಂಚಕ್ಕೆ ಕಣ್ತೆರೆಯುತ್ತಿರುವ ಶುಭ್ರತೆಯ ಮೂರ್ತರೂಪವಾದ ಎಳೆಮಗುವನ್ನು ಕೈಯಲ್ಲಿ ಹಿಡಿದುಕೊಂಡು ಎದೆಗಾನಿಸಿಕೊಳ್ಳುವ ಅನುಭವವನ್ನು ಮಾತಿನಲ್ಲಿ ಹೇಳಿದರೆ ಉಪಯೋಗವಿಲ್ಲ. ಎಂಥ ಗಹನವಾದ ಭಾವಶೂನ್ಯತೆಯನ್ನೂ ಸ್ವಲ್ಪವಾದರೂ ಕದಲಿಸಿ ಮನದಲ್ಲಿ ಸಣ್ಣ ಆಸೆಯ, ಭರವಸೆಯ ಬೆಳ್ಳಿಕಿರಣವನ್ನು ಮೂಡಿಸುವ ಚೈತನ್ಯ ಮಗುವಿನ ಮೃದು ಮೈಗೆ, ಅದರ ಹೂವಿನಂಥ ನಗುವಿಗೆ ಇದೆ.

> ಮಕ್ಕಳಿಗೆ ನಾವು ಏನೇನನ್ನೋ ಕಲಿಸಲು ಉತ್ಸಾಹ ಪಡುತ್ತೇವೆ. ಆದರೆ ಮಕ್ಕಳಿಂದಲೇ ನಾವು ಕಲಿಯಬೇಕಾದ್ದು ತುಂಬಾ...

ಚಿಕ್ಕ ಮಕ್ಕಳು ಪ್ರಕೃತಿಗೆ ತುಂಬಾ ಹತ್ತಿರವಾಗಿರುತ್ತಾರೆ. ಅವುಗಳ ಹಸಿವು, ನಿದ್ದೆ, ಆಟ, ಅಳು, ನಗು – ಯಾವುದೂ ದೊಡ್ಡವರ ದಿನಚರಿಗೆ, ನೀತಿ–ನಿಯಮಗಳಿಗೆ ಹೊಂದಿಕೊಳ್ಳುವುದಿಲ್ಲ. ಬದುಕನ್ನು ಅದು ಬಂದ ಹಾಗೇ ಸ್ವೀಕರಿಸಬೇಕು – ಎನ್ನುವುದರ ನಿಜಾರ್ಥವನ್ನು ಹೊಸದಾಗಿ ತಾಯಿ/ತಂದೆ ಆದವರನ್ನು ಕೇಳಿ ನೋಡಬೇಕು. ಹಗಲೆಲ್ಲ ಮಲಗಿ, ರಾತ್ರಿಯೆಲ್ಲಾ ಪಿಳಿಪಿಳಿ ಕಣ್ಣು ಬಿಟ್ಟುಕೊಂಡು ಆಟವಾಡುತ್ತಿರುವ ಮಗುವನ್ನು ಕಂಡಾಗ ಬದುಕು ಸಂಪೂರ್ಣವಾಗಿ ನಮ್ಮ ನಿಯಂತ್ರಣದಲ್ಲಿರುವುದು ಸುಳ್ಳು ಎನಿಸದಿರದು. ನಮ್ಮ ನಿರೀಕ್ಷೆ, ನಮ್ಮ ಲೆಕ್ಕಾಚಾರಗಳನ್ನೆಲ್ಲ ತಲೆಕೆಳಗು ಮಾಡುವ ಮಕ್ಕಳ ನಡವಳಿಕೆ ಕೆಲವೊಮ್ಮೆ ಸಿಟ್ಟು, ಕೋಪ, ನಿರಾಸೆಯನ್ನು ಹುಟ್ಟಿಸಿದರೂ, ಮಗುವಿನ ಬೆಳವಣಿಗೆಗಾಗಿ ಈ ಅಸೌಖ್ಯವನ್ನು ಸಹಿಸಿಕೊಳ್ಳಬೇಕೆಂಬ ವಿವೇಕವೂ ಜೊತೆಜೊತೆಗೇ ಹುಟ್ಟಿಕೊಳ್ಳುತ್ತದೆ.

ಯಾವುದೇ ರೀತಿಯ ಬೆಳವಣಿಗೆಯಾದರೂ ಅಷ್ಟೇ, ನೇರವಾಗಿ ಒಂದು ಗೆರೆ ಎಳೆದಷ್ಟು ಸರಳವಾಗಿರುವುದಿಲ್ಲ. ಬೆಳವಣಿಗೆಯೆನ್ನುವ ಸಂಕೀರ್ಣ ಪ್ರಕ್ರಿಯೆಯನ್ನು ಕೈಕೆಸರಾಗದಂತೆ ನಾಜೂಕಾಗಿ ಮಾಡಿ ಮುಗಿಸಲಾಗುವುದಿಲ್ಲ, ತಾಳ್ಮೆಯಿಲ್ಲದೆ, ಕಾಯುವ ವ್ಯವಧಾನವಿಲ್ಲದೆ ಅದು ಘಟಿಸುವಂಥದ್ದಲ್ಲ. ಹಾಗೆಯೇ ಬೆಳವಣಿಗೆಗಾಗಿ ನಾವು ಅನೇಕ ಕಷ್ಟಗಳನ್ನು ಸಹಿಸಬೇಕಾಗುತ್ತದೆ. ಇಷ್ಟೆಲ್ಲಾ ತೊಂದರೆಗಳ ನಡುವೆಯೂ ಬೆಳೆಸುವ, ಕಾಪಾಡುವ, ಕೈ ಹಿಡಿದು ನಡೆಸುವ ಸಾಮರ್ಥ್ಯ ನಮ್ಮಲ್ಲಿರುವುದನ್ನು ಕಂಡು ಅಪಾರ ಆತ್ಮವಿಶ್ವಾಸವೂ ಮೂಡುತ್ತದೆ.

ಮಕ್ಕಳನ್ನು ಬೆಳೆಸುವ, ಅವರೊಂದಿಗೆ ಕಾಲ ಕಳೆಯುವ ಸಂದರ್ಭದಲ್ಲಿ ಮತ್ತೊಮ್ಮೆ ಬಾಲ್ಯಕ್ಕೆ ಹೋಗಿಬರಬಹುದಲ್ಲ? ಮಕ್ಕಳೊಂದಿಗೆ ಮಕ್ಕಳಾಗಿ ಬೆರೆಯುವ ಅನುಭೂತಿ, 'ಕಳೆದ ಕಾಲ ಕಳೆದೇ ಹೋಯಿತು ಎನ್ನುವುದೆಲ್ಲ ಸುಳ್ಳಿರಬೇಕು', 'ಕಾಲದಲ್ಲಿ ಹಿಂದೆ ಹಿಂದೆ ಹೋಗುವುದು ಸಾಧ್ಯವಿದೆಯೇನೋ' ಎನ್ನುವ ಅನುಮಾನ ಹುಟ್ಟಿಸುತ್ತದೆ. ನಾವು ಚಿಕ್ಕ ಮಕ್ಕಳಾಗಿದ್ದಾಗ ಹೇಗಿದ್ದೇವೋ ನೆನಪಿರುವುದಿಲ್ಲ. ನಮ್ಮ ತಾಯ್ತಂದೆ/ಪೋಷಕರು ನಮ್ಮ ಬಾಲ್ಯದ ಬಗ್ಗೆ ಹೇಳುವ ಕಥೆಗಳಷ್ಟೇ ಗೊತ್ತಿರುತ್ತದೆ. ನಮ್ಮ ಬಾಲ್ಯದ ನೆನಪುಗಳನ್ನು ನಮಗೆ ನಮ್ಮ ಪೋಷಕರು ಕಟ್ಟಿಕೊಟ್ಟಂತೆ ನಾವೂ ನಮ್ಮ ಮುಂದಿನ ಪೀಳಿಗೆಯ ಬಾಲ್ಯದ ನೆನಪುಗಳನ್ನು ಜೋಪಾನವಾಗಿಟ್ಟುಕೊಳ್ಳುವ ಸಂಭ್ರಮ ಬದುಕಿನ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತದೆ. ಕೇವಲ ಮಗುವಿನ ತಾಯಿ, ತಂದೆಯಷ್ಟೇ ಮಗುವಿನ ಬೆಳವಣಿಗೆ, ಆಟ–ಪಾಠಗಳನ್ನು ಸಂಭ್ರಮಿಸಬೇಕೆಂಬುದಿಲ್ಲ. ಕೂಡು ಕುಟುಂಬದ ಸದಸ್ಯರು, ನೆರೆಹೊರೆಯವರು, ಪೋಷಕರ ಸ್ನೇಹಿತರು, ಶಾಲಾಶಿಕ್ಷಕರು ಯಾರು ಬೇಕಾದರೂ ಆಗಿರಬಹುದು. ಒಟ್ಟಿನಲ್ಲಿ ಮಕ್ಕಳನ್ನು ಗಮನಿಸುವ, ಅವರೊಂದಿಗೆ ಮಕ್ಕಳಾಗೇ ಮಾತಿಗಿಳಿಯುವ, ಅವರ ಆಟ-ಪಾಠಗಳಲ್ಲಿ ಆಸಕ್ತಿ ತೋರಿಸುವ ಮುಕ್ತ ಮನಸ್ಸು, ಸಹೃದಯತೆ ಇದ್ದರೆ ಸಾಕು.

ಮಕ್ಕಳ ಬಣ್ಣಬಣ್ಣದ ಆಟಿಕೆಗಳು, ಅದನ್ನು ಕಂಡಾಗ ಅವರ ಕಣ್ಣಲ್ಲಿ ಕಾಣುವ ಖುಷಿ-ಬೆರಗು, ಸಿಕ್ಕ ಯಾವುದೇ ವಸ್ತುವನ್ನೂ ಅವರ ಆಟದಲ್ಲಿ ಸೂಕ್ತವಾಗಿ ಉಪಯೋಗಿಸಿಕೊಳ್ಳುವ ಸೃಜನಶೀಲತೆ, ತೊದಲು ನುಡಿಯಲ್ಲಿ ತಪ್ಪುತಪ್ಪಾಗಿ ಪದಗಳನ್ನು ಉಚ್ಚರಿಸುವ ರೀತಿ, ಕುತೂಹಲ ತುಂಬಿದ ಅವುಗಳ ಪ್ರಶ್ನೆಗಳು ಮತ್ತು ಅದಕ್ಕೆ ಉತ್ತರಿಸಲು ಸಾಧ್ಯವಾಗದೆ ದೊಡ್ಡವರು ತಡವರಿಸಿ ಪೇಚಿಗೆ ಸಿಕ್ಕಿಕೊಳ್ಳುವ ಪ್ರಸಂಗಗಳು, ಎಷ್ಟೇ ಸ್ವಚ್ಛಗೊಳಿಸಿದರೂ ಮತ್ತೆ ಮನೆ ತುಂಬಾ ಕಸ ಹಾಕುವ ಮಕ್ಕಳ ಪ್ರವೃತ್ತಿ, ಎಲ್ಲವೂ ಜೀವನವನ್ನು ಎಷ್ಟು ಸಾಧ್ಯವೋ ಅಷ್ಟು ಹಗುರಾಗಿ ತೆಗೆದುಕೊಳ್ಳುವಂತೆ ಪ್ರೇರೇಪಿಸುತ್ತದೆ. ಬೆಳೆಯುವ ಮಕ್ಕಳ ಆಸಕ್ತಿಗಳ ಜೊತೆ ಪೋಷಕರ ಆಸಕ್ತಿಗಳೂ ಬೆಳೆಯುತ್ತವೆ. ಮಕ್ಕಳೊಂದಿಗೆ ಆಡುವ ಆಟ, ಓದುವ ಪುಸ್ತಕಗಳು, ಅವರೊಂದಿಗೆ ಕೂಡಿ ಮಾಡುವ ಕಲೆ, ನೃತ್ಯ, ಹಾಡುಗಾರಿಕೆ – ಎಲ್ಲವೂ ನಮ್ಮಲ್ಲಿ ಹೊಸತನದ ಅಲೆಯೆಬ್ಬಿಸುತ್ತದೆ, ಹೊಸ ಕಲಿಕೆಗೂ ದಾರಿ ಮಾಡಿಕೊಡುತ್ತದೆ.

ಹಿಂದೆಲ್ಲಾ ಒಂದು ಮಗುವನ್ನು ಒಂದು ಇಡೀ ಗ್ರಾಮವೇ ಸೇರಿ ಬೆಳೆಸುತ್ತಿದ್ದಿರಬೇಕು. ಆದರೆ ಈಗಿನ ಸ್ಪರ್ಧಾತ್ಮಕ ವಾತಾವರಣದಲ್ಲಿ, ಅದರಲ್ಲೂ ನಗರದ ವಿಭಕ್ತ ಕುಟುಂಬಗಳಲ್ಲಿ ಮಕ್ಕಳನ್ನು ಬೆಳೆಸುವ, ಅದಕ್ಕೆ ತಗಲುವ ಅಪಾರ ಆರ್ಥಿಕ ವೆಚ್ಚವನ್ನು ನಿಭಾಯಿಸುವ ಸಂಪೂರ್ಣ ಜವಾಬ್ದಾರಿ ಕೇವಲ ಮಗುವಿನ ತಾಯಿ ಮತ್ತು ತಂದೆಯದ್ದಾಗಿರುತ್ತದೆ. ಹೀಗಾಗಿ ಮಕ್ಕಳೆಂದರೆ ರೇಜಿಗೆ, ಅನವಶ್ಯಕ ಜವಾಬ್ದಾರಿಯ ಭಾರ, ಸ್ವಾತಂತ್ರ್ಯಹರಣ ಎನಿಸುವುದು ಸಹಜವೇ. ಮಕ್ಕಳನ್ನು ಸಾಕಲು ಸೂಕ್ತ ವಾತಾವರಣ ಮತ್ತು ಸಮುದಾಯದ ಬೆಂಬಲ ಇಲ್ಲದಿರುವ ಸಂದರ್ಭದಲ್ಲಿ ಮಕ್ಕಳ ಆಟ, ಮುದ್ದುಮಾತು, ನಗು, ತುಂಟಾಟ – ಇವೆಲ್ಲ ನೀಡುವ ಸುಖವನ್ನು ಕಡೆಗಣಿಸಿ ಕೇವಲ ಅವರ ಭವಿಷ್ಯದ ಕಡೆಗೆ ಹೆಚ್ಚಿನ ಒತ್ತು ನೀಡುವ ಅಸಹಜ ಪರಿಸ್ಥಿತಿಯೂ ನಿರ್ಮಾಣವಾಗಿದೆ. ಮಕ್ಕಳನ್ನು ಅನಾವಶ್ಯಕವಾಗಿ ಶಿಕ್ಷಿಸಿ, ಅವರನ್ನು 'ನಮ್ಮ ದಾರಿಗೆ' ಬಲವಂತವಾಗಿ ಸರಿಹೊಂದಿಸುವ ಪ್ರಯತ್ನಗಳಿಗಾಗಿ ಕೇವಲ ಪೋಷಕರನ್ನು ದೂರುವಂತಿಲ್ಲ. ಮಕ್ಕಳ ಕುರಿತಾದ ಈ ರೀತಿಯ ನಡವಳಿಕೆ ನಮ್ಮ ಸಮಾಜಕ್ಕೆ ಹಿಡಿದ ಕೈಗನ್ನಡಿ. ಇಂತಹ ವಿಷಮಸ್ಥಿತಿ ಮಕ್ಕಳ ಸಹಜ ಆತ್ಮವಿಕಾಸಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳುವ ಮೂಲಕ ನಾವು ನಮ್ಮ ಆತ್ಮವಿಕಾಸಕ್ಕೆ ಕೂಡ ದಾರಿ ಮಾಡಿಕೊಳ್ಳುತ್ತಿರುತ್ತೇವೆ. ❖

ಅವರು ಹಿರಿಯರು... ಗಮನವಿರಲಿ

> ಹಿರಿಯರ ಆರೈಕೆಯಲ್ಲಿ ಎದುರಾಗಬಹುದಾದ ಸಮಸ್ಯೆಗಳು ಮತ್ತು ಅವುಗಳಿಗೆ ಒದಗಿಸಬಹುದಾದ ಸೂಕ್ತ ಪರಿಹಾರಗಳ ಬಗ್ಗೆ ಅರಿವಿದ್ದರೆ ಬದುಕು ಸುಸೂತ್ರವಾಗಬಹುದು.

ಡಾ. ವಿನಯ ಶ್ರೀನಿವಾಸ್

ಮಾನವನ ದೈಹಿಕ ಕ್ಷಮತೆ ವಯಸ್ಸಾದಂತೆ ಕ್ಷೀಣಿಸುತ್ತಾ ಹೋಗುವುದು ಸಹಜ. ನಲವತ್ತರಲ್ಲಿದ್ದ ಶಕ್ತಿಯು ವರ್ಷಗಳು ಉರುಳಿದಂತೆ ಕ್ಷೀಣವಾಗಬಹುದು. ಅದಕ್ಕೆ ಕಾರಣ ವಿವಿಧ ಅಂಗಾಂಗ ವ್ಯೂಹಗಳಲ್ಲಾಗುವ ವಯೋಸಹಜ ಬದಲಾವಣೆಗಳು. ಮೊದಲಿನ ದಿನಗಳಂತೆ ಚುರುಕಾಗಿ ನಡೆದಾಡಲು ಕಷ್ಟವೆನಿಸಬಹುದು, ದೃಷ್ಟಿ ಮಂಜಾಗಬಹುದು, ಶ್ರವಣಸಾಮರ್ಥ್ಯ ಕ್ಷೀಣಿಸಬಹುದು, ಮಲ–ಮೂತ್ರವಿಸರ್ಜನೆಯ ವೇಳೆಯಲ್ಲಿ ಮೊದಲಿನ ನಿಯಂತ್ರಣ ಇಲ್ಲದಂತಾಗಬಹುದು, ರುಚಿಯಾಗಿದೆ ಎಂದು ತುಸು ಹೆಚ್ಚು ತಿಂದರೆ ಅಜೀರ್ಣದ ಸಮಸ್ಯೆ ಕಾಡಬಹುದು, ಅಗತ್ಯ ವಸ್ತುಗಳನ್ನು ಎಲ್ಲಿ ಇಟ್ಟೆವು ಎಂಬುದು ಮರೆತೇ ಹೋದಂತಾಗಬಹುದು. ಈ ಎಲ್ಲ ಅಂಶಗಳನ್ನೂ ಸ್ವತಃ ಹಿರಿಯರೂ ಹಾಗೂ ಅವರನ್ನು ಕಾಳಜಿ ಮಾಡುವವರೂ ಅರಿತಿದ್ದರೆ ಒಳಿತು. ಇದರಿಂದ ಪರಸ್ಪರರಲ್ಲಿ ಮೂಡಬಹುದಾದ ಮನಸ್ತಾಪಗಳನ್ನೂ ಮತ್ತು ಅಪಾಯಕರ ಅನಾಹುತಗಳನ್ನೂ ತಪ್ಪಿಸುವುದಕ್ಕೆ ಸಾಧ್ಯ.

ಹಿರಿಯರ ಆರೈಕೆಯಲ್ಲಿ ಎದುರಾಗಬಹುದಾದ ಸಾಮಾನ್ಯ ಸಮಸ್ಯೆಗಳು ಮತ್ತು ನಮ್ಮ ಮಿತಿಯಲ್ಲಿಯೇ ಅವುಗಳಿಗೆ ಒದಗಿಸಬಹುದಾದ ಸೂಕ್ತ ಪರಿಹಾರಗಳ ಬಗ್ಗೆ ಅರಿವಿದ್ದರೆ ಬದುಕು ಸುಸೂತ್ರವಾಗಬಹುದು.

ದೃಷ್ಟಿ ಮಂಜಾಗುವುದು: ವಯಸ್ಸಾದಂತೆ ದೂರ/ಹತ್ತಿರದ ದೃಷ್ಟಿಯ ಅಥವಾ ಪೊರೆಯ ಸಮಸ್ಯೆ ಎದುರಾಗುವುದು ಸಹಜ. ಅದಕ್ಕಾಗಿ ಕಣ್ಣುಗಳ ತಪಾಸಣೆ ಮತ್ತು ಸೂಕ್ತ ಕನ್ನಡಕಗಳ ಬಳಕೆ/ಪೊರೆಗಾಗಿ ಶಸ್ತ್ರಚಿಕಿತ್ಸೆ ಅತ್ಯಗತ್ಯ. ಕಣ್ಣುಗಳಲ್ಲಿನ ಶುಷ್ಕತೆ ಮತ್ತು ತುರಿಕೆಯ ಸಮಸ್ಯೆಗೆ ಕಣ್ಣುಗಳಿಗೆ ಹಾಕುವ ಔಷಧವನ್ನು ಬಳಸಬಹುದು.

ಶ್ರವಣಸಮಸ್ಯೆ: ಹೊರಕಿವಿಯಲ್ಲಿ ಶೇಖರವಾಗಬಹುದಾದ ಮೇಣದಂತಹ ವಸ್ತು, ಸೋಂಕು, ಕಿವಿ ಸೋರುವಿಕೆಯಿಂದಲೂ ಶ್ರವಣಸಮಸ್ಯೆ ತಲೆದೋರಬಹುದು. ತಪಾಸಣೆ ಮಾಡಿ ಸೂಕ್ತ ಚಿಕಿತ್ಸೆ ಮಾಡಿಸಿ. ವಯೋಸಹಜ ಸಮಸ್ಯೆ ಎಂದಾದರೆ ತಜ್ಞರ ಸಲಹೆಯ ಮೇರೆಗೆ ಶ್ರವಣಸಾಧನಗಳನ್ನು ತೆಗೆದುಕೊಡಿ.

ಮೂಳೆ, ಸ್ನಾಯು ಮತ್ತು ಕೀಲುಗಳು ಮೊದಲಿನಂತೆ ಸರಾಗವಾದ ಚಲನೆಗೆ ಸಹಕರಿಸದಿರಬಹುದು. ಹಿರಿಯರ ಆಹಾರದಲ್ಲಿ ಕ್ಯಾಲ್ಸಿಯಂ ಹೇರಳವಾಗಿರುವ ಹಾಲು, ಮೊಸರು, ಮತ್ತಿತರ ಹಾಲಿನ ಉತ್ಪನ್ನಗಳು ಕಡ್ಡಾಯವಾಗಿ ಇರಲಿ. ಮನೆಯ ಹೂದೋಟದಲ್ಲಿ ಓಡಾಟ, ಸಣ್ಣಪುಟ್ಟ ಸರಳ ವ್ಯಾಯಾಮಗಳು, ನಿಯಮಿತವಾದ ನಡಿಗೆ ಮೂಳೆಗಳ ಪೆಡಸುತನವನ್ನು ಕಡಿಮೆ ಮಾಡಬಹುದು. ಮೂಳೆಗಳ ಸವೆತದಿಂದ ಎಲುಬುಗಳು ದುರ್ಬಲವಾಗಿರುವ ಸಾಧ್ಯತೆಯಿರುವುದರಿಂದ ಸಣ್ಣಪುಟ್ಟ ಬೀಳುವಿಕೆಯೂ ಮೂಳೆಮುರಿತಕ್ಕೆ ಕಾರಣವಾಗಬಹುದು. ಆದ್ದರಿಂದ ಹಿರಿಯರು ಓಡಾಡುವ ಕೋಣೆಗಳ ನೆಲದಲ್ಲಿ ನೀರಿನ ಅಂಶ ಇಲ್ಲದಿರುವುದನ್ನು ಖಾತ್ರಿ ಮಾಡಿಕೊಳ್ಳಿ. ಬಚ್ಚಲು ಮನೆ ಮತ್ತು ಶೌಚಾಲಯಗಳನ್ನು ಸ್ವಚ್ಛವಾಗಿರಿಸಿ ಜಾರುವಿಕೆಯಿಲ್ಲದಂತೆ ಗಮನ ವಹಿಸಿ.

ಮಲವಿಸರ್ಜನೆಗೆ ಸಂಬಂಧಿಸಿದ ಸಮಸ್ಯೆ: ಮಲಬದ್ಧತೆ ಅಥವಾ ಪದೇ ಪದೇ ಮಲವಿಸರ್ಜನೆಗೆ ಹೋಗಬೇಕೆನ್ನಿಸುವ ಸಮಸ್ಯೆ ಕೆಲವು ಹಿರಿಯರನ್ನು ಕಾಡಬಹುದು. ಹಿತಮಿತವಾದ, ಬಿಸಿಬಿಸಿಯಾದ, ತಾಜಾ, ಸಾತ್ವಿಕ ಹಾಗೂ ಪೌಷ್ಟಿಕ ಆಹಾರಪದಾರ್ಥಗಳು ಹಿರಿಯರ ಊಟವಾಗಿರಲಿ. ದಿನದಲ್ಲಿ ಒಂದು ಅಥವಾ ಎರಡು ಬಾರಿ ನಿಗದಿತ ಸಮಯದಲ್ಲೇ ಮಲವಿಸರ್ಜನೆಗೆ ತೆರಳುವ ಅಭ್ಯಾಸ ಮಾಡಿಕೊಳ್ಳಲು ಉತ್ತೇಜಿಸಿ. ಸಂಧಿವಾತದ ಸಮಸ್ಯೆ ಅಥವಾ ಸ್ನಾಯುಗಳ ದುರ್ಬಲತೆಯಿಂದಾಗಿ ಕುಕ್ಕುರುಗಾಲಿನಲ್ಲಿ ಕುಳಿತು ಭಾರತೀಯ ಶೌಚಾಲಯವನ್ನು ಬಳಸುವುದು ಕೆಲವೊಮ್ಮೆ ಕಷ್ಟವೆನಿಸಬಹುದು. ಅಂತಹ ಸಂದರ್ಭಗಳಲ್ಲಿ ಅವರಿಗಾಗಿ ಪಾಶ್ಚಾತ್ಯಶೈಲಿಯ ಶೌಚಾಲಯಗಳ ವ್ಯವಸ್ಥೆ ಮಾಡಿಕೊಡಿ.

ಎದೆ ಉರಿ ಸಮಸ್ಯೆ: ಆಹಾರಕ್ರಮದಲ್ಲಿ ಒಂದಿಷ್ಟು ಶಿಸ್ತನ್ನು ಅಳವಡಿಸಿಕೊಂಡರೆ ಈ ಸಮಸ್ಯೆಯಿಂದ ಹಿರಿಯರನ್ನು ಪಾರು ಮಾಡಬಹುದು. ದಿನವೊಂದರಲ್ಲಿ ಮೂರು ಲೀಟರ್‌ನಷ್ಟು ನೀರು ಕುಡಿಯುವುದನ್ನು ಪ್ರೋತ್ಸಾಹಿಸಿ. ಮಸಾಲೆ ಮತ್ತು ಎಣ್ಣೆಯಲ್ಲಿ ಕರಿದ ಪದಾರ್ಥಗಳನ್ನು ಆದಷ್ಟು ಕಡಿಮೆ ಕೊಡಿ.

ಮೂತ್ರವಿಸರ್ಜನೆಯ ಸಮಸ್ಯೆ: ಮೂತ್ರವಿಸರ್ಜನೆಗೆ ಅವಸರವಾಗುವ ಮೊದಲೇ ಶೌಚಾಲಯಕ್ಕೆ ಹೋಗಿ ಬರುವ ಅಭ್ಯಾಸ ಮಾಡಿಕೊಂಡಾಗ ಅವಸರವಾದಾಗ ನಿಯಂತ್ರಣ ತಪ್ಪುವ ಸಂಭವವನ್ನು ತಪ್ಪಿಸಬಹುದು. ಪುರುಷರಲ್ಲಿ ಅರವತ್ತೈದರ ನಂತರ ಕಾಡುವ ಪ್ರಾಸ್ಟೇಟ್ ಸಮಸ್ಯೆಯೂ ಮೂತ್ರವಿಸರ್ಜನೆಗೆ ತೊಡಕನ್ನುಂಟು ಮಾಡಬಹುದು. ಇದಕ್ಕಾಗಿ ಶಸ್ತ್ರಚಿಕಿತ್ಸಾತಜ್ಞರ ಸಲಹೆಯಂತೆ ಔಷಧೋಪಚಾರ ಅಥವಾ ಶಸ್ತ್ರಚಿಕಿತ್ಸೆ ಮಾಡಿಸಿ.

ಮಧುಮೇಹ ಮತ್ತು ರಕ್ತದೊತ್ತಡ: ಹಿರಿಯರು ಸಮಯಕ್ಕೆ ಸರಿಯಾಗಿ ಮಾತ್ರೆಗಳನ್ನು ತೆಗೆದುಕೊಳ್ಳುತ್ತಿದ್ದಾರೆನ್ನುವುದನ್ನು ಖಾತ್ರಿ ಮಾಡಿಕೊಳ್ಳಿ. ಕನಿಷ್ಠ ಆರು ತಿಂಗಳಿಗೊಮ್ಮೆ ತಪಾಸಣೆ ಮಾಡಿಸಿ ಸಮಸ್ಯೆ ನಿಯಂತ್ರಣದಲ್ಲಿದೆಯೇ ಎಂದು ಖಚಿತ ಪಡಿಸಿಕೊಳ್ಳಿ.

ವಯಸ್ಸಾದಂತೆ ರುಚಿಯ ಗ್ರಹಿಕೆಯೂ ವ್ಯತ್ಯಯವಾಗಬಹುದು. ಹಾಗಾಗಿ ಮನೆಯಲ್ಲಿನ ಹಿರಿಯರು ನೀವು ಮಾಡಿದ ಅಡುಗೆಯಲ್ಲಿ ಉಪ್ಪು-ಖಾರ ಹೆಚ್ಚಾಗಿದೆ ಎಂದು ದೂರಿದರೂ ನೀವು ಅರ್ಥ ಮಾಡಿಕೊಂಡು ಸಹಕರಿಸಿ.

ಮರೆವು: ನೆನಪಿನ ಶಕ್ತಿ ಕುಂದುವಿಕೆಯೂ ಸಾಮಾನ್ಯ. ಇದನ್ನು ಮನೆಯ ಎಲ್ಲ ಸದಸ್ಯರೂ ಅರಿತು ಸಹಕರಿಸಿ. ದಿನಚರಿ ಬರೆದಿಡಲು ಪ್ರೋತ್ಸಾಹಿಸಿ. ಅವರು ನಿತ್ಯ ತೆಗೆದುಕೊಳ್ಳುವ ಮಾತ್ರೆ-ಔಷಧಗಳ ಚೀಟಿಯ ಫೋಟೊ ನಿಮ್ಮ ಅಥವಾ ಅವರ ಮೊಬೈಲ್ ಗ್ಯಾಲರಿಯಲ್ಲಿದ್ದರೆ ಒಳಿತು.

ಖುಷಿಯಾಗಿಡಿ: ಹಿರಿಯರು ಸದಾ ಲವಲವಿಕೆಯಿಂದಿರಲು ನೆರವಾಗಿ. ಒಳ್ಳೆಯ ಪತ್ರಿಕೆಗಳು ಮತ್ತು ಪುಸ್ತಕಗಳನ್ನು ಒದಗಿಸಿ, ಓದಲು ಉತ್ತೇಜಿಸಿ. ಆಗಾಗ್ಗ ಹಳೆಯ ಸ್ನೇಹಿತರನ್ನು ಬಂಧು-ಬಾಂಧವರನ್ನು ಭೇಟಿ ಮಾಡಲು ವ್ಯವಸ್ಥೆ ಕಲ್ಪಿಸಿ. ಮೌಲ್ಯಯುತ ಸಿನಿಮಾ, ನಾಟಕ, ನೃತ್ಯ ಕಾರ್ಯಕ್ರಮಗಳ ವೀಕ್ಷಣೆಗೆ ಕರೆದೊಯ್ಯಿರಿ. ವರ್ಷಕ್ಕೊಂದು ಬಾರಿಯಾದರೂ ಪ್ರವಾಸಿತಾಣಗಳಿಗೆ ಭೇಟಿ ಮಾಡಿಸಿ.

ಒಬ್ಬರೇ ಇದ್ದಾಗ: ಒಬ್ಬೊಂಟಿಗರಾಗಿ ಇರುವ ಹಿರಿಯರಿಗೆ ದಿನಕ್ಕೊಮ್ಮೆಯಾದರೂ ಕರೆ ಮಾಡಿ ಮಾತನಾಡಿಸಿ. ಅವರ ಅಕ್ಕಪಕ್ಕದವರ ಸಂಪರ್ಕ ಸಂಖ್ಯೆಯೂ ನಿಮ್ಮ ಬಳಿ ಇರಲಿ. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಕಾಳಜಿ, ಗಮನ, ವಾತ್ಸಲ್ಯ, ಮೆಚ್ಚುಗೆ ಮತ್ತು ಪ್ರೀತಿ ನೀವು ಕೊಡಬಹುದಾದ ಅಮೂಲ್ಯ ಉಡುಗೊರೆಗಳಲ್ಲಿ ಸೇರಿವೆ ಮತ್ತು ಅದಕ್ಕಾಗಿ ನೀವು ಖರ್ಚು ಮಾಡಬೇಕಾಗುವುದಿಲ್ಲ.
–ದೀಪಕ್ ಚೋಪ್ರಾ

ಉಲ್ಬಣಿಸುತ್ತಿರುವ ಕೊರೊನಾ ಸೋಂಕು ಲಾಕ್‌ಡೌನ್ ಕೊನೆಯ ಅಸ್ತ್ರವಾಗಿರಲಿ

ಕೊರೊನಾದ ಮೂರನೇ ಅಲೆ ಬೂದಿ ಮುಚ್ಚಿದ ಕೆಂಡದಂತೆ ಕಾಣಿಸುತ್ತಿರುವ ಸಂದರ್ಭದಲ್ಲಿ ಲಾಕ್‌ಡೌನ್ ಜಾರಿಗೊಳಿಸುವ ಸಾಧ್ಯತೆಗಳ ಬಗ್ಗೆ ಚರ್ಚೆಗಳು ಶುರುವಾಗಿವೆ. ತೀವ್ರಗೊಳ್ಳುತ್ತಿರುವ ಕೊರೊನಾ ನಿಯಂತ್ರಣಕ್ಕಾಗಿ ಅಗತ್ಯವಾದ ಕ್ರಮಗಳನ್ನು ಜಾರಿಗೊಳಿಸುವುದು ಹಾಗೂ ವೈದ್ಯಕೀಯ ವ್ಯವಸ್ಥೆಯನ್ನು ಬಲಗೊಳಿಸುವುದು ಸದ್ಯಕ್ಕೆ ಸರ್ಕಾರದ ಆದ್ಯತೆಯಾಗಬೇಕು. ಕೊರೊನಾ ಬಿಕ್ಕಟ್ಟಿನ ಸಂದರ್ಭದಲ್ಲಿ ಲಾಕ್‌ಡೌನ್ ಎನ್ನುವುದು ಹೋರಾಟದ ಕೊನೆಯ ಅಸ್ತ್ರ ಆಗಬೇಕೇ ಹೊರತು ಮೊದಲ ನಡೆಯಲ್ಲ. ಸೋಂಕಿನ ಅಲೆ ಕಾಣಿಸಿಕೊಂಡಾಗಲೆಲ್ಲ ಲಾಕ್‌ಡೌನ್ ಹೇರುವುದು ಅಥವಾ ಹೇರಬೇಕೆಂದು ಬಯಸುವುದು ವಿವೇಕದ ನಡೆಯಲ್ಲ. ಕಳೆದ ಎರಡು ವರ್ಷಗಳಲ್ಲಿ ಜಾರಿಗೊಂಡಿದ್ದ ಲಾಕ್‌ಡೌನ್‌ಗಳಿಂದಾಗಿ ದೇಶದಲ್ಲಿ ಬಹುತೇಕ ಆರ್ಥಿಕ ಚಟುವಟಿಕೆಗಳು ಕುಂಟತೊಡಗಿ, ಜನಸಾಮಾನ್ಯರ ಬದುಕು ದುಸ್ತರವಾಗಿತ್ತು. ಈ ಅವಧಿಯಲ್ಲಿ ಕೊರೊನಾದಿಂದ ಉಂಟಾದ ಸಾವುನೋವಿನ ನಿಖರ ಅಂದಾಜು ಈವರೆಗೂ ಸಿಕ್ಕಿಲ್ಲ. ಆ ಕಹಿನೆನಪುಗಳು ಮರುಕಳಿಸುವುದನ್ನು ಯಾರೂ ಬಯಸಲಾರರು. ಲಾಕ್‌ಡೌನ್ ಬಗೆಗಿನ ಚರ್ಚೆಗಳು ಜನಸಾಮಾನ್ಯರನ್ನು ಆತಂಕಕ್ಕೆ ಈಡುಮಾಡುವುದರ ಜೊತೆಗೆ, ಕೊರೊನಾ ವಿರುದ್ಧದ ಹೋರಾಟದ ಬಲಗುಂದಿಸುತ್ತವೆ. ಕೋವಿಡ್‌ನ ಮೂರನೇ ಅಲೆಯನ್ನು ಎದುರಿಸಲು ಅಗತ್ಯವಾದ ಕ್ರಮಗಳನ್ನು ಪ್ರಾಮಾಣಿಕವಾಗಿ ಜಾರಿಗೊಳಿಸುವುದರ ಬಗ್ಗೆ ಯೋಚಿಸುವುದು ಮತ್ತು ಪ್ರಯತ್ನಿಸುವುದು ಸದ್ಯದ ನಮ್ಮ ಆದ್ಯತೆಯಾಗಬೇಕೇ ಹೊರತು, ಲಾಕ್‌ಡೌನ್ ಜಾರಿಯ ಚಿಂತನೆಯಲ್ಲ.

ಕೊರೊನಾ ವಿರುದ್ಧ ಈಗ ನಡೆಯಬೇಕಾದ ಹೋರಾಟದ ನೇತೃತ್ವವನ್ನು ಜನರೇ ವಹಿಸಿಕೊಳ್ಳಬೇಕು ಹಾಗೂ ಆ ಹೋರಾಟಕ್ಕೆ ಅಗತ್ಯವಾದ ಮಾರ್ಗದರ್ಶನ ಮತ್ತು ಸಂಪನ್ಮೂಲಗಳನ್ನು ಸರ್ಕಾರ ಒದಗಿಸಬೇಕು

‘ಕೋವಿಡ್ ಹರಡದಂತೆ ಜನರೇ ಸ್ವಯಂ ನಿಯಂತ್ರಣ ಕ್ರಮಗಳನ್ನು ಅನುಸರಿಸಬೇಕು. ಮಾಸ್ಕ್ ಧರಿಸಬೇಕು, ಭೌತಿಕ ಅಂತರ ಕಾಪಾಡಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಕೋವಿಡ್‌ನಿಂದ ರಕ್ಷಣೆ ಪಡೆದುಕೊಳ್ಳಲು ಇವಲ್ಲದೆ ಬೇರೆ ದಾರಿಗಳೇ ಇಲ್ಲ ಎಂಬುದು ನಮ್ಮ ಗಮನದಲ್ಲಿ ಇರಬೇಕು. ಕೊರೊನಾ ವಿರುದ್ಧ ಈಗ ನಡೆಯಬೇಕಾದ ಹೋರಾಟದ ನೇತೃತ್ವವನ್ನು ಜನರೇ ವಹಿಸಿಕೊಳ್ಳಬೇಕು ಹಾಗೂ ಆ ಹೋರಾಟಕ್ಕೆ ಅಗತ್ಯವಾದ ಮಾರ್ಗದರ್ಶನ ಮತ್ತು ಸಂಪನ್ಮೂಲಗಳನ್ನು ಸರ್ಕಾರ ಒದಗಿಸಬೇಕು. ಹೊಸ ವರ್ಷದ ಆರಂಭದ ಸಂದರ್ಭದಲ್ಲಿ ಕೆಲವು ದೇವಸ್ಥಾನಗಳಲ್ಲಿ ಕಾಣಿಸಿಕೊಂಡ ನೂಕುನುಗ್ಗಲು ಆತಂಕ ಮೂಡಿಸುವಂತಹದ್ದು. ಸೋಂಕಿನ ಆತಂಕದ ಸಂದರ್ಭದಲ್ಲೂ ಚುನಾವಣಾ ರ್‍ಯಾಲಿಗಳು, ರಾಜಕಾರಣಿಗಳ ಸಾರ್ವಜನಿಕ ಪ್ರಹಸನಗಳು ಎಗ್ಗಿಲ್ಲದೆ ನಡೆಯುತ್ತವೆ. ಇಂಥ ಬೇಜವಾಬ್ದಾರಿ ನಡವಳಿಕೆಗಳ ವಿರುದ್ಧ ಸಾರ್ವಜನಿಕ ಪ್ರತಿರೋಧ ರೂಪುಗೊಳ್ಳಬೇಕು. ಅದಕ್ಕೆ ಮೊದಲು ಸ್ವಯಂ ನಿಯಂತ್ರಣ ಕ್ರಮಗಳಿಗೆ ಸಮಾಜ ಬದ್ಧವಾಗಬೇಕು. ಸಾರ್ವಜನಿಕರು ಮಾಸ್ಕ್ ಧರಿಸುವುದಕ್ಕೆ ಹಾಗೂ ಭೌತಿಕ ಅಂತರ ಪಾಲಿಸಲಿಕ್ಕೆ ಸ್ವಯಂಪ್ರೇರಣೆ ಕಾರಣವಾಗಬೇಕೇ ವಿನಾ ಕಾನೂನು ನಿರ್ಬಂಧಗಳಲ್ಲ. ಜನಸಾಮಾನ್ಯರ ಬದುಕು ಮರಳಿ ಹಳಿ ಕಂಡುಕೊಳ್ಳುವ ಪ್ರಯತ್ನದಲ್ಲಿದೆ. ಶಾಲಾ ಕಾಲೇಜುಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ಮತ್ತೆ ಆರಂಭಗೊಂಡಿವೆ. ಇಂಥ ಸಂದಿಗ್ಧದ ಸನ್ನಿವೇಶ ಲಾಕ್‌ಡೌನ್ ಮೂಲಕ ಮತ್ತೆ ವಿಷಮಿಸುವ ಅವಕಾಶವನ್ನು ಸಮಾಜ ತಂದುಕೊಳ್ಳಬಾರದು.

ಕೋವಿಡ್ ಹೊಸ ಅಲೆ ಈಗಾಗಲೇ ಆರಂಭಗೊಂಡಿದ್ದು, ಫೆಬ್ರುವರಿ ಕೊನೆ ಅಥವಾ ಮಾರ್ಚ್ ವೇಳೆಗೆ ತೀವ್ರವಾಗಬಹುದು ಎಂದು ತಜ್ಞರು ಅಂದಾಜು ಮಾಡಿದ್ದಾರೆ. ಕೋವಿಡ್ ಹೊಸ ಪ್ರಕರಣಗಳ ದೃಢ ಪ್ರಮಾಣದ ಆಧಾರದಲ್ಲಿ ವಲಯವಾರು ನಿರ್ಬಂಧಗಳ ಜಾರಿಗೆ ರಾಜ್ಯ ಮಟ್ಟದ ‘ಕೋವಿಡ್ ತಾಂತ್ರಿಕ ಸಲಹಾ ಸಮಿತಿ’ (ಟಿಎಸಿ) ಸರ್ಕಾರಕ್ಕೆ ಸಲಹೆ ನೀಡಿದೆ. ಒಂದು ವಾರದ ಅವಧಿಯಲ್ಲಿ ಕೋವಿಡ್ ದೃಢ ಪ್ರಮಾಣದ ದರ ಶೇಕಡ 5 ದಾಟುವ ಪ್ರದೇಶಗಳಲ್ಲಿ ಲಾಕ್‌ಡೌನ್ ಜಾರಿಗೊಳಿಸಬೇಕೆಂದು ಸಮಿತಿ ಶಿಫಾರಸು ಮಾಡಿದೆ. ಆಮ್ಲಜನಕ ಸಹಿತ ಅಥವಾ ಐಸಿಯು ಹಾಸಿಗೆಗಳಲ್ಲಿ ಶೇ 40ರಷ್ಟು ಭರ್ತಿಯಾದರೂ ಲಾಕ್‌ಡೌನ್ ಜಾರಿಗೊಳಿಸಬೇಕು ಎಂದು ಸಮಿತಿ ಅಭಿಪ್ರಾಯಪಟ್ಟಿದೆ. ಸೋಂಕಿನ ಪ್ರಮಾಣಕ್ಕೆ ಅನುಸಾರವಾಗಿ ವಿವಿಧ ವಲಯಗಳಲ್ಲಿ ಜಾರಿಗೆ ತರಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ಸೂಚಿಸಲಾಗಿದೆ. ಕೊರೊನಾದ ಮೂರನೇ ಅಲೆ ಹಾಗೂ ಓಮೈಕ್ರಾನ್ ಬಗೆಗಿನ ಹೇಳಿಕೆ–ಅಭಿಪ್ರಾಯಗಳು ಏನೇ ಇರಲಿ, ಕೊರೊನಾ ವಿರುದ್ಧದ ಈ ಬಾರಿಯ ಹೋರಾಟ ಹಿಂದೆಂದಿಗಿಂತಲೂ ಹೆಚ್ಚು ಸಶಕ್ತವಾದುದು. ಕೊರೊನಾದ ಎರಡು ಅಲೆಗಳ ಅನುಭವ ನಮ್ಮೊಂದಿಗಿದೆ. ಹಿರಿಯ ನಾಗರಿಕರು ಹಾಗೂ ದುಡಿಯುವ ವರ್ಗದ ಬಹುತೇಕರು ಲಸಿಕೆ ಪಡೆದಿರುವುದು ಕೂಡ ಸೋಂಕಿನ ವಿರುದ್ಧದ ಹೋರಾಟದಲ್ಲಿ ಮಹತ್ವದ ಪಾತ್ರ ವಹಿಸಲಿದೆ. ರಾಜ್ಯದಲ್ಲಿ 15ರಿಂದ 18 ವರ್ಷದ ವಯೋಮಿತಿಯ 31.75 ಲಕ್ಷ ಮಕ್ಕಳಿಗೆ ಲಸಿಕೆ ನೀಡುವ ಅಭಿಯಾನ ಈ ತಿಂಗಳ 3ರಿಂದ ಆರಂಭವಾಗಿದ್ದು, ಈ ಅಭಿಯಾನ ಕೂಡ ಕೊರೊನಾ ವಿರುದ್ಧದ ಹೋರಾಟವನ್ನು ಮತ್ತಷ್ಟು ಬಲಪಡಿಸಲಿದೆ. ಈ ಸಕಾರಾತ್ಮಕ ಅಂಶಗಳ ಕಾರಣದಿಂದಾಗಿ ಕೊರೊನಾ ಮೂರನೇ ಅಲೆಯ ವಿರುದ್ಧದ ಹೋರಾಟ ಭಯಮುಕ್ತವಾಗಿರಬೇಕು. ಜನರಲ್ಲಿ ಧೈರ್ಯ–ಭರವಸೆ ತುಂಬಲು ಸರ್ಕಾರ ಹಾಗೂ ಮಾಧ್ಯಮಗಳು ಪ್ರಯತ್ನಿಸಬೇಕು.

ದಿನದ ಟ್ವೀಟ್

ಅವಮಾನಕರ

‘ಗಂಡಸರಾಗಿದ್ರೆ, ಕೈಗೆ ಬಳೆ ತೊಟ್ಕೊಂಡಿದ್ರೆ’ ಇವೆಲ್ಲ ಒಬ್ಬ ಗಂಡು ತನ್ನ ಹೆತ್ತ ತಾಯಿ, ಅಕ್ಕ ತಂಗಿ, ಹೆಂಡತಿ, ಮಗಳಿಗೆ ಮಾಡೋ ದೊಡ್ಡ ಅವಮಾನ. ಹೆಣ್ಣು ಗಂಡಿಗಿಂತ ಯಾವುದ್ರಲ್ಲೂ ಕಮ್ಮಿಯಲ್ಲ, ಎಲ್ಲಾ ರಂಗದಲ್ಲೂ ಇಂದು ಹೆಣ್ಣು ಮಕ್ಕಳು ಗಂಡಿಗಿಂತ ಒಂದ್ಹೆಜ್ಜೆ ಮುಂದೆ ಇದ್ದಾರೆ, ಕೇವಲ ಅವಕಾಶ ವಂಚಿತರಾಗಿದ್ದಾರಷ್ಟೇ. ಇದು ಎಲ್ಲ ಪಕ್ಷದವರಿಗೂ ಅನ್ವಯಿಸುತ್ತೆ.

ಪ್ರತಾಪ್ ಕಣಗಾಲ್, ಜೆಡಿಎಸ್ ಐ.ಟಿ. ಘಟಕದ ಮುಖ್ಯಸ್ಥ

ಕಿಡಿನುಡಿ

ಬುಲ್ಲಿ ಬಾಯಿ, ಸುಲ್ಲಿ ಡೀಲ್ಸ್– ನಮ್ಮ ಸಮಾಜದಲ್ಲಿನ ಕೆಲವು ಕುಲಗೆಟ್ಟ ಜನರು ಇಂತಹ ಮುಸ್ಲಿಂ ವಿರೋಧಿ ಮತ್ತು ಮಹಿಳಾ ವಿರೋಧಿ ಅಪರಾಧ ಕೃತ್ಯಗಳಲ್ಲಿ ಬಹಿರಂಗವಾಗಿ ತೊಡಗಿಕೊಂಡಿರುವುದೇಕೆ? ಏಕೆಂದರೆ, ಸರ್ಕಾರ ತಮ್ಮ ವಿರುದ್ಧ ಕ್ರಮ ಕೈಗೊಳ್ಳುವುದಿಲ್ಲ ಎಂಬ ಭಾವನೆಯಿಂದ ಅವರು ಆರಾಮದಿಂದ ಇದ್ದಾರೆ. ನಿಜಕ್ಕೂ ಇದು ಕರಾಳ ಕಾಲಘಟ್ಟ.



ಸುಧೀಂದ್ರ ಕುಲಕರ್ಣಿ, ಲೇಖಕ

25 ವರ್ಷಗಳ ಹಿಂದೆ

ಶನಿವಾರ, 4-1-1997

• ಚಲನಚಿತ್ರೋತ್ಸವದಲ್ಲಿ ಭಾಗವಹಿಸಲಾರೆ– ಡಾ. ರಾಜ್‌ಕುಮಾರ್

ತಿರುವನಂತಪುರ, ಜ. 3– ‘ನಿಮ್ಮ ವಿಶ್ವಾಸದ ಆಹ್ವಾನಕ್ಕೆ ಧನ್ಯವಾದಗಳು. ಆದರೆ, ಚಿತ್ರೋತ್ಸವದಲ್ಲಿ ಭಾಗವಹಿಸಲಾರೆ’. ಕನ್ನಡದ ಮೇರು ನಟ ಡಾ. ರಾಜ್‌ಕುಮಾರ್ ಅವರು ಕೇರಳದ ಸಂಸ್ಕೃತಿ ಸಚಿವ ಟಿ.ಕೆ. ರಾಮಕೃಷ್ಣನ್ ಅವರಿಗೆ ಬರೆದ ಪತ್ರ. ಡಾ. ರಾಜ್ ಅವರ ಪತ್ರ ಗುರುವಾರ ಸಂಜೆ ಸಚಿವರ ಕಚೇರಿ ತಲುಪಿದೆ.

ಇಲ್ಲಿ ವ್ಯವಸ್ಥೆ ಆಗಿರುವ 28ನೆಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನೆ ಸಂದರ್ಭದಲ್ಲಿ ಡಾ. ರಾಜ್ ಕುಮಾರ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವ ಬಗ್ಗೆ ಇದ್ದ ಊಹಾಪೋಹಗಳು ಇದರಿಂದ ನಿವಾರಣೆ ಆಗಿವೆ. ಡಾ. ರಾಜ್ ಅವರ ಪತ್ರ ತಲುಪಿದ ನಂತರ ಅವರ ಮನ ಒಲಿಸಲು ಮತ್ತೆ ಪ್ರಯತ್ನಿಸದಿರಲು ಕೇರಳ ಸರ್ಕಾರ ನಿರ್ಧರಿಸಿದೆ ಎನ್ನಲಾಗಿದೆ.

• ಸಿಪಿಪಿ ನೂತನ ನಾಯಕರಾಗಿ ಸೀತಾರಾಂ ಕೇಸರಿ ಆಯ್ಕೆ

ನವದೆಹಲಿ, ಜ. 3– ಎರಡು ವಾರಗಳಿಂದ ತೀವ್ರ ಕುತೂಹಲ ಕೆರಳಿಸಿದ್ದ ಕಾಂಗ್ರೆಸ್ ಸಂಸದೀಯ ಪಕ್ಷದ ನೂತನ ನಾಯಕನ ಆಯ್ಕೆ ನಿರೀಕ್ಷೆಯಂತೆ ನಡೆಯಿತು. ಪಕ್ಷದ ಅಧ್ಯಕ್ಷ ಸೀತಾರಾಂ ಕೇಸರಿ ಅವರನ್ನು ಇಂದು ಒಮ್ಮತದಿಂದ ಆಯ್ಕೆ ಮಾಡಲಾಯಿತು.

ಇದರಿಂದಾಗಿ ಕೆಲವರ ವಿರೋಧದ ನಡುವೆಯೂ ಕಾಂಗ್ರೆಸ್ ಸರ್ವ ಅಧಿಕಾರವು ಮತ್ತೆ ಏಕವ್ಯಕ್ತಿಯ ಕೈಯಲ್ಲೇ ಕೇಂದ್ರೀಕೃತವಾಗುವ ಸಂಪ್ರದಾಯಕ್ಕೆ ಕಟ್ಟುಬಿದ್ದಂತಾಯಿತು.

50 ವರ್ಷಗಳ ಹಿಂದೆ

ಮಂಗಳವಾರ, 4-1-1972

• ಕಬ್ಬಿಗೆ ಬೆಂಬಲ ಬೆಲೆ ಹೆಚ್ಚಿಸಲು ರಾಜ್ಯದ ಸೂಚನೆಗೆ ಕೇಂದ್ರದ ನಿರಾಕರಣೆ

ನವದೆಹಲಿ, ಜ. 3– 1972–73ರ ಸಾಲಿಗೆ ಕಬ್ಬಿಗೆ ಟನ್ನಿಗೆ 85 ರೂ.ಗಳಂತೆ ಬೆಂಬಲ ಬೆಲೆ ನಿಗದಿ ಮಾಡಬೇಕೆಂಬ ಮೈಸೂರು ರಾಜ್ಯದ ಮನವಿಯನ್ನು ಕೇಂದ್ರ ಕೃಷಿ ಖಾತೆ ತಳ್ಳಿಹಾಕಿದೆ ಎಂದು ವರದಿಯಾಗಿದೆ.

ಕಬ್ಬಿನ ಬೆಳೆ ಅಭಿವೃದ್ಧಿ ಬಗ್ಗೆ ತಂತ್ರವನ್ನು ರೂಪಿಸಲು ರಾಜ್ಯದ ಅಧಿಕಾರಿಗಳು ಹಾಗೂ ಕೇಂದ್ರ ಸಚಿವ ಖಾತೆಯ ಅಧಿಕಾರಿಗಳ ನಡುವೆ ಇಂದು ನಡೆದ ಮಾತುಕತೆಗಳಲ್ಲಿ ಹೆಚ್ಚಿನ ಬೆಲೆ ನಿಗದಿ ಮಾಡಬೇಕೆಂಬ ರಾಜ್ಯದ ಸಲಹೆಯನ್ನು ಸಕ್ಕರೆ ಬೆಲೆ ಹೆಚ್ಚಬಹುದೆಂಬ ಭೀತಿಯಿಂದ ನಿರಾಕರಿಸಲಾಯಿತು.

• ‘ಭದ್ರಾವತಿ’ ಅಕ್ರಮ ಕೇಂದ್ರ ಮಂಡಳಿ ತನಿಖೆ

ಬೆಂಗಳೂರು, ಜ. 3– ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ವ್ಯವಹಾರಗಳಲ್ಲಿ 3 ಪ್ರಕರಣಗಳನ್ನು ಹೆಚ್ಚಿನ ತನಿಖೆಗಾಗಿ ಕೇಂದ್ರದ ತನಿಖಾ ಮಂಡಳಿಗೆ ವಹಿಸಲಾಗಿದೆ.

ರಾಜ್ಯದ ಹಲವು ಭಾಗಗಳಲ್ಲಿ ಇದು ಪತ್ತೆಯಾಗಿರುವುದು ಎಚ್ಚರಿಕೆಯ ಗಂಟೆ

ಅಂತರ್ಜಲಕ್ಕೂ ಯುರೇನಿಯಂ ಲಗ್ಗೆ

ವಿಶ್ಲೇಷಣೆ

ಟಿ.ಆರ್.ಅನಂತರಾಮು

ವಿಶ್ವಸಂಸ್ಥೆ ಮತ್ತೆ ಅದನ್ನೇ ಹೇಳುತ್ತಿದೆ- ಜಗತ್ತಿನಲ್ಲಿ ಎಲ್ಲ ದೇಶದ, ಎಲ್ಲ ಪ್ರಜೆಗಳಿಗೂ ದಿನವಹಿ ಸ್ವಂತಕ್ಕೆ ಮತ್ತು ಗೃಹಬಳಕೆಗೆ ಕನಿಷ್ಠ 50ರಿಂದ 100 ಲೀಟರ್ ನೀರು ಪೂರೈಸುವುದು ಆಯಾ ದೇಶದ ಕರ್ತವ್ಯ. ಅಷ್ಟು ಪ್ರಮಾಣದ ನೀರು ಬಳಸುವ ಹಕ್ಕು ಅವರಿಗಿದೆ. 2010ರ ಮಹಾ ಅಧಿವೇಶನದಲ್ಲಿ ಈ ನಿರ್ಣಯ ಅಂಗೀಕಾರವಾದರೂ ಜಾಗತಿಕ ಪರಿಸ್ಥಿತಿಯೇನೂ ಬದಲಾಗಿಲ್ಲ. ಜಗತ್ತಿನ 220 ಕೋಟಿ ಜನರಿಗೆ ಶುದ್ಧ ಕುಡಿಯುವ ನೀರು ಈಗಲೂ ಮರೀಚಿಕೆ.

ವಿಶ್ವಸಂಸ್ಥೆ ಕಳೆದ ವರ್ಷ ಈ ಕುರಿತು ಕಳವಳವನ್ನೂ ವ್ಯಕ್ತಪಡಿಸಿತು. ಮುಂದೆ ದೇಶ– ದೇಶಗಳ ನಡುವೆ ಯುದ್ಧವಾದರೆ ಅದು ತನ್ನ ಶಕ್ತಿಯನ್ನು ಪ್ರದರ್ಶಿಸಲು ಅಲ್ಲ, ಬದಲು ನೀರಿಗಾಗಿ ಎಂಬ ಸತ್ಯವನ್ನು ಈಗ ಎಲ್ಲ ದೇಶಗಳೂ ಮನಗಂಡಿವೆ. ಇಡೀ ಭೂಮಿಯಲ್ಲಿ ಲಭ್ಯವಿರುವ ಅಂತರ್ಜಲದ ಶೇ 25ರಷ್ಟು ಭಾಗವನ್ನು ಭಾರತವೊಂದೇ ಬಳಸಿ ಅಂತರ್ಜಲ ಭಂಡಾರವನ್ನು ಬರಿದು ಮಾಡುತ್ತಿದೆ ಎಂಬ ಆರೋಪವೂ ಇದೆ.

ಭೂಮಿಯಲ್ಲಿ ಲಭ್ಯವಿರುವ ನೀರೆಲ್ಲವೂ ಕುಡಿಯಲು ಯೋಗ್ಯವಾದ ನೀರೇ ಆಗಿದ್ದರೆ ಈ ಹೊತ್ತಿಗೆ ಅರ್ಧ ಸಾಗರವೇ ಖಾಲಿಯಾಗುತ್ತಿತ್ತು. ಪರಿಶುದ್ಧ ನೀರೆಂಬುದೇ ಇಲ್ಲ. ಹಲವು ಲವಣಗಳು ನೀರಿನಲ್ಲಿ ಕರಗಿ ಕುಡಿಯಲು ಯೋಗ್ಯವಲ್ಲ ಎನ್ನಿಸಿದೆ. ಕುಡಿಯಲು ಯೋಗ್ಯವಾದ ನೀರು ಭೂಮಂಡಲದಲ್ಲಿರುವ ನೀರಿನ ಶೇ 0.03 ಭಾಗ ಮಾತ್ರ. ಅಂದರೆ ಇಡೀ ಭೂಮಿಯ ನೀರು 100 ಲೀಟರ್ ಎಂದುಕೊಂಡರೆ, ಕುಡಿಯಲು ಲಭ್ಯವಿರುವ ನೀರು ಅರ್ಧ ಚಮಚ ಮಾತ್ರ.

ನೀರಿನ ಕೊರತೆಯನ್ನು ಭಾರತ ಸದಾ ಅನುಭವಿಸುತ್ತಿದೆ. ಗೃಹಬಳಕೆಯ ಮುಕ್ಕಾಲುಪಾಲು, ನೀರಾವರಿಯ ಅರ್ಧಪಾಲು ನೀರಿನ ಬೇಡಿಕೆಗೆ ಅಂತರ್ಜಲವೇ ಈಗಲೂ ಆಸರೆ. ಪಂಜಾಬಿನಂಥ ಅತಿ ಕೃಷಿಗೆ ಒಳಪಟ್ಟ ರಾಜ್ಯವು ಅಂತರ್ಜಲವನ್ನು ಮೀರೆಳೆತ ಮಾಡಿ ತನ್ನ ಭಂಡಾರವನ್ನು ಹೆಚ್ಚುಕಡಿಮೆ ಖಾಲಿ ಮಾಡಿಕೊಂಡಿದೆ.

ಕಬ್ಬು ಮತ್ತು ಭತ್ತ ದೊಡ್ಡ ಪ್ರಮಾಣದ ನೀರನ್ನು ಬೇಡುತ್ತವೆ. ತಮಿಳುನಾಡು, ರಾಜಸ್ಥಾನ, ಮಹಾರಾಷ್ಟ್ರ, ಕರ್ನಾಟಕದಲ್ಲಿ ಅಂತರ್ಜಲ ಮಟ್ಟ ವರ್ಷದಿಂದ ವರ್ಷಕ್ಕೆ ಎರಡು ಮೀಟರ್ ಕುಸಿಯುತ್ತಿದೆ. ಇದು ಸಮಸ್ಯೆಯ ಒಂದು ಮುಖ ಅಷ್ಟೇ. ಅಂತರ್ಜಲ ಈಗ ಕುಡಿಯುವ ನೀರಿನ ಆಕರವಾಗಿ ಉಳಿದಿಲ್ಲ. ಹಿಮಾಲಯ ತನ್ನ ಸಂಚಯನವನ್ನು ಹೊತ್ತು ತರುವಾಗ ಇಡೀ ಗಂಗಾ, ಬ್ರಹ್ಮಪುತ್ರಾ ನದಿಯ ಪಾತ್ರದಲ್ಲಿ ಮೆಕ್ಕಲು ಮಣ್ಣಿನಲ್ಲಿ ಆರ್ಸೆನಿಕ್ ಎಂಬ ವಿಷಕಾರಿ ಧಾತುವನ್ನು ಸೇರಿಸಿಬಿಟ್ಟಿದೆ. ಅದು ಕೊಳವೆ ಬಾವಿಗಳಲ್ಲಿ ಇಣುಕಿ, ವಿಶೇಷವಾಗಿ ಜಾರ್ಖಂಡ್, ಉತ್ತರಪ್ರದೇಶ, ಬಿಹಾರ ರಾಜ್ಯಗಳಲ್ಲಿ ಮತ್ತು ಅತ್ತ ಬಾಂಗ್ಲಾ ದೇಶದಲ್ಲಿ ನೀರು ಕುಡಿದವರನ್ನೇ ಮುಕ್ಕುತ್ತಿದೆ. ಇಲ್ಲೆಲ್ಲ ಪ್ರತೀ ಲೀಟರಿಗೆ 50 ಮಿಲಿಗ್ರಾಂ ಆರ್ಸೆನಿಕ್ ಪ್ರಮಾಣ ಜಮೆಯಾಗಿ ಸಹ್ಯ ಮಿತಿಯನ್ನು ಎಂದೋ ದಾಟಿಬಿಟ್ಟಿದೆ. ಇದು ವಿಶ್ವಸಂಸ್ಥೆಯ ಗಮನ ಸೆಳೆಯುವ ಮಟ್ಟಕ್ಕೂ ಹೋಗಿದೆ.

ಫ್ಲೋರೈಡ್ ಬೆರೆತ ನೀರು ಕುಡಿದವರ ಮೂಳೆಗಳನ್ನು ಸೊಟ್ಟಗೆ ಮಾಡಿ, ಹಲ್ಲನ್ನು ಕಿಲುಬುಗಟ್ಟಿಸಿ, ಫ್ಲೋರೋಸಿಸ್ ಎಂಬ ರೋಗಕ್ಕೆ ಕಾರಣವಾಗಿದೆ. ಅತ್ತ, ಮಣಿಪುರದಿಂದ ಹಿಡಿದು ದಕ್ಷಿಣದಲ್ಲಿ ಕಾಂಚೀಪುರದವರೆಗೆ ಇದರ ಸಾಮ್ರಾಜ್ಯ ವಿಸ್ತರಿಸಿದೆ. ಗದಗಿನ ಭಾಗದ ಮುಂಡರಗಿ, ತುಮಕೂರು ಜಿಲ್ಲೆಯ ಪಾವಗಡದ ಅನೇಕ ಭಾಗಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಬೆರೆತು ದೊಡ್ಡ ಸಮಸ್ಯೆಗೆ ಕಾರಣವಾಗಿದೆ.

ಇದೀಗ ವಿಶ್ವಸಂಸ್ಥೆಯು ಜಗತ್ತಿನ ಬಹು ಭಾಗಗಳಲ್ಲಿ ಈ ಸಮಸ್ಯೆ ಇರುವುದನ್ನು ಗಮನಿಸಿ, ಅದಕ್ಕೊಂದು ಮಿತಿಯನ್ನೂ ಸೂಚಿಸಿದೆ. ಕುಡಿಯುವ ಒಂದು ಲೀಟರ್ ನೀರಿನಲ್ಲಿ ಒಂದೂವರೆ ಮಿಲಿಗ್ರಾಂ ಫ್ಲೋರೈಡ್ ಇದ್ದರೆ ಅದು ಸಹ್ಯ ಎಂದಿದೆ. ಆದರೆ ಇಂಥ ಜಾಗಗಳಲ್ಲಿ ನೀರಿನ ಆಕರಗಳನ್ನು ಹುಡುಕುವುದೆಲ್ಲಿ? ಫ್ಲೋರೈಡನ್ನು ನೀರಿನಿಂದ ತೊಡೆದುಹಾಕಿ ಕುಡಿಯಲು ಯೋಗ್ಯವಾಗಿಸಲು ಹತ್ತಾರು ತಂತ್ರಗಳು ಪ್ರಯೋಗವಾದವು.

ಈಗ ಇನ್ನೊಂದು ಮಾಲಿನ್ಯದ ಭೂತ ಎದುರಾಗಿದೆ. ಅದು ಯುರೇನಿಯಂ ಎಂಬ ಧಾತು ಅಂತರ್ಜಲವನ್ನು ಸೇರಿರುವುದು. ವಾಸ್ತವವಾಗಿ ಬಾಂಬುಗಳ ತಯಾರಿಕೆಗೆ ಬಳಕೆಯಾಗುವ, ಸದಾ ವಿಕಿರಣ ಸೂಸುವ ಈ ಖನಿಜವು ಮೆಲ್ಲನೆ ನೆಲದಾಳಕ್ಕೂ ಇಳಿದು ಕುಡಿಯುವ ನೀರಿಗೂ ಲಗ್ಗೆ ಹಾಕಿದೆ. ಈ ಆಘಾತಕಾರಿ ಸುದ್ದಿಯನ್ನು ಸ್ವತಃ ಕೇಂದ್ರ ಅಂತರ್ಜಲ ಮಂಡಳಿ ವರದಿ ಮಾಡಿದೆ. ಯುರೇನಿಯಂ ಎಂಬ ಧಾತು ಗ್ರಾನೈಟ್ ಶಿಲೆಗಳಲ್ಲಿ ಮತ್ತು ಶಿಥಿಲವಾದ ಮಣ್ಣಿನಲ್ಲಿ ಸಹಜವಾಗಿ ಬೆರೆತಿರುತ್ತದೆ. ಇದು ಯಾವುದೋ ಮಾರ್ಗ ಅನುಸರಿಸಿ ಮನುಷ್ಯನ ಶರೀರ ಪ್ರವೇಶಿಸಿದರೂ ಅದನ್ನು ಹೊರಹಾಕುವ ತಂತ್ರವನ್ನು ಶರೀರ ರೂಪಿಸಿಕೊಂಡಿದೆ. ಆದರೆ ಮಿತಿಮೀರಿದರೆ ಯುರೇನಿಯಂ ಶರೀರದಲ್ಲಿ ಜಮೆಯಾಗುತ್ತದೆ. ಅದು ಮೊದಲು ಮೂತ್ರಪಿಂಡದ ಮೇಲೆ ಲಗ್ಗೆ ಹಾಕುತ್ತದೆ. ವಾಸ್ತವವಾಗಿ ಯುರೇನಿಯಂ ಸೂಸುವ ವಿಕಿರಣಕ್ಕಿಂತ ಹೆಚ್ಚು ಆತಂಕ ತಂದಿರುವುದು ಈ ಸಂಗತಿ.



ಇದು ಜಾಗತಿಕ ಸಮಸ್ಯೆಯಾದ್ದರಿಂದ ವಿಶ್ವಸಂಸ್ಥೆ ಇದಕ್ಕೂ ಒಂದು ಮಿತಿಯನ್ನು ಗುರುತಿಸಿದೆ. ಒಂದು ಲೀಟರು ನೀರಿನಲ್ಲಿ 30 ಮಿಲಿಗ್ರಾಂ ಪ್ರಮಾಣ ಇದ್ದರೆ ಚಿಂತಿಸಬೇಡಿ ಎನ್ನುತ್ತಿದೆ. ಅದು 60 ಮಿಲಿಗ್ರಾಂ ದಾಟಿದರೆ ಕ್ಯಾನ್ಸರ್ ತರುವ ಅಪಾಯ ಹೆಚ್ಚು ಎಂದು ಭಾರತದ ಪರಮಾಣು ಶಕ್ತಿ ನಿಯಂತ್ರಣ ಮಂಡಳಿ ಎಚ್ಚರಿಕೆ ಕೊಟ್ಟಿದೆ.

ಕರ್ನಾಟಕ ಸೇರಿದಂತೆ ಭಾರತದ 18 ರಾಜ್ಯಗಳಲ್ಲಿ ಅಂತರ್ಜಲದಲ್ಲಿ ಯುರೇನಿಯಂ ಪ್ರಮಾಣ ಸುರಕ್ಷತೆಯ ಮಿತಿ ದಾಟಿದೆ ಎಂದು ವರದಿಗಳು ಬಂದಿವೆ. ಇಡೀ ದೇಶದಾದ್ಯಂತ 14,377 ಬೇರೆ ಬೇರೆ ಭಾಗಗಳಿಂದ ಸಂಗ್ರಹಿಸಿದ ಅಂತರ್ಜಲ ಮಾದರಿಯನ್ನು ಪರೀಕ್ಷಿಸಿದ ನಂತರ ಈ ಆಘಾತಕಾರಿ ಅಂಶ ಹೊರಬಿದ್ದಿದೆ. ಮೂಲ ಯಾವುದು? ಯುರೇನಿಯಂ ಗ್ರಾನೈಟ್ ಶಿಲೆಯ ಮೂಲದಿಂದಷ್ಟೇ ಬರುವುದಿಲ್ಲ. ಯುರೇನಿಯಂ ನಿಕ್ಷೇಪವಿರುವ ಜಾಗಗಳಲ್ಲಿ ನೀರು ಹರಿದಾಗ, ಆ ನೀರು ಅಂತರ್ಜಲಕ್ಕೆ ಜಿನುಗುತ್ತದೆ. ಹಾಗೆಯೇ ಲಿಗ್ನೈಟ್ ಎಂಬ ಕಲ್ಲಿದ್ದಲನ್ನು ಭಾರತ ಧಾರಾಳವಾಗಿ ಉರಿಸುತ್ತಿದೆ. ಅದರಿಂದಲೂ ಯುರೇನಿಯಂ ಬಿಡುಗಡೆಯಾಗುತ್ತದೆ. ನ್ಯೂಕ್ಲಿಯರ್ ಕೈಗಾರಿಕೆಗಳ ತ್ಯಾಜ್ಯದಲ್ಲೂ ಯುರೇನಿಯಂ ಇರುತ್ತದೆ. ಇವೆಲ್ಲಕ್ಕಿಂತ ಹೆಚ್ಚು ಆತಂಕ ತಂದಿರುವುದು ಕೃಷಿಗಾಗಿ ಬಳಸುವ ಫಾಸ್ಫೇಟ್ ರಸಗೊಬ್ಬರದಲ್ಲಿರುವ ಯುರೇನಿಯಂ. ಈ ಮೂಲವು ನೈಸರ್ಗಿಕ ಮೂಲಕ್ಕಿಂತಲೂ ಬಹುಬೇಗ ಅಂತರ್ಜಲವನ್ನು ಮಲಿನಗೊಳಿಸುತ್ತದೆ.

ವಿಶೇಷವೆಂದರೆ, ಯುರೇನಿಯಂ ಸ್ವಭಾವತಃ ಮೀನುಗಳಲ್ಲಾಗಲೀ ತರಕಾರಿಗಳಲ್ಲಾಗಲೀ ಸಂಚಯಗೊಂಡಿರುವುದಿಲ್ಲ. ಅದನ್ನು ತಿಂದರೂ ಮಲ, ಮೂತ್ರಗಳಲ್ಲಿ ಹೊರಹೋಗಿಬಿಡುತ್ತದೆ. ಯುರೇನಿಯಂ ಇರುವ ಫಾಸ್ಫೇಟನ್ನು ಒಂದು ಮಟ್ಟದಲ್ಲಿ ಗಿಡ, ಮರಗಳು ಎಳೆದುಕೊಂಡು ಬೇರಿನಲ್ಲಿ ಸಂಚಯಿಸುತ್ತವೆ. ಮಿತಿಮೀರಿದಾಗಲೇ ದೇಹ ಇದನ್ನು ತಾಳಿಕೊಳ್ಳುವ ಸ್ಥಿತಿಯಲ್ಲಿರುವುದಿಲ್ಲ. ಯುರೇನಿಯಂ ಖನಿಜ ರೇಡಾನ್ ಧಾತುವಾಗಿ ಪರಿವರ್ತನೆಯಾಗುತ್ತದೆ. ದೀರ್ಘಕಾಲ ಅದಿರುವ ನೀರನ್ನು ಸೇವಿಸಿದರೆ ರಕ್ತಪರಿಚಲನೆಯಲ್ಲಿ ಸೇರಿ ಅದು ಶರೀರಕ್ಕೆ, ವಿಶೇಷವಾಗಿ ಮೂತ್ರಪಿಂಡಕ್ಕೆ ಹಾನಿ ಮಾಡುವ ಸಾಧ್ಯತೆ ಇದೆ ಎನ್ನುವುದು ಈ ಕ್ಷೇತ್ರದಲ್ಲಿ ನಡೆಯುತ್ತಿರುವ ಸಂಶೋಧನೆಯ ಫಲಿತಾಂಶ.

ಈಗಿನ ಸಮೀಕ್ಷೆ ಗಮನಿಸಿದರೆ, ಆಂಧ್ರಪ್ರದೇಶದ ಕೆಲವು ಭಾಗಗಳಲ್ಲಿ ಸಹನೀಯ ಮಿತಿಗಿಂತ ಹತ್ತು ಪಟ್ಟು ಹೆಚ್ಚು ಯುರೇನಿಯಂ ಅಂತರ್ಜಲದಲ್ಲಿ ಬೆರೆತಿರುವುದು ಪತ್ತೆಯಾಗಿದೆ. ಕರ್ನಾಟಕದಲ್ಲೂ ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ, ಬಳ್ಳಾರಿ, ಕಲಬುರಗಿ, ಕೋಲಾರ, ಮಂಡ್ಯ, ರಾಯಚೂರು, ತುಮಕೂರು ಜಿಲ್ಲೆಗಳ ಹಲವು ಭಾಗಗಳಲ್ಲಿ ಅಂತರ್ಜಲದಲ್ಲಿ ಮಿತಿಮೀರಿದ ಯುರೇನಿಯಂ ಇರುವುದು ಪತ್ತೆಯಾಗಿದೆ.

ಕೇಂದ್ರ ಅಂತರ್ಜಲ ಮಂಡಳಿ ಇನ್ನೊಂದು ಅಂಶವನ್ನು ತೆರೆದಿಟ್ಟಿದೆ. ಕೃಷಿಗಾಗಿ ಬಳಸುವ ಒಂದು ಕಿಲೊಗ್ರಾಂ ಫಾಸ್ಫೇಟ್ ರಸಗೊಬ್ಬರದಲ್ಲಿ ಒಂದು ಮಿಲಿಗ್ರಾಂನಿಂದ ಹಿಡಿದು 68 ಮಿಲಿಗ್ರಾಂವರೆಗೆ ಯುರೇನಿಯಂ ಪ್ರಮಾಣವಿದೆ. ಬಹುಶಃ ಅಂತರ್ಜಲದಲ್ಲಿ ಹೆಚ್ಚು ಸೇರಿರುವುದು ಈ ಮೂಲದಿಂದಲೇ ಎಂಬುದು ಎಚ್ಚರಿಕೆಯ ಗಂಟೆಯಾಗಿದೆ.

ಚುರುಮುರಿ



ರಾಗಿ ಬೀಸದು ತಪ್ತದಾ?

• ಲಿಂಗರಾಜು ಡಿ.ಎಸ್.

‘ಸಾ, ಈವತ್ತಿನ ಪೇಪರಿನಗೆ ಕಮೀಸನ್, ಮಾಫಿಯಾ, ರಾಕ್ಷಸರು, ಸಂಚು, ವೈರಸ್ಸಿನದ್ದೇ ಸುದ್ದಿಯಾಗ್ಯದೆ’ ಅಂತಂದೆ.

‘ಹ್ಲೂಂ ಕಲಾ, ಅದುಕ್ಕೆ ಇರಬಕು ಹುಲಿಯಾ ಚಾಮರಾಜನಗರಕ್ಕೋಗಿ ‘ರಾಕ್ಸಸರು ಇದಾನಸೌದದಗೇ ಬಂದು ಕುಂತವ್ರೆ. ಅವರುನ್ನ ಓಡಿಸಬಕು ತಯಾರಿ ತಗಳಿ’ ಅಂತ ಗರ್ಜಿಸಿದ್ದು’ ಅಂತ ತುರೇಮಣೆ ಅಂದುದ್ಕೆ ಯಂಟಪ್ಪಣ್ಣ, ‘ಅವೇಗ್ಯ ನನ ಮಕ್ಕಳಾ, ಕೆಂಗಲ್ಲು ಇದಾನಸೌದ ಕಟ್ಟಿದ ಮ್ಯಾಲೆ ಈತರದ ಹುನ್ನಾರ ಇದಾನಸೌದದ ಒಳಗೆ ನಡೀತದೆ ಅಂತ್ಲೇ ಅಂದ್ಕಂಡಿರಲಿಲ್ಲ. ಈಗ್ಲವು ಇದಾನಸೌದದೊಳಗೆ ತೊಡೆ ತಟ್ಟಿ ಆಯ್ತು, ಕುಸ್ತಿ ಮಾಡಿ ಆಯ್ತು, ಬಿರಿಯಾನಿ ತರಿಸ್ಕ ತಿಂದು ಮನಿಕಂಡಿದ್ದೂ ಆಯ್ತು!’ ಅಂತು.

‘ಅಣ್ಣೆ, ಇದಾನಸೌದ ಕಟ್ಟಿದ್ದೋರು ಜೈಲಿನಗಿದ್ದ ಕೈದಿಗಳು. ಅವರು ಸೌದ ಕಟ್ಟದುನ್ನ ದೇಸಸೇವೆ ಅಂತ ಮಾಡಿ ಅವರ ಪಾಪವ ಅಲ್ಲೇ ಬಿಟ್ಟು ಸುದ್ದವಾಗಿ ಹೊಂಟೋದರು. ಈಗ ಇದಾನಸೌದದ ಒಳಗೆ ಆ ಪಾಪಗಳೆಲ್ಲಾ ಬಲಿತು ರಾಕ್ಷಸ ವೈರಸ್ಸಾಗಿ, ಒಳಿಕ್ಕೋದೋರಿಗೆ ಘನವಾಗಿ ಅದುಗಿಕತ್ತವೆ. ಅದುಕ್ಕೇ ಎಲ್ಲಾ ಪಕ್ಸದೋರೂ ಅವರವರೆ ಕಾಲೆಳಕತ್ತರೆ, ಕಂಡಾಬಟ್ಟೆ ಉಗಿದಾಡ್ತರೆ, ಜೈಲಾಟ ಆಡ್ತರೆ!’ ಅಂದ್ರು ತುರೇಮಣೆ.

‘ಸಾ, ಕೊರೋನಾ, ಓಮಿಕ್ರಾನ್ ತಿರುಗಾ ಬೊಂಬೂ ಸವಾರಿ ಸುರು ಮಾಡ್ತವೇನೋ ಅಂತ ಯದಾರಾಯ್ತಾ ಅವೆ. ಇದು ಸಾಲದು ಅಂತ ಇದಾನಸೌದದ ಒಳಗಿನ ರಂಕಲು-ರಾಮಾಣ್ಯ ವೈರಸ್ ಆಗಿ ಬಲೇ ಫಾಸ್ಟಾಗಿ ಹಬ್ಬುತಾ ಅವೆ. ಇವು ಆ ಸೋಂಕು ತಂದು ಜನಕ್ಕೆಲ್ಲಾ ಹಂಚತಾವ್ರೆ. ಏನು ಮಾಡದು?’ ಅಂದ ಚಂದ್ರು.

‘ಮಾಡದೇನ್ಲಾ, ಬಸಣ್ಣ ಕುರಿತೇಟಾಗಿ ಯತ್ನಾಳ್ ರಾಜಕೀಯದ ಶಕುನ ಹೇಳ್ತನೆ. ದಕ್ಷಿಣೆ ಮಡಗಿ, ಮುಂದ್ಕೇನಾದದು ಅಂತ ಆಯಪ್ಪನ್ನೇ ಕೇಳನ!’ ಅಂತಂದ್ರು ತುರೇಮಣೆ.

‘ಏನು ಕೇಳಿದ್ರೇನು ಸಾ, ಆಡಳಿತ ರಾಮನದಾದ್ರೂ ರಾವಣನದಾದ್ರೂ ಜನಕ್ಕೆ ರಾಗಿ ಬೀಸದು ತಪ್ಪಕುಲ್ಲ!’ ಅಂದು ಚರ್ಚೆ ಮುಗಿಸಿದೆ.

ಸಂಗತ

ಸೂರ್ಯ ನಮಸ್ಕಾರ ಮತ್ತು ವೈಜ್ಞಾನಿಕ ಒತ್ತಾಸೆ

ಮಕ್ಕಳ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸಬೇಕೆಂಬ ಪ್ರಯತ್ನ ಶ್ಲಾಘನೀಯ. ಆದರೆ ಅದು ವೈಜ್ಞಾನಿಕ ಅಧ್ಯಯನಗಳು ಕಂಡುಕೊಂಡಂತಹ ಸತ್ಯವಾಗಿರಬೇಕು

• ಡಾ. ಎ.ಶ್ರೀಧರ

ಮಕ್ಕಳ ಮನಸ್ಸಿನ ಬಗ್ಗೆ ವೈಜ್ಞಾನಿಕ ಚೌಕಟ್ಟಿನಲ್ಲಿ ಸಾವಿರಾರು ಅಧ್ಯಯನಗಳು ನಡೆದಿವೆ. ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಕಲಿಕೆ, ನೆನಪಿನ ಶಕ್ತಿ, ಆಲೋಚನಾ ಸಾಮರ್ಥ್ಯ, ಭಾಷೆ, ವ್ಯಕ್ತಿತ್ವ ವಿಕಸನ ಸೇರಿದಂತೆ ನೂರಾರು ವಿಷಯಗಳ ಬಗ್ಗೆ ವೈಜ್ಞಾನಿಕ ವಿವರಣೆಯ ಸಿದ್ಧಾಂತಗಳಿವೆ. ಅದರಲ್ಲೂ ವಿಶೇಷವಾಗಿ ಶಾಲಾ ಕಲಿಕೆಯ ನಮೂನೆಗಳು, ಅವುಗಳಿಂದ ಮಕ್ಕಳ ಮನೋವಿಕಾಸದ ಪರಿಯನ್ನು ತಿಳಿಯಪಡಿಸುವ ವ್ಯಾಖ್ಯಾನಗಳಿವೆ.

ಇವುಗಳನ್ನೇ ಆಧರಿಸಿ ಶೈಕ್ಷಣಿಕ ನೀತಿಯನ್ನು ಅಳವಡಿಸಿಕೊಂಡಿರುವ ದೇಶಗಳು ಹಲವು. ಇದರ ಅನುಷ್ಠಾನದ ಫಲವಾಗಿ ಮಕ್ಕಳ ಮನೋಸಾಮರ್ಥ್ಯದ ಏಳಿಗೆಯಾಗಿರುವುದರ ಬಗ್ಗೆಯೂ ವಿಮರ್ಶೆ, ಅಧ್ಯಯನ, ಮಾರ್ಗಸೂಚಿಗಳು ಲಭ್ಯವಿವೆ. ಮಕ್ಕಳನಡೆನುಡಿಯಮುನ್ನಡೆ, ಹಿನ್ನಡೆಗಳ ಬಗ್ಗೆ ಅರಿವು ಮೂಡಿಸುವ ಇಂತಹ ವಿಷಯಗಳನ್ನು ತಮ್ಮ ವೃತ್ತಿಯಲ್ಲಿ ಅಳವಡಿಸಿಕೊಂಡಿರುವ ವೈದ್ಯರು, ಶಿಶುರೋಗ ತಜ್ಞರು ವಿಶ್ವದಾದ್ಯಂತ ಅದೆಷ್ಟೋ ಸಂಖ್ಯೆಯಲ್ಲಿದ್ದಾರೆ.

ದೇಹಾರೋಗ್ಯವನ್ನು ಸದೃಢಗೊಳಿಸುವ, ಏಕಾಗ್ರತೆ ಹೆಚ್ಚಿಸುವ ಉದ್ದೇಶದಿಂದ ಕಾಲೇಜು ವಿದ್ಯಾರ್ಥಿಗಳಿಗೆ ಸೂರ್ಯ ನಮಸ್ಕಾರ ಅಭ್ಯಸಿಸಲು ರಾಜ್ಯ ಸರ್ಕಾರ ಆದೇಶಿಸಿದೆ. ಮೊಬೈಲು, ಕಂಪ್ಯೂಟರ್‌ನಂತಹ ತಾಂತ್ರಿಕ ಸಲಕರಣೆಗಳ ಮೇಲಿನ ಅವಲಂಬನೆಯಿಂದ ಮಕ್ಕಳ ಮನಸ್ಸನ್ನು ಸೆಳೆಯಬಹುದೆಂಬ ಕಾರಣದಿಂದಲೂ ಇದು ಅವಶ್ಯಕ ಎಂದು ಹೇಳಲಾಗುತ್ತಿದೆ.

ಬಹುಶಃ ಇದೊಂದು ಅತಿಉತ್ಪ್ರೇಕ್ಷಿತ ಮಾತಷ್ಟೇ. ಹೀಗೆನ್ನುವುದಕ್ಕೆ ವೈಜ್ಞಾನಿಕ ಕಾರಣಗಳಿವೆ. ಕಾಲೇಜು ವಿದ್ಯಾರ್ಥಿ ದಿಸೆ ಆರಂಭವಾಗುವ ವಯಸ್ಸು ಹದಿಹರೆಯದ ಕೊನೆಯ ಅವಧಿಯಲ್ಲಿ ಇರುವಂತಹದ್ದು. ಉಲ್ಲಾಸ, ಉನ್ಮಾದ, ಸಾಹಸ, ಸಂಕಟ ಇವು ಆ ವಯೋಮಾನದವರ ಪ್ರಮುಖ ಲಕ್ಷಣಗಳು. ಇವನ್ನು ನಿಯಂತ್ರಿಸುವ ಅಥವಾ ನಿರ್ವಹಿಸುವ ಪ್ರಯತ್ನಗಳೂ ಜೊತೆಯಲ್ಲಿಯೇ ನಡೆಯುವುದು ದಿಟ. ಮನೆಯ ವಾತಾವರಣ, ಗೆಳೆಯರ ಗುಂಪು ಮತ್ತು ಸತತ ಸೋಲುಗಳು ಈ ನಿಯಂತ್ರಣದ ಮಾದರಿಗಳು.

ಆದರೂ ಹತ್ತಾರು ವಿಷಯಗಳತ್ತ ಸಾಗುವ ಮನಸ್ಸು, ಅತಿ ಕ್ಷಿಪ್ರವಾಗಿ ಎಲ್ಲವನ್ನೂ ಅನುಭವಿಸುವ ಬಯಕೆ, ಮೋಹ, ಪ್ರೇಮಗಳತ್ತ ಸದಾ ಸುಳಿಯುವ ಒಳಭಾವಗಳು, ಅಂದ-ಚೆಂದವನ್ನು ಸಂಭ್ರಮಿಸಿ ಸವಿಯುವ ನವ ಆಕಾಂಕ್ಷೆಗಳು ತುಂಬಿ ತುಳುಕುತ್ತಿರುವಂತಹ ಮನೋಶಾರೀರಿಕ ಸನ್ನಿವೇಶದ ಹಂತ ಇದು. ಈ ನಡೆನುಡಿಗಳಲ್ಲಿ ಅನೇಕವು ತಾತ್ಕಾಲಿಕವಾಗಿದ್ದು ನಂತರದಲ್ಲಿ ಸಂಪೂರ್ಣವಾಗಿ ಬದಲಾಗುತ್ತವೆ.

ಇಂತಹದ್ದೊಂದು ಮನುಷ್ಯ ಸಹಜ ಬೆಳವಣಿಗೆಯ ಅದ್ಭುತ ಅವಧಿಯನ್ನು ಒಂದು ಸರ್ಕಾರಿ ಆದೇಶದ ಮೂಲಕ ನಿಯಂತ್ರಿಸುತ್ತೇವೆ ಎಂದುಕೊಳ್ಳುವುದು ಸಂಭ್ರಾಂತಿಯಷ್ಟೇ. ಮನೋಗುಣಗಳಾದ ಅಭಿರುಚಿ, ಅಭಿಪ್ರೇರಣೆ, ಗುರಿ ಮುಟ್ಟುವ ಛಲಕ್ಕೆ ಅಗತ್ಯದ ವರ್ತನೆಗಳನ್ನು ಕಡೆಗಣಿಸುವ ಯಾವುದೇ ತಂತ್ರವು ಬಲವಂತದ ಹೇರಿಕೆಯಾಗುತ್ತದೆ. ಇನ್ನು ಮಕ್ಕಳ ಸ್ಮೃತಿ ಸಾಮರ್ಥ್ಯದ ಬಗ್ಗೆ ಹೇಳುವುದಾದರೆ, ನೆನಪು ಮತ್ತು ಮರೆವು ಎಲ್ಲರಲ್ಲಿಯೂ ಇರುವುದಾದರೂ ಒಂದೇ ರೀತಿ ಕಾರ್ಯನಿರ್ವಹಿಸದು. ಉದಾಹರಣೆಗೆ, ಕೆಲವರಿಗೆ ಅಂಕಿಗಳು ತಕ್ಷಣದಲ್ಲಿ ನೆನಪಿನಲ್ಲಿ ಉಳಿದಂತೆ, ಅಕ್ಷರಗಳು ಉಳಿಯದಿರಬಹುದು. ಸಾಮಾನ್ಯವಾಗಿ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಈ ವಿಷಯದ ಬಗ್ಗೆ ತಪ್ಪುಗ್ರಹಿಕೆಗಳೇ ಹೆಚ್ಚು. ಉದಾಹರಣೆಗೆ, ವಿಜ್ಞಾನ- ತಂತ್ರಜ್ಞಾನದ ಕಲಿಕೆಗೆ ಉತ್ತಮ ನೆನಪಿನ ಶಕ್ತಿ ಇರಬೇಕೆನ್ನುವುದೇನೂ ನಿಜವಲ್ಲ. ಕಲೆ, ಸಾಹಿತ್ಯದ ವಿಷಯಗಳ ಅಭ್ಯಾಸಕ್ಕೂ ಅದೇ ಮಟ್ಟದ ನೆನಪಿನ ಬಲ ಇರಬೇಕಾಗುತ್ತದೆ.



ಇಂತಹ ಮನೋಗುಣಗಳಿದ್ದ ಮಕ್ಕಳಿಗೆ ಸೂಕ್ತ ಕಲಿಕೆಯ ವಾತಾವರಣ ಇದ್ದ ಪಕ್ಷದಲ್ಲಿ ಏಕಾಗ್ರತೆ ಎನ್ನುವಂತಹ ಪದಬಳಕೆಯ ಅಗತ್ಯವೇ ಇರದು. ಬದಲಿಗೆ ಕಲಿಯುವಿಕೆ, ಕಲಿಸುವಿಕೆಯ ಪಾತ್ರವೇ ಮಹತ್ವದ್ದಾಗಿರುತ್ತದೆ. ಹಾಗೇ ಕಲಿಯುವಿಕೆಯಲ್ಲೂ ಕಲಿಸುವವರ ನೆರವು ಇಲ್ಲದೆಯೇ ಉತ್ತಮವಾಗಿ ಕಲಿಯುವುದು ಸಾಧ್ಯ. ಒಂದು ರೀತಿಯಲ್ಲಿ ಏಕಲವ್ಯನ ಕಲಿಕೆ ಇದ್ದ ಹಾಗೆ. ಅವನಲ್ಲಿ ಮುಖ್ಯವಾಗಿ ಇದ್ದದ್ದು ಕಲಿಯುವ ಆಸಕ್ತಿ. ಜೊತೆಗೆ ಕಲಿಯುವುದಕ್ಕೆ ಅಗತ್ಯ ಇದ್ದಂತಹ ವಾತಾವರಣ ಮತ್ತು ಅಭಿಪ್ರೇರಣೆ. ಇವು ಇಂದಿನ ದಿನಗಳಲ್ಲಿ ಶಾಲಾ ಕಾಲೇಜಿನ ಪರಿಸರದಿಂದ ದೂರವಿರುವುದೇ ಹೆಚ್ಚು. ಇಂದು ಶಿಕ್ಷಣ ಕ್ಷೇತ್ರವು ಅತಿಲಾಭ ತರಬಲ್ಲ ಉದ್ದಿಮೆಯ ಸ್ವರೂಪವನ್ನು ತಾಳಿರುವುದರಿಂದ ಬಹುಜನರಿಗೆ ಗುಣಮಟ್ಟದ ಶಿಕ್ಷಣ ಗಗನಕುಸುಮವೇ ಹೌದು. ಸೂರ್ಯ ನಮಸ್ಕಾರ ಇದನ್ನು ಬದಲಿಸಿಬಿಟ್ಟರೆ ಅದೆಷ್ಟು ಅಮೋಘ!

ಹಾಗೆಯೇ, ಇಂದು ನಮ್ಮ ಮನೋಸಾಮಾಜಿಕ ಆರೋಗ್ಯದ ಪರಿಸ್ಥಿತಿಯೂ ಕಳವಳಕಾರಿಯಾಗಿದೆ. ಸಾರ್ವಜನಿಕವಾಗಿ ಹಗೆತನ, ಹಿಂಸೆಯನ್ನೇ ಬೋಧಿಸುವ, ಪ್ರಚೋದಿಸುತ್ತಿರುವವರ ಗುಂಪುಗಳು ಬಲವಾಗಿ ಬೆಳೆಯುತ್ತಿದ್ದು ಮಕ್ಕಳು ಮತ್ತು ಯುವಜನರ ಮನಸ್ಸಿನಲ್ಲಿ ಆತಂಕ, ಗೊಂದಲಗಳನ್ನು ಸೃಷ್ಟಿಸುತ್ತಿವೆ. ಇದರೊಂದಿಗೆ ತಂತ್ರಜ್ಞಾನದ ಸೌಲಭ್ಯ ಮತ್ತು ಸಂವಹನದ ಮಾಧ್ಯಮಗಳೆಲ್ಲವೂ ಒಟ್ಟಾದಾಗ ಕಲಿಕೆಯ ಅಡಿಪಾಯವನ್ನೇ ಕದಲಿಸುವಷ್ಟು ಬಲವಾಗಿರುತ್ತವೆ.

ಒಂದು ಮಾತಂತೂ ಸತ್ಯ. ಯುವಜನರ ಶಕ್ತಿ-ಸಾಮರ್ಥ್ಯ ಹೆಚ್ಚಿಸಬೇಕೆಂಬ ಪ್ರಯತ್ನ ಶ್ಲಾಘನೀಯ. ಆದರದು ವೈಜ್ಞಾನಿಕ ಅಧ್ಯಯನಗಳು ಕಂಡುಕೊಂಡಂಥ ಸತ್ಯವಾಗಿರಬೇಕು. ಹಸಿವಿನಲ್ಲೂ ಪಾಠ ಕಲಿಯಲು ಶಾಲಾ ಕಾಲೇಜಿನತ್ತ ಬರುವ ಮಕ್ಕಳ ಘನೋದ್ದೇಶವನ್ನು ಬೆಂಬಲಿಸುವುದು ಮೆಚ್ಚಿಕೊಳ್ಳತಕ್ಕದ್ದು. ಬದಲಿಗೆ, ಕವಾಯತಿನ ರೀತಿಯಲ್ಲಿ ಮೈಕೈ ಚಲಿಸುವುದರ ಮೂಲಕ ಮನೋಸಿದ್ಧಿ, ಯೋಗಸಿದ್ಧಿ ಮಾಡಬೇಕೆನ್ನುವುದು ಯೋಗಶಾಸ್ತ್ರದ ಉದ್ದೇಶ ಮತ್ತು ನಿಯಮಗಳನ್ನು ನಿರಾಕರಿಸಿದಂತೆಯೇ ಸರಿ.

ಲೇಖಕ: ಮನೋವಿಜ್ಞಾನಿ

ವಾಚಕರ ವಾಣಿ

ಲಾಕ್‌ಡೌನ್ ಒಂದೇ ಪರಿಹಾರವಲ್ಲ

‘ಲಾಕ್‌ಡೌನ್’ ಎಂಬ ಮಾತು ಕೇಳಿದರೆ ಭಯ ಶುರುವಾಗುತ್ತದೆ. ಕಳೆದ ಎರಡು ವರ್ಷಗಳಲ್ಲಿ ಜನರಿಗೆ ಬದುಕು ಅತ್ಯಂತ ಭಯಾನಕ ಅನುಭವವನ್ನು ತಂದುಕೊಟ್ಟಿದೆ. ಈಗಷ್ಟೆ ಬದುಕು ಅಲ್ಲಲ್ಲಿ ಉಸಿರಾಡಲು, ಹರಳುಗಟ್ಟಲು ಪ್ರಾರಂಭಿಸಿದೆ. ಹೊಸ ವರ್ಷದ ಹೊಸ್ತಿಲಲ್ಲಿ ಹೊಸಹೊಸ ಆಶೋತ್ತರಗಳತ್ತ ಶ್ರೀಸಾಮಾನ್ಯ ಮುಖ ಮಾಡಿದ್ದಾನೆ. 20/21ರ ಕಹಿ ನೆನಪುಗಳನ್ನು ಎದೆಯೊಳಗೆ ನುಂಗಿಕೊಂಡು ಪ್ರಯಾಸದಿಂದ ನಗಲು ಕಲಿತಿದ್ದಾನೆ. ಹೀಗಿರುವಾಗ ಮತ್ತೆ ಲಾಕ್‌ಡೌನ್ ಜಾರಿಯಾದರೆ ಇಡೀ ಬದುಕಿಗೆ ಹಿಮ್ಮುಖವಾಗಿ ನಡೆಯುವ ಮನಃಸ್ಥಿತಿ ನಿರ್ಮಾಣವಾದರೂ ಅಚ್ಚರಿಯಿಲ್ಲ.

ಕೊರೊನಾ ನಿಯಂತ್ರಣಕ್ಕೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿ. ಆದರೆ ಲಾಕ್‌ಡೌನ್ ಬದಲಿಗೆ ಅನ್ಯ ಮಾರ್ಗಗಳನ್ನು ಹುಡುಕಲಿ. ಅದರಲ್ಲೂ ಶಾಲೆ ಕಾಲೇಜುಗಳು ಬಂದ್ ಆದರಂತೂ ಅಲ್ಲಿನ ಶಿಕ್ಷಕ ಮತ್ತು ಇತರ ಸಿಬ್ಬಂದಿಯ ಪಾಡು ಹೇಳತೀರದು. ಈ ದೃಷ್ಟಿಯಿಂದ ಒಂದು ವೇಳೆ ಶಾಲಾ ಕಾಲೇಜುಗಳನ್ನು ಲಾಕ್‌ಡೌನ್ ಮಾಡಲೇಬೇಕಾದ ಅನಿವಾರ್ಯ ಎದುರಾದರೆ, ಸರಿಯಾಗಿ ಸಂಬಳ ವಿತರಣೆಯಾಗುವಂತೆ ಸರ್ಕಾರ ನಿಗಾ ವಹಿಸಲಿ.

ಯಾಕೆಂದರೆ ಕಳೆದ ವರ್ಷದ ಲಾಕ್‌ಡೌನ್ ಸಮಯದಲ್ಲಿ ಅನೇಕ ಖಾಸಗಿ ಶಾಲಾ ಕಾಲೇಜುಗಳ ಆಡಳಿತ ಮಂಡಳಿಗಳು ಸಿಬ್ಬಂದಿಗೆ ವೇತನ ನೀಡಿಲ್ಲ. ಆದರೆ ಪೋಷಕರಿಂದ ಬಾಕಿ ಹಣದ ವಸೂಲಿ ಮಾತ್ರ ಕೈಬಿಡಲಿಲ್ಲ. ಹೀಗಾಗಿ ಲಾಕ್‌ಡೌನ್‌ನಂತಹ ಕ್ಲಿಷ್ಟ ಪರಿಸ್ಥಿತಿಯನ್ನು ಸರ್ಕಾರ ಅರ್ಥಮಾಡಿಕೊಳ್ಳಬೇಕು. ಲಾಕ್‌ಡೌನ್ ಒಂದೇ ಪರಿಹಾರ ಅಲ್ಲ ಎಂಬುದನ್ನು ಮನಗಾಣಬೇಕು.

ಅಶ್ವತ್ಥ ಕಲ್ಲೇದೇವರಹಳ್ಳಿ, ಕುಂಕಾನಾಡು, ಕಡೂರು

ಅಂಥದ್ದೇ ಸೇವೆ!

ತಿರುಪತಿ ದೇವಾಲಯದ
ಗರ್ಭಗುಡಿಯಲ್ಲಿ ಕುಳಿತು,
ಸುಪ್ರಭಾತದಿಂದ ಮುಕ್ತಾಯದ ಹಂತದವರೆಗಿನ
ದೈನಂದಿನ ಸೇವಾ ಆಚರಣೆ ನೋಡಲು
ಒಂದು ಕೋಟಿಯಿಂದ ಒಂದೂವರೆ ಕೋಟಿ
ರೂಪಾಯಿಯಂತೆ!- ಇದಕ್ಕೆ
‘ಉದಯಾಸ್ತಮಾನ ಸೇವೆ’
ಎಂಬ ಹೆಸರು!
***
ಬಯಲುಸೀಮೆಯ ‘ಸನ್‌ರೈಸ್’
ಮಲೆನಾಡಿನ ‘ನೆತ್ತಿಬಿಸಿಲು’
ಕಡಲತೀರದ ‘ಸನ್‌ಸೆಟ್’
ಇವುಗಳ ‘ಮೈತ್ರಿ’ಯಿಂದ,
ಬಯಲೆಂಬ ದೇಗುಲದಿ
ಬೆಳಕೆಂಬ ದೇವರ
ದರ್ಶನವಾಗುವುದು!- ಇದಕ್ಕೂ
‘ಉದಯಾಸ್ತಮಾನ ಸೇವೆ’
ಎಂದೇ ಹೆಸರು. ಆದರೆ ಈ ಸೇವೆ
ನೂರಕ್ಕೆ ನೂರು ಉಚಿತ!

ಗಿರೀಶ್ ಮೂಗ್ತಿಹಳ್ಳಿ, ಚಿಕ್ಕಮಗಳೂರು

ಸಾಫ್ಟ್ ಕಾಪಿಯನ್ನೂ ಖರೀದಿಸಲಾಗುವುದೇ?

2021ರಲ್ಲಿ ಪ್ರಕಟವಾದ ಪುಸ್ತಕಗಳನ್ನು ಆಯ್ಕೆಗಾಗಿ ಸಲ್ಲಿಸಲು ಸಾರ್ವಜನಿಕ ಗ್ರಂಥಾಲಯ ಇಲಾಖೆ ಪ್ರಕಟಣೆ ಹೊರಡಿಸಿ, ಪ್ರಕಟಿತ ಪುಸ್ತಕದ ಜೊತೆಯಲ್ಲಿ ಇಚ್ಛೆಯುಳ್ಳವರು ಆ ಕೃತಿಯ ಸಾಫ್ಟ್ ಕಾಪಿಯ ಸಿ.ಡಿಯನ್ನು ನಿಗದಿತ ಅರ್ಜಿಯ ಜೊತೆಗೆ ಕಳುಹಿಸಲು ಕೋರಿದೆ. ಪುಟ ಸಂಖ್ಯೆ, ಉಪಯೋಗಿಸಿದ ಕಾಗದದ ಗುಣಮಟ್ಟದ ಮೇಲೆ ಪುಸ್ತಕದ ಬೆಲೆಯನ್ನು ನಿರ್ಧರಿಸಿ, ಆಯ್ಕೆಯಾದ ಪುಸ್ತಕದ ಇಂತಿಷ್ಟು ಪ್ರತಿಗಳನ್ನು ಖರೀದಿಸಲಾಗುತ್ತದೆ. ಆದರೆ ಸಿ.ಡಿ.ಯಲ್ಲಿ ಸಲ್ಲಿಸಿದ ಪುಸ್ತಕದ ಸಾಫ್ಟ್ ಕಾಪಿ ಆಯ್ಕೆಯಾದರೆ ಅದನ್ನು ಖರೀದಿಸುವರೇ? ಸ್ಪಷ್ಟವಾಗಿಲ್ಲ. ಖರೀದಿಸದೆ ಅದನ್ನು ಡಿಜಿಟಲ್ ಲೈಬ್ರರಿಯಲ್ಲಿ ಓದಲು ಅವಕಾಶ ಕಲ್ಪಿಸುವುದಾದರೆ, ಮಾರಾಟ ಕುಸಿದು ಪ್ರಕಾಶಕರಿಗೆ ನಷ್ಟವಾಗುತ್ತದೆ. ಇದರಿಂದ ಆಯ್ಕೆಯಾದ ಸಾಫ್ಟ್ ಕಾಪಿಗೂ ಇಂತಿಷ್ಟು ಬೆಲೆ ನಿಗದಿ ಮಾಡಿದರೆ, ಇದರಿಂದ ಪುಸ್ತಕ ಮಾರಾಟದಲ್ಲಿನ ನಷ್ಟ ಸರಿದೂಗಿ, ಇಚ್ಛೆಯುಳ್ಳವರು ಸಾಫ್ಟ್ ಕಾಪಿಯನ್ನು ಡಿಜಿಟಲ್ ಲೈಬ್ರರಿಯಲ್ಲಿ ಉಪಯೋಗಿಸಲು ಒಪ್ಪಿಗೆ ಕೊಡುತ್ತಾರೆ.

ಸತ್ಯಬೋಧ, ಬೆಂಗಳೂರು

ಹೊಸ ರಸ್ತೆ: ತಿರುಪತಿ ಕ್ಷೇತ್ರಕ್ಕೆ ಮತ್ತೊಂದು ಅಪಾಯ

ದಿನವೂ ಭಾರಿ ಸಂಖ್ಯೆಯ ಭಕ್ತಾದಿಗಳು ಮತ್ತು ಪ್ರವಾಸಿಗರು ಭೇಟಿ ನೀಡುವ ತಿರುಪತಿ ಕ್ಷೇತ್ರವು ಈಗಾಗಲೇ ವಾಹನಗಳು, ಕಟ್ಟಡಗಳು ಮತ್ತು ಧಾರಣಾ ಶಕ್ತಿಯನ್ನು ಮೀರಿದ ಜನರ ಆಗಮನ-ನಿರ್ಗಮನಗಳಿಂದ ವಿಪರೀತ ಒತ್ತಡವನ್ನು ಎದುರಿಸಿ, ನಲುಗುತ್ತಿದೆ. ಪರಿಸ್ಥಿತಿ ಹೀಗಿರುವಾಗ, ತಿರುಪತಿಯ ಸೂಕ್ಷ್ಮ ಜೈವಿಕ ಪರಿಸರವನ್ನು ಸಂರಕ್ಷಿಸಿಕೊಳ್ಳಲು ಗಮನ ಹರಿಸಬೇಕಾದ್ದು ತುರ್ತಾಗಿದೆ. ಆದರೆ ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಮಂಡಳಿಯವರು ಇದನ್ನು ಬಿಟ್ಟು, ಈಗ ಬೆಟ್ಟದ ಮೇಲಕ್ಕೆ ಇನ್ನೊಂದು ರಸ್ತೆ ಮಾಡಲು ಹೊರಟಿದ್ದಾರೆ. ಇದಕ್ಕಾಗಿ ಅವರು, ಇದರಿಂದ ಹೈದರಾಬಾದ್ ಮತ್ತು ಕಡಪಾ ಕಡೆಯಿಂದ ಬರುವ ಭಕ್ತಾದಿಗಳಿಗೆ ಅನುಕೂಲವಾಗುತ್ತದೆ ಎನ್ನುವ ಸಬೂಬನ್ನು ಬೇರೆ ಹೇಳುತ್ತಿದ್ದಾರೆ.

ಕೆಲ ದಿನಗಳ ಹಿಂದೆ ಭೋರ್ಗರೆದು ಸುರಿದ ಮಳೆಯಿಂದಾಗಿ ತಿರುಪತಿಯಲ್ಲಿ ಜಲಪ್ರಳಯದ ಸ್ಥಿತಿ ಸೃಷ್ಟಿಯಾಗಿತ್ತು. ನಮ್ಮ ಮೈಸೂರಿನ ಚಾಮುಂಡಿ ಬೆಟ್ಟದಲ್ಲೂ ಹೀಗೆಯೇ ಆಗಿತ್ತು. ವರ್ಷಗಳ ಹಿಂದೆ ಮಡಿಕೇರಿಯ ಬ್ರಹ್ಮಗಿರಿ ಬೆಟ್ಟ ಕುಸಿದಿತ್ತು. ಚಿಕ್ಕಮಗಳೂರು- ಕೊಡಗು, ಶಿರಾಡಿ ಘಾಟ್ ಮತ್ತು ಚಾರ್ಮಾಡಿ ಘಾಟ್‌ಗಳಲ್ಲಿ ನೂರಾರು ಕಡೆ ಭೂಕುಸಿತ ಸಂಭವಿಸಿ ಬಹಳಷ್ಟು ಹಾನಿಯಾಯಿತು. ಇವೆಲ್ಲವೂ ಎಗ್ಗಿಲ್ಲದೆ ನಡೆಯುತ್ತಿರುವ ಅಭಿವೃದ್ಧಿ ಚಟುವಟಿಕೆಗಳ ನೇರ ಪರಿಣಾಮಗಳಾಗಿವೆ. ಪುಣ್ಯಕ್ಷೇತ್ರಗಳಿಗೆ ಜನ ಅನೂಚಾನವಾಗಿ ಹೋಗುವುದು ಶಾಂತಿಯನ್ನು ಅರಸಿಕೊಂಡು. ಆದರೆ, ಟೂರಿಸಂನ ಕಲ್ಪನೆ ಮುಂಚೂಣಿಗೆ ಬಂದಮೇಲೆ ಇಂತಹ ಸ್ಥಳಗಳೆಲ್ಲ ಸಂತೆಗಳಂತಾಗಿ ಹೋಗಿವೆ. ಸಂತೆಯ ಗದ್ದಲದಲ್ಲಿ ಭಕ್ತರಿಗೆ ಶಾಂತಿ ಎಲ್ಲಿಂದ ಬಂದೀತು? ನಮ್ಮ ಎಲ್ಲ ಪುಣ್ಯಕ್ಷೇತ್ರಗಳಿಗೂ ಒಂದು ಪಾವಿತ್ರ್ಯವಿದೆ. ಇದು ಬಂದಿರುವುದು ಅಂತಹ ಕ್ಷೇತ್ರಗಳಲ್ಲಿ ಹಿಂದೆ ಇದ್ದ ಶ್ರೀಶಾಂತಿ, ಆಧ್ಯಾತ್ಮಿಕ ಜಾಗೃತಿಯನ್ನು ಹುಟ್ಟಿಸುತ್ತಿದ್ದ ಮೌನ ಮತ್ತು ಅಲ್ಲಿನ ಸ್ವಚ್ಛ ಪರಿಸರದಿಂದ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಂತಹ ಕಡೆಗಳಲ್ಲಿ ಆ ‘ಡಿವೈನ್’ ಆದ ಅಂಶಗಳ ಪುನರುತ್ಥಾನಕ್ಕೆ ಆದ್ಯತೆ ಕೊಡಬೇಕು. ತಿರುಪತಿಯಲ್ಲಿ ಇನ್ನೊಂದು ರಸ್ತೆ ಮಾಡುವುದೆಂದರೆ ಅದು ಆ ಕ್ಷೇತ್ರವನ್ನು ಮತ್ತಷ್ಟು ಅಪಾಯದ ದವಡೆಗೆ ನೂಕಿದಂತೆ. ಸಂಬಂಧಿಸಿದವರು ಇನ್ನಾದರೂ ಸರಿಯಾಗಿ ಯೋಚಿಸಲಿ.

ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚುನಾವಣಾ ಕಣದಲ್ಲಿ ಸ್ತ್ರೀ ಪ್ರಾತಿನಿಧ್ಯದ ಸವಾಲು

• ಹಮೀದ್ ಕೆ., ಜಯಸಿಂಹ ಆರ್.

ಫಿರೋಜಾಬಾದ್‌ನ ಸಿರ್ಸಾಗಂಜ್‌ನಲ್ಲಿ ಇತ್ತೀಚೆಗೆ ನಡೆದ 'ಶಕ್ತಿ ಸಂವಾದ'ದಲ್ಲಿ ಪ್ರಿಯಾಂಕಾ ಗಾಂಧಿ

ಭಾರತದ ರಾಜಕಾರಣ ಅದರಲ್ಲೂ ವಿಶೇಷವಾಗಿ ಉತ್ತರ ಪ್ರದೇಶದ ರಾಜಕಾರಣ ಜಾತಿ, ಧರ್ಮ, ಪ್ರಾದೇಶಿಕತೆಯನ್ನು ದಾಟಿ ಎಲ್ಲಿಯೂ ಹೋಗಿದ್ದೇ ಇಲ್ಲ. ಎಲ್ಲ ರಾಜಕೀಯ ಪಕ್ಷಗಳೂ ಅಭಿವೃದ್ಧಿಯ ಕುರಿತು ಮಾತುಆಡಿದ್ದರೂ, ಚುನಾವಣೆಯಲ್ಲಿ ಅದೊಂದು ಮುಖ್ಯ ವಿಷಯವಾಗಿ ಪರಿಗಣಿತವಾಗಿದ್ದೇ ಇಲ್ಲ. ಆದರೆ, ಈ ಬಾರಿ ವಿಧಾನಸಭೆ ಚುನಾವಣಾ ಕಣ ಭಿನ್ನವಾಗಿದೆ. ಅದಕ್ಕೆ ಕಾರಣ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ. ಮಹಿಳಾ ಮತದಾರರನ್ನೇ ಕೇಂದ್ರೀಕರಿಸಿ ಚುನಾವಣಾ ಪ್ರಚಾರ ನಡೆಸುವುದು ಪ್ರಿಯಾಂಕಾ ಅವರ ಕಾರ್ಯತಂತ್ರ. ಉತ್ತರ ಪ್ರದೇಶದಲ್ಲಿ ನಗಣ್ಯವೆಂದೇ ಭಾವಿಸಲಾಗಿದ್ದ ಕಾಂಗ್ರೆಸ್ ಪಕ್ಷದತ್ತ ಎಲ್ಲರೂ ಕಣ್ಣೆತ್ತಿ ನೋಡುವಂತೆ ಮಾಡುವಲ್ಲಿ ಪ್ರಿಯಾಂಕಾ ಯಶಸ್ವಿಯಾಗಿದ್ದಾರೆ.

ರಾಜೀವ್ ಗಾಂಧಿ ಅವರು ಕಾಂಗ್ರೆಸ್ ನಾಯಕರಾಗಿದ್ದ ಸಂದರ್ಭದಲ್ಲಿ 1989ರಲ್ಲಿ ಪಕ್ಷವು ಉತ್ತರ ಪ್ರದೇಶದಲ್ಲಿ ಸೋತಿತ್ತು. ಮತ್ತೆ ಅಲ್ಲಿ ಅಧಿಕಾರಕ್ಕೆ ಬರಲು ಪಕ್ಷಕ್ಕೆ ಸಾಧ್ಯವಾಗಲೇ ಇಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಅಂತೂ ಪಕ್ಷವು ಪಾತಾಳಕ್ಕೆ ಕುಸಿಯಿತು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ರಾಹುಲ್ ಗಾಂಧಿ ಅವರು ಅಮೇಠಿ ಲೋಕಸಭಾ ಕ್ಷೇತ್ರದಲ್ಲಿ ಸೋಲುಂಡರು. ಹಾಗಾಗಿಯೇ, ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಬಗ್ಗೆ ಯಾರಿಗೂ ಯಾವ ನಿರೀಕ್ಷೆಯೂ ಇರಲಿಲ್ಲ.

ಈಗ ಚಿತ್ರಣ ಬದಲಾಗಿದೆ. ವಿಧಾನಸಭಾ ಚುನಾವಣೆಯಲ್ಲಿ ಶೇ 40ರಷ್ಟು ಟಿಕೆಟ್‌ಗಳನ್ನು ಮಹಿಳೆಯರಿಗೆ ಮೀಸಲಿಡಲಾಗುವುದು ಎಂದು 2021ರ ಅಕ್ಟೋಬರ್‌ನಲ್ಲಿ ಪ್ರಿಯಾಂಕಾ ಪ್ರಕಟಿಸಿದರು. 'ನಾನು ಹುಡುಗಿ, ನಾನು ಹೋರಾಡಬಲ್ಲೆ' ಎಂಬ ಘೋಷಣೆ ಹೊರಡಿಸಿದರು. 'ಬದಲಾವಣೆ ಬಯಸಿರುವ, ನ್ಯಾಯಕ್ಕಾಗಿ ಹೋರಾಡುವ, ಒಗ್ಗಟ್ಟು ಮತ್ತು ಅಭಿವೃದ್ಧಿಗಾಗಿ ಕೆಲಸ ಮಾಡುವ ಎಲ್ಲ ಮಹಿಳೆಯರಿಗಾಗಿ ಈ ನಿರ್ಧಾರ. ಮಮತೆ, ದೃಢತೆ ಮತ್ತು ಶಕ್ತಿ ಮಹಿಳೆಯರಲ್ಲಿ ಮಾತ್ರ ಇದೆ. ಹಾಗಾಗಿ, ಅವರು ಮಾತ್ರ ಬದಲಾವಣೆ ತರಬಲ್ಲರು. ರಾಜ್ಯದ ರಾಜಕಾರಣದಲ್ಲಿ ಮಹಿಳೆಯರಿಗೆ ಪೂರ್ಣ ಪ್ರಾತಿನಿಧ್ಯ ಖಾತರಿಯ ಭರವಸೆ ಕೊಡುತ್ತೇನೆ' ಎಂದು ಪ್ರಿಯಾಂಕಾ ಆಗ ಹೇಳಿದ್ದರು.

ಜಡತ್ವ ಕಾಂಗ್ರೆಸ್‌ನ ಜಾಯಮಾನ. ಆದರೆ, ಪ್ರಿಯಾಂಕಾ ಅವರು ಈ ಜಡತ್ವವನ್ನು ಕೊಡವಿ ಮೇಲೆದ್ದಿದ್ದಾರೆ. ಮಹಿಳಾ ಕೇಂದ್ರಿತವಾದ ರಾಜಕಾರಣವನ್ನು ಮುನ್ನೆಲೆಗೆ ತರುವುದಕ್ಕಾಗಿ ನೂರು ದಿನಗಳ ಕಾರ್ಯತಂತ್ರವನ್ನು ಹಾಕಿಕೊಂಡಿದ್ದಾರೆ. ಕಳೆದ ವರ್ಷದ ನವೆಂಬರ್ 17ರಿಂದ ಇದು ಆರಂಭವಾಗಿದೆ. ಉತ್ತರ ಪ್ರದೇಶದಲ್ಲಿ ಸುಮಾರು ಏಳು ಕೋಟಿ ಮಹಿಳಾ ಮತದಾರರಿದ್ದಾರೆ. ಈ ಮತದಾರರ ಪೈಕಿ ದೊಡ್ಡ ಭಾಗವು ತಮ್ಮ ಪಕ್ಷಕ್ಕೆ ಮತ ಹಾಕುವಂತೆ ಮಾಡಬೇಕು ಎಂಬುದು ಪ್ರಿಯಾಂಕಾ ಲೆಕ್ಕಾಚಾರ.

ನೂರು ದಿನಗಳಲ್ಲಿ ನಾಲ್ಕು ಕೋಟಿ ಮಹಿಳೆಯರನ್ನು ತಲುಪಬೇಕು ಎಂಬುದು ಕಾಂಗ್ರೆಸ್ ಪಕ್ಷದ ಯೋಜನೆ. ಇದಕ್ಕಾಗಿ ಎಂಟು ಸಾವಿರ ಸ್ವಯಂ ಸೇವಕಿಯರ ತಂಡವನ್ನು ಕಟ್ಟಲಾಗಿದೆ. 150 ವೃತ್ತಿಪರರ ತಂಡವು ನೇಪಥ್ಯದಲ್ಲಿ ಕೆಲಸ ಮಾಡುತ್ತಿದೆ. ಸ್ವಯಂ ಸೇವಕಿಯರ ತಂಡವು ಪ್ರತಿದಿನ 2 ಲಕ್ಷ ಮಹಿಳೆಯರನ್ನು ಭೇಟಿಯಾಗಿ ಪ್ರಿಯಾಂಕಾ ಅವರ ಸಂದೇಶವನ್ನು ತಿಳಿಸುತ್ತಿದೆ.

ಮಹಿಳೆಯರು ಮನೆಯಲ್ಲಿರುವ ಗಂಡಸರ ಮಾತಿನಂತೆ ಮತ ಚಲಾಯಿಸುತ್ತಾರೆ ಎಂಬ ಸ್ಥಿತಿ ಹಿಂದೆ ಇತ್ತೋ ಇಲ್ಲವೋ ಗೊತ್ತಿಲ್ಲ. ಈಗಂತೂ ಆ ಸ್ಥಿತಿ ಇಲ್ಲ. ಈಗ, ಮಹಿಳೆಯರು ಪುರುಷರಿಗಿಂತ ಭಿನ್ನವಾಗಿ ಚಿಂತಿಸಿ ಮತ ಹಾಕುತ್ತಾರೆ ಎಂಬುದಕ್ಕೆ ಪುರಾವೆಗಳು ಸಿಗುತ್ತವೆ. ಜತೆಗೆ, 2019ರ ಲೋಕಸಭಾ ಚುನಾವಣೆಯನ್ನೇ ತೆಗೆದುಕೊಂಡರೂ ಮತದಾನದಲ್ಲಿ ಮಹಿಳೆಯರ ಪ್ರಮಾಣ ಹೆಚ್ಚು. ಶೇ 63ರಷ್ಟು ಮಹಿಳೆಯರು ಮತ ಚಲಾಯಿಸಿದ್ದರೆ, ಪುರುಷರಲ್ಲಿ ಶೇ 59ರಷ್ಟು ಮಂದಿ ಮಾತ್ರ ಮತ ಹಾಕಿದ್ದಾರೆ. ಹಾಗಾಗಿ, ಪ್ರಿಯಾಂಕಾ ಕಾರ್ಯತಂತ್ರವು ಕಾಂಗ್ರೆಸ್ ಪಕ್ಷದ ಪುನಶ್ಚೇತನದ ಭರವಸೆಯನ್ನು ಮೂಡಿಸಿದೆ.

ಜನಸಂಖ್ಯೆಯ ಸುಮಾರು ಶೇ 50ರಷ್ಟಿರುವ ಮಹಿಳಾ ವರ್ಗಕ್ಕೆ ಅಗತ್ಯ ಪ್ರಾತಿನಿಧ್ಯ ನಿರಾಕರಿಸುವುದು ಸಾಧ್ಯವೇ ಇಲ್ಲ ಎಂದು ಪ್ರಿಯಾಂಕಾ ಮತ್ತೆ ಮತ್ತೆ ಹೇಳಿದ್ದಾರೆ. ರಾಜಕೀಯ ಘೋಷಣೆ ಮಾತ್ರ ಆಗಬಹುದಾಗಿದ್ದ ನಿರ್ಧಾರವನ್ನು ಲಿಂಗ ಸಮಾನತೆ ಮತ್ತು ಸಮಾನ ಪ್ರಾತಿನಿಧ್ಯಕ್ಕಾಗಿ ಹೋರಾಟ ಎಂಬ ಸೈದ್ಧಾಂತಿಕ ಮಟ್ಟಕ್ಕೆ ಒಯ್ಯುವಲ್ಲಿ ಪ್ರಿಯಾಂಕಾ ಯಶಸ್ವಿಯಾಗಿದ್ದಾರೆ.

ಅಷ್ಟೇ ಅಲ್ಲ; ಉತ್ತರ ಪ್ರದೇಶ ರಾಜಕೀಯ ದಿಗಂತದಲ್ಲಿ ತಾವು ನಿರ್ಲಕ್ಷಿಸಬಹುದಾದ ವ್ಯಕ್ತಿ ಅಲ್ಲ ಎಂಬುದನ್ನು ಸಾರುವಂತೆ ಅವರು ಕೆಲಸ ಮಾಡುತ್ತಿದ್ದಾರೆ. ಹಾಥರಸ್ ಅತ್ಯಾಚಾರ ಪ್ರಕರಣದ ನಂತರ, ಉತ್ತರ ಪ್ರದೇಶದಲ್ಲಿ ನಡೆದ ಅಪರಾಧ ಪ್ರಕರಣಗಳ ವಿರುದ್ಧ ಸದಾ ಧ್ವನಿ ಎತ್ತಿದ್ದಾರೆ. ಕೇಂದ್ರ ಸಚಿವ ಅಜಯ್ ಮಿಶ್ರಾ ಮಗ ಆಶಿಶ್ ಮಿಶ್ರಾ ಅವರಿದ್ದರು ಎಂದು ಹೇಳಲಾದ ಎಸ್‌ಯುವಿ ರೈತರ ಮೇಲೆ ಹರಿದು ನಾಲ್ವರ ಹತ್ಯೆ ಪ್ರಕರಣ ಕಳೆದ ಅಕ್ಟೋಬರ್‌ನಲ್ಲಿ ನಡೆದಿತ್ತು. ಮೃತ ರೈತರ ಮನೆಗೆ ಹೊರಟ ಪ್ರಿಯಾಂಕಾ ಅವರನ್ನು ಪೊಲೀಸರು ತಡೆದಿದ್ದರು. ಪ್ರಿಯಾಂಕಾ ಅವರ ಪಟ್ಟಿನಿಂದಾಗಿ ರೈತರ ಕುಟುಂಬವನ್ನು ಭೇಟಿಯಾಗಲು ಅವಕಾಶ ಕೊಡಲೇಬೇಕಾದ ಅನಿವಾರ್ಯ ಸರ್ಕಾರಕ್ಕೆ ಸೃಷ್ಟಿಯಾಗಿತ್ತು. ಇದು ಪ್ರಿಯಾಂಕಾ ಅವರ ನಾಯಕತ್ವದ ಬಗ್ಗೆ ಜನರಲ್ಲಿ ಭರವಸೆ ಮೂಡಿಸಿದೆ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ.

ಪ್ರಿಯಾಂಕಾ ಅವರ ಕಾರ್ಯತಂತ್ರವು ಕಾಂಗ್ರೆಸ್ ಪಕ್ಷಕ್ಕೆ ಚುನಾವಣೆಯಲ್ಲಿ ಎಷ್ಟು ನೆರವಾಗಲಿದೆ ಎಂಬುದನ್ನು ಫಲಿತಾಂಶವಷ್ಟೇ ಹೇಳಬಲ್ಲುದು. ಆದರೆ, ಹೊಸತೊಂದು ಚರ್ಚೆ ಹುಟ್ಟುಹಾಕುವಲ್ಲಿ ಅದು ಯಶಸ್ವಿಯಾಗಿದೆ.

ಭರವಸೆಯಾಗಿಯೇ ಉಳಿದ ಶೇ 33ರಷ್ಟು ಮೀಸಲಾತಿ

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಶೇ 40ರಷ್ಟು ಟಿಕೆಟ್‌ಗಳನ್ನು ಮಹಿಳೆಯರಿಗೆ ನೀಡುತ್ತೇವೆ ಎಂದು ಪ್ರಿಯಾಂಕಾ ಗಾಂಧಿ ಘೋಷಿಸಿದ್ದಾರೆ. ಆದರೆ ಲೋಕಸಭೆಯಲ್ಲಿ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಸ್ಥಾನಗಳನ್ನು ಮೀಸಲಿರಿಸಲು ಅವಕಾಶ ಮಾಡಿಕೊಡುವ 'ಮಹಿಳಾ ಪ್ರಾತಿನಿಧ್ಯ (ತಿದ್ದುಪಡಿ) ಮಸೂದೆ'ಗೆ ಸಂಸತ್ತಿನ ಅನುಮೋದನೆ ದೊರೆಯದೆ ದೂಳು ಹಿಡಿದಿದೆ.

1993ರಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಶೇ 50ರಷ್ಟು ಸ್ಥಾನಗಳನ್ನು ಮೀಸಲಿಟ್ಟ ನಂತರ, ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲೂ ಮಹಿಳೆಯರಿಗೆ ಶೇ 33ರಷ್ಟು ಸ್ಥಾನ ಮೀಸಲಿಡುವ ವಿಚಾರ ಮುನ್ನೆಲೆಗೆ ಬಂದಿತ್ತು. ಇದರ ಫಲವಾಗಿ 1996ರಲ್ಲಿ ಸಂಸತ್ತಿನಲ್ಲಿ ಮೊದಲ ಬಾರಿಗೆ ತಿದ್ದುಪಡಿ ಮಸೂದೆಯನ್ನು ಮಂಡಿಸಲಾಯಿತು. ಆದರೆ ಮಸೂದೆ ಅಂಗೀಕಾರ ಆಗಲಿಲ್ಲ. 1999ರಲ್ಲೂ ಹೀಗೇ ಆಯಿತು. 2008ರಲ್ಲಿ ಈ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಲಾಯಿತು. ಸುದೀರ್ಘ ಚರ್ಚೆ ಮತ್ತು ಸಂಸದೀಯ ಸಮಿತಿಯ ಪರಿಶೀಲನೆಯ ನಂತರ ರಾಜ್ಯಸಭೆಯಲ್ಲಿ ಈ ಮಸೂದೆಗೆ 2010ರಲ್ಲಿ ಅನುಮೋದನೆ ದೊರೆಯಿತು. ಆದರೆ ಮಂಡನೆ ವೇಳೆ ಕಾನೂನು ಸಚಿವರ ಕೈಯಿಂದ ಮಸೂದೆಯ ಪ್ರತಿಯನ್ನು ಕಿತ್ತುಕೊಳ್ಳುವ ಯತ್ನವೂ ನಡೆದಿತ್ತು.

ಭಾರಿ ಸಾಹಸದ ಫಲವಾಗಿ ದೊರೆತಿದ್ದ ಈ ಅನುಮೋದನೆಯನ್ನು ಬಳಸಿಕೊಳ್ಳುವಲ್ಲಿ ಅಂದಿನ ಸರ್ಕಾರ ವಿಫಲವಾಯಿತು. ಲೋಕಸಭೆಯಲ್ಲಿ ಈ ಮಸೂದೆಗೆ ಅನುಮೋದನೆ ಪಡೆದುಕೊಳ್ಳಲು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಯುಪಿಎ ಭಾಗವಾಗಿದ್ದ ಸಮಾಜವಾದಿ ಪಕ್ಷವು ಈ ಮಸೂದೆಗೆ ಪ್ರಬಲ ವಿರೋಧ ವ್ಯಕ್ತಪಡಿಸಿತ್ತು. 2014ರಲ್ಲಿ ಲೋಕಸಭೆಯ ಅವಧಿ ಮುಗಿದ ಕಾರಣ, ಮಸೂದೆ ಮಾನ್ಯತೆಯನ್ನು ಕಳೆದುಕೊಂಡಿತು.

ಅಧಿಕಾರಕ್ಕೆ ಬಂದರೆ ಮತ್ತೆ ಈ ಮಸೂದೆಯನ್ನು ಮಂಡಿಸುತ್ತೇವೆ ಎಂದು 2014ರ ಲೋಕಸಭಾ ಚುನಾವಣೆಯ ಪ್ರಚಾರದ ವೇಳೆ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಘೋಷಿಸಿದ್ದವು. ಎರಡೂ ಪಕ್ಷಗಳು ತಮ್ಮ ಪ್ರಣಾಳಿಕೆಗಳಲ್ಲಿ ಈ ವಿಚಾರವನ್ನು ಸೇರಿಸಿಕೊಂಡಿದ್ದವು. ಆದರೆ ಬಹುಮತದೊಂದಿಗೆ ಅಧಿಕಾರಕ್ಕೆ ಬಂದ ಬಿಜೆಪಿಯು ಈ ಮಸೂದೆಯನ್ನು ಸಂಸತ್ತಿನಲ್ಲಿ ಮತ್ತೆ ಮಂಡಿಸುವ ಯತ್ನವನ್ನೇ ಮಾಡಿಲ್ಲ. 2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲೂ ಬಿಜೆಪಿ ಈ ಭರವಸೆಯನ್ನು ನೀಡಿತ್ತು. ಆದರೆ ಅದು ಭರವಸೆಯಾಗಿಯೇ ಇದೆ.

ಈಗ ಬಿಜೆಪಿ ಸರ್ಕಾರ, ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶ ಚುನಾವಣೆಗಳಲ್ಲಿ ಮಹಿಳಾ ಸಬಲೀಕರಣದ ಮಾತುಗಳನ್ನು ಆಡುತ್ತಿದ್ದಾರೆ. ಆದರೆ, ಈ ಯಾವ ಮಾತುಗಳಲ್ಲೂ ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ 33ರಷ್ಟು ಸ್ಥಾನಗಳನ್ನು ಮೀಸಲಿರಿಸುವ ಒಂದು ಉಲ್ಲೇಖವೂ ಇಲ್ಲ.

ಕಾಂಗ್ರೆಸ್ ಅನ್ನು ಅನುಸರಿಸಿದ ಬಿಜೆಪಿ

ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಮಹಿಳೆಯರನ್ನೇ ಕೇಂದ್ರವಾಗಿಸುವ ಕಾಂಗ್ರೆಸ್‌ನ ತಂತ್ರಗಾರಿಕೆಯನ್ನು ಅನುಸರಿಸಲು ಬಿಜೆಪಿಯೂ ಮುಂದಾಗಿದೆ. ಕಾಂಗ್ರೆಸ್‌ನ ಈ ತಂತ್ರಗಾರಿಕೆಗೆ ವ್ಯಕ್ತವಾಗುತ್ತಿರುವ ಭಾರಿ ಪ್ರತಿಕ್ರಿಯೆ ಕಂಡು ಇದೇ ಹಾದಿಯಲ್ಲಿ ಮುನ್ನಡೆಯಲು ಬಿಜೆಪಿಯೂ ನಿರ್ಧರಿಸಿದೆ. ಹೀಗಾಗಿ ಮಹಿಳೆಯರ ಓಲೈಕೆಗೆ ಮುಂದಾಗಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಪ್ರಿಯಾಂಕಾ ಅವರು ಮಹಿಳಾ ಕೇಂದ್ರಿತ ಪ್ರಣಾಳಿಕೆಯನ್ನು ಘೋಷಿಸಿದ ನಂತರ, ಬಿಜೆಪಿ ನಾಯಕರು ತಮ್ಮ ಚುನಾವಣಾ ರ್‍ಯಾಲಿಗಳಲ್ಲಿ ಮಹಿಳೆಯರನ್ನು ಕುರಿತು ಮಾತನಾಡುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಎಲ್ಲಾ ರ್‍ಯಾಲಿಗಳಲ್ಲಿ ಮಹಿಳಾ ಸಬಲೀಕರಣದ ಮಾತುಗಳನ್ನಾಡುತ್ತಿದ್ದಾರೆ.

'ನಮ್ಮ ಸರ್ಕಾರವು ಉತ್ತರ ಪ್ರದೇಶದಲ್ಲಿ ಬಡವರಿಗಾಗಿ ಲಕ್ಷಾಂತರ ಮನೆಗಳನ್ನು ನಿರ್ಮಿಸಿಕೊಟ್ಟಿದೆ. ಆ ಮನೆಗಳನ್ನೆಲ್ಲಾ ಮಹಿಳೆಯರ ಹೆಸರಿನಲ್ಲಿ ನೋಂದಣಿ ಮಾಡಲಾಗಿದೆ. ಉಜ್ವಲ ಯೋಜನೆ ಅಡಿ ಪ್ರತಿ ಕುಟುಂಬಕ್ಕೆ ಎಲ್‌ಪಿಜಿ ಸಂಪರ್ಕ ಒದಗಿಸಲಾಗಿದೆ. ಮಹಿಳೆಯರೇ ಇವುಗಳ ನೇರ ಫಲಾನುಭವಿಗಳು. ಇವೆಲ್ಲವೂ ಮಹಿಳಾ ಸಬಲೀಕರಣ' ಎಂದು ಮೋದಿ ಅವರು ತಮ್ಮ ಎಲ್ಲಾ ರ್‍ಯಾಲಿಗಳಲ್ಲಿ ಹೇಳುತ್ತಿದ್ದಾರೆ.

ಇದರ ಜತೆಯಲ್ಲೇ, ರಾಜ್ಯದಲ್ಲಿರುವ ಸ್ವಸಹಾಯ ಗುಂಪುಗಳ 16 ಲಕ್ಷ ಮಹಿಳಾ ಸದಸ್ಯರ ಖಾತೆಗಳಿಗೆ ರಾಜ್ಯ ಸರ್ಕಾರವು ತಲಾ ₹1,000 ವರ್ಗಾವಣೆ ಮಾಡಿದೆ. ರಾಜ್ಯದ 80,000 ಸ್ವಸಹಾಯ ಗುಂಪುಗಳಿಗೆ ಸಮುದಾಯ ಬಂಡವಾಳ ಹೂಡಿಕೆಗಾಗಿ ತಲಾ ₹1.10 ಲಕ್ಷ ಮತ್ತು 60,000 ಗುಂಪುಗಳಿಗೆ ತಲಾ ₹15,000 ಅನುದಾನವನ್ನು ನೀಡುವುದಾಗಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಘೋಷಿಸಿದ್ದಾರೆ. ಮೆಟ್ರಿಕ್ ಶಿಕ್ಷಣ ಪೂರೈಸಿರುವ ಬಾಲಕಿಯರಿಗೆ ಲ್ಯಾಪ್‌ಟಾಪ್ ನೀಡುವುದಾಗಿಯೂ ಯೋಗಿ ಘೋಷಿಸಿದ್ದಾರೆ.

'ಯೋಗಿ ಆದಿತ್ಯನಾಥ ಅವರ ಆಡಳಿತದಲ್ಲಿ ರಾಜ್ಯದಲ್ಲಿ ಮಹಿಳೆಯರ ಸುರಕ್ಷತೆ ಹೆಚ್ಚಾಗಿದೆ' ಎಂದು ಮೋದಿ ಹಲವು ರ್‍ಯಾಲಿಗಳಲ್ಲಿ ಹೇಳಿದ್ದಾರೆ.

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 11

ಶಿವಪುರಾಣ ಶ್ರವಣವಿಧಾನ

ಬಿಂದುಗ ಮತ್ತು ಚಂಚುಲೆ ದಂಪತಿಕಥೆಯನ್ನು ಕೇಳಿದ ಶೌನಕಮುನಿ ಭಾವಪರವಶರಾದರು. ಗಂಡ ಮಾಡಿದ ಅನ್ಯಾಯ ಮರೆತು, ಪತಿಯ ಶಾಪವಿಮೋಚನೆಗಾಗಿ ಪತಿವ್ರತಧರ್ಮ ಪಾಲಿಸಿದ ಚಂಚುಲೆಯ ಗುಣವನ್ನು ಪ್ರಶಂಸಿಸಿದರು. ಜಗನ್ಮಾತೆಯ ಬಳಿ ಚಂಚುಲೆ ಶಾಶ್ವತವಾಗಿ ನೆಲೆಸಲು ಸೌಭಾಗ್ಯ ಸಿಕ್ಕಿದ್ದು ಶಿವಪುರಾಣ ಮಹಿಮೆಯಿಂದ. ಇಂಥ ಪವಿತ್ರವಾದ ಮತ್ತು ಪುಣ್ಯಫಲದ ಶಿವಪುರಾಣವನ್ನ ಯಾವ ರೀತಿ ಕೇಳಬೇಕು. ಅದರ ವಿಧಿ-ವಿಧಾನಗಳನ್ನ ತಿಳಿಸುವಂತೆ ಶೌನಕಮುನಿಯು ವ್ಯಾಸರ ಪರಮಶಿಷ್ಯ ಸೂತಪುರಾಣಿಕನನ್ನು ಕೋರುತ್ತಾರೆ. ಆಗ ಸೂತಮುನಿಯು ಶಿವಪುರಾಣದ ಪುಣ್ಯಫಲ ದೊರೆಯುವ ಶ್ರವಣವಿಧಿ-ವಿಧಾನವನ್ನು ತಿಳಿಸುತ್ತಾನೆ.

ಶಿವಪುರಾಣ ಕೇಳಬೇಕೆನ್ನುವವರು ಮೊದಲಿಗೆ ಒಬ್ಬ ಜೋಯಿಸನನ್ನು ಕರೆಸಬೇಕು. ಆತನಿಂದ ಶಿವಪ್ರವಚನ ಹೇಳಿಸಬೇಕು. ಹಾಗೇ, ಶಿವಪುರಾಣ ಕೇಳ ಬಯಸುವ ಜನರನ್ನು ಸೇರಿಸಬೇಕು. ಶಿವಭಕ್ತರೆಲ್ಲ ಸಂತೋಷದಿಂದ ಪುರಾಣ ಕೇಳಲು ಅನುಕೂಲವಾಗುವಂತೆ, ನಿರ್ವಿಘ್ನವಾದ ಒಂದು ಒಳ್ಳೆಯ ಮುಹೂರ್ತವನ್ನ ಇಡಬೇಕು. ಶಿವಪುರಾಣ ಕೇಳಲು ಜನರು ಬರುವಂತೆ ಮಾಡಲು, ಶಿವಕಥೆ ನಡೆಯುವ ವಿಚಾರವನ್ನ ಊರುಊರುಗಳಲ್ಲಿ ಸಾರಬೇಕು. ಯಾರಿಗೆ ಹರಿಕಥೆ ಕೇಳುವುದರಲ್ಲಿ ಆಸಕ್ತಿ ಇದೆಯೋ, ಯಾರು ಈಶ್ವರನ ನಾಮಕೀರ್ತನೆಯಲ್ಲಿ ಶ್ರದ್ಧೆ ಇದೆಯೋ, ಅಂತಹವರು ದೂರದ ಸ್ಥಳಗಳಲ್ಲಿದ್ದರೂ, ಅವರಿಗೆ ಶಿವಪುರಾಣಶ್ರವಣ ವಿಚಾರ ತಿಳಿಯುವಂತೆ ಮಾಡಬೇಕು.

ಶಿವಕೀರ್ತನೆ ಪಾರಾಯಣ ಮಾಡಲು ಮತ್ತು ಕೇಳಲು ಉತ್ಸುಕರಾಗಿರುವ ಎಲ್ಲರನ್ನೂ ಸ್ತ್ರೀ-ಪುರುಷ ಎಂಬ ಲಿಂಗಭೇದವಿಲ್ಲದೆ, ಬ್ರಾಹ್ಮಣ-ಶೂದ್ರ ಎಂಬ ಜಾತಿ ವಿಂಗಡಣೆ ಮಾಡದೆ, ಬಡವ-ಶ್ರೀಮಂತ ಎಂಬ ತಾರತಮ್ಯ ಮಾಡದೆ ಆದರದಿಂದ ಕರೆಯಬೇಕು. ಹಾಗೆ ಕರೆಯುವಾಗ ಶಿವಪುರಾಣದ ಮಹಿಮೆಯನ್ನು ಜನರಿಗೆ ತಿಳಿಸಬೇಕು. 'ಶಿವಪುರಾಣ ಕೇಳಲು ಸತ್ಪುಷರೆಲ್ಲರೂ ಬರುತ್ತಿದ್ದಾರೆ, ಇಂಥ ಪವಿತ್ರ ಕಾರ್ಯಕ್ಕೆ ತಾವೆಲ್ಲರೂ ಬರಬೇಕು. ಶಿವಪುರಾಣದಂಥ ಪುಣ್ಯಕಥೆ ಕೇಳುವ ಸುವರ್ಣಾವಕಾಶ ಸಿಕ್ಕಿದೆ. ನಿಮಗಿನ್ನು ಶಿವಪುರಾಣ ಕೇಳಲು ಉಳಿದಿರುವುದು ಒಂದೇ ದಿನ. ಪುನಃ ಇಂತಹ ಸಮಯ ಸಿಕ್ಕಲಾರದು. ಆದುದರಿಂದ ಶಿವಪುರಾಣ ಕೇಳಲು ತಪ್ಪದೆ ಬನ್ನಿ' ಅಂತ ಜನರಿಗೆ ಮನಮುಟ್ಟುವಂತೆ ಹೇಳಬೇಕು.

ಶಿವಪುರಾಣವನ್ನು ಕೇಳಲು ಸರಿಯಾದ ಸ್ಥಳಗಳೆಂದರೆ: ಈಶ್ವರನ ದೇವಸ್ಥಾನ, ಅಥವಾ ಯಾವುದಾದರೂ ತೀರ್ಥಕ್ಷೇತ್ರ, ಅದೂ ಇಲ್ಲದಿದ್ದರೆ ಒಂದು ಉಪವನವಾದರೂ ಆಗಬಹುದು. ಚೊಕ್ಕಟವಾದ ಮನೆಯಾದರೂ ಸರಿಯೇ. ಅಂತಹ ಯೋಗ್ಯವಾದ ಸ್ಥಳದಲ್ಲಿ ನೆಲವನ್ನು ಸಾರಿಸಿ ಶುದ್ಧಿಮಾಡಬೇಕು. ರಂಗವಲ್ಲಿ ಬಿಡಿಸಿ, ಹೂವಿನಿಂದ ಅಲಂಕಾರ ಮಾಡಬೇಕು. ತಳಿರು-ತೋರಣಾದಿಗಳಿಂದ ಅಲಂಕಾರ ಮಾಡಿ, ಮಹಾವೈಭವದ ಉತ್ಸವವನ್ನೇರ್ಪಡಿಸಬೇಕು. ಶಿವಪುರಾಣ ಕೇಳುವ ಸ್ಥಳದಲ್ಲಿ ಒಂದು ಮಂಟಪವನ್ನು ರಚಿಸಬೇಕು. ಅದಕ್ಕೆ ಬಾಳೆಯ ಕಂಬವನ್ನು ಕಟ್ಟಿ, ಹಣ್ಣುಕಾಯಿಗಳನ್ನು ತೂಗುಹಾಕಬೇಕು. ಹೂಗಳಿಂದ ಚೆಂದವಾಗಿ ಅಲಂಕರಿಸಬೇಕು. ಸುತ್ತಲೂ ಮಕರತೋರಣವನ್ನು ಕಟ್ಟಬೇಕು. ಮಂಟಪದ ನಾಲ್ಕು ದಿಕ್ಕುಗಳಲ್ಲೂ ಶುಭ್ರವಾದ ಧ್ವಜಗಳನ್ನು ಕಟ್ಟಬೇಕು. ಸರ್ವಾನಂದವಾಗುವ ಆ ಮಂಟಪದಲ್ಲಿ ಒಂದು ದಿವ್ಯವಾದ ಪೀಠವನ್ನು ಇಡಬೇಕು. ಅದರಲ್ಲಿ ಈಶ್ವರನನ್ನು ಪ್ರತಿಷ್ಠಾಪಿಸಬೇಕು. ಮಂಟಪದ ಮುಂದೆ, ಪುರಾಣವನ್ನು ಹೇಳುವವನಿಗೂ ಒಂದು ಸುಖಾಸನವನ್ನು ಕಲ್ಪಿಸಬೇಕು.

ಪುರಾಣಶ್ರವಣ ಕಾಲದಲ್ಲಿ ಯಾರೂ ಬೇರೆ ಯೋಚನೆ ಮಾಡಬಾರದು. ಚಿಂತೆಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಹರ್ಷಚಿತ್ತರಾಗಿ ಶಿವಪುರಾಣ ಕೇಳಬೇಕು. ಪುರಾಣವನ್ನು ಹೇಳುವವನು ಉತ್ತರಾಭಿಮುಖವಾಗಿಯೂ, ಕೇಳುವವರು ಪೂರ್ವಾಭಿಮುಖವಾಗಿಯೂ ಕುಳಿತುಕೊಳ್ಳಬೇಕು. ಬಹುಮುಖ್ಯವಾಗಿ ಪ್ರಾಸಂಗಿಕ ವಿಷಯವನ್ನು ಮುಗಿಸುವುದಕ್ಕಿಂತ ಮುಂಚೆ ಯಾರೂ ನಮಸ್ಕರಿಸಬಾರದು. ಮುಕ್ತಿಯನ್ನು ಕೊಡುವವನಿಗಿಂತ ಉತ್ತಮವಾದ ಗುರು ಮತ್ತೊಬ್ಬನಿಲ್ಲ. ಪುರಾಣಜ್ಞನ ಮಾತುಗಳು ಕಾಮಧೇನುವಿನಂತೆ ಜನಗಳಿಗೆ ಇಷ್ಟಾರ್ಥಗಳನ್ನು ಕೊಡುವುದು. ಶಿವಪುರಾಣವನ್ನು ಹೇಳುವವನು ಶುಚಿಯಾಗಿ, ದಕ್ಷನಾಗಿ, ಯಾರಲ್ಲಿಯೂ ದ್ವೇಷವಿರದ ದಯಾಶಾಲಿಯಾಗಿರಬೇಕು. ಸೂರ್ಯೋದಯದಿಂದ ರಾತ್ರಿ ಮೂರೂವರೆ ಯಾಮದವರೆಗೆ ಶಿವಪುರಾಣವನ್ನು ಪೂರ್ಣವಾಗಿ ಹೇಳಬೇಕು. ಯಾವುದೇ ಕಾರಣಕ್ಕೂ ಶಿವಪುರಾಣವನ್ನ ಧೂರ್ತರು, ಕೆಟ್ಟ ನಡತೆಯವರು ಮತ್ತು ತಾವೇ ಹೆಚ್ಚೆಂದು ಗರ್ವ ಪಡುವ ಕುಟಿಲಗಾಮಿಗಳ ಮುಂದೆ ಮತ್ತು ಧೂರ್ತರ ಮನೆಯಲ್ಲಿ ಹೇಳಬಾರದು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪೂಜಾ ಸಮಾರಂಭವೊಂದರಲ್ಲಿ ಪುರೋಹಿತರು ಮಂತ್ರ ಹೇಳುತ್ತಿದ್ದಂತೇ ಬೆಂಕಿ ಹೊತ್ತಿಕೊಳ್ಳುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳು ಮತ್ತು ಯೂಟ್ಯೂಬ್‌ನಲ್ಲಿ ವೈರಲ್ ಆಗಿದೆ. ಧಾರ್ಮಿಕ ವಿಧಿ ವಿಧಾನದಲ್ಲಿ ಬಳಸುವ ಕೆಲವು ಪದಾರ್ಥಗಳನ್ನು ಪುರೋಹಿತರು ಕೆಳಗೆ ಇದ್ದ ಅಗ್ನಿಕುಂಡಕ್ಕೆ ಹಾಕುತ್ತಾರೆ. ಅಗ್ನಿಕುಂಡದಲ್ಲಿ ಬೆಂಕಿ ಹೊತ್ತಿಕೊಳ್ಳುತ್ತದೆ. 'ಅಗ್ನಿಕುಂಡಕ್ಕೆ ಅಗ್ನಿ ಸ್ಪರ್ಶ ಮಾಡಿಲ್ಲ. ಕೇವಲ ಮಂತ್ರದಿಂದಲೇ ಬೆಂಕಿ ಹೊತ್ತಿಕೊಂಡಿದೆ. ಮಂತ್ರದಿಂದಲೇ ಬೆಂಕಿ ಹೊತ್ತಿಸುವ ಬ್ರಾಹ್ಮಣರು ಈ ಕಾಲದಲ್ಲೂ ಇದ್ದಾರೆ' ಎಂದು ಈ ಪೋಸ್ಟ್‌ನಲ್ಲಿ ಹೇಳಲಾಗಿದೆ.

2021ರ ಜ.16ರಂದು ಈ ವಿಡಿಯೊ 'ಶಂಕರ ಟಿ.ವಿ'ಯಲ್ಲಿ ಪ್ರಸಾರವಾಗಿತ್ತು. ರಾಜಸ್ಥಾನದ ದಿಗಂಬರ ಜೈನ ದೇವಾಲಯದಲ್ಲಿ ಈ ವಿಡಿಯೊ ಚಿತ್ರೀಕರಿಸಲಾಗಿದೆ ಎಂದು ಲಾಜಿಕಲ್ ಇಂಡಿಯನ್ ವರದಿ ಮಾಡಿದೆ. ಈ ರೀತಿ ಬೆಂಕಿ ಹೊತ್ತಿಕೊಳ್ಳುವುದರ ಹಿಂದೆ ರಾಸಾಯನಿಕ ಪ್ರಕ್ರಿಯೆ ನಡೆದಿರುತ್ತದೆ. ಪೊಟಾಶಿಯಂ ಪರ್‌ಮ್ಯಾಂಗನೇಟ್ ಮತ್ತು ಗ್ಲಿಸರಿನ್ ಅನ್ನು ನಿಗದಿತ ಪ್ರಮಾಣದಲ್ಲಿ ಬೆರೆಸಿದರೆ ಮೊದಲು ಹೊಗೆ ಉತ್ಪತ್ತಿ ಆಗುತ್ತದೆ. ಸ್ವಲ್ಪ ಸಮಯದ ಬಳಿಕ ಬೆಂಕಿ ಹೊತ್ತಿ ಉರಿಯುತ್ತದೆ. ಈ ವಿಡಿಯೊದಲ್ಲಿ ಇರುವುದೂ ಅಂಥದ್ದೇ ರಾಸಾಯನಿಕ ಕ್ರಿಯೆ ಎಂದು ಲಾಜಿಕಲ್ ಇಂಡಿಯನ್ ಹೇಳಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮಿತಶಕ್ತ ಮನುಷ್ಯ

ಪುರುಷಂ ಸ್ವತಂತ್ರನೋ? ದೈವವಿಧಿ ಪರವಶನೊ?|
ಎರಡುಮನಿತಿನಿತುಳ್ಳ ತೋಳಿನಂತಿಹನೋ ?||
ತಿರುಗಿಸುವುದು ಮಡಿಸುವುದು ತೋಳ್
ಮೈಯಕಟ್ಟಿನಲಿ |
ನರನಂತು ಮಿತ ಶಕ್ತ – ಮಂಕುತಿಮ್ಮ || 533 ||

ಪದ-ಅರ್ಥ: ಪರವಶನೊ = ಅಧೀನನೊ, ಎರಡುಮನಿತಿನಿತುಳ್ಳ = ಎರಡುಂ + ಇನಿತು + ಇನಿತು(ಸ್ವಲ್ಪ) + ಉಳ್ಳ, ನರನಂತು = ನರನು + ಅಂತು, ಮಿತಶಕ್ತ = ಮಿತವಾದ ಶಕ್ತಿಯುಳ್ಳುವ.

ವಾಚ್ಯಾರ್ಥ: ಮನುಷ್ಯ ಸ್ವತಂತ್ರನೋ ಅಥವಾ ದೈವದ, ವಿಧಿಯ ಅಧೀನನೊ? ಅಥವಾ ಎರಡೂ ಅಷ್ಟಿಷ್ಟು ಹೊಂದಿದ ತೋಳುಗಳಂತೆ ಇರುವನೊ? ಯಾಕೆಂದರೆ ತೋಳು ತಿರುಗುತ್ತದೆ, ಮಡಿಸುತ್ತದೆ ಆದರೆ ಅದು ದೇಹಕ್ಕೆ ಅಂಟಿಕೊಂಡಿದ್ದು, ಪೂರ್ತಿ ಸ್ವತಂತ್ರವಲ್ಲ. ಮನುಷ್ಯನೂ ಹಾಗೆಯೇ ಮಿತವಾದ ಶಕ್ತಿಯುಳ್ಳವನು.

ವಿವರಣೆ: ನಮ್ಮ ಮನೆಯ ಹತ್ತಿರದ ಪೊಲೀಸ್ ಠಾಣೆಯಲ್ಲಿ ಒಬ್ಬರು ಸಬ್-ಇನ್ಸಪೆಕ್ಟರ್. ಅವರು ಭಾರೀ ಜರ್ಬಿನವರು. ಪ್ರದೇಶದ ಕಳ್ಳರು-ಮೋಸಗಾರರು ಅವರ ಹೆಸರು ಹೇಳಿದರೆ ಗಡಗಡ ನಡುಗುತ್ತಿದ್ದರು. ಅವರು ಸದಾ ಚಟುವಟಿಕೆಯಂದಿದ್ದು, ಅವರಿಂದ ಆಗದ ಯಾವ ಕೆಲಸವೂ ಇಲ್ಲ, ಅವರು ಅತ್ಯಂತ ಶಕ್ತಿಶಾಲಿಗಳು ಎಂಬ ಹೆಸರು. ಒಂದು ದಿನ ಠಾಣೆಯ ನಿರೀಕ್ಷಣೆಗೆ ರಾಜ್ಯದ ಡೈರೆಕ್ಟರ್-ಜನರಲ್ ಬಂದರು. ಆಗ ಈ ಸಬ್-ಇನ್ಸ್‌ಪೆಕ್ಟರ್ ಬೆಕ್ಕಿನ ಹಾಗೆ ಮುದುಡಿ ಕುಳಿತಿದ್ದರು. ಧ್ವನಿಯೇ ಇಲ್ಲ. ಡೈರೆಕ್ಟರ್-ಜನರಲ್ ಅವರು ಗಡಸುಧ್ವನಿಯಲ್ಲಿ ಆಜ್ಞೆಗಳನ್ನು ನೀಡುತ್ತಿದ್ದಾರೆ. ಸಬ್-ಇನ್ಸಪೆಕ್ಟರ್ ಅವರು ಮೆಲುದನಿಯಲ್ಲಿ ಹಾಂ.. ಸರ್, ಹೌದು ಸರ್ ಎಂದು ಗೋಣು ಹಾಕುತ್ತಿದ್ದರು. ಆಗ ಜನರಿಗೆ ಅನ್ನಿಸಿದ್ದು ಡೈರೆಕ್ಟರ್-ಜನರಲ್‌ರಿಗೆ ಇರುವ ಸ್ವಾತಂತ್ರ್ಯ ಸಬ್-ಇನ್ಸಪೆಕ್ಟರ್‌ಗಿಲ್ಲ.

ಅಂದೇ ಸಂಜೆ ಡೈರೆಕ್ಟರ್-ಜನರಲ್‌ರು ರಾಜ್ಯದ ಗೃಹಮಂತ್ರಿಗಳನ್ನು ಕಂಡರು. ಆಗ ಡೈರೆಕ್ಟರ್--ಜನರಲ್ ಅವರದು ಮೃದು ಮಾತು, ಹೆದರಿಕೆಯ ನಡೆ. ಗೃಹಮಂತ್ರಿಗಳು ಸರ್ವತಂತ್ರ ಸ್ವತಂತ್ರರಂತೆ ಕಂಡರು. ಮರುದಿನ ರಾಜ್ಯದ ಮುಖ್ಯಮಂತ್ರಿಗಳು ಗೃಹಮಂತ್ರಿಗಳನ್ನು ಕಚೇರಿಗೆ ಬರಹೇಳಿದರು. ಅವರು ಅಬ್ಬರಿಸಿ ಗೃಹಮಂತ್ರಿಗಳಿಂದ ಸಮಜಾಯಿಶಿ ಕೇಳುತ್ತಿದ್ದರು. ಗೃಹಮಂತ್ರಿಗಳು ಅಧೀನರಂತೆ ವರ್ತಿಸಿದರು, ಮುಖ್ಯಮಂತ್ರಿಗಳು ಸಂಪೂರ್ಣ ಸ್ವತಂತ್ರರಂತೆ ತೋರಿದರು. ಹೀಗೆಂದರೆ ಎಲ್ಲರೂ ಅಧೀನರು, ಅವರಿಗೆ ಯಾವ ಸ್ವಾತಂತ್ರ್ಯವೂ ಇಲ್ಲ ಎಂದಲ್ಲ. ಪ್ರತಿಯೊಬ್ಬರಿಗೂ ಕಾರ್ಯಸ್ವಾತಂತ್ರ್ಯವಿದೆ. ಆದರೆ ಅದು ಮಿತವಾದದ್ದು. ಸಂಪೂರ್ಣ ಸ್ವಾತಂತ್ರ್ಯ ಎನ್ನುವುದಿಲ್ಲ. ಕರ್ತವ್ಯ ಮಾಡಲೇಬೇಕು, ಆದರೆ ಮಿತಿ ಇದೆ ಎನ್ನುವುದನ್ನು ನೆನಪಿನಲ್ಲಿಡಬೇಕು. ಕೃಷ್ಣ ಭಗವದ್ಗೀತೆಯಲ್ಲಿ ಹೇಳುತ್ತಾನೆ,

"ತಸ್ಮಾತ್ ತ್ವಮುತ್ತಿಷ್ಠ ಯಶೋಲಭಸ್ವ ಜಿತ್ವಾ
ಶತ್ರೂನ್ ಭುಂಕ್ಷ್ವ ರಾಜ್ಯಂ ಸಮೃದ್ಧಿಂ |
ಮಯೈವೈತೇ ನಿಹತಾಃ ಪೂರ್ವಮೇವ ನಿಮಿತ್ತ
ಮಾತ್ರಂ ಭವಸವ್ಯಸಾಚಿನ್ ||

'ನೀನು ಎದ್ದು ಹಗೆಗಳನ್ನು ಗೆದ್ದು ಹೆಸರು ಪಡೆ, ಅರಸೊತ್ತಿಗೆಯನ್ನು ಪಡೆ, ಸಿರಿಯನುಣ್ಣು, ನಾನು ಇವರನ್ನು ಈಗಾಗಲೇ ಕೊಂದಾಗಿದೆ. ನೀನು ಬರಿ ನೆಪಮಾತ್ರವಾಗು'

ಕೃಷ್ಣ ಅರ್ಜುನನಿಗೆ ಹೋರಾಡಲು ಹೇಳುತ್ತಾನೆ, ಆದರೆ ನೀನೊಂದು ನೆಪಮಾತ್ರ ಎಂಬುದನ್ನು ತಿಳಿಸುತ್ತಾನೆ. ಕಗ್ಗ ತೋಳಿನ ಉದಾಹರಣೆ ಕೊಡುತ್ತದೆ. ಅದಕ್ಕೆ ಬೆರಳುಗಳನ್ನು, ಮೊಣಕೈಯನ್ನು ಮಡಿಚಲು, ಕೈ ತಿರುಗಿಸಲು ಎಲ್ಲ ಸ್ವಾತಂತ್ರ್ಯವಿದೆ. ಆದರೆ ಅದು ದೇಹದ ಮಿತಿಯನ್ನು ದಾಟಿ ಹೋಗಲಾರದು. ಅದಕ್ಕೆ ಒಂದೆಡೆಗೆ ಸ್ವಾತಂತ್ರ್ಯ, ಮತ್ತೊಂದೆಡೆಗೆ ಬಂಧ. ಹಾಗೆಯೇ ಮನುಷ್ಯ ಕಾರ್ಯಮಾಡಲು ಸ್ವತಂತ್ರನಾಗಿದ್ದಾನೆ ಆದರೆ ಅದಕ್ಕೆ ದೈವದ ಮಿತಿ ಇದೆ ಎಂಬುದೂ ತಿಳಿದಿರಬೇಕು. ಅವನು ಮಿತಶಕ್ತ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ — ಮಂಗಳವಾರ ಜನವರಿ 4, 2022

ಶ್ರೀ ಪ್ಲವನಾಮ ಸಂವತ್ಸರ ದಕ್ಷಿಣಾಯಣ–ಹೇಮಂತ ಋತು ಧನುರ್ಮಾಸದ 19ನೇ ದಿನ
ತಿಥಿ: (ಪೌಷ ಶುಕ್ಲ) ದ್ವಿತೀಯ ಗಂ. 17-20 ನಕ್ಷತ್ರ: ಉತ್ತರಾಷಾಢಾ ಗಂ. 10-57 ಯೋಗ: ಹರ್ಷಣ ಗಂ. 21-37, ಕರಣ: ಬಾಲವ ಗಂ. 06-53. ರಾಹುಕಾಲ: ಮಧ್ಯಾಹ್ನ 03:00 – 04:30 ಸೂರ್ಯೋದಯ: 06-58 ಸೂರ್ಯಾಸ್ತ: 06-13 ಮುಸ್ಲಿಂ ದಿನಾಂಕ: 30 ಜುಮಾದುಲ್ಲಾವಲ್ ಅದೃಷ್ಟ ಸಂಖ್ಯೆ: 2, 14

ಮೇಷ: ಅಲಂಕಾರಿಕ ವಸ್ತುಗಳ ಮಾರಾಟದಿಂದ ಹೆಚ್ಚು ಆದಾಯ ಗಳಿಸುವಿರಿ. ಆರ್ಥಿಕ ಸಮಸ್ಯೆಗಳಿಂದ ಮುಕ್ತಿಯನ್ನು ಹೊಂದಬಹುದು. ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಭಾಗ್ಯ ದೊರೆತು ಮನಸ್ಸಿಗೆ ನೆಮ್ಮದಿ ಇರುವುದು.

ವೃಷಭ: ಅವಿವಾಹಿತರಿಗೆ ಕಂಕಣ ಬಲದ ಯೋಗವಿದ್ದು ಮಾತುಕತೆಯಿಂದ ನಿಶ್ಚಯಕ್ಕೆ ದಿನ ನಿಗದಿಗೊಳಿಸುವಿರಿ. ನಿಮಗೆ ಪ್ರತಿಷ್ಠಿತ ಸಂಸ್ಥೆಯೊಂದರಲ್ಲಿ ಕಾರ್ಯ ನಿರ್ವಹಿಸುವ ಸದಾವಕಾಶ ಪ್ರಾಪ್ತಿಯಾಗಲಿದೆ.

ಮಿಥುನ: ವಿದ್ಯಾರ್ಥಿಗಳಿಗೆ ಇಂದು ಶುಭದಿನ. ಮನೆಯವರೊಂದಿಗೆ ತೀರ್ಥಯಾತ್ರೆಗೆ ತೆರಳುವ ಬಗ್ಗೆ ಚರ್ಚೆ ನಡೆಸುವಿರಿ. ತಂದೆ ಅಥವಾ ಕುಟುಂಬದ ಹಿರಿಯರ ಆರೋಗ್ಯದ ಕಡೆ ಹೆಚ್ಚಿನ ಗಮನವನ್ನು ನೀಡಬೇಕಾಗಬಹುದು.

ಕರ್ಕಾಟಕ: ಈ ದಿನ ನಿಮ್ಮ ಒಂಟಿತನ ನಿವಾರಣೆಯಾಗುವುದು. ಧ್ಯಾನ ಮತ್ತು ಯೋಗದತ್ತ ಹೆಚ್ಚಿನ ಗಮನ ಹರಿಸುವಿರಿ. ವೃತ್ತಿಯಲ್ಲಿನ ಸಣ್ಣ-ಪುಟ್ಟ ಬದಲಾವಣೆಯು ಹೆಚ್ಚಿನ ಧನಲಾಭವನ್ನು ತಂದು ಕೊಡುವುದು.

ಸಿಂಹ: ಮೇಧಾವಿ ಜನರೊಂದಿಗಿನ ಸಂಪರ್ಕದಿಂದ ಕೆಲಸ ಕಾರ್ಯಗಳನ್ನು ಸಾಧಿಸಿಕೊಳ್ಳುವಿರಿ. ಮನೆಯಲ್ಲಿ ಶುಭಕಾರ್ಯ ನೆರವೇರಿಸುವಿರಿ. ಯಂತ್ರದ ಬಿಡಿ ಭಾಗಗಳ ಮಾರಾಟಗಾರರಿಗೆ ಹೆಚ್ಚಿನ ಅವಕಾಶ.

ಕನ್ಯಾ: ಏನನ್ನಾದರೂ ಸಾಧಿಸಲೇಬೇಕೆಂದಿರುವ ನಿಮಗೆ, ಆತ್ಮವಿಶ್ವಾಸದ ಕೊರತೆಯಂತೂ ಕಾಣಿಸದು. ಇತರರಿಗೆ ಅಸೂಯೆಯಾಗದಂತೆ ಕಾರ್ಯಗಳನ್ನು ಸಾಧಿಸಿಕೊಳ್ಳುವ ಉತ್ತಮ ಗುಣವನ್ನು ಜೀವನಶೈಲಿಯಲ್ಲಿ ವೃದ್ಧಿಸಿಕೊಳ್ಳಿ.

ತುಲಾ: ವರ್ಗಾವಣೆ ಮಾಡಿಸಿಕೊಳ್ಳುವ ಪ್ರಯತ್ನ ವಿಫಲವಾಗಲಿದೆ. ಕೇಟರಿಂಗ್ ಸೇವೆಯನ್ನು ಮಾಡುವವರಿಗೆ ಅಧಿಕ ಲಾಭದ ಜೊತೆಗೆ ಸಂಪನ್ಮೂಲ ವ್ಯಕ್ತಿಗಳ ಬಳಕೆಯಾಗುವುದು. ಸಿನಿಮಾ ರಂಗದವರಿಗೆ ಆರ್ಥಿಕವಾಗಿ ಲಾಭವಾಗಲಿದೆ.

ವೃಶ್ಚಿಕ: ನಿಮ್ಮ ವೈಯಕ್ತಿಕ ಆಸೆ-ಆಕಾಂಕ್ಷೆಗಳು ಪೂರ್ಣಗೊಳ್ಳುವ ಸಂಭವ. ನಿವೃತ್ತ ಶಿಕ್ಷಕರಿಗೆ ಗೌರವಯುತ ಸ್ಥಾನಮಾನಗಳು ಲಭ್ಯ. ಮಗಳಿಂದ ಶುಭ ಸುದ್ದಿ ಬರಲಿದೆ. ಲೇವಾದೇವಿ ವ್ಯವಹಾರಗಳಲ್ಲಿ ಕೊಂಚ ಕಿರಿಕಿರಿ.

ಧನು: ಬಹಳಷ್ಟು ತಾಳ್ಮೆಯಿಂದ ಕೆಲಸ ನಿರ್ವಹಿಸಬೇಕಾಗುವುದು. ಕಾನೂನು ವಿಷಯದಲ್ಲಿ ಸಲಹೆ ಪಡೆದುಕೊಳ್ಳುವಿರಿ. ಅಲಂಕಾರಿಕ ವಸ್ತುಗಳ ಮಾರಾಟ ಲಾಭ ತರುವುದು. ಚಿನ್ನಾಭರಣ ಖರೀದಿಯ ಸಾಧ್ಯತೆಗಳಿವೆ.

ಮಕರ: ಕನಸುಗಳು ಕೈಗೂಡುವ ದಿನ. ಸ್ಥಿರಾಸ್ತಿ ವ್ಯವಹಾರಗಳಿಂದ ಲಾಭ. ವೃತ್ತಿ ಕ್ಷೇತ್ರದಲ್ಲಿ ನಿಮ್ಮ ನಿಷ್ಠೆ, ಪ್ರಾಮಾಣಿಕತೆಗೆ ಅತಿಯಾದ ಗೌರವಾದರಗಳು ಸಿಗುವುದು. ಕಾರ್ಮಿಕ ವರ್ಗದವರ ಹೆಚ್ಚಿನ ಬೇಡಿಕೆಗಳು ಈಡೇರಲಿವೆ.

ಕುಂಭ: ಯಾವುದೇ ವಾದ ವಿವಾದಗಳು ನಡೆದರೂ ಕಾರ್ಯ ಸಾಧನೆಗೆ ಅಡ್ಡಿಯಾಗದು. ಸೃಜನಶೀಲ ಬರವಣಿಗೆಗಳಿಂದ ಖ್ಯಾತಿ ಹಾಗೂ ಹೆಚ್ಚಿನ ಹಣವನ್ನು ಗಳಿಸುವಿರಿ. ಖಾದ್ಯ ತೈಲಗಳ ವ್ಯಾಪಾರಗಳಿಂದ ಹೇರಳ ಲಾಭ.

ಮೀನ: ಆಕಸ್ಮಿಕ ಪ್ರಯಾಣ. ಸಹೋದ್ಯೋಗಿಯ ನೆರವಿನಿಂದ ಕೆಲಸ ಕಾರ್ಯಗಳು ಪೂರ್ಣಗೊಳ್ಳಲಿವೆ. ನಿಮ್ಮ ಯೋಜನೆ ಹಾಗೂ ಬೆಳವಣಿಗೆಯ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚಿಸಿ ಮುಂದಿನ ಹಂತ ತಲುಪುವಿರಿ.

ಪದಬಂಧ 4828

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ನೆನಪಿನಿಂದ ಮಾಸದ ತಿಂಗಳು! (2)
5.ಚಂದವಾಗಿ ತೇಯ್ದಿರುವ ಶ್ರೀಗಂಧ (3)
6.ಪ್ರಾಣವಾಯುವಿದು (5)
9.ಪಾದರಸವನ್ನು ಹೀಗೂ ಹೇಳುವರು (3)
10.ಲೆಕ್ಕ ಶಾಸ್ತ್ರವಿದು (3)
11.ಸ್ವಪ್ನವನ್ನು ಕಾಣುವವನು (5)
14.ಮನಸ್ಸಿನ ಆಶಯ (3)
15.ಇತರರನ್ನು ಮನ್ನಿಸುವ ಗುಣ (2)

ಮೇಲಿಂದ ಕೆಳಕ್ಕೆ
1.ಆಶ್ರಯವು ಉಲ್ಟಾ ಕಾಣುತ್ತಿದೆಯಲ್ಲಾ? (3)
2.ಕೊನೆಗೆ ದನವಿರುವುದಕ್ಕೇ ಈ ಅಲುಗಾಟ! (3)
3.ಮೆಲುವಾಗಿ ಬೀಸುವ ಗಾಳಿ (5)
7.ನೀರಿನಿಂದಾದ ಅನಿಲ (5)
8.ಹೀಗೆ ಅಲಕ್ಷಿಸು (5)
9.ಅತ್ತಿಗೆಯ ಹತ್ತಿರ ಹಾರಿ ಬಂದಿರುವ ಚಿಟ್ಟೆ! (5)
12.ಕುಸುರಿ ಕೆಲಸ (3)
13.ಕಾಪಾಡುವವ ಇಲ್ಲಿದ್ದಾನೆ (3)



4827ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮದಕರಿ 3.ಅವಯವ 5.ಭ್ರಮಿಸು 6.ಕೆರೆ 7.ವಾರಸುದಾರ 10.ಳೆಅ 12.ಪವನ 14.ರಿಕ್ತಹಸ್ತ 15.ಮೆರವಣಿಗೆ

ಮೇಲಿಂದ ಕೆಳಕ್ಕೆ: 1.ಮರೀಚಿಕೆ 2.ರಿಪುಸಂಹಾರ 3.ಅರ್ಥ 4.ವನಸುಮ 5.ಭ್ರಮರ 7.ವಾದನ 8.ದಾಕ್ಷಿಣ್ಯಪರ 9.ಉಪಕಾರಿ 11.ಅನುಭಾವ 13.ಅಸ್ತ

ಸುಡೊಕು 5214

		5	6		2			
	3				4	6	8	
6				1			5	
	8	3		6				4
1				4				8
2			8		1	5	6	
					3			
4		2		9			3	1
	1		4		6			5

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5213 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

ಷೇರುಪೇಟೆ ವಹಿವಾಟು ▲929

ಹಿಂದಿನ ಅಂತ್ಯ	58,254
ಇಂದಿನ ಅಂತ್ಯ	59,183

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,354
ಇಂದಿನ ಅಂತ್ಯ	17,625
▲	271
ದಿನದ ಗರಿಷ್ಠ	17,646

ವಿನಿಮಯ ದರ

$ ಡಾಲರ್	74.28
£ ಪೌಂಡ್	100.38
€ ಯುರೊ	84.35
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹515

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1310)
ಸೋಯಾ (ರಿಫೈನ್ಡ್)	₹1193 (1185)
ಸೂರ್ಯಕಾಂತಿ (ರಿಫೈನ್ಡ್)	₹1250 (1245)
ಪಾಮೋಲಿನ್	₹1150 (1141)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹2400-2800
ಮಧ್ಯಮ	₹1800-2400
ಸಣ್ಣ	₹1000-1800

ಕೊಬ್ಬರಿ ಧಾರಣೆ

ಬೆಂಗಳೂರು	₹18500-21000
ಕೆ.ಆರ್.ಪೇಟೆ	₹9100-9100
ತುರುವೇಕೆರೆ	₹18100-18200

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹20000-27000
2ನೇ ದರ್ಜೆ	₹10000-18000

ಬ್ಯಾಂಕಿಂಗ್, ಐ.ಟಿ. ಷೇರುಗಳ ಖರೀದಿ ಭರಾಟೆ

ಸೆನ್ಸೆಕ್ಸ್ 929 ಅಂಶ ಜಿಗಿತ

ಮುಂಬೈ (ಪಿಟಿಐ): ಹೊಸ ವರ್ಷದ ಮೊದಲ ವಹಿವಾಟಿನ ದಿನವೇ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 929 ಅಂಶಗಳಷ್ಟು ಜಿಗಿತ ಕಂಡಿದೆ. ಓಮೈಕ್ರಾನ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವ ನಡುವೆಯೂ ಬ್ಯಾಂಕಿಂಗ್, ಹಣಕಾಸು ಮತ್ತು ಐ.ಟಿ. ಷೇರುಗಳ ಖರೀದಿ ಭರಾಟೆಯು ಷೇರುಪೇಟೆಯಲ್ಲಿ ಗೂಳಿ ಓಟಕ್ಕೆ ಉತ್ತೇಜನ ನೀಡಿತು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ವೃದ್ಧಿಯ ಜೊತೆಗೆ ಆರ್ಥಿಕ ಬೆಳವಣಿಗೆಯನ್ನು ಸೂಚಿಸುವ ಕೆಲವು ಅಂಶಗಳು ಸಹ ವಹಿವಾಟು ಹೆಚ್ಚಳಕ್ಕೆ ಕಾರಣವಾದವು ಎಂದು ವರ್ತಕರು ಹೇಳಿದ್ದಾರೆ.

ಉತ್ತಮ ಆರಂಭ ಕಂಡ ಬಿಎಸ್‌ಇ ಸೆನ್ಸೆಕ್ಸ್, ದಿನದ ಗರಿಷ್ಠ ಮಟ್ಟವಾದ 59,266 ಅಂಶಗಳಿಗೆ ತಲುಪಿತ್ತು. ವಹಿವಾಟಿನ ಅಂತ್ಯದ ವೇಳೆಗೆ 929 ಅಂಶಗಳಷ್ಟು ಏರಿಕೆಯೊಂದಿಗೆ 59,183 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 271 ಅಂಶ ಹೆಚ್ಚಾಗಿ 17,625 ಅಂಶಗಳಿಗೆ ಏರಿಕೆ ಕಂಡಿತು.

ಜಾಗತಿಕ ಮಾರುಕಟ್ಟೆಗಳ ಸಕಾರಾತ್ಮಕ ಬೆಳವಣಿಗೆ ಜೊತೆಗೆ ಬ್ಯಾಂಕಿಂಗ್, ವಾಹನ ಮತ್ತು ಐ.ಟಿ. ಷೇರುಗಳ ಗಳಿಕೆಯಿಂದಾಗಿ ದೇಶಿ ಷೇರುಪೇಟೆಗಳು ಹೊಸ ವರ್ಷವನ್ನು ಏರಿಕೆಯೊಂದಿಗೆ ಆರಂಭಿಸಿದವು. ಸೆಮಿಕಂಡಕ್ಟರ್ ಕೊರತೆಯ ಕಾರಣಕ್ಕಾಗಿ ವಾಹನೋದ್ಯಮವು ಡಿಸೆಂಬರ್‌ನಲ್ಲಿ ಮಿಶ್ರಫಲ ಅನುಭವಿಸಿದೆ. ಇದರಿಂದಾಗಿ ದಿನದ ವಹಿವಾಟಿನಲ್ಲಿ ವಾಹನ ಕಂಪನಿಗಳ ಷೇರುಗಳು ಹೆಚ್ಚು ಗಮನ ಸೆಳೆದವು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸ್ಮಾಲ್ ಮತ್ತು ಮಿಡ್‌ಕ್ಯಾಪ್ ಷೇರುಗಳು ಉತ್ತಮ ಗಳಿಕೆ ಕಂಡುಕೊಂಡಿವೆ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ಹೇಳಿದ್ದಾರೆ.

ರೂಪಾಯಿ ಮೌಲ್ಯ ಅಲ್ಪ ಹೆಚ್ಚಳ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಕೇವಲ 1 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 74.28ರಂತೆ ವಿನಿಮಯಗೊಂಡಿತು. ಬ್ರೆಂಟ್ ಕಚ್ಚಾ ತೈಲ ದರ ಶೇ 1.25ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 78.75 ಡಾಲರ್‌ಗಳಿಗೆ ತಲುಪಿತು.

ಹೂಡಿಕೆದಾರರ ಸಂಪತ್ತು ವೃದ್ಧಿ: ಹೂಡಿಕೆದಾರರ ಸಂಪತ್ತು ಮೌಲ್ಯವು ಒಂದೇ ದಿನದಲ್ಲಿ ₹ 3.49 ಲಕ್ಷ ಕೋಟಿಯಷ್ಟು ಹೆಚ್ಚಾಗಿ ಬಿಎಸ್‌ಇನಲ್ಲಿ ನೋಂದಾಯಿತ ಕಂಪನಿಗಳ ಒಟ್ಟು ಬಂಡವಾಳ ಮೌಲ್ಯವು ₹ 269.49 ಲಕ್ಷ ಕೋಟಿಗಳಿಗೆ ತಲುಪಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಡಿಸೆಂಬರ್ ತಿಂಗಳ ಐಎಚ್‌ಎಸ್ ಮರ್ಕಿಟ್ ವರದಿ

ತುಸು ತಗ್ಗಿದ ತಯಾರಿಕಾ ವಲಯದ ಬೆಳವಣಿಗೆ

ಮುಖ್ಯಾಂಶಗಳು

- ಸತತ ಆರನೇ ತಿಂಗಳಿನಲ್ಲಿ ಮುಂದುವರಿದ ಬೆಳವಣಿಗೆ
- 2022ರಲ್ಲಿಯೂ ತಯಾರಿಕಾ ಚಟುವಟಿಕೆ ಹೆಚ್ಚಾಗುವ ನಿರೀಕ್ಷೆ
- ಕೋವಿಡ್‌ನಿಂದಾಗಿ ತಗ್ಗಿದ ವಹಿವಾಟು ವಿಶ್ವಾಸ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಗಳು 2021ರ ಡಿಸೆಂಬರ್‌ನಲ್ಲಿ ಇಳಿಕೆ ಕಂಡಿದ್ದರೂ ಸಕಾರಾತ್ಮಕ ಮಟ್ಟದಲ್ಲಿಯೇ ಮುಂದುವರಿದಿವೆ ಎಂದು ಐಎಚ್‌ಎಸ್ ಮರ್ಕಿಟ್ ಇಂಡಿಯಾ ಸಂಸ್ಥೆ ಸೋಮವಾರ ಹೇಳಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ ಸೂಚ್ಯಂಕ) ನವೆಂಬರ್‌ನಲ್ಲಿ 10 ವರ್ಷಗಳ ಗರಿಷ್ಠ ಮಟ್ಟವಾದ 57.6 ಅಂಶಗಳಲ್ಲಿ ಇತ್ತು. ಇದು ಡಿಸೆಂಬರ್‌ನಲ್ಲಿ 55.5 ಅಂಶಗಳಿಗೆ ಇಳಿಕೆ ಆಗಿದೆ. ಮಾರಾಟ ಮತ್ತು ಹೊಸ ಯೋಜನೆಗಳ ಬೆಳವಣಿಗೆ ಪ್ರಮಾಣ ಮಂದಗತಿಯಲ್ಲಿ ಇರುವುದರಿಂದ ವಲಯದ ಒಟ್ಟು ಬೆಳವಣಿಗೆಯ ಮೇಲೆ ಪರಿಣಾಮ ಉಂಟಾಗಿದೆ ಎಂದು ಅದು ಹೇಳಿದೆ.

ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದಲ್ಲಿ ಸೂಚ್ಯಂಕವು 56.3 ಅಂಶಗಳಿಗೆ ತಲುಪಿದ್ದು, 2020–21ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದ ಬಳಿಕ ಆಗಿರುವ ಗರಿಷ್ಠ ಮಟ್ಟದ ಬೆಳವಣಿಗೆ ಇದಾಗಿದೆ.

ಡಿಸೆಂಬರ್ ತಿಂಗಳ ಪಿಎಂಐ ಅಂಕಿ–ಅಂಶವು ಈ ವಲಯದ ಒಟ್ಟಾರೆ ಕಾರ್ಯಾಚರಣೆ ಸ್ಥಿತಿಯಲ್ಲಿನ ಸುಧಾರಣೆಯನ್ನು ಸೂಚಿಸುತ್ತಿದೆ. ಸತತ ಆರನೇ ತಿಂಗಳಲ್ಲಿಯೂ ಬೆಳವಣಿಗೆ ಮುಂದುವರಿದಿದೆ ಎಂದು ತಿಳಿಸಿದೆ.

2021ರ ಕಡೆಯ ತಿಂಗಳ ತಯಾರಿಕಾ ವಲಯದ ಫಲಿತಾಂಶವು ಉತ್ತೇಜನಕಾರಿ ಆಗಿದೆ. ಆರ್ಥಿಕತೆಯು ಚೇತರಿಕೆ ಕಾಣುತ್ತಿದ್ದು, ಕಂಪನಿಗಳು ದೇಶಿ ಮತ್ತು ಅಂತರರಾಷ್ಟ್ರೀಯ ಮೂಲಗಳಿಂದ ಬೇಡಿಕೆ ಪಡೆದುಕೊಳ್ಳುತ್ತಿವೆ ಎಂದು ಐಎಚ್‌ಎಸ್ ಮರ್ಕಿಟ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ. ಲಿಮಾ ಹೇಳಿದ್ದಾರೆ.

2022ರಲ್ಲಿಯೂ ತಯಾರಿಕೆಯು ಹೆಚ್ಚಲಿದೆ ಎನ್ನುವ ವಿಶ್ವಾಸವನ್ನು ಕಂಪನಿಗಳು ಹೊಂದಿವೆ. ಹೀಗಿದ್ದರೂ ಕೋವಿಡ್ ಸಾಂಕ್ರಾಮಿಕ ಹರಡುವಿಕೆ, ಹಣದುಬ್ಬರದ ಒತ್ತಡ ಹಾಗೂ ಪೂರೈಕೆ ವ್ಯವಸ್ಥೆಯಲ್ಲಿನ ಅಡಚಣೆಗಳಿಂದಾಗಿ ವಹಿವಾಟು ನಡೆಸುವ ವಿಶ್ವಾಸವು ತಗ್ಗಿದೆ ಎಂದು ಅವರು ತಿಳಿಸಿದ್ದಾರೆ.

ಭಾರತದ ಸರಕುಗಳಿಗೆ ಅಂತರರಾಷ್ಟ್ರೀಯ ಬೇಡಿಕೆಯು ಡಿಸೆಂಬರ್‌ನಲ್ಲಿ ಇನ್ನಷ್ಟು ಚೇತರಿಕೆ ಕಂಡಿದೆ. ರಫ್ತು ವಹಿವಾಟು ಸತತ ಆರನೇ ತಿಂಗಳಿನಲ್ಲಿಯೂ ಹೆಚ್ಚಾಗಿದೆ.

ಡಿಸೆಂಬರ್‌ನಲ್ಲಿ ತಯಾರಿಕಾ ವೆಚ್ಚ ತುಸು ಇಳಿಕೆ ಕಂಡಿದೆ. ಅದನ್ನು ಹೊರತುಪಡಿಸಿದರೆ ಒಟ್ಟಾರೆಯಾಗಿ ತಯಾರಿಕಾ ವೆಚ್ಚವು ಏಳೂವರೆ ವರ್ಷಗಳ ಗರಿಷ್ಠ ಮಟ್ಟದಲ್ಲಿ ಇದೆ. ಮಾರಾಟ ಹೆಚ್ಚಿಸುವ ಸಲುವಾಗಿ ಬಹುಪಾಲು ಕಂಪನಿಗಳು ಮಾರಾಟ ದರದಲ್ಲಿ ಯಾವುದೇ ಬದಲಾವಣೆ ಮಾಡದಿರಲು ನಿರ್ಧರಿಸಿವೆ ಎಂದು ಲಿಮಾ ಹೇಳಿದ್ದಾರೆ.

ವಹಿವಾಟು ನಡೆಸುವ ವಿಶ್ವಾಸವು ನವೆಂಬರ್‌ನಲ್ಲಿ 17 ತಿಂಗಳ ಕನಿಷ್ಠ ಮಟ್ಟದಿಂದ ಹೊರಬಂದಿದ್ದರೂ ದೀರ್ಘಾವಧಿಯ ಸರಾಸರಿಗಿಂತಲೂ ಕಡಿಮೆ ಮಟ್ಟದಲ್ಲಿ ಇದೆ ಎಂದು ಹೇಳಿದೆ.

ಓಮೈಕ್ರಾನ್‌ಗೆ ಇದೆ ವಿಮೆ ರಕ್ಷೆ: ಐಆರ್‌ಡಿಎಐ

ನವದೆಹಲಿ (ಪಿಟಿಐ): ಕೋವಿಡ್ ಚಿಕಿತ್ಸಾ ವೆಚ್ಚಗಳನ್ನು ಭರಿಸುವ ಆರೋಗ್ಯ ವಿಮಾ ಯೋಜನೆಗಳು ಓಮೈಕ್ರಾನ್ ಸೋಂಕಿನ ಚಿಕಿತ್ಸೆಗೆ ಆಗುವ ವೆಚ್ಚಗಳಿಗೂ ರಕ್ಷಣೆ ನಿಡುತ್ತವೆ ಎಂದು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ) ಸೋಮವಾರ ಸ್ಪಷ್ಟಪಡಿಸಿದೆ.

ಈ ವಿಚಾರವಾಗಿ ಪ್ರಾಧಿಕಾರವು ವಿಮಾ ಕಂಪನಿಗಳಿಗೆ ಸೂಚನೆಗಳನ್ನು ರವಾನಿಸಿದೆ. ವಿಮಾ ಕಂಪನಿಗಳು ತಾವು ಒಪ್ಪಂದ ಮಾಡಿಕೊಂಡಿರುವ ಎಲ್ಲ ಆಸ್ಪತ್ರೆಗಳ ಜೊತೆ ಸಮನ್ವಯ ಸಾಧಿಸಬೇಕು, ವಿಮಾ ಸೌಲಭ್ಯ ಪಡೆದಿರುವವರು ಆಸ್ಪತ್ರೆಗೆ ದಾಖಲಾದರೆ ಅವರಿಗೆ ಯಾವುದೇ ತೊಂದರೆ ಇಲ್ಲದೆ ನಗದುರಹಿತವಾಗಿ ಆರೋಗ್ಯ ಸೇವೆಗಳು ದೊರೆಯುವಂತೆ ನೋಡಿಕೊಳ್ಳಬೇಕು ಎಂದು ಪ್ರಾಧಿಕಾರ ತಿಳಿಸಿದೆ.

ಡಿಸೆಂಬರ್‌ನಲ್ಲಿ ದಾಖಲೆಯ ರಫ್ತು

ನವದೆಹಲಿ (ಪಿಟಿಐ): ಡಿಸೆಂಬರ್ ತಿಂಗಳಿನಲ್ಲಿ ದೇಶದ ರಫ್ತು ಪ್ರಮಾಣವು ಶೇಕಡ 37ರಷ್ಟು ಹೆಚ್ಚಾಗಿದ್ದು, ₹ 2.77 ಲಕ್ಷ ಕೋಟಿಗೆ ತಲುಪಿದೆ. ಇದು ಒಂದು ತಿಂಗಳ ಅವಧಿಯಲ್ಲಿ ದಾಖಲಾಗಿರುವ ಗರಿಷ್ಠ ಮೊತ್ತ.

ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ ರಫ್ತಿನ ಮೊತ್ತವು ₹ 22 ಲಕ್ಷ ಕೋಟಿಯ ಗಡಿ ದಾಟಿದೆ. ಇದು 2020–21ನೆಯ ಸಾಲಿನ ಇದೇ ಅವಧಿಗಿಂತ ಅಧಿಕ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಅಂಕಿ–ಅಂಶಗಳು ಹೇಳಿವೆ.

ಸುದ್ದಿ 2 ನಿಮಿಷ

ಡಿಸೆಂಬರ್‌ನಲ್ಲಿ ಹೆಚ್ಚಿದ ನಿರುದ್ಯೋಗ ಪ್ರಮಾಣ

ನವದೆಹಲಿ (ರಾಯಿಟರ್ಸ್): ದೇಶದಲ್ಲಿನ ನಿರುದ್ಯೋಗ ಪ್ರಮಾಣವು ಡಿಸೆಂಬರ್ ತಿಂಗಳಿನಲ್ಲಿ ನಾಲ್ಕು ತಿಂಗಳ ಗರಿಷ್ಠ ಮಟ್ಟ ತಲುಪಿದೆ ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಸಂಸ್ಥೆಯ ವರದಿ ಹೇಳಿದೆ. ಡಿಸೆಂಬರ್‌ನಲ್ಲಿ ನಿರುದ್ಯೋಗ ಪ್ರಮಾಣವು ಶೇಕಡ 7.9ರಷ್ಟು ಆಗಿದೆ ಎಂದು ಅದು ತಿಳಿಸಿದೆ.

ನಿರುದ್ಯೋಗ ಪ್ರಮಾಣವು ನವೆಂಬರ್‌ನಲ್ಲಿ ಶೇ 7ರಷ್ಟು ಇತ್ತು. ನವೆಂಬರ್‌ಗೆ ಹೋಲಿಸಿದರೆ ಡಿಸೆಂಬರ್‌ನಲ್ಲಿ ನಿರುದ್ಯೋಗ ಹೆಚ್ಚಳ ಆಗಿದೆ. ಆಗಸ್ಟ್‌ನಲ್ಲಿ ನಿರುದ್ಯೋಗ ಪ್ರಮಾಣವು ಶೇ 8.3ರ ಮಟ್ಟವನ್ನು ತಲುಪಿತ್ತು.

ಓಮೈಕ್ರಾನ್ ಪ್ರಕರಣಗಳು ಹೆಚ್ಚುತ್ತ ಇರುವ ಕಾರಣದಿಂದಾಗಿ ಹಲವು ರಾಜ್ಯಗಳಲ್ಲಿ ನಿರ್ಬಂಧಗಳನ್ನು ಜಾರಿಗೆ ತರಲಾಗುತ್ತಿದೆ. ಇದರಿಂದಾಗಿ ಆರ್ಥಿಕ ಚಟುವಟಿಕೆಗಳು ಮತ್ತು ಗ್ರಾಹಕರ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗಿದೆ.

ಡಿಸೆಂಬರ್‌ನಲ್ಲಿ ನಗರ ಪ್ರದೇಶಗಳಲ್ಲಿನ ನಿರುದ್ಯೋಗ ಪ್ರಮಾಣವು ಶೇ 9.3ಕ್ಕೆ (ನವೆಂಬರ್‌ನಲ್ಲಿ ಶೇ 8.2ರಷ್ಟಿತ್ತು) ಏರಿದೆ. ಗ್ರಾಮೀಣ ಪ್ರದೇಶಗಳಲ್ಲಿನ ನಿರುದ್ಯೋಗ ಪ್ರಮಾಣವು ಶೇ 7.3ಕ್ಕೆ (ನವೆಂಬರ್‌ನಲ್ಲಿ ಶೇ 6.4ರಷ್ಟಿತ್ತು) ಹೆಚ್ಚಳ ಆಗಿದೆ ಎಂದು ಸಿಎಂಐಇ ಅಂಕಿ–ಅಂಶಗಳು ಹೇಳಿವೆ.

ಹಿಂದಿನ ತ್ರೈಮಾಸಿಕದಲ್ಲಿ ಕಂಡುಬಂದಿದ್ದ ಆರ್ಥಿಕ ಚೇತರಿಕೆಯು ಓಮೈಕ್ರಾನ್ ಪ್ರಕರಣಗಳ ಹೆಚ್ಚಳದಿಂದಾಗಿ ಹಳಿತಪ್ಪಬಹುದು ಎಂದು ಹಲವು ಅರ್ಥಶಾಸ್ತ್ರಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಡುಕಾಟಿಯಿಂದ 11 ಹೊಸ ಬೈಕ್‌ಗಳು

ನವದೆಹಲಿ (ಪಿಟಿಐ): ಸೂಪರ್ ಬೈಕ್‌ಗಳನ್ನು ತಯಾರಿಸುವ ಇಟಲಿಯ ಡುಕಾಟಿ ಕಂಪನಿಯು ಈ ವರ್ಷ ಭಾರತದ ಮಾರುಕಟ್ಟೆಗೆ ಒಟ್ಟು 11 ಹೊಸ ದ್ವಿಚಕ್ರ ವಾಹನಗಳನ್ನು ಬಿಡುಗಡೆ ಮಾಡುವುದಾಗಿ ಸೋಮವಾರ ತಿಳಿಸಿದೆ.

ಸ್ಕ್ರ್ಯಾಂಬ್ಲರ್ 800, ಅರ್ಬನ್ ಮೋಟಾರ್ಡ್, ಸ್ಟ್ರೀಟ್‌ಫೈಟರ್ ವಿ2, ಮಲ್ಟಿಸ್ಟ್ರಾಡ್ ವಿ2, ಮಲ್ಟಿಸ್ಟ್ರಾಡ್ ವಿ4 ಪೈಕ್ಸ್ ಪೀಕ್, ಸ್ಟ್ರೀಟ್‌ಫೈಟರ್ ವಿ4 ಎಸ್‌ಪಿ, ಎಂವೈ22 ಪನಿಗೇಲ್ ವಿ4 ಮತ್ತು ಎಕ್ಸ್‌ನ ಹೊಸ ಮಾದರಿಗಳು ಬರಲಿವೆ ಎಂದು ಅದು ಹೇಳಿದೆ.

‘2021ರಲ್ಲಿ ಒಟ್ಟು 15 ಹೊಸ ಮಾದರಿಗಳನ್ನು ಬಿಡುಗಡೆ ಮಾಡುವುದಾಗಿ ಘೋಷಿಸಲಾಗಿತ್ತು. ವಾಹನೋದ್ಯಮಕ್ಕೆ ಎದುರಾದ ಹಲವು ಸಂಕಷ್ಟಗಳ ನಡುವೆಯೂ ಆ ಭರವಸೆ ಈಡೇರಿಸುವಲ್ಲಿ ಯಶಸ್ವಿಯಾಗಿದ್ದೇವೆ’ ಎಂದು ಕಂಪನಿಯ ಭಾರತದ ವ್ಯವಸ್ಥಾಪಕ ನಿರ್ದೇಶಕ ವಿಪುಲ್ ಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಂಪನಿಯ ಇತಿಹಾಸದಲ್ಲಿ ಜಾಗತಿಕ ಮಟ್ಟದಲ್ಲಿ 2021ರ ಮೂರನೇ ತ್ರೈಮಾಸಿಕವು ಉತ್ತಮವಾಗಿದೆ. 2020ರ ಮೂರನೇ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 3ರಷ್ಟು ಹಾಗೂ 2019ರ ಇದೇ ಅವಧಿಗೆ ಹೋಲಿಸಿದರೆ ಶೇ 25ರಷ್ಟು ಬೆಳವಣಿಗೆ ಆಗಿದೆ ಎಂದು ಅವರು ಹೇಳಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155 8139988588

ಬೇಕಾಗಿದ್ದಾರೆ : ಟಾಟಾ ಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್ ಕಂಪನಿಗಳಿಗೆ SSLC,PUC,Degree ಡಿಪ್ಲೋಮಾದವರು 18,000-62,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ 8197650569, 7204396011

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ. ತರಬೇತಿಗಾಗಿ: ಬೆಂಗಳೂರು. 8792252077, ಶಿವಮೊಗ್ಗ. 9008013895

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸಗಳಿಗೆ ಯುವಕ ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th, SSLC, PUC, ITI, Degree Pass/ Fail ಆದವರಿಗೆ (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/ PF ನೊಂದಿಗೆ ಸಂಬಳ:16,500/ ರಿಂದ 45,000/ ದವರೆಗೆ: 9742260055, 9538133533

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಕರ್ನಾಟಕದಾದ್ಯಂತ ಕಂಪನಿ /ಆಫೀಸ್ ಕೆಲಸಗಳಿಗೆ ಯುವಕ / ಯುವತಿಯರು ಬೇಕಾಗಿದ್ದಾರೆ.Any Education. ವಸತಿಯೂಟದೊಂದಿಗೆ Salary +OT. 17,800-48,000/- 9538811211, 9538811200

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

CONNECT

ದಾವಣಗೆರೆಯ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿ ಮಾರಾಟ
ಕಾಂಚೀಪುರಂ ಎ.ಜಿ. ಬಾಬು ಸಾಹ್ ರೇಷ್ಮೆ ಸೀರೆ ವ್ಯಾಪಾರಿಗಳು
ಸಂಕ್ರಾಂತಿ ಹಬ್ಬದ ಮಾರಾಟ
ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಕಲ್ಯಾಣ ಮಂಟಪ ಸಮಿತಿ
ಎಸ್. ನಿಜಲಿಂಗಪ್ಪ ಬಡಾವಣೆ, ರಿಂಗ್ ರೋಡ್ ಸರ್ಕಲ್ ಹತ್ತಿರ, ದಾವಣಗೆರೆ–577004.
ಮೊ. : 6385697571
ದಿನಾಂಕ: 5,6,7,8 & 9 ನೇ ಜನವರಿ 2022
ಕೊನೆಯ ದಿನ ಸಂಜೆ 5.00 ಗಂಟೆಗೆ ಮುಕ್ತಾಯ
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ, ಹಿಂತಿರಿಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
ಒಂದು ಬಾರಿಗೆ 50 ಜನರಿಗೆ ಮಾತ್ರ ಪ್ರವೇಶ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ
ನಮ್ಮ ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ
ಎ.ಜಿ. ಬಾಬು ಸಾಹ್ YouTube
ಹೊಸ ಮಾರಾಟ ಮತ್ತು ಮಾಹಿತಿಗಾಗಿ
ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ

Marketing & Sales

LOCAL Rep Bangaluru Retired person (50 to 65 yrs.) from Defense organization to promote Technical textiles. Reimbursement Rs. 7500/- + Petrol Rs. 2500/- per month. To operate from home. 2% Commission. resume@urjafabrics.com

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ ಎಲ್ಲಾ ರೀತಿಯ ದೈಹಿಕ ,ಮಾನಸಿಕ ಕಾಯಿಲೆಗಳು, ನಿಮ್ಮೆಲ್ಲಾ ರೀತಿಯ ಪರಿಹಾರವಾಗದ ಸಮಸ್ಯೆಗಳು, ಜನ್ಮಜನ್ಮಾಂತರ ದೋಷಗಳ ನಿವಾರಣೆಗೆ ಕೂಡಲೇ ಸಂಪರ್ಕಿಸಿ: 7676750280

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ಶ್ರೀ ಭದ್ರಾಕಾಳಿ ದೈವಿಕ ಶಕ್ತಿ ಜ್ಯೋತಿಷ್ಯಂ ಸ್ತ್ರೀಪುರುಷ & ಸರ್ವರೀತಿಯ ವಶೀಕರಣ ಸರ್ವ ಸಂಕಷ್ಟಗಳಿಗೆ ಶೀಘ್ರ ಶಾಶ್ವತ ಪರಿಹಾರ ಸಂಪರ್ಕಿಸಿ: 6304163239

ಪ್ರವಾಸ

Travel

★ರೈಲು ಮತ್ತು ವಿಮಾನದಲ್ಲಿ* 20.02.2022 17/13 ದಿನಗಳು ಸಂಪೂರ್ಣ ಕಾಶಿ ಪ್ರವಾಸ.,05.03.2022 12/16ದಿನಗಳು ಸಿಮ್ಲಾ, ಕುಲುಮನಾಲಿ,ವೈಷ್ಣೋದೇವಿ,ಸಪ್ತ ಶಕ್ತಿಪೀಠ ಪ್ರವಾಸ.ಆರ್.ಗಾಂಧಿ ಟೂರ್ಸ್(ರಿ).9945445809/ 9902433500

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಾರ್ಕ್ ಶೃಂಗಸಭೆ ನಡೆಸಲು ಪಾಕ್ ಸಿದ್ಧ: ಖುರೇಷಿ

ಖುರೇಷಿ

ಇಸ್ಲಾಮಾಬಾದ್ (ಪಿಟಿಐ): 19ನೇ ಸಾರ್ಕ್ ಶೃಂಗಸಭೆಯನ್ನು ಆಯೋಜಿಸಲು ತಮ್ಮ ದೇಶವು ಸಿದ್ಧವಿದೆ. ಸಭೆಯಲ್ಲಿ ಭಾಗವಹಿಸಲು ಭಾರತಕ್ಕೆ ಇಸ್ಲಾಮಾಬಾದ್‌ಗೆ ಬರುವ ಇಚ್ಛೆಯಿಲ್ಲದಿದ್ದರೆ ನವದೆಹಲಿಯಿಂದಲೇ ವರ್ಚುವಲ್ ಮಾದರಿಯಲ್ಲಿ ಪಾಲ್ಗೊಳ್ಳಬಹುದು ಎಂದು ಪಾಕಿಸ್ತಾನದ ವಿದೇಶಾಂಗ ಸಚಿವ ಶಾ ಮೊಹಮ್ಮದ್ ಖುರೇಷಿ ಅವರು ಸೋಮವಾರ ಹೇಳಿದ್ದಾರೆ.

ಸುದ್ದಿಗೋಷ್ಠಿಯೊಂದರಲ್ಲಿ ಮಾತನಾಡಿದ ಅವರು 2021ರಲ್ಲಿ ಪಾಕಿಸ್ತಾನ ವಿದೇಶಾಂಗ ಸಚಿವಾಲಯವು ಮಾಡಿರುವ ಸಾಧನೆಗಳನ್ನು ಉಲ್ಲೇಖಿಸಿದರು.

ಶೃಂಗಸಭೆಯಲ್ಲಿ ಭಾಗವಹಿಸಲು ಇಸ್ಲಾಮಾಬಾದ್‌ಗೆ ಬರಲು ನಿರಾಕರಿಸಿ ಭಾರತವು ತನ್ನ ಮೊಂಡುತನದ ಪ್ರದರ್ಶನ ಮಾಡುವ ಮೂಲಕ ಸಾರ್ಕ್ ಅನ್ನು ನಿಷ್ಕ್ರಿಯಗೊಳಿಸಲು ಯತ್ನಿಸುತ್ತಿದೆ ಎಂದು ಅವರು ಆರೋಪಿಸಿದರು.

10 ಉಗ್ರರ ಬಂಧನ

ಲಾಹೋರ್ (ಪಿಟಿಐ): ನಿಷೇಧಿತ ತೆಹ್ರೀಕ್ ಎ ತಾಲಿಬಾನ್ ಪಾಕಿಸ್ತಾನ (ಟಿಟಿಪಿ), ಅಲ್‌ಖೈದಾ ಮತ್ತು ಐ.ಎಸ್‌ಗೆ ಸೇರಿದ 10 ಉಗ್ರರನ್ನು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ವಿವಿಧೆಡೆ ಸೋಮವಾರ ಬಂಧಿಸಲಾಗಿದೆ. ಸ್ಥಳದಿಂದ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಕೂಡ ವಶಪಡಿಸಿಕೊಳ್ಳಲಾಗಿದೆ ಎಂದು ಭಯೋತ್ಪಾದನಾ ತಡೆ ವಿಭಾಗದ ಅಧಿಕಾರಿಗಳು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

3-1-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8950-9000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಸೋಯಾ ಕಚ್ಚಾ	1130 (1120)
ಪಾಮ್ ವಾರದ ಡೆಲಿವರಿ	11489 (1139)
ಸೂರ್ಯಕಾಂತಿ ಎಣ್ಣೆ ಕಚ್ಚಾ	1183 (1175)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,750 (48,200)
ಬೆಳ್ಳಿ ಕೆ.ಜಿ	61,500 (62,300)

ಆವರಣದಲ್ಲಿ ಶನಿವಾರದ ಧಾರಣೆ

ಡಿಜಿಟಲ್ ವಹಿವಾಟು ಉತ್ತೇಜನಕ್ಕೆ ಆರ್‌ಬಿಐ ಕ್ರಮ

ಆಫ್‌ಲೈನ್ ಪಾವತಿಗೆ ಅವಕಾಶ



ಮುಂಬೈ (ಪಿಟಿಐ): ಗ್ರಾಮೀಣ ಮತ್ತು ಅರೆ ಪಟ್ಟಣ ಪ್ರದೇಶಗಳಲ್ಲಿ ಡಿಜಿಟಲ್ ವಹಿವಾಟುಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ಇಂಟರ್ನೆಟ್ ಸೇವೆ ಇಲ್ಲದಿದ್ದರೂ ಡಿಜಿಟಲ್ ಪಾವತಿಯನ್ನು ಸಾಧ್ಯವಾಗಿಸಲು ಅಗತ್ಯವಿರುವ ನಿಯಮಗಳ ಚೌಕಟ್ಟನ್ನು ಸೋಮವಾರ ಪ್ರಕಟಿಸಿದೆ.

ಇಂಟರ್ನೆಟ್ ಲಭ್ಯತೆ ಇಲ್ಲದ ಕಡೆಗಳಲ್ಲಿ, ಪ್ರತಿ ವಹಿವಾಟಿನಲ್ಲಿ ಗರಿಷ್ಠ ₹ 200ರವರೆಗೆ ಪಾವತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಹಣ ಪಾವತಿಸುವ ವ್ಯಕ್ತಿ ಹಾಗೂ ಆ ಮೊತ್ತವನ್ನು ಸ್ವೀಕರಿಸುವ ವ್ಯಕ್ತಿಗೆ ಒಂದೇ ಕಡೆ ಇದ್ದಾಗ ಮಾತ್ರ ಈ ಬಗೆಯ ಪಾವತಿ ಸಾಧ್ಯವಾಗಲಿದೆ. ಕಾರ್ಡ್, ವಾಲೆಟ್ ಮತ್ತು ಮೊಬೈಲ್ ಸಾಧನ ಬಳಸಿ ಹಣ ಪಾವತಿಸಲು ಅವಕಾಶ ಇದೆ.

ಯುಪಿಐ ಪಾವತಿ ಅಥವಾ ಇಂಟರ್ನೆಟ್ ಬ್ಯಾಂಕಿಂಗ್‌ನಲ್ಲಿ ಇರುವಂತೆ ಪಾಸ್‌ವರ್ಡ್ ಬಳಸಿ ಪಾವತಿಗೆ ಅನುಮೋದನೆ ನೀಡುವ ಅಗತ್ಯ ಆಫ್‌ಲೈನ್ ಡಿಜಿಟಲ್ ಪಾವತಿಯಲ್ಲಿ ಇರುವುದಿಲ್ಲ. ಇಂಟರ್ನೆಟ್ ಸೌಲಭ್ಯ ಇಲ್ಲದೆಯೂ (ಆಫ್‌ಲೈನ್) ಈ ಬಗೆಯ ಪಾವತಿ ನಡೆಯುವ ಕಾರಣ, ಹಣ ಕಡಿತವಾಗಿರುವ ಅಥವಾ ಜಮಾ ಆಗಿರುವ ಕುರಿತು ಎಸ್‌ಎಂಎಸ್ ಸಂದೇಶವು ತುಸು ವಿಳಂಬವಾಗಿ ಬರಲಿದೆ ಎಂದು ಆರ್‌ಬಿಐ ತಿಳಿಸಿದೆ.

ಇಂಟರ್ನೆಟ್ ಲಭ್ಯ ಇಲ್ಲದ ಪ್ರದೇಶಗಳಲ್ಲಿ ಆಫ್‌ಲೈನ್ ಮೂಲಕ ಪಾವತಿ ಸಾಧ್ಯವೇ ಎಂಬುದನ್ನು ಆರ್‌ಬಿಐ 2020ರ ಸೆಪ್ಟೆಂಬರ್‌ನಿಂದ 2021ರ ಜೂನ್ ನಡುವೆ ಪ್ರಾಯೋಗಿಕವಾಗಿ ಪರಿಶೀಲಿಸಿತ್ತು. ಈ ಪ್ರಕ್ರಿಯೆಯಲ್ಲಿ ಕಂಡುಕೊಂಡ ಅಂಶಗಳನ್ನು ಆಧರಿಸಿ, ನಿಯಮಗಳ ಚೌಕಟ್ಟನ್ನು ರೂಪಿಸಲಾಗಿದೆ.

‘ಇಂಟರ್ನೆಟ್ ಸಂಪರ್ಕ ದುರ್ಬಲವಾಗಿರುವ ಕಡೆಗಳಲ್ಲಿ ಈ ಬಗೆಯ ಪಾವತಿ ಸೌಲಭ್ಯವು ಡಿಜಿಟಲ್ ವಹಿವಾಟುಗಳಿಗೆ ಉತ್ತೇಜನ ನೀಡುವ ನಿರೀಕ್ಷೆ ಇದೆ’ ಎಂದು ಆರ್‌ಬಿಐ ಹೇಳಿದೆ.

ಬಳಕೆದಾರರಿಂದ ಒಪ್ಪಿಗೆ ಪಡೆದ ನಂತರವೇ, ಆ ವ್ಯಕ್ತಿಗೆ ಆಫ್‌ಲೈನ್ ಪಾವತಿಗೆ ಅವಕಾಶ ಕಲ್ಪಿಸಬಹುದು. ಈ ಬಗೆಯ ಪಾವತಿಗಳಲ್ಲಿ ಅಡಚಣೆ ಉಂಟಾದರೆ ಗ್ರಾಹಕರಿಗೆ ಏಕೀಕೃತ ಒಂಬುಡ್ಸ್‌ಮನ್ ವ್ಯವಸ್ಥೆಯ ಮೊರೆ ಹೋಗಲು ಅವಕಾಶ ಇರುತ್ತದೆ.

ಸುಡಾನ್‌ನಲ್ಲಿ ರಾಜಕೀಯ ಬಿಕ್ಕಟ್ಟು: ಪ್ರಧಾನಿ ರಾಜೀನಾಮೆ

ಅಬ್ದಲ್ಲಾ

ಕೈರೊ, ಸುಡಾನ್ (ಎಪಿ): ಸುಡಾನ್‌ನಲ್ಲಿ ಉಂಟಾಗಿರುವ ಪ್ರಜಾಪ್ರಭುತ್ವ ಪರ ಪ್ರತಿಭಟನೆಗಳು ಮತ್ತು ರಾಜಕೀಯ ಕ್ಷೋಭೆಯಿಂದ ಅಲ್ಲಿಯ ಪ್ರಧಾನಿ ಅಬ್ದುಲ್ಲಾ ಹ್ಯಾಮ್‌ಡೋಕ್ ಭಾನುವಾರ ರಾಜೀನಾಮೆ ಘೋಷಿಸಿದ್ದಾರೆ.

ಅಕ್ಟೋಬರ್‌ನಲ್ಲಿ ದಂಗೆಯ ನಂತರ ಮಿಲಿಟರಿಯೊಂದಿಗಿನ ಒಪ್ಪಂದದ ಭಾಗವಾಗಿ ವಿಶ್ವಸಂಸ್ಥೆಯ ಮಾಜಿ ಅಧಿಕಾರಿ ಹ್ಯಾಮ್‌ಡೋಕ್ ಅವರನ್ನು ಕಳೆದ ವರ್ಷ ನವೆಂಬರ್‌ನಲ್ಲಿ ಸುಡಾನ್ ಸರ್ಕಾರದ ಪ್ರಧಾನಿಯಾಗಿ ಮರು ನೇಮಕ ಮಾಡಲಾಗಿತ್ತು. ಈ ವೇಳೆ ಹ್ಯಾಮ್‌ಡೋಕ್ ಸಂಪುಟ ರಚಿಸಲು ವಿಫಲವಾಗಿದ್ದರು.

ದೇಶದಲ್ಲಿ ಅಭದ್ರತೆ ಮತ್ತು ಆರ್ಥಿಕ ಸವಾಲುಗಳ ನಡುವೆ ಪ್ರಧಾನಿ ಹ್ಯಾಮ್‌ಡೋಕ್ ರಾಜೀನಾಮೆಯು ರಾಜಕೀಯ ರಾಜಕೀಯ ಸ್ಥಿತ್ಯಂತರ ಉಂಟುಮಾಡಿದೆ.

‘ನಾನು ನನ್ನ ಜವಾಬ್ದಾರಿಯಿಂದ ಹಿಂದೆ ಸರಿಯಲು ನಿರ್ಧರಿಸಿದ್ದು ಪ್ರಧಾನಿ ಹುದ್ದೆಗೆ ರಾಜೀನಾಮೆ ಘೋಷಿಸುತ್ತೇನೆ. ಇದರಿಂದ ಮತ್ತೊಬ್ಬ ವ್ಯಕ್ತಿಯು ಪ್ರಜಾಪ್ರಭುತ್ವ ದೇಶವನ್ನು ಮುನ್ನಡೆಸಲು ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮರುಸ್ಥಾಪಿಸಲು ಸಾಧ್ಯವಾಗುತ್ತದೆ’ ಎಂದು ರಾಷ್ಟ್ರೀಯ ದೂರದರ್ಶನ ವಾಹಿನಿಯ ಭಾಷಣದಲ್ಲಿ ಹೇಳಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕುಮಟ	
ಚಿಪ್ಪು	25109-33019
ಕೋಕ	18019-28509
ಫ್ಯಾಕ್ಟರಿ	13099-19299
ಹಳೆಚಾಲಿ	46509-49369
ಹೊಸಚಾಲಿ	36509-41199
ಕಾರ್ಕಳ	
ಹೊಸತು	40000-45000
ಹಳತು	46000-53000
ಸಿದ್ದಾಪುರ	
ಬಿಳಿಗೋಟು	28899-38769
ಚಾಲಿ	41609-48599
ಕೋಕ	26012-38399
ಹೊಸಚಾಲಿ	32059-46899
ಕೆಂಪುಗೋಟು	31869-34099
ರಾಶಿ	45009-48599
ತಟ್ಟಿಬೆಟ್ಟೆ	39219-44899
ಪುತ್ತೂರು	
ಕೋಕ	31000-40000
ಹೊಸಚಾಲಿ	27500-45000
ಶಿರಸಿ	
ಬೆಟ್ಟೆ	28699-47999
ಬಿಳಿಗೋಟು	22899-41760
ಚಾಲಿ	31919-49242
ರಾಶಿ	42299-48741
ಯಲ್ಲಾಪುರ	
ಬಿಳಿಗೋಟು	28899-38511
ಚಾಲಿ	40168-48757
ಕೋಕ	22899-32899
ಕೆಂಪುಗೋಟು	29012-37699
ರಾಶಿ	44169-51769
ತಟ್ಟಿಬೆಟ್ಟೆ	38509-43960
ರಾಮನಗರ ರೇಷ್ಮೆ	
ಮಿಶ್ರತಳಿ	400-666
ದ್ವಿತಳಿ	388-805

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮುದ್ರಮನೆ
ಎಪಿ	15400
ಎಸಿ	7000
ಆರ್‌ಪಿ	6500
ಆರ್‌ಸಿ	3900

ನುಸುಳುಕೋರನ ಹತ್ಯೆ: ಮದ್ದುಗುಂಡು ವಶ

ಪ್ರಜಾವಾಣಿ ವಾರ್ತೆ

ಬಿಎಸ್‌ಎಫ್ ವಶಪಡಿಸಿಕೊಂಡ ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡು

ಜಮ್ಮು: ಇಲ್ಲಿನ ಅರ್ನಿಯಾ ಸೆಕ್ಟರ್‌ನ ಅಂತರರಾಷ್ಟ್ರೀಯ ಗಡಿಯಲ್ಲಿ ಸೋಮವಾರ ಒಳನುಸುಳುತ್ತಿದ್ದ ಪಾಕಿಸ್ತಾನದ ನುಸುಳುಕೋರನೊಬ್ಬನನ್ನು ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಗುಂಡಿಟ್ಟು ಕೊಂದಿದೆ.

‘ಬಿಎಸ್‌ಎಫ್‌ನ ಎಚ್ಚರಿಕೆಗಳನ್ನು ನಿರ್ಲಕ್ಷಿಸಿ ಅರ್ನಿಯಾ ಸೆಕ್ಟರ್‌ನಲ್ಲಿ ಭಾರತೀಯ ಭೂಪ್ರದೇಶದೊಳಗೆ ಪ್ರವೇಶಿಸಿದ ನುಸುಳುಕೋರನನ್ನು ಹೊಡೆದುರುಳಿಸಲಾಯಿತು. ನಂತರ ಸಾಂಬಾ ಜಿಲ್ಲೆಯ ರಾಮಗಡ ಸೆಕ್ಟರ್‌ನಲ್ಲಿ ಅಪಾರ ಪ್ರಮಾಣದ ಮದ್ದುಗುಂಡು ಹಾಗೂ ಶಸ್ತ್ರಾಸ್ತ್ರಗಳು ಪತ್ತೆಯಾಗಿದ್ದು, ಬಿಎಸ್‌ಎಫ್ ದಾಳಿ ನಡೆಸಿ ವಶಪಡಿಸಿಕೊಂಡಿದೆ’ ಎಂದು ಬಿಎಸ್‌ಎಫ್ ಜಮ್ಮು ಪ್ರಾಂತ್ಯದ ಡಿಐಜಿ ಎಸ್‌ಪಿಎಸ್ ಸಂಧು ತಿಳಿಸಿದ್ದಾರೆ.

ಪ್ರಧಾನಿ ಸಮಚಿತ್ತದಲ್ಲಿ ಇಲ್ಲ ಎಂದಿದ್ದ ಶಾ: ಮೇಘಾಲಯ ರಾಜ್ಯಪಾಲ ಸತ್ಯಪಾಲ್ ಹೇಳಿಕೆ

‘ರೈತರ ಸಮಸ್ಯೆ: ಮೋದಿ ಸೊಕ್ಕಿನ ವರ್ತನೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಹೋರಾಟದ ಬಗ್ಗೆ ಪ್ರಸ್ತಾಪಿಸಿದಾಗ ಪ್ರಧಾನಿ ನರೇಂದ್ರ ಮೋದಿ ಅವರು ಬಹಳ ಸೊಕ್ಕಿನಿಂದ ವರ್ತಿಸಿದ್ದರು. ಪ್ರತಿಭಟನೆ ವೇಳೆ 500 ರೈತರು ಮೃತಪಟ್ಟಿದ್ದಾರೆ ಎಂದಾಗ ಮೋದಿ ಅವರು, ‘ನನಗಾಗಿ ಸತ್ತಿದ್ದಾರೆಯೇ’ ಎಂದು ಪ್ರಶ್ನಿಸಿದ್ದರು’ ಎಂದು ಮೇಘಾಲಯ ರಾಜ್ಯಪಾಲ ಸತ್ಯಪಾಲ್ ಮಲಿಕ್ ಹೇಳಿದ್ದಾರೆ. ಸಭಾ ಕಾರ್ಯಕ್ರಮವೊಂದರಲ್ಲಿ ಅವರು ಹೀಗೆ ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಸತ್ಯಪಾಲ್ ಅವರ ಈ ಹೇಳಿಕೆಯನ್ನು ಬಳಸಿಕೊಂಡು ವಿರೋಧ ಪಕ್ಷಗಳು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಹರಿಹಾಯ್ದಿವೆ. ಸತ್ಯಪಾಲ್ ಅವರ ಹೇಳಿಕೆ ಇರುವ ವಿಡಿಯೊ ಟ್ವಿಟರ್‌ನಲ್ಲಿ ಸತತ ಮೂರು ತಾಸು ಟ್ರೆಂಡ್ ಆಗಿದೆ.

‘ರೈತರ ಹೋರಾಟದ ಬಗ್ಗೆ ಮಾತನಾಡಲು ನಾನು ಪ್ರಧಾನಿ ಮೋದಿ ಅವರ ಬಳಿಗೆ ಹೋಗಿದ್ದೆ. ಆದರೆ ಐದೇ ನಿಮಿಷದಲ್ಲಿ ಅದು ವಾಗ್ವಾದಕ್ಕೆ ತಿರುಗಿತು. ಅವರು ಬಹಳ ಸೊಕ್ಕಿನಿಂದ ವರ್ತಿಸಿದರು. ಹೋರಾಟದ ವೇಳೆ 500 ರೈತರು ಸತ್ತಿದ್ದಾರೆ. ನೀವು ನಾಯಿ ಸತ್ತರೂ ಸಂತಾಪ ಸೂಚನಾ ಪತ್ರ ಬರೆಯುತ್ತೀರಿ ಎಂದು ನಾನು ಹೇಳುತ್ತಿದ್ದೆ. ಆಗ ಮೋದಿ ಅವರು, ರೈತರು ನನಗಾಗಿ ಸತ್ತಿದ್ದಾರೆಯೇ ಎಂದು ಪ್ರಶ್ನಿಸಿದರು.

ಸಾರ್ವಜನಿಕರು ಇರಲಿ, ಸ್ವತಃ ರಾಜ್ಯಪಾಲರೊಬ್ಬರು ಸತ್ಯ ಹೇಳುವುದನ್ನು ಪ್ರಧಾನಿ ಮೋದಿ ಆಲಿಸುವುದಿಲ್ಲ. ಅವರಿಗೆ ಬೇಕಿರುವುದು ಹೊಗಳಿಕೆ ಮಾತ್ರ

ಅಸಾದುದ್ದೀನ್ ಒವೈಸಿ, ಎಐಎಂಐಎಂ ಮುಖ್ಯಸ್ಥ

ಹೌದು ನಿಮಗಾಗಿಯೇ ಅವರು ಸತ್ತಿದ್ದಾರೆ. ನೀವು ದೇಶದ ದೊರೆ ಎಂದು ಹೇಳಿದೆ. ಅಮಿತ್ ಶಾ ಅವರನ್ನು ಭೇಟಿ ಮಾಡಿ ಹೋಗಿ ಎಂದು ನನ್ನನ್ನು ಕಳುಹಿಸಿದರು’ ಎಂದು ಸತ್ಯಪಾಲ್ ಹೇಳಿರುವುದು ವಿಡಿಯೊದಲ್ಲಿ ದಾಖಲಾಗಿದೆ.

‘ಶಾ ಅವರನ್ನು ಭೇಟಿ ಮಾಡಿದೆ. ಶಾ, ಅವರು (ಮೋದಿ) ಸಮಚಿತ್ತ ಕಳೆದುಕೊಂಡಿದ್ದಾರೆ. ಕೆಲವರು ಅವರ ಹಾದಿ ತಪ್ಪಿಸುತ್ತಿದ್ದಾರೆ. ನೀವು ಭೇಟಿ ಮಾಡುತ್ತಿರಿ. ಅವರಿಗೆ ವಿಷಯ ಅರ್ಥವಾಗಬಹುದು ಎಂದು ಹೇಳಿದರು’ ಎಂದು ಸತ್ಯಪಾಲ್ ಹೇಳಿರುವುದೂ ವಿಡಿಯೊದಲ್ಲಿ ದಾಖಲಾಗಿದೆ. ಸತ್ಯಪಾಲ್ ಅವರು ಭಾನುವಾರ ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಈ ಮಾತು ಹೇಳಿದ್ದಾರೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ.

ಸಾಂವಿಧಾನಿಕ ಹುದ್ದೆಗಳಲ್ಲಿ ಇರುವ ವ್ಯಕ್ತಿಗಳು ಪರಸ್ಪರರ ಬಗ್ಗೆ ಹೀಗೆ ಮಾತನಾಡಿಕೊಳ್ಳುತ್ತಿದ್ದಾರೆ. ಮೋದಿ ಅವರೆ ಇದು ನಿಜವೇ?

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ

ಈ ಮನುಷ್ಯ ಜಮ್ಮು–ಕಾಶ್ಮೀರದಲ್ಲಿ ಮೋದಿ, ಶಾ ಅವರ ಭಂಟನಾಗಿದ್ದರು. ಈಗ ತನಗೆ ಅನ್ನ ನೀಡಿದ ಕೈಯನ್ನೇ ಸತ್ಯಪಾಲ್ ಕಚ್ಚಿದ್ದಾರೆ

ಒಮರ್ ಅಬ್ದುಲ್ಲಾ, ನ್ಯಾನಷಲ್ ಕಾನ್ಫರೆನ್ಸ್ ಮುಖ್ಯಸ್ಥ

ವಿರೋಧ ಪಕ್ಷಗಳು ಈ ಹೇಳಿಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿವೆ. ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಮುಖ್ಯ ವಕ್ತಾರ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಈ ವಿಡಿಯೊವನ್ನು ಟ್ವೀಟ್ ಮಾಡಿದ್ದಾರೆ. ರೈತರ ಬಗ್ಗೆ ಹೀಗೆ ಹೇಳಿರುವುದಕ್ಕೆ ಪ್ರಧಾನಿ ಮೋದಿ ಮತ್ತು ಸಚಿವ ಅಮಿತ್ ಶಾ ದೇಶದ ಜನರ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ. ಸತ್ಯಪಾಲ್ ಮಲಿಕ್ ಹೇಳಿರುವುದು ಸತ್ಯವೇ ಎಂಬುದನ್ನು ಪ್ರಧಾನಿ ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

ಸತ್ಯಪಾಲ್ ಮಲಿಕ್ ಅವರು ಪ್ರಧಾನಿ ಮೋದಿ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದರು. ಜಮ್ಮು ಮತ್ತು ಕಾಶ್ಮೀರದ ರಾಜ್ಯದ ಸ್ಥಾನ ರದ್ದುಪಡಿಸಿದಾಗ, ಸತ್ಯಪಾಲ್ ಅವರನ್ನು ಜಮ್ಮು–ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕ ಮಾಡಲಾಗಿತ್ತು. ನಂತರದ ದಿನಗಳಲ್ಲಿ ಅವರನ್ನು ಮೇಘಾಲಯದ ರಾಜ್ಯಪಾಲರಾಗಿ ನೇಮಕ ಮಾಡಲಾಯಿತು. ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ವಿಚಾರದಲ್ಲಿ ಸತ್ಯಪಾಲ್ ಅವರು, ಮೋದಿ ವಿರುದ್ಧ ಹಲವು ಬಾರಿ ಹೇಳಿಕೆ ನೀಡಿದ್ದರು.

‘ಮೋದಿ ಬಗ್ಗೆ ಶಾಗೆ ಗೌರವವಿದೆ’

ಸತ್ಯಪಾಲ್

ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಬಳಿಕ, ಸತ್ಯಪಾಲ್ ಅವರು ಈ ಬಗ್ಗೆ ಸೋಮವಾರ ಸ್ಪಷ್ಟನೆ ನೀಡಿದ್ದಾರೆ. ಈ ಸಂಬಂಧ ಹಲವು ಮಾಧ್ಯಮಗಳಿಗೆ ಸಂದರ್ಶನ ನೀಡಿದ್ದಾರೆ.

‘ಅಮಿತ್ ಶಾ ಅವರು ಮೋದಿ ಅವರನ್ನು ಗೌರವಿಸುತ್ತಾರೆ. ಇಬ್ಬರ ನಡುವಣ ಸಂಬಂಧ ಚೆನ್ನಾಗಿ ಇದೆ. ಆದರೆ ಶಾ ಅವರು, ಕೆಲವರು ಮೋದಿ ಅವರ ಹಾದಿ ತಪ್ಪಿಸುತ್ತಿದ್ದಾರೆ ಎಂದು ಹೇಳಿದ್ದರು’ ಎಂದು ಸತ್ಯಪಾಲ್ ಹೇಳಿದ್ದಾರೆ. ಮೋದಿ ಅವರು ಸಮಚಿತ್ತ ಕಳೆದುಕೊಂಡಿದ್ದಾರೆ ಎಂಬ ಹೇಳಿಕೆ ಬಗ್ಗೆ ಪ್ರಶ್ನಿಸಿದಾಗಲೂ ಅವರು ಆ ಬಗ್ಗೆ ಯಾವುದೇ ಸ್ಪಷ್ಟನೆ ನೀಡಿಲ್ಲ.

ಜತೆಗೆ, ‘ಆ ಭೇಟಿಯ ನಂತರ ಮೋದಿ ಮತ್ತು ನನ್ನ ಮಧ್ಯೆ ಹಲವು ತಿಂಗಳು ಮಾತುಕತೆಯೇ ನಡೆಯಲಿಲ್ಲ. ಮೋದಿ ಅವರು ಕೃಷಿ ಕಾಯ್ದೆಗಳನ್ನು ಮೊದಲೇ ರದ್ದುಪಡಿಸಬೇಕಿತ್ತು. ಆಗ ರೈತರು ಹೋರಾಟ ನಡೆಸುವ ಅಗತ್ಯ ಉಂಟಾಗುತ್ತಿರಲಿಲ್ಲ. ನೂರಾರು ರೈತರ ಜೀವ ಹೋಗುತ್ತಿರಲಿಲ್ಲ. ಆದರೆ ಪ್ರಧಾನಿ ಆ ಕೆಲಸ ಮಾಡಲಿಲ್ಲ. ಕೃಷಿ ಕಾಯ್ದೆಗಳನ್ನು ರದ್ದುಪಡಿಸುವ ನಿರ್ಧಾರವನ್ನು ಬಹಳ ತಡವಾಗಿ ತೆಗೆದುಕೊಂಡರು’ ಎಂದು ಸ್ಪಷ್ಟೀಕರಣದ ವೇಳೆ ಸತ್ಯಪಾಲ್ ಹೇಳಿದ್ದಾರೆ.

ಚಳಿಗಾಲದ ಉತ್ಸವ

ಮನಾಲಿಯಲ್ಲಿ ಸೋಮವಾರ ನಡೆದ ಚಳಿಗಾಲದ ಉತ್ಸವ–2022ರಲ್ಲಿ ‘ಕುಲ್ವಿ ನಾಟಿ’ ನೃತ್ಯ ಪ್ರದರ್ಶನದ ವೇಳೆ ಕಲಾವಿದರು ವಾದ್ಯಗಳನ್ನು ನುಡಿಸಿದರು ಪಿಟಿಐ ಚಿತ್ರ

ಲಖಿಂಪುರ ಖೇರಿ ಪ್ರಕರಣದ ಆರೋಪಪಟ್ಟಿ ಸಲ್ಲಿಕೆ

ಆಶಿಶ್ ಮಿಶ್ರಾ ಮುಖ್ಯ ಆರೋಪಿ

ಪ್ರಜಾವಾಣಿ ವಾರ್ತೆ

ಲಖನೌ: ನಾಲ್ವರು ರೈತರೂ ಸೇರಿದಂತೆ ಎಂಟು ಜನರು ಮೃತಪಟ್ಟಿದ್ದ, ಲಖಿಂಪುರ ಖೇರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡವು (ಎಸ್‌ಐಟಿ) ಜಿಲ್ಲಾ ಕೋರ್ಟ್‌ನಲ್ಲಿ ಸೋಮವಾರ ದೋಷಾರೋಪ ಪಟ್ಟಿಯನ್ನು ದಾಖಲಿಸಿದೆ.

ಪೊಲೀಸ್ ಮೂಲಗಳ ಪ್ರಕಾರ, ‘ದೋಷಾರೋಪ ಪಟ್ಟಿಯಲ್ಲಿ 17 ಜನರ ಹೆಸರಿದೆ. ಕೇಂದ್ರ ಸಚಿವ ಅಜಯ್ ಕುಮಾರ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಅವರನ್ನು ಮುಖ್ಯ ಆರೋಪಿಯಾಗಿ ಹೆಸರಿಸಿದ್ದು, ಹಿಂಸಾಚಾರ ಕೃತ್ಯ ನಡೆದಿದ್ದ ಸ್ಥಳದಲ್ಲಿ ಅವರೂ ಇದ್ದರು’ ಎಂದೂ ದಾಖಲಿಸಲಾಗಿದೆ.

ಘಟನೆಗೆ ಸಂಬಂಧಿಸಿ ಆಶೀಶ್ ಸೇರಿದಂತೆ 17 ಜನರನ್ನು ಪೊಲೀಸರು ಈಗಾಗಲೇ ಬಂಧಿಸಿದ್ದಾರೆ. ‘ಸಾಕ್ಷಿಗಳಾಗಿ 208 ಜನರನ್ನು ಗುರುತಿಸಿದ್ದು, ವಿಚಾರಣೆಯ ವೇಳೆ ಅವರನ್ನು ಹಾಜರುಪಡಿಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

ವಿಶೇಷ ತನಿಖಾ ತಂಡವು ಈಗಾಗಲೇ ‘ಹಿಂಸಾಚಾರ ಘಟನೆಯು ಪೂರ್ವಯೋಜಿತ ಸಂಚು. ಉದ್ದೇಶಪೂರ್ವಕವಾಗಿಯೇ ಕೃತ್ಯವನ್ನು ಎಸಗಲಾಗಿತ್ತು. ಐಪಿಸಿ ಕಾಯ್ದೆ ಅನ್ವಯ ಕಠಿಣ ಶಿಕ್ಷೆ ವಿಧಿಸಬೇಕು’ ಎಂದು ಕೋರ್ಟ್‌ಗೆ ತಿಳಿಸಿದೆ.

ಕಳೆದ ಅಕ್ಟೋಬರ್ ತಿಂಗಳಲ್ಲಿ ನಡೆದಿದ್ದ ಹಿಂಸಾಚಾರದಲ್ಲಿ ನಾಲ್ವರು ರೈತರು, ಸ್ಥಳೀಯ ಪತ್ರಕರ್ತ ಸೇರಿ ಎಂಟು ಜನರು ಸತ್ತಿದ್ದರು. ಕೇಂದ್ರ ರೂಪಿಸಿದ್ದ ಮೂರು ಕೃಷಿ ಕಾಯ್ದೆಗಳ ವಿರುದ್ಧ ರೈತರು ಪ್ರತಿಭಟಿಸುವ ಸಂದರ್ಭದಲ್ಲಿ ವೇಗವಾಗಿ ವಾಹನ ಹರಿಸಿದ್ದು, ನಾಲ್ವರು ರೈತರು ಮೃತಪಟ್ಟಿದ್ದರು. ಈ ವಾಹನದಲ್ಲಿ ಆಶಿಶ್ ಇದ್ದರು ಎಂದು ರೈತರು ದೂರಿದ್ದರು.

ಲಖಿಂಪುರ ಖೇರಿ ಹಿಂಸಾಚಾರ ಘಟನೆ ದೇಶವ್ಯಾಪಿ ಗಮನಸೆಳೆದಿತ್ತು. ಕೇಂದ್ರ ಸಚಿವ ಅಜಯ್ ಮಿಶ್ರಾ ಅವರನ್ನು ಸಂಪುಟದಿಂದ ವಜಾ ಮಾಡಬೇಕು ಎಂಬ ಒತ್ತಾಯ ಕೇಳಿಬಂದಿತ್ತು. ಈ ಬೇಡಿಕೆಯನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ತಳ್ಳಿ ಹಾಕಿತ್ತು. ಉತ್ತರ ಪ್ರದೇಶ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ, ಅಜಯ್ ಮಿಶ್ರಾ ಅವರು ಪ್ರತಿನಿಧಿಸುವ ಬ್ರಾಹ್ಮಣ ಸಮುದಾಯದ ಆಕ್ರೋಶ ಎದುರಿಸಬೇಕಾದಿತು ಎಂಬ ಆತಂಕ ಇದಕ್ಕೆ ಕಾರಣ ಎನ್ನಲಾಗಿತ್ತು.

ಅಜಯ್ ಮಿಶ್ರಾ ವಜಾಗೆ ಆಗ್ರಹ

ನವದೆಹಲಿ (ಪಿಟಿಐ): ‘ಲಖೀಂಪುರ ಖೇರಿ ಹಿಂಸಾಚಾರ ಪ್ರಕರಣದ ಆರೋಪಿಗಳನ್ನು ರಕ್ಷಿಸಲು ನರೇಂದ್ರ ಮೋದಿ ಸರ್ಕಾರ ಪ್ರಯತ್ನಿಸುತ್ತಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೋಮವಾರ ಆರೋಪಿಸಿದ್ದಾರೆ.

‘ಎಸ್‌ಐಟಿ ಸಲ್ಲಿಸಿರುವ ಆರೋಪಿ ಪಟ್ಟಿಯಲ್ಲಿ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಅವರ ಹೆಸರು ಇದೆ. ಹೀಗಾಗಿ ಅಜಯ್ ಮಿಶ್ರಾ ಅವರನ್ನು ವಜಾಗೊಳಿಸಬೇಕು’ ಎಂದು ರಾಹುಲ್ ಒತ್ತಾಯಿಸಿದ್ದಾರೆ.

ಎಂಟು ಜೀವಗಳನ್ನು ಬಲಿತೆಗೆದುಕೊಂಡ ಲಖಿಂಪುರ ಖೇರಿ ಹಿಂಸಾಚಾರದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಸೋಮವಾರ 5,000 ಪುಟಗಳ ಆರೋಪ ಪಟ್ಟಿಯನ್ನು ಸಲ್ಲಿಸಿದೆ.

‘ಕಾಂಗ್ರೆಸ್ ಗೆದ್ದರೆ ಮಹಿಳೆಯರಿಗೆ ₹2,000 ನೆರವು’

ಚಂಡೀಗಡ: ಪಂಜಾಬ್‌ನ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಪಕ್ಷವು ಗೆದ್ದು ಅಧಿಕಾರಕ್ಕೆ ಬಂದರೆ ಗೃಹಿಣಿಯರಿಗೆ ಮಾಸಿಕ ₹2,000 ನೆರವು ಮತ್ತು ಪ್ರತಿ ವರ್ಷ ಎಂಟು ಅಡುಗೆ ಅನಿಲ ಸಿಲಿಂಡರ್‌ಗಳನ್ನು ಉಚಿತವಾಗಿ ನೀಡುವುದಾಗಿ ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಸೋಮವಾರ ಭರವಸೆ ನೀಡಿದ್ದಾರೆ.

ಬರ್ನಾಲ್‌ನಲ್ಲಿ ಆಯೋಜಿಸಿದ್ದ ಚುನಾವಣಾ ರ‍್ಯಾಲಿಯಲ್ಲಿ ಈ ಭರವಸೆ ನೀಡಿರುವ ಸಿಧು, ಪದವಿ ತರಗತಿಗೆ ಪ್ರವೇಶ ಪಡೆಯುವ ಹೆಣ್ಣು ಮಕ್ಕಳಿಗೆ ದ್ವಿಚಕ್ರವಾಹನ, ಕಂಪ್ಯೂಟರ್ ಅನ್ನು ಉಚಿತವಾಗಿ ನೀಡುವುದಾಗಿ ತಿಳಿಸಿದರು.

12ನೇ ತರಗತಿ ಉತ್ತೀರ್ಣರಾದ ಹೆಣ್ಣು ಮಕ್ಕಳಿಗೆ ₹20,000, 10ನೇ ತರಗತಿ ತೇರ್ಗಡೆ ಹೊಂದಿದ ಬಾಲಕಿಯರಿಗೆ ₹15,000, ಐದನೇ ತರಗತಿ ಉತ್ತೀರ್ಣರಾದ ಬಾಲಕಿಯರಿಗೆ ₹5,000 ನೀಡುವುದಾಗಿ ಅವರು ಘೋಷಿಸಿದ್ದಾರೆ. ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು, ಪಂಜಾಬ್, ಉತ್ತರ ಪ್ರದೇಶ, ಉತ್ತರಾಖಂಡ ಹಾಗೂ ಗೋವಾ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದರೆ ಮಹಿಳೆಯರಿಗೆ ₹1,000 ಹಾಗೂ ಗೃಹ ಬಳಕೆಗೆ 300 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡುವುದಾಗಿ ಭರವಸೆ ನೀಡಿದ ನಂತರ ಸಿಧು ಸಹ ಹಲವು ಭರವಸೆಗಳನ್ನು ನೀಡಿದ್ದಾರೆ.

ಮಹಿಳೆಯರ ಸಬಲೀಕರಣದ ಅವಶ್ಯಕತೆಯ ಬಗ್ಗೆ ಪ್ರತಿಪಾದಿಸಿರುವ ಅವರು, ಮಹಿಳೆಯರ ಹೆಸರಿಗೆ ಆಸ್ತಿ ವರ್ಗಾವಣೆಯನ್ನು ಉಚಿತವಾಗಿ ಮಾಡಿಕೊಡಲಾಗುವುದು. ಮಹಿಳೆಯರಿಗಾಗಿ 28 ಕೌಶಲ ಅಭಿವೃದ್ಧಿ ಕೇಂದ್ರಗಳನ್ನು ತೆರೆಯಲಾಗುವುದು ಎಂದು ಹೇಳಿದ್ದಾರೆ.

ಪಂಜಾಬ್: ಬಿಜೆಪಿಗೆ ಸೇರಿದ 6 ದಿನಗಳಲ್ಲೇ ಮತ್ತೆ ಕಾಂಗ್ರೆಸ್‌ಗೆ ಮರಳಿದ ಶಾಸಕ!

ಚಂಡೀಗಡ: ಕೇವಲ ಆರು ದಿನಗಳ ಹಿಂದೆಯಷ್ಟೇ ಬಿಜೆಪಿಗೆ ಸೇರ್ಪಡೆಗೊಂಡಿದ್ದ ಪಂಜಾಬ್ ಶಾಸಕ ಬಲ್ವಿಂದರ್ ಸಿಂಗ್ ಲಡ್ಡಿ ಅವರು ಪುನಃ ಕಾಂಗ್ರೆಸ್ ಪಕ್ಷಕ್ಕೆ ಹಿಂತಿರುಗಿದ್ದಾರೆ.
ಪಂಜಾಬ್‌ನ ಎಐಸಿಸಿ ಉಸ್ತುವಾರಿ ಹರೀಶ್ ಚೌಧರಿ ಮತ್ತು ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಸಮ್ಮುಖದಲ್ಲಿ ಭಾನುವಾರ ರಾತ್ರಿ ಕಾಂಗ್ರೆಸ್ ಪಕ್ಷಕ್ಕೆ ಮರಳಿರುವುದಾಗಿ ಬಲ್ವಿಂದರ್ ಸಿಂಗ್ ಅವರು ಸೋಮವಾರ ಹೇಳಿದ್ದಾರೆ. ಶ್ರೀಹರಗೋಬಿಂದಪುರ ಕ್ಷೇತ್ರದ ಶಾಸಕರಾಗಿರುವ ಬಲ್ವಿಂದರ್ ಸಿಂಗ್ ಅವರು, ಡಿ. 28ರಂದು ನವದೆಹಲಿಯಲ್ಲಿ ಕಾಂದಿಯಾ ಶಾಸಕ ಫತ್ತೇಜಂಗ್ ಸಿಂಗ್ ಬಾಜ್ವಾ ಅವರೊಂದಿಗೆ ಬಿಜೆಪಿಗೆ ಸೇರಿದ್ದರು.

ಶ್ರೀಕೃಷ್ಣನ ‘ಪ್ರೇರಣೆ’ಯಿಂದ ಯೋಗಿ ಪರ ಪತ್ರ ಬರೆದ ಬಿಜೆಪಿ ಸಂಸದ

ಲಖನೌ: ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಮಥುರಾ ಕ್ಷೇತ್ರದ ಅಭ್ಯರ್ಥಿ ಎಂದು ಘೋಷಿಸುವಂತೆ ಬಿಜೆಪಿ ಸಂಸದರೊಬ್ಬರು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಪತ್ರ ಬರೆದಿದ್ದಾರೆ. ಜೊತೆಗೆ, ಈ ಪತ್ರವನ್ನು ಶ್ರೀಕೃಷ್ಣನಿಂದ ಪ್ರೇರಣೆ ಪಡೆದು ಬರೆದಿರುವುದಾಗಿ ಹೇಳಿದ್ದಾರೆ.

‘ಆದಿತ್ಯನಾಥರನ್ನು ಮಥುರಾ ಕ್ಷೇತ್ರದ ಅಭ್ಯರ್ಥಿ ಎಂದು ಘೋಷಿಸುವಂತೆ ಮನವಿ ಮಾಡಿ ಪತ್ರ ಬರೆಯಲು ಶ್ರೀ ಕೃಷ್ಣ ನನಗೆ ಪ್ರೇರಣೆ ನೀಡಿದ್ದಾನೆ’ ಎಂದು ಬಿಜೆಪಿ ರಾಜ್ಯಸಭೆ ಸದಸ್ಯ ಹರನಾಥ್ ಸಿಂಗ್ ಯಾದವ್ ಪತ್ರದಲ್ಲಿ ಹೇಳಿದ್ದಾರೆ.

ಆದಿತ್ಯನಾಥ ಅವರು ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ಇನ್ನೂ ಸ್ಪಷ್ಟ ಮಾಹಿತಿ ಇಲ್ಲ. ಪಕ್ಷ ಬಯಸಿದರೆ ತಾವು ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಆದಿತ್ಯನಾಥ ಹೇಳಿದ್ದಾರೆ.

ಆದರೆ, ಅವರು ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ಬಿಜೆಪಿ ಒಳಗೇ ಒಮ್ಮತ ಇಲ್ಲ. ಒಂದು ವರ್ಗ ಆದಿತ್ಯನಾಥ ಅವರ ಸ್ಪರ್ಧೆ ಬೇಡ ಎಂದರೆ, ಮತ್ತೊಂದು ವರ್ಗ ಅವರ ಸ್ಪರ್ಧೆಯಿಂದ ಪಕ್ಷಕ್ಕೆ ಒಳಿತಾಗುತ್ತದೆ ಎಂಬ ಅಭಿಪ್ರಾಯ ಹೊಂದಿದೆ.

ಪ್ರಜಾ ಮತ
ಜನತಂತ್ರದ ಹಬ್ಬ 2022

ಉತ್ತರಾಖಂಡ: ಕಾಂಗ್ರೆಸ್‌ನಿಂದ ಚುನಾವಣಾ ಹಾಡು ಬಿಡುಗಡೆ

ನವದೆಹಲಿ: ಉತ್ತರಾಖಂಡ ಚುನಾವಣೆಗಾಗಿ ಕಾಂಗ್ರೆಸ್ ಹಾಡನ್ನು ಬಿಡುಗಡೆ ಮಾಡಿದೆ. ಆ ಹಾಡಿನಲ್ಲಿ ಆಡಳಿತಾರೂಢ ಬಿಜೆಪಿ ಒಂದು ಅವಧಿಯಲ್ಲಿ ಮೂವರು ಮುಖ್ಯಮಂತ್ರಿಗಳನ್ನು ಬದಲಿಸಿದ್ದನ್ನು ಮುಖ್ಯವಾಗಿ ಗುರಿಯಾಗಿಸಿದೆ.

ಬಿಜೆಪಿ ಸರ್ಕಾರದ ‘ವೈಫಲ್ಯ’ಗಳನ್ನು ಹಾಡಿನಲ್ಲಿ ಒತ್ತಿ ಹೇಳಲಾಗಿದೆ. ಡಬಲ್ ಎಂಜಿನ್ ಅಭಿವೃದ್ಧಿ ಮಾದರಿ ಉತ್ತರಾಖಂಡದಲ್ಲಿ ಕೆಲಸ ಮಾಡಿಲ್ಲ ಎಂದು ಹೇಳಲಾಗಿದೆ. ‘ಟೀನ್ ತಿಗಡ, ಕಾಮ್ ಬಿಗಡ’ (ಮೂವರ ನಡುವೆ ಏನಾದರೂ ಹಂಚಿಕೆ ಆದರೆ ಕೆಲಸ ಕೆಡುತ್ತದೆ) ಎಂಬ ಸಾಲಿರುವ ಈ ಹಾಡನ್ನು ಉತ್ತರಾಖಂಡ ಕಾಂಗ್ರೆಸ್ಸಿನ ಪ್ರಮುಖ ನಾಯಕ ಹರೀಶ್ ರಾವತ್ ಅವರು ಬಿಡುಗಡೆ ಮಾಡಿದರು. ಬಿಜೆಪಿಯನ್ನು ಅಧಿಕಾರದಿಂದ ಇಳಿಸಲು ಉತ್ತರಾಖಂಡದ ಜನರು ನಿರ್ಧರಿಸಿದ್ದಾರೆ ಎಂದು ರಾವತ್ ಹೇಳಿದರು.

ಕಾಂಗ್ರೆಸ್‌ನ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಉತ್ತರಾಖಂಡದ ಜನರು ಬದಲಾವಣೆಯನ್ನು ಕೇಳುತ್ತಿದ್ದಾರೆ. ನಮಗೆ ಬದಲಾವಣೆ ಬೇಕಿರುವುದು ಅಧಿಕಾರಕ್ಕಾಗಿ ಮಾತ್ರವಲ್ಲ. ಅಭಿವೃದ್ಧಿಗಾಗಿ ಹೋರಾಡಲು ಪ್ರಜಾಪ್ರಭುತ್ವವನ್ನು ಉಳಿಸಬೇಕಿದೆ. ಮೂರು ಬಾರಿ ಮುಖ್ಯಮಂತ್ರಿಗಳನ್ನು ಬದಲಿಸುವ ಮೂಲಕ ಕೇಂದ್ರ ಸರ್ಕಾರ ಡಬಲ್ ಎಂಜಿನ್ ಸರ್ಕಾರದ ವೈಫಲ್ಯವನ್ನು ಒಪ್ಪಿಕೊಂಡಿದೆ’ ಎಂದು ಹೇಳಿದ್ದಾರೆ.

ಐವರ ಹೆಸರು ಪ್ರಕಟಿಸಿದ ಎಎಪಿ

ಚಂಡೀಗಡ: ಪಂಜಾಬಿನ ವಿಧಾನಸಭಾ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷವು (ಎಎಪಿ) ಮತ್ತೆ ತನ್ನ ಐವರು ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದಾಗಿ ಸೋಮವಾರ ಘೋಷಿಸಿದೆ. ಪಕ್ಷದ ಏಳನೇ ಅಭ್ಯರ್ಥಿಗಳ ಪಟ್ಟಿಯ ಪ್ರಕಾರ, ಮಜಿತಾ ವಿಧಾನಸಭಾ ಕ್ಷೇತ್ರದಿಂದ ಲಲ್ಲಿ ಮಜಿಟಿಯಾ ಅವರಿಗೆ ಟಿಕೆಟ್ ನೀಡಲಾಗಿದೆ. ಇದರಿಂದ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಎಎಪಿಯಿಂದ ಒಟ್ಟು 101 ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದಂತಾಗಿದೆ. ಪಂಜಾಬ್‌ನಲ್ಲಿ ಒಟ್ಟು 117 ವಿಧಾನಸಭಾ ಕ್ಷೇತ್ರಗಳಿವೆ.

ಇಡಬ್ಲ್ಯುಎಸ್ ಮೀಸಲು ತುರ್ತು ವಿಚಾರಣೆಗೆ ಮನವಿ

ನವದೆಹಲಿ (ಪಿಟಿಐ): ನೀಟ್–ಪಿಜಿ ಪ್ರವೇಶದಲ್ಲಿ ಇಡಬ್ಲ್ಯುಎಸ್ ವರ್ಗದ ಮೀಸಲು ಕೋಟಾಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ತುರ್ತಾಗಿ ತೆಗೆದುಕೊಳ್ಳಬೇಕು ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎ.ಎಸ್.ಬೋಪಣ್ಣ ಅವರಿದ್ದ ಪೀಠಕ್ಕೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಸೋಮವಾರ ಈ ಮನವಿ ಮಾಡಿದರು.

‘ಒಂದು ವೇಳೆ ಮಂಗಳವಾರ ಈ ಪ್ರಕರಣವನ್ನು ವಿಚಾರಣೆಗೆ ಪರಿಗಣಿಸಲು ಆಗದಿದ್ದರೆ, ಬುಧವಾರವಾದರೂ ಪರಿಗಣಿಸಬೇಕು’ ಎಂದು ಮೆಹ್ತಾ ಮನವಿ ಮಾಡಿದರು. ಅರ್ಜಿದಾರರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಅರವಿಂದ್ ದಾತಾರ್, ಮಂಗಳವಾರ ಅಥವಾ ಬುಧವಾರ ವಿಚಾರಣೆ ನಡೆಸಲು ತಮ್ಮ ತಕರಾರು ಇಲ್ಲ ಎಂದು ತಿಳಿಸಿದರು.

ಪ್ರಸ್ತುತ, ಸುಪ್ರೀಂ ಕೋರ್ಟ್ ಈ ಪ್ರಕರಣದ ವಿಚಾರಣೆಯನ್ನು ಗುರುವಾರಕ್ಕೆ (ಜ. 6) ನಿಗದಿಪಡಿಸಿದೆ.

ಕೌನ್ಸಿಲಿಂಗ್ ವಿಳಂಬ ವಿರೋಧಿಸಿ ದೇಶದಾದ್ಯಂತ ವೈದ್ಯರು ಪ್ರತಿಭಟನೆ ನಡೆಸುತ್ತಿದ್ದಾರೆ.

ಮಾರ್ಗಸೂಚಿ ಉಲ್ಲಂಘಿಸಿ ಧರಣಿ ತೆಲಂಗಾಣ ಬಿಜೆಪಿ ಅಧ್ಯಕ್ಷ ಬಂಧನ

ಹೈದರಾಬಾದ್ (ಪಿಟಿಐ): ಶಿಕ್ಷಕರು ಸೇರಿದಂತೆ ಸರ್ಕಾರಿ ನೌಕರರನ್ನು ಬೆಂಬಲಿಸಿ ಪ್ರತಿಭಟನೆ ನಡೆಸಲು ಮುಂದಾಗಿದ್ದ ಸಂಸದ, ತೆಲಂಗಾಣ ಬಿಜೆಪಿ ಘಟಕದ ಅಧ್ಯಕ್ಷ ಬಂಡಿ ಸಂಜಯ್ ಕುಮಾರ್ ಅವರನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಬಂಧಿತ ಸಂಸದರನ್ನು ಕೋರ್ಟ್‌ಗೆ ಹಾಜರುಪಡಿಸಿದ್ದು, ಕೋರ್ಟ್ 14 ದಿನದವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು. ಕೋವಿಡ್ ಮಾರ್ಗಸೂಚಿಗಳ ಉಲ್ಲಂಘನೆ, ಸರ್ಕಾರಿ ನೌಕರರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು ಸೇರಿ ವಿವಿಧ ಆರೋಪದಡಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಿಜೆಪಿ ಇದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಉದ್ಯೋಗ ಹಂಚಿಕೆಯಲ್ಲಿ ವಲಯವಾರು ವ್ಯವಸ್ಥೆ ಜಾರಿಗೊಳಿಸುವ ಸರ್ಕಾರದ ಆದೇಶವನ್ನು ವಿರೋಧಿಸಿ, ಕರೀಂನಗರದಲ್ಲಿನ ತಮ್ಮ ಕಚೇರಿಯ ಬಳಿ ಪ್ರತಿಭಟನೆಗೆ ಸಂಸದರು ಮುಂದಾಗಿದ್ದರು. ಸರ್ಕಾರದ ಈ ಆದೇಶದಿಂದ ಶಿಕ್ಷಕರು ಸೇರಿದಂತೆ ಸರ್ಕಾರಿ ನೌಕರರಿಗೆ ವರ್ಗಾವಣೆಯ ವೇಳೆ ಸಾಕಷ್ಟು ಸಮಸ್ಯೆಯಾಗಲಿದೆ. ಇದನ್ನು ಕೈಬಿಡಬೇಕು ಎಂದು ಅವರು ಒತ್ತಾಯಿಸಿದ್ದರು.

ಭಾನುವಾರ ರಾತ್ರಿ ಪೊಲೀಸರು ಬಲವಂತದಿಂದ, ಕಚೇರಿಯ ಬಾಗಿಲು ತೆರೆಸಿ ಒಳನುಗಿದ್ದರು. ಸ್ಥಳದಲ್ಲಿದ್ದ ಬಿಜೆಪಿ ಕಾರ್ಯಕರ್ತರು ತೀವ್ರವಾಗಿ ವಿರೋಧಿಸಿದ್ದರಿಂದ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿತ್ತು.

ಪ್ರಜಾಪ್ರಭುತ್ವದ ಕೊಲೆ –ನಡ್ಡಾ ವಾಗ್ದಾಳಿ

ನವದೆಹಲಿ: ‘ತೆಲಂಗಾಣ ಬಿಜೆಪಿ ಘಟಕದ ಅಧ್ಯಕ್ಷರನ್ನು ಬಂಧಿಸಿರುವ ತೆಲಂಗಾಣ ಸರ್ಕಾರದ ಕ್ರಮವು ಅಸಾಂವಿಧಾನಿಕ, ಅಮಾನವೀಯ ಮತ್ತು ಪ್ರಜಾಪ್ರಭುತ್ವದ ಕೊಲೆ’ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಟೀಕಿಸಿದ್ದಾರೆ.

ತೆಲಂಗಾಣದಲ್ಲಿ ಈಚೆಗೆ ನಡೆದಿದ್ದ ಉಪ ಚುನಾವಣೆಯಲ್ಲಿ ಬಿಜೆಪಿ ಜಯಗಳಿಸಿದೆ. ಇದರಿಂದ ರಾಜ್ಯದ ಮುಖ್ಯಮಂತ್ರಿ ಭ್ರಮನಿರಸನಗೊಂಡಿದ್ದಾರೆ. ಬಿಜೆಪಿ ಜನಪ್ರಿಯತೆ ಸಹಿಸಲಾಗದೇ ಕ್ರಮಕ್ಕೆ ಸೂಚಿಸಿದ್ದಾರೆ ಎಂದು ಆರೋಪಿಸಿದ್ದಾರೆ.

‘ಬಿಜೆಪಿಯ ಶಾಂತಿಯುತ ಪ್ರತಿಭಟನೆ ರಾಜ್ಯ ಸರ್ಕಾರವನ್ನು ಕಂಗೆಡಿಸುತ್ತಿದೆ. ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರ ಮೇಲೆ ನಡೆದಿರುವ ಈ ದೌರ್ಜನ್ಯವನ್ನು ಬಿಜೆಪಿ ಕಟುವಾಗಿ ಖಂಡಿಸಲಿದೆ‘ ಎಂದಿದ್ದಾರೆ. ಪ್ರತಿಭಟನಾನಿರತ ಬಂಡಿ ಸಂಜಯಕುಮಾರ್ ಮತ್ತು ಕಾರ್ಯಕರ್ತರ ಜೊತೆ ತೆಲಂಗಾಣ ಸರ್ಕಾರ ಅನುಚಿತವಾಗಿ ನಡೆದುಕೊಂಡಿದೆ ಎಂದು ನಡ್ಡಾ ದೂರಿದ್ದಾರೆ.

ದ್ವೇಷ ಭಾಷಣ: ಎರಡನೇ ಎಫ್‌ಐಆರ್ ದಾಖಲು

ಡೆಹ್ರಾಡೂನ್: ಹರಿದ್ವಾರದಲ್ಲಿ ನಡೆದ ಧರ್ಮ ಸಂಸತ್ ಕಾರ್ಯಕ್ರಮದಲ್ಲಿ ಮುಸ್ಲಿಮರ ವಿರುದ್ಧ ದ್ವೇಷ ಭಾಷಣ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡನೇ ಎಫ್‌ಐಆರ್ ದಾಖಲಾಗಿದೆ.

ನದೀಮ್ ಅಲಿ ಎಂಬುವವರು ನೀಡಿರುವ ದೂರಿನ ಮೇರೆಗೆ ಧರ್ಮ ಸಂಸತ್ ಕಾರ್ಯಕ್ರಮ ಆಯೋಜಕರಾದ ಯತಿ ನರಸಿಂಹಾನಂದ ಗಿರಿ, ವಾಸಿಂ ರಿಜ್ವಿ (ಜಿತೇಂದ್ರ ನಾರಾಯಣ ತ್ಯಾಗಿ), ಸಿಂಧು ಸಾಗರ್, ಧರ್ಮದಾಸ್, ಪರಮಾನಂದ, ಸಾಧ್ವಿ ಅನ್ನಪೂರ್ಣ, ಆನಂದ ಸ್ವರೂಪ, ಅಶ್ವಿನಿ ಉಪಾಧ್ಯಾಯ, ಸುರೇಶ್ ಚೌಹಾಣ್ ಮತ್ತು ಪ್ರಬೋಧಾನಂದ ಗಿರಿ ವಿರುದ್ಧ ಹರಿದ್ವಾರದ ಜ್ವಾಲಾಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಒಬಿಸಿ ಮೀಸಲು: ಜ.17ರಂದು ವಿಚಾರಣೆ

ನವದೆಹಲಿ(ಪಿಟಿಐ): ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮೀಸಲಿಟ್ಟಿದ್ದ ಸ್ಥಾನಗಳನ್ನು ಸಾಮಾನ್ಯ ವರ್ಗಕ್ಕೆ ಬದಲಾಯಿಸುವಂತೆ ನೀಡಿದ್ದ ಆದೇಶವನ್ನು ಪುನರ್ ಪರಿಶೀಲನೆ ಮಾಡುವಂತೆ ಕೋರಿ ಕೇಂದ್ರ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಇದೇ 17ರಂದು ಸುಪ್ರೀಂ ಕೋರ್ಟ್ ನಡೆಸಲಿದೆ. ಮಹಾರಾಷ್ಟ್ರ, ಮಧ್ಯಪ್ರದೇಶದ ನಿಗದಿಪಡಿಸಿದ್ದ ಒಬಿಸಿ ಮೀಸಲು ಸ್ಥಾನಗಳನ್ನು ಬದಲಾಯಿಸುವಂತೆ ಕೋರ್ಟ್ ಈ ಹಿಂದೆ ಆದೇಶಿಸಿತ್ತು

ಐಎಸ್‌ಎಲ್: ಜಯದ ವಿಶ್ವಾಸದಲ್ಲಿ ಬಿಎಫ್‌ಸಿ

ಬ್ಯಾಂಬೊಲಿಮ್ (ಪಿಟಿಐ): ಕಳೆದ ಪಂದ್ಯದಲ್ಲಿ ಸಾಧಿಸಿದ ಗೆಲುವಿನಿಂದ ಹೊಸ ಹುರುಪು ಪಡೆದಿರುವ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಮಂಗಳವಾರ ಎಸ್‌ಸಿ ಈಸ್ಟ್ ಬೆಂಗಾಲ್ ಸವಾಲು ಎದುರಿಸಲಿದೆ.

ಸತತ ಏಳು ಪಂದ್ಯಗಳಲ್ಲಿ ಗೆಲುವು ಕಾಣದಿದ್ದ ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು, ಡಿಸೆಂಬರ್ 30ರಂದು ನಡೆದ ಹಣಾಹಣಿಯಲ್ಲಿ 4–2ರಿಂದ ಚೆನ್ನೈಯಿನ್ ಎಫ್‌ಸಿಗೆ ಸೋಲುಣಿಸಿತ್ತು.

ಎಂಟು ಪಂದ್ಯಗಳನ್ನು ಆಡಿರುವ ಬೆಂಗಾಲ್ ತಂಡವು ಟೂರ್ನಿಯಲ್ಲಿ ಇದುವರೆಗೆ ಒಂದೂ ಗೆಲುವು ಸಾಧಿಸದ ಏಕೈಕ ತಂಡವಾಗಿದೆ. ಈ ಪಂದ್ಯದಲ್ಲಿ ಚೆಟ್ರಿ ಪಡೆಗೆ ಆಘಾತ ನೀಡುವ ಛಲದಲ್ಲಿದೆ.

ಒಡಿಶಾಗೆ ಜಯ

ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ಬಲಿಷ್ಠ ಮುಂಬೈ ತಂಡವನ್ನು ಒಡಿಶಾ ಎಫ್‌ಸಿ 4–2ರಲ್ಲಿ ಮಣಿಸಿತು. ಅರಿದಾಯ್ ಸ್ವಾರೆಜ್ ನಾಲ್ಕನೇ ನಿಮಿಷದಲ್ಲಿ ಮೊದಲ ಗೋಲು ಗಳಿಸಿದರೆ ಜೆರಿ ಮಾವಿಂಗ್‌ತಾಂಗ (70, 77ನೇ ನಿ) ಎರಡು ಗೋಲುಗಳೊಂದಿಗೆ ಮಿಂಚಿದರು. ಜೊನಾಥಾಸ್ (89ನೇ ನಿ) ಮುನ್ನಡೆ ಹೆಚ್ಚಿಸಿದರು. ಮುಂಬೈಗಾಗಿ ಜೊಹೊ (11ನೇ ನಿ) ಮತ್ತು ಆಂಗುಲೊ (38ನೇ ನಿ) ಗೋಲು ಗಳಿಸಿದರು.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮೂಡುಬಿದಿರೆ: ಅಥ್ಲೆಟಿಕ್ಸ್ ರೋಮಾಂಚನ

ಪದಕ ವಿಜೇತರ ಗೌರವಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳ ರಂಗು

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ: ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಯುವ ಕ್ರೀಡಾಪಟುಗಳ ಸಂಚಲನಕ್ಕೆ ಆಳ್ವಾಸ್ ಶಿಕ್ಷಣ ಸಂಸ್ಥೆ ಆವರಣದಲ್ಲಿ ಅಂಗಣ ಸಜ್ಜಾಗಿದೆ. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಮಂಗಳೂರು ವಿಶ್ವವಿದ್ಯಾಲಯ ಮತ್ತು ಭಾರತೀಯ ವಿಶ್ವವಿದ್ಯಾಲಯಗಳ ಸಂಘದ ಸಹಯೋಗದಲ್ಲಿ ಅಖಿಲ ಭಾರತ ಅಂತರ ವಿವಿ ಅಥ್ಲೆಟಿಕ್ಸ್ ಮಂಗಳವಾರ ಸ್ವರಾಜ್ಯ ಮೈದಾನದಲ್ಲಿ ನಡೆಯಲಿದೆ.

‘ದೇಶದ 400ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳ 3,500ಕ್ಕೂ ಹೆಚ್ಚು ಕ್ರೀಡಾಪಟುಗಳು, 1 ಸಾವಿರಕ್ಕೂ ಹೆಚ್ಚು ಕ್ರೀಡಾಧಿಕಾರಿಗಳು ಈ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ. ಪದಕ ವಿಜೇತರನ್ನು ಪ್ರತಿದಿನ ಸಂಜೆ 7 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಗೌರವಿಸಲಾಗುವುದು’ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ತಿಳಿಸಿದರು.

ಕ್ರೀಡಾಕೂಟಕ್ಕೆ ಸೋಮವಾರ ಅಭ್ಯಾಸ ನಡೆಸಿದ ಕ್ರೀಡಾಪಟುಗಳು

ಮಂಗಳವಾರ ಸಂಜೆ 5:30ಕ್ಕೆ ರಾಜ್ಯ ಕ್ರೀಡಾ ಸಚಿವ ನಾರಾಯಣಗೌಡ ಕ್ರೀಡಾಕೂಟ ಉದ್ಘಾಟಿಸುವರು. ಇದಕ್ಕೂ ಮೊದಲು ಕ್ರೀಡಾಪಟುಗಳಿಂದ ಪಥಸಂಚಲನ, ಕಲಾ ತಂಡಗಳಿಂದ ಸಾಂಸ್ಕೃತಿಕ ಮೆರವಣಿಗೆ ನಡೆಯಲಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಸಚಿವ ಸುನಿಲ್ ಕುಮಾರ್, ಶಾಸಕ ಕೆ.ಉಮಾನಾಥ ಕೋಟ್ಯಾನ್, ಮಾಜಿ ಸಚಿವ ಅಭಯಚಂದ್ರ ಜೈನ್, ಭಾರತೀಯ ವಿಶ್ವವಿದ್ಯಾಲಯಗಳ ಒಕ್ಕೂಟದ ಜಂಟಿ ಕಾರ್ಯದರ್ಶಿ ಬಲ್ಜೀತ್ ಸಿಂಗ್ ಸೇಖನ್, ಮಂಗಳೂರು ವಿವಿ ಉಪಕುಲಪತಿ ಡಾ.ಸುಬ್ರಹ್ಮಣ್ಯ ಯಡಪಡಿತ್ತಾಯ ಭಾಗವಹಿಸುವರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ಸತತ 5 ಬಾರಿ ಅಖಿಲ ಭಾರತ ಅಂತರ ವಿ.ವಿ. ಅಥ್ಲೆಟಿಕ್ಸ್ ಆಯೋಜಿಸುತ್ತಿದ್ದು 3 ಬಾರಿ ಚಾಂಪಿಯನ್ ಆಗಿದೆ. ಪದಕ ವಿಜೇತರಿಗೆ ಆಳ್ವಾಸ್‌ನಿಂದ ಕ್ರಮವಾಗಿ ₹25, ₹15 ಮತ್ತು ₹10 ಸಾವಿರ ನಗದು ಬಹುಮಾನ ನೀಡಲಾಗುವುದು. ಕೂಟ ದಾಖಲೆ ನಿರ್ಮಿಸಿದವರಿಗೆ ₹25 ಸಾವಿರ, ಸಮಗ್ರ ಪ್ರಶಸ್ತಿ ಪಡೆದ ತಂಡಕ್ಕೆ ₹50 ಸಾವಿರ, ರನ್ನರ್ ಅಪ್ ತಂಡಕ್ಕೆ ₹30 ಸಾವಿರ ಮತ್ತು ತೃತೀಯ ಸ್ಥಾನ ಪಡೆದ ತಂಡಕ್ಕೆ ₹20 ಸಾವಿರ ನಗದು ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದು ಮೋಹನ ಆಳ್ವ ತಿಳಿಸಿದರು.

‘ಡೆಕಾಥ್ಲಾನ್’ ಮಳಿಗೆಗೆ ಚಾಲನೆ

ಬೆಂಗಳೂರು: ಕ್ರೀಡಾ ಪರಿಕರಗಳ ಮಾರಾಟ ಸಂಸ್ಥೆ ‘ಡೆಕಾಥ್ಲಾನ್‘ನ ಎರಡನೇ ಮಳಿಗೆಗೆ ಶನಿವಾರ ಚಾಲನೆ ನೀಡಲಾಯಿತು.

ಬನ್ನೇರುಘಟ್ಟ ಮುಖ್ಯ ರಸ್ತೆಯಲ್ಲಿ 10 ವರ್ಷಗಳ ಹಿಂದೆ ಸ್ಥಾಪಿಸಲಾದ ಮಳಿಗೆಯ ಎದುರಿಗೆ ಹೊಸ ಮಳಿಗೆಯನ್ನು 5000 ಚದರ ಅಡಿ ಜಾಗದಲ್ಲಿ ನಿರ್ಮಿಸಲಾಗಿದೆ. 50 ಕ್ರೀಡೆಗಳ ಸುಮಾರು 5000 ಕ್ಕೂ ಹೆಚ್ಚು ಉಪಕರಣಗಳು ಇಲ್ಲಿ ಲಭ್ಯ ಇರಲಿವೆ.

ಫುಟ್‌ಬಾಲ್, ಸ್ಕೇಟಿಂಗ್, ಕ್ರಿಕೆಟ್, ಟೇಬಲ್ ಟೆನಿಸ್ ಮತ್ತಿತರ ಕ್ರೀಡೆಗಳಿಗಾಗಿ ಒಳಾಂಗಣ ಕ್ರೀಡಾಂಗಣದ ಸೌಲಭ್ಯವು ಇಲ್ಲಿದೆ.

ಪಾಕಿಸ್ತಾನ ಕ್ರಿಕೆಟಿಗ ಮೊಹಮ್ಮದ್ ಹಫೀಜ್ ನಿವೃತ್ತಿ

ಲಾಹೋರ್ (ಎಎಫ್‌ಪಿ): ಪಾಕಿಸ್ತಾನ ಕ್ರಿಕೆಟ್ ತಂಡದ ಮಾಜಿ ನಾಯಕ ಮೊಹಮ್ಮದ್ ಹಫೀಜ್ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ಸೋಮವಾರ ನಿವೃತ್ತಿಯಾಗಿದ್ದಾರೆ. ಈ ಮೂಲಕ 18 ವರ್ಷಗಳ ಕ್ರಿಕೆಟ್ ಜೀವನಕ್ಕೆ ವಿದಾಯ ಹೇಳಿದ್ದಾರೆ. 41 ವರ್ಷದ ಹಫೀಜ್, ಬೌಲಿಂಗ್ ಶೈಲಿಗೆ ಸಂಬಂಧಿಸಿದ ವಿವಾದದಿಂದ ಅವರ ಮೇಲೆ ಒಂದು ವರ್ಷ ನಿಷೇಧ ಹೇರಲಾಗಿತ್ತು.

ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಕಳೆದ ವರ್ಷದ ಅಕ್ಟೋಬರ್–ನವೆಂಬರ್‌ನಲ್ಲಿ ನಡೆದ ಟ್ವೆಂಟಿ20 ವಿಶ್ವಕಪ್ ಟೂರ್ನಿಯಲ್ಲಿ ಕೊನೆಯದಾಗಿ ಹಫೀಜ್ ಆಡಿದ್ದರು. ಟೂರ್ನಿಯ ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ತಂಡ ಆಸ್ಟ್ರೇಲಿಯಾಗೆ ಮಣಿದಿತ್ತು. ಟೆಸ್ಟ್ ಕ್ರಿಕೆಟ್‌ಗೆ ಹಫೀಜ್ 2018 ರಲ್ಲಿ ವಿದಾಯ ಹೇಳಿದ್ದರು. 2019ರ ವಿಶ್ವಕಪ್ ಟೂರ್ನಿಯ ನಂತರ ಏಕದಿನ ತಂಡದಲ್ಲಿ ಅವರಿಗೆ ಅವಕಾಶ ನೀಡಿರಲಿಲ್ಲ. 55 ಟೆಸ್ಟ್, 218 ಏಕದಿನ ಮತ್ತು 119 ಟ್ವೆಂಟಿ20 ಪಂದ್ಯ ಆಡಿ ದ್ದಾರೆ.

ಹಫೀಜ್

ಟೆಸ್ಟ್ ಕ್ರಿಕೆಟ್‌ನಲ್ಲಿ 3,652 ರನ್ ಗಳಿಸಿರುವ ಅವರು 53 ವಿಕೆಟ್ ಉರುಳಿಸಿದ್ದಾರೆ. ಏಕದಿನ ಮಾದರಿಯಲ್ಲಿ 6,614 ರನ್, 139 ವಿಕೆಟ್ ಉರುಳಿಸಿದ್ದಾರೆ. ಟ್ವೆಂಟಿ20 ಕ್ರಿಕೆಟ್‌ನಲ್ಲಿ 2514 ರನ್‌ಗಳೊಂದಿಗೆ ಪಾಕಿಸ್ತಾನ ಪರ ಗರಿಷ್ಠ ರನ್ ಗಳಿಸಿದ ಆಟಗಾರ ಎನಿಸಿಕೊಂಡಿದ್ದಾರೆ.

ಸಂಕ್ಷಿಪ್ತ ಸುದ್ದಿಗಳು

ರಾಷ್ಟ್ರೀಯ ಚೆಸ್ ಟೂರ್ನಿಗಳು ಮುಂದಕ್ಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಹೆಚ್ಚುತ್ತಿರುವ ಕೋವಿಡ್-19 ಪ್ರಕರಣಗಳು ಮತ್ತು ವಿವಿಧ ರಾಜ್ಯಗಳು ವಿಧಿಸಿರುವ ನಿರ್ಬಂಧಗಳನ್ನು ಗಮನದಲ್ಲಿಟ್ಟುಕೊಂಡು ಈ ತಿಂಗಳಿನಲ್ಲಿ ನಿಗದಿಯಾಗಿದ್ದ ಹಲವು ರಾಷ್ಟ್ರೀಯ ಮಟ್ಟದ ಚಾಂಪಿಯನ್‌ಷಿಪ್‌ಗಳನ್ನು ಮುಂದೂಡುವುದಾಗಿ ಅಖಿಲ ಭಾರತ ಚೆಸ್ ಫೆಡರೇಶನ್ (ಎಐಸಿಎಫ್) ಸೋಮವಾರ ತಿಳಿಸಿದೆ.

‘ರಾಷ್ಟ್ರೀಯ ಜೂನಿಯರ್, ಸಬ್ ಜೂನಿಯರ್ ಮತ್ತು ರಾಷ್ಟ್ರೀಯ ಶಾಲಾ ಚಾಂಪಿಯನ್‌ಷಿಪ್‌ಗಳು ಮುಂದೂಡಿಕೆಯಾದ ಟೂರ್ನಿಗಳಲ್ಲಿ ಸೇರಿವೆ. ಪರಿಷ್ಕೃತ ದಿನಾಂಕಗಳನ್ನು ನಂತರ ಪ್ರಕಟಿಸಲಾಗುವುದು‘ ಎಂದು ಎಐಸಿಎಫ್ ಕಾರ್ಯದರ್ಶಿ ಭರತ್ ಸಿಂಗ್ ಚೌಹಾನ್ ತಿಳಿಸಿದ್ದಾರೆ. ಆಟಗಾರರು ತಾವು ಪಾವತಿಸಿದ ಪ್ರವೇಶ ಶುಲ್ಕ ಮರುಪಾವತಿ ಆಯ್ಕೆ ಹೊಂದಿರುತ್ತಾರೆ

ಕರ್ನಾಟಕ ಫುಟ್‌ಬಾಲ್‌ನ ‘ನೂರ್’ ಇನ್ನಿಲ್ಲ

ಬೆಂಗಳೂರು: ಸಂತೋಷ್ ಟ್ರೋಫಿ ಸೇರಿದಂತೆ ಪ್ರಮುಖ ಟೂರ್ನಿಗಳಲ್ಲಿ ರಾಜ್ಯ ಫುಟ್‌ಬಾಲ್ ತಂಡವನ್ನು ಪ್ರತಿನಿಧಿಸಿದ್ದ ಮೊಹಮ್ಮದ್ ಗೌಸ್ (88) ಅವರು ಹೃದಯಾಘಾತದಿಂದ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ.

ಮೊಹಮ್ಮದ್ ಗೌಸ್

ಮುನಿರೆಡ್ಡಿಪಾಳ್ಯದ ಜೆ.ಸಿ.ನಗರ ನಿವಾಸಿಯಾಗಿದ್ದ ಅವರು ತಂಡದಲ್ಲಿ ರಕ್ಷಣಾ ವಿಭಾಗದ ಆಟಗಾರರಾಗಿದ್ದರು. ಸಿಐಎಲ್ ಪರ ಆಡಿದ್ದರು. ಆತ್ಮೀಯ ವಲಯದವರು ಅವರನ್ನು ನೂರ್ ಎಂದೇ ಕರೆಯುತ್ತಿದ್ದರು. 1965ರಲ್ಲಿ ಕೇರಳದ ಕೊಲ್ಲಂನಲ್ಲಿ ಮತ್ತು 1966ರಲ್ಲಿ ಹೈದರಾಬಾದ್‌ನಲ್ಲಿ ನಡೆದಿದ್ದ ಸಂತೋಷ್ ಟ್ರೋಫಿ ಟೂರ್ನಿಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದರು.

1965ರಿಂದ 1980ರ ವರೆಗೆ ಸಿಐಎಲ್ ತಂಡದಲ್ಲಿದ್ದ ಗೌಸ್ ಅವರು ಕೃಷ್ಣಾಜಿ ರಾವ್ ಆ್ಯಂಡ್ ಅಮ್ಜದ್ ಖಾನ್–ವಿಠ್ಠರ ರಾವ್ ಟೂರ್ನಿ, ಡಿಸಿಎಂ, ಡುರಾಂಡ್ ಕಪ್‌ಮುಂತಾದ ಟೂರ್ನಿಗಳಲ್ಲಿ ಕಣಕ್ಕೆ ಇಳಿದಿದ್ದರು.

ಅವರಿದ್ದ ಸಿಐಎಲ್ ತಂಡ 1973ರಲ್ಲಿ ಸ್ಟಾಫರ್ಡ್ ಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗಳಿಸಿತ್ತು. ಬಿಡಿಎಫ್‌ಎ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ 4 ಬಾರಿ ಚಾಂಪಿಯನ್ ಆಗಿತ್ತು.

ಮೊಹಮ್ಮದ್ ಗೌಸ್ ಅವರ ಪಾರ್ಥಿವ ಶರೀರವನ್ನು ಮುನಿರೆಡ್ಡಿಪಾಳ್ಯದಲ್ಲಿರುವ ನಿವಾಸದಲ್ಲಿ (ನಂ–29, ಎರಡನೇ ಕ್ರಾಸ್, ಎಂ.ವಿ. ಬ್ಲಾಕ್ ಚರ್ಚ್ ರೋಡ್ ಜೆ.ಸಿ ನಗರ) ಇರಿಸಲಾಗಿದ್ದು ಕುದ್ದೋಸಾ ಖಬರಸ್ತಾನದಲ್ಲಿ ಮಂಗಳವಾರ ಅಂತ್ಯಸಂಸ್ಕಾರ ನಡೆಯಲಿದೆ ಎಂದು ರಾಜ್ಯ ಫುಟ್‌ಬಾಲ್ ಸಂಸ್ಥೆ ತಿಳಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಪರಸ್ಪರ ಅಂತರ ಕಾಯ್ದುಕೊಳ್ಳಿ

ದಕ್ಷಿಣ ಆಫ್ರಿಕಾ ಎದುರಿನ ಎರಡನೇ ಟೆಸ್ಟ್: ನಾಯಕ ರಾಹುಲ್ ಅರ್ಧಶತಕ; ಅಶ್ವಿನ್ ಸ್ಫೋಟಕ ಬ್ಯಾಟಿಂಗ್

ಭಾರತ ಬ್ಯಾಟಿಂಗ್ ಬಲಕ್ಕೆ ಜ್ಯಾನ್ಸನ್ ಪೆಟ್ಟು

ಜೊಹಾನ್ಸ್‌ಬರ್ಗ್ (ಪಿಟಿಐ): ಯುವ ಬೌಲರ್ ಮಾರ್ಕೊ ಜ್ಯಾನ್ಸನ್ ಮತ್ತು 10ನೇ ಪಂದ್ಯ ಆಡುತ್ತಿರುವ ಡುಯೇನ್ ಒಲಿವಿಯರ್ ಅವರ ಪರಿಣಾಮಕಾರಿ ದಾಳಿಗೆ ಭಾರತದ ಬ್ಯಾಟರ್‌ಗಳು ತಬ್ಬಿಬ್ಬಾದರು.

ದಕ್ಷಿಣ ಆಫ್ರಿಕಾ ವಿರುದ್ಧ ಸೋಮವಾರ ಆರಂಭಗೊಂಡ ಎರಡನೇ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಭಾರತ 202 ರನ್‌ಗಳಿಗೆ ಪತನ ಕಂಡಿತು. ದಿನದಾಟದ ಮುಕ್ತಾಯಕ್ಕೆ ಆತಿಥೇಯರು 1 ವಿಕೆಟ್‌ಗೆ 35 ರನ್ ಗಳಿಸಿದ್ದಾರೆ.

ವಾಂಡರರ್ಸ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಭಾರತ ಬ್ಯಾಟಿಂಗ್ ಆರಿಸಿಕೊಂಡಿತು. ವಿರಾಟ್ ಕೊಹ್ಲಿ ಅನುಪಸ್ಥಿತಿಯಲ್ಲಿ ತಂಡವನ್ನು ಮುನ್ನಡೆಸಿದ ಕೆ.ಎಲ್.ರಾಹುಲ್ ಕುಸಿಯುತ್ತಿದ್ದ ಇನಿಂಗ್ಸ್‌ಗೆ ಅರ್ಧಶತಕದ ಮೂಲಕ ಬಲ ತುಂಬಿದರು.

ಅನುಭವಿಗಳಾದ ಚೇತೇಶ್ವರ್ ಪೂಜಾರ ಮತ್ತು ಅಜಿಂಕ್ಯ ರಹಾನೆ ವೈಫಲ್ಯ ಕಂಡರು. ರವಿಚಂದ್ರನ್ ಅಶ್ವಿನ್ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ಇನಿಂಗ್ಸ್‌ನ ಏಕೈಕ ಸಿಕ್ಸರ್ ಸಿಡಿಸಿದ ಜಸ್‌ಪ್ರೀತ್ ಬೂಮ್ರಾ ಅವರ ದಿಟ್ಟ ಆಟದಿಂದಾಗಿ ತಂಡದ ಮೊತ್ತ 200 ರನ್ ದಾಟಿತು.

ಕನ್ನಡಿಗ ಜೋಡಿ ಕೆ.ಎಲ್. ರಾಹುಲ್ ಮತ್ತು ಮಯಂಕ್ ಅಗರವಾಲ್ ಮೊದಲ ವಿಕೆಟ್‌ಗೆ 36 ರನ್ ಸೇರಿಸಿ ಭರವಸೆ ಮೂಡಿಸಿದರು. ಆದರೆ ಮಯಂಕ್ ಔಟಾದ ನಂತರ ತಂಡ ಪತನದತ್ತ ಸಾಗಿತು. ಚೇತೇಶ್ವರ ಪೂಜಾರ 33 ಎಸೆತಗಳಲ್ಲಿ ಮೂರು ರನ್ ಗಳಿಸಿ ಔಟಾದರೆ ಅಜಿಂಕ್ಯ ರಹಾನೆ ಖಾತೆ ತೆರೆಯದೆ ವಾಪಸಾದರು.

ಹನುಮ ವಿಹಾರಿ ಮತ್ತು ರಿಷಭ್ ಪಂತ್ ಅವರಿಗೂ ಮಿಂಚಲು ಆಗಲಿಲ್ಲ. ರಾಹುಲ್ ತಾಳ್ಮೆಯಿಂದ ರನ್ ಕಲೆ ಹಾಕುತ್ತ ಅರ್ಧಶತಕ ಪೂರೈಸಿದರು. ಜಾನ್ಸೆನ್ ಎಸೆತದಲ್ಲಿ ಭರ್ಜರಿ ಹೊಡೆತಕ್ಕೆ ಕೈಹಾಕಿದ ಅವರು ಬೌಂಡರಿ ಗೆರೆ ಬಳಿ ರಬಾಡ ಪಡೆದು ಸೊಗಸಾದ ಕ್ಯಾಚ್‌ಗೆ ಬಲಿಯಾದರು.

ಕುಸಿತದ ಹಾದಿಯಲ್ಲಿ ಸಾಗಿದ್ದ ಇನಿಂಗ್ಸ್‌ಗೆ ರವಿಚಂದ್ರನ್ ಅಶ್ವಿನ್ ಚೇತರಿಕೆ ತುಂಬಿದರು. ಆದರೆ ಬಾಲಂಗೋಚಿಗಳಿಗೆ ಕಗಿಸೊ ರಬಾಡ ಮಾರಕವಾದರು. ಬೌಂಡರಿಗಳೊಂದಿಗೆ ಮಿಂಚಿದ ಅವರು ವೇಗವಾಗಿ ರನ್ ಗಳಿಸಿ ತಂಡವನ್ನು 200 ರನ್‌ಗಳ ಸನಿಹ ತಲುಪಿಸಿದರು. ಕೊನೆಯಲ್ಲಿ ಜಸ್‌ಪ್ರೀತ್ ಬೂಮ್ರಾ ಅವರು ಕೂಡ ರಂಜಿಸಿದರು.

ಮಾರ್ಕೊ ಜ್ಯಾನ್ಸನ್ (ಎಡ) ಮತ್ತು ಡುಯೇನ್ ಒಲಿವಿಯರ್ –ರಾಯಿಟರ್ಸ್ ಚಿತ್ರ

ಕೆ.ಎಲ್. ರಾಹುಲ್– ಎಪಿ ಚಿತ್ರ

ಪ್ರಮುಖ ಜೊತೆಯಾಟಗಳು (ಆವರಣದಲ್ಲಿ ಎಸೆತ)	
ಕೆ.ಎಲ್.ರಾಹುಲ್–ಹನುಮ ವಿಹಾರಿ	42 (91)
ಆರ್.ಅಶ್ವಿನ್–ರಿಷಭ್ ಪಂತ್	40 (48)
ಮಯಂಕ್ ಅಗರವಾಲ್–ರಾಹುಲ್	36 (86)
ಆರ್.ಅಶ್ವಿನ್–ಮೊಹಮ್ಮದ್ ಶಮಿ	28 (28)

ಭಾರತ ಇನಿಂಗ್ಸ್	
ರನ್ ರೇಟ್	3.19
ಬೌಂಡರಿ	27
ಸಿಕ್ಸರ್	1

ಮಾರ್ಕೊ ಜ್ಯಾನ್ಸನ್	
ಓವರ್	17
ಮೇಡನ್	5
ನೀಡಿದ ರನ್	31
ವಿಕೆಟ್	4
ಇಕಾನಮಿ	1.82
ನೋಬಾಲ್	1

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 202 (63.1 ಓವರ್)

ರಾಹುಲ್ ಸಿ ರಬಾಡ ಬಿ ಜ್ಯಾನ್ಸನ್ 50 (133 ಎ, 4x9), ಅಗರವಾಲ್ ಸಿ ವೆರೇನಿ ಬಿ ಜ್ಯಾನ್ಸನ್26 (37 ಎ, 4x5), ಚೇತೇಶ್ವರ್ ಸಿ ಬವುಮಾ ಬಿ ಒಲಿವಿಯರ್ 3 (33 ಎ), ಅಜಿಂಕ್ಯ ಸಿ ಪೀಟರ್ಸನ್ ಬಿ ಒಲಿವಿಯರ್ 0 (1 ಎ), ಹನುಮ ಸಿ ಡುಸೆನ್ ಬಿ ರಬಾಡ 20 (53 ಎ, 4x3), ರಿಷಭ್ ಸಿ ವೆರೇನಿ ಬಿ ಜ್ಯಾನ್ಸನ್17 (43 ಎ, 4x1), ಅಶ್ವಿನ್ ಸಿ ಪೀಟರ್ಸನ್ ಬಿ ಜ್ಯಾನ್ಸನ್46 (50 ಎ, 4x6), ಶಾರ್ದೂಲ್ ಸಿ ಪೀಟರ್ಸನ್ ಬಿ ಒಲಿವಿಯರ್ 0 (5 ಎ), ಶಮಿ ಸಿ ಮತ್ತು ಬಿ ರಬಾಡ 9 (12 ಎ, 4x1), ಜಸ್‌ಪ್ರೀತ್ ಔಟಾಗದೆ 14 (11 ಎ, 4x2, 6x1), ಸಿರಾಜ್ ಸಿ ವೆರೇನಿ ಬಿ ರಬಾಡ 1 (6 ಎ)
ಇತರೆ (ಬೈ 8, ಲೆಗ್‌ಬೈ 3, ನೋ ಬಾಲ್ 5) 16
ವಿಕೆಟ್ ಪತನ: 1-36 (ಮಯಂಕ್ ಅಗರವಾಲ್, 14.1), 2-49 (ಚೇತೇಶ್ವರ್ ಪೂಜಾರ, 23.3), 3-49 (ಅಜಿಂಕ್ಯ ರಹಾನೆ, 23.4), 4-91 (ಹನುಮ ವಿಹಾರಿ, 38.4), 5-116 (ಕೆ.ಎಲ್.ರಾಹುಲ್, 45.5), 6-156 (ರಿಷಭ್ ಪಂತ್, 53.4), 7-157 (ಶಾರ್ದೂಲ್ ಠಾಕೂರ್, 54.6), 8-185 (ಮೊಹಮ್ಮದ್ ಶಮಿ, 59.3), 9-187 (ರವಿಚಂದ್ರನ್ ಅಶ್ವಿನ್, 60.5), 10-202 (ಮೊಹಮ್ಮದ್ ಸಿರಾಜ್, 63.1)
ಬೌಲಿಂಗ್: ಕಗಿಸೊ ರಬಾಡ 17.1–2–64–3, ಡುಯೇನ್ ಒಲಿವಿಯರ್ 17–1–64–3, ಲುಂಗಿ ಗಿಡಿ 11–4–26–0, ಮಾರ್ಕೊ ಜ್ಯಾನ್ಸನ್ 17–5–31–4, ಕೇಶವ್ ಮಹಾರಾಜ್ 1–0–6–0

ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್ 1 ವಿಕೆಟ್‌ಗೆ 35 (18 ಓವರ್)

ಎಲ್ಗರ್ ಬ್ಯಾಟಿಂಗ್ 11 (57 ಎ, 4x1), ಮರ್ಕರಮ್ ಎಲ್‌ಬಿಡಬ್ಲ್ಯು ಬಿ ಶಮಿ 7 (12 ಎ, 4x1), ಪೀಟರ್ಸನ್ ಬ್ಯಾಟಿಂಗ್ 14 (39 ಎ, 4x2)
ಇತರೆ (ಲೆಗ್‌ಬೈ 2, ವೈಡ್ 1) 3
ವಿಕೆಟ್ ಪತನ: 1-14 (ಏಡನ್ ಮರ್ಕರಮ್, 3.5)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 8–3–14–0, ಮೊಹಮ್ಮದ್ ಶಮಿ 6–2–15–1, ಮೊಹಮ್ಮದ್ ಸಿರಾಜ್ 3.5–2–4–0, ಶಾರ್ದೂಲ್ ಠಾಕೂರ್ 0.1–0–0–0

ವಿರಾಟ್ ಕೊಹ್ಲಿಗೆ ಬೆನ್ನುನೋವು

ಬೆನ್ನಿನಲ್ಲಿ ಸೆಳೆತವುಂಟಾಗಿ ನೋವು ಕಾಣಿಸಿಕೊಂಡ ಕಾರಣ ವಿರಾಟ್ ಕೊಹ್ಲಿ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಅವರ ಬದಲಿಗೆ ಈ ಪಂದ್ಯದಲ್ಲಿ ತಂಡವನ್ನು ಕೆ.ಎಲ್.ರಾಹುಲ್ ಮುನ್ನಡೆಸಿದರು. ಇದೇ 11ರಿಂದ ನಡೆಯಲಿರುವ ಮೂರನೇ ಹಾಗೂ ಅಂತಿಮ ಟೆಸ್ಟ್‌ನಲ್ಲಿ ಕೊಹ್ಲಿ ಆಡುವ ಸಾಧ್ಯತೆ ಇದೆ ಎಂದು ಟಾಸ್ ಸಂದರ್ಭದಲ್ಲಿ ರಾಹುಲ್ ತಿಳಿಸಿದರು.

ಕೊಹ್ಲಿ ಬದಲಿಗೆ ಹನುಮ ವಿಹಾರಿ ಅವರನ್ನು ಅಂತಿಮ 11ರಲ್ಲಿ ಸೇರಿಸಲಾಗಿದೆ. ಇದು, ಕೊಹ್ಲಿ ಅವರ 99ನೇ ಪಂದ್ಯ ಆಗುತ್ತಿತ್ತು. ಹಾಗಾದರೆ ಮುಂದಿನ ಪಂದ್ಯದಲ್ಲಿ ಅವರು ‘ಶತಕ’ದ ಸಾಧನೆ ಮಾಡುವ ಅವಕಾಶವಿತ್ತು. ಫೆಬ್ರುವರಿಯಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಶ್ರೀಲಂಕಾ ಎದುರಿನ ಪಂದ್ಯ ಅವರ ಈ ಮೈಲುಗಲ್ಲಿಗೆ ವೇದಿಕೆಯಾಗುವ ಸಾಧ್ಯತೆ ಇದೆ.

ಬಂಗಾಳ ರಣಜಿ ತಂಡದಲ್ಲಿ ಕ್ರೀಡಾ ಮಂತ್ರಿ!

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಕ್ರೀಡಾ ಸಚಿವ, ಬ್ಯಾಟರ್ ಮನೋಜ್ ತಿವಾರಿ ಅವರು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಗಾಗಿ ಪ್ರಕಟಿಸಲಾದ ರಾಜ್ಯ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಮನೋಜ್

ವರ್ಷದ ಹಿಂದೆ ತೃಣಮೂಲ ಕಾಂಗ್ರೆಸ್ ಪಕ್ಷ ಸೇರಿದ್ದ ಮನೋಜ್, ಶಿವಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು. ಸದ್ಯ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರದಲ್ಲಿ ಮಂತ್ರಿಯಾಗಿದ್ದಾರೆ.

ಬಂಗಾಳ ತಂಡದ ಮಾಜಿ ನಾಯಕ ಮನೋಜ್, 2020ರ ರಣಜಿ ಟ್ರೋಫಿ ಟೂರ್ನಿಯ ಫೈನಲ್‌ನಲ್ಲಿ ಸೌರಾಷ್ಟ್ರದ ವಿರುದ್ಧ ಆಡಿದ್ದರು. ಅದು ಅವರ ಕೊನೆಯ ಪಂದ್ಯವಾಗಿತ್ತು. ಸದ್ಯ ಅಭಿಮನ್ಯು ಈಶ್ವರನ್ ಬಂಗಾಳ ತಂಡದ ನಾಯಕರಾಗಿದ್ದಾರೆ.

ತಂಡದ ಏಳು ಮಂದಿಗೆ ಕೋವಿಡ್

ಬಂಗಾಳ ರಣಜಿ ತಂಡದ ಏಳು ಮಂದಿ ಸದಸ್ಯರಿಗೆ ಕೋವಿಡ್ ಖಚಿತಪಟ್ಟಿದೆ. ಟೂರ್ನಿಯ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಇದ್ದು, ತಂಡವು ನಡೆಸುತ್ತಿರುವ ಅಭ್ಯಾಸಕ್ಕೆ ಇದರಿಂದ ಹಿನ್ನಡೆಯಾಗಿದೆ.

ಆಟಗಾರರಾದ ಸುದೀಪ್ ಚಟರ್ಜಿ, ಅನುಸ್ಟುಪ್ ಮಜುಂದಾರ್, ಖಾಜಿ ಜುನೈದ್ ಸೈಫಿ, ಗೀತ್ ಪುರಿ, ಪ್ರದೀಪ್ತ ಪ್ರಾಮಾಣಿಕ್, ಸುರ್ಜೀತ್ ಯಾದವ್ ಹಾಗೂ ಸಹಾಯಕ ಕೋಚ್ ಸೌರಶಿಶ್ ಲಾಹಿರಿ ಅವರು ಕೊರೊನಾ ಸೋಂಕಿಗೆ ಒಳಗಾದವರು ಎಂದು ಮೂಲಗಳು ತಿಳಿಸಿವೆ.

ಶಿವಂ, ಹಾಕ್ಲಿಗೆ ಕೋವಿಡ್: ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ಶಿವಂ ದುಬೆ ಮತ್ತು ಕ್ರಿಕೆಟ್ ಆಸ್ಟ್ರೇಲಿಯಾದ (ಸಿಎ) ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಿಕ್ ಹಾಕ್ಲಿ ಅವರಿಗೂ ಸೋಂಕು ತಗುಲಿದೆ.

800ರ ಮೈಲುಗಲ್ಲು ದಾಟಿದ ಮಣಿಂದರ್

ಬೆಂಗಾಲ್ ವಾರಿಯರ್ಸ್‌ಗೆ ಮಣಿದ ಜೈಪುರ; ಪಟ್ನಾಗೆ ರೋಚಕ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕನ ‘ಸೂಪರ್’ ಆಟದ ನೆರವಿನಿಂದ ಹಾಲಿ ಚಾಂಪಿಯನ್ ಬೆಂಗಾಲ್ ವಾರಿಯರ್ಸ್ ಪ್ರೊ ಕಬಡ್ಡಿ ಲೀಗ್‌ನ ಸೋಮವಾರದ ಪಂದ್ಯದಲ್ಲಿ ಗೆಲುವು ಸಾಧಿಸಿತು.

ವೈಟ್‌ಫೀಲ್ಡ್‌ನ ಹೋಟೆಲ್ ಶೆರಟಾನ್ ಗ್ರ್ಯಾಂಡ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಜೈಪುರ್ ಪಿಂಕ್ ಪ್ಯಾಂಥರ್ಸ್ ತಂಡವನ್ನು ಬೆಂಗಾಲ್ 31–28ರಲ್ಲಿ ಮಣಿಸಿತು. ನಾಯಕ ಮಣಿಂದರ್ ಸಿಂಗ್ 13 ಪಾಯಿಂಟ್ ಕಲೆ ಹಾಕುವುದರೊಂದಿಗೆ ಪ್ರೊ ಕಬಡ್ಡಿಯಲ್ಲಿ 800 ರೇಡ್ ಪಾಯಿಂಟ್‌ಗಳ ಮೈಲುಗಲ್ಲು ದಾಟಿದರು.

ಜಿದ್ದಾಜಿದ್ದಿಯ ಹೋರಾಟದಲ್ಲಿ ಒಂದು ಬೋನಸ್ ಪಾಯಿಂಟ್ ಮತ್ತು 11 ಟಚ್ ಪಾಯಿಂಟ್‌ಗಳನ್ನು ಮಣಿಂದರ್ ಸಿಂಗ್ ತಮ್ಮದಾಗಿಸಿಕೊಂಡರು. ಆಲ್‌ರೌಂಡರ್ ಮೊಹಮ್ಮದ್ ನಬಿಭಕ್ಷ್ ರೇಡಿಂಗ್‌ನಲ್ಲೂ ಟ್ಯಾಕ್ಲಿಂಗ್‌ನಲ್ಲೂ ಮಿಂಚಿದರು. ಆರು ಟಚ್ ಪಾಯಿಂಟ್ ಮತ್ತು ಮೂರು ಟ್ಯಾಕ್ಲಿಂಗ್ ಪಾಯಿಂಟ್‌ಗಳೊಂದಿಗೆ ಅವರು 10 ಪಾಯಿಂಟ್ ಗಳಿಸಿದರು.

ಪಿಂಕ್ ಪ್ಯಾಂಥರ್ಸ್ ಪರವಾಗಿ ಅರ್ಜುನ್ ದೇಸ್ವಾಲ್ ಏಕಾಂಗಿ ಹೋರಾಟ ನಡೆಸಿದರು. ಒಟ್ಟು 16 ಪಾಯಿಂಟ್ ಸಂಪಾದಿಸಿದ ಅವರಿಗೆ ದೀಪಕ್ ಹೂಡಾ ಕೊಂಚ ಸಹಕಾರ ನೀಡಿದರು.

ಪಟ್ನಾ ಪೈರೇಟ್ಸ್‌ಗೆ ರೋಚಕ ಗೆಲುವು

ಮತ್ತೊಂದು ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡ ತೆಲುಗು ಟೈಟನ್ಸ್ ವಿರುದ್ಧ ರೋಚಕ ಜಯ ಗಳಿಸಿತು. ಮೋನು ಗೋಯತ್, ಸಚಿನ್ ಮತ್ತು ಪ್ರಶಾಂತ್ ಕುಮಾರ್ ಅವರ ಸಂಘಟಿತ ಶ್ರಮದಿಂದಾಗಿ ತಂಡ 31–30ರಲ್ಲಿ ಎದುರಾಳಿಗಳನ್ನು ಮಣಿಸಿತು. ಇವರು ಮೂವರು ಕ್ರಮವಾಗಿ ಏಳು, ಆರು ಮತ್ತು ಐದು ಪಾಯಿಂಟ್ ಕಲೆ ಹಾಕಿದರು.

ತೆಲುಗು ಟೈಟನ್ಸ್ ಪರ ಅಂಕಿತ್ ಬೆನಿವಾಲ್ ಸೂಪರ್ ಟೆನ್ (10) ಸಾಧನೆ ಮಾಡಿದರು. ರಾಕೇಶ್ ಗೌಡ 7 ಪಾಯಿಂಟ್ ಗಳಿಸಿ ಗೆಲುವಿಗೆ ಶ್ರಮಿಸಿದರು.

ಎದುರಾಳಿ ಆವರಣದಲ್ಲಿ ಪಾಯಿಂಟ್ ಗಳಿಸಿದ ಮಣಿಂದರ್ ಸಿಂಗ್

ಇಂದಿನ ಪಂದ್ಯ (ರಾತ್ರಿ)

ಹರಿಯಾಣ ಸ್ಟೀಲರ್ಸ್ Vs ಯು ಮುಂಬಾ 7.30
ಯುಪಿ ಯೋಧಾ Vs ತಮಿಳ್ ತಲೈವಾಸ್ 8.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

vivo PRO KABADDI

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು ಬುಲ್ಸ್	6	4	1	1	23
ದಬಂಗ್ ಡೆಲ್ಲಿ	5	3	0	2	21
ಪಟ್ನಾ ಪೈರೇಟ್ಸ್	5	4	1	-	21
ಯು ಮುಂಬಾ	5	2	1	2	17
ಬೆಂಗಾಲ್ ವಾರಿಯರ್ಸ್	6	3	3	-	16
ತಮಿಳ್ ತಲೈವಾಸ್	5	1	1	3	14
ಗುಜರಾತ್ ಜೈಂಟ್ಸ್	5	1	2	2	13
ಯುಪಿ ಯೋಧಾ	5	1	2	2	13
ಜೈಪುರ್ ಪಿಂಕ್ ಪ್ಯಾಂಥರ್ಸ್	5	2	3	-	12
ಹರಿಯಾಣ ಸ್ಟೀಲರ್ಸ್	5	2	3	-	12
ತೆಲುಗು ಟೈಟನ್ಸ್	5	-	3	2	9
ಪುಣೇರಿ ಪಲ್ಟನ್	5	1	4	-	5

(ಸೋಮವಾರದ ಪಂದ್ಯಗಳ ಅಂತ್ಯಕ್ಕೆ)

ಐಪಿಎಲ್: ಅಹಮದಾಬಾದ್ ತಂಡಕ್ಕೆ ಆಶಿಶ್ ನೆಹ್ರಾ ಕೋಚ್?

ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ವೇಗದ ಬೌಲರ್ ಆಶಿಶ್ ನೆಹ್ರಾ ಅವರು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್‌ನ ಅಹಮದಾಬಾದ್ ಫ್ರಾಂಚೈಸ್‌ಗೆ ಮುಖ್ಯ ಕೋಚ್ ಆಗಿ ನೇಮಕಗೊಳ್ಳುವ ಸಾಧ್ಯತೆಯಿದೆ.

ಇಂಗ್ಲೆಂಡ್ ತಂಡದ ಮಾಜಿ ಬ್ಯಾಟ್ಸ್‌ಮನ್ ವಿಕ್ರಂ ಸೋಲಂಕಿ ಅವರು ತಂಡದ ಕ್ರಿಕೆಟ್ ಚಟುವಟಿಕೆಗಳ ನಿರ್ದೇಶಕರಾಗಿ, ಭಾರತ ತಂಡದ ಮಾಜಿ ಕೋಚ್ ಗ್ಯಾರಿ ಕರ್ಸ್ಟನ್ ಅವರು ಸಲಹೆಗಾರರಾಗಿ ಆಯ್ಕೆಯಾಗುವ ಸಾಧ್ಯತೆಯಿದೆ ಎಂದು ಐಪಿಎಲ್‌ನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೋಮಿನುಲ್ ಹಕ್ –ಎಎಫ್‌ಪಿ ಚಿತ್ರ

ಬಾಂಗ್ಲಾಗೆ ಐತಿಹಾಸಿಕ ಮುನ್ನಡೆ

ಮೌಂಟ್ ಮಾಂಗನೂಯಿ (ಪಿಟಿಐ): ಮೋಮಿನುಲ್ ಹಕ್ (88; 244 ಎಸೆತ, 12 ಬೌಂಡರಿ) ಮತ್ತು ಲಿಟನ್ ದಾಸ್ (86; 177 ಎ, 10 ಬೌಂ) ನ್ಯೂಜಿಲೆಂಡ್ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದರು. ಅವರ ಅಮೋಘ ಆಟದ ಬಲದಿಂದ ಬಾಂಗ್ಲಾದೇಶ ತಂಡ ಟೆಸ್ಟ್ ಪಂದ್ಯದಲ್ಲಿ ಐತಿಹಾಸಿಕ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿತು.

ಇಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್‌ನ ಮೂರನೇ ದಿನದಾಟದ ಅಂತ್ಯಕ್ಕೆ ಬಾಂಗ್ಲಾದೇಶ 6 ವಿಕೆಟ್ ಕಳೆದುಕೊಂಡು 401 ರನ್ ಗಳಿಸಿದ್ದು 73 ರನ್‌ಗಳ ಮುನ್ನಡೆ ಗಳಿಸಿದೆ. ನಾಟಕೀಯ ಕೊನೆಯ ಅವಧಿಯಲ್ಲಿ ಪ್ರಬಲ ದಾಳಿ ನಡೆಸಿದ ವೇಗಿ ಟ್ರೆಂಟ್ ಬೌಲ್ಟ್ ಪ್ರವಾಸಿ ತಂಡದ ಓಟಕ್ಕೆ ತಡೆಯೊಡ್ಡಿದರು.

4 ವಿಕೆಟ್‌ಗಳಿಗೆ 361 ರನ್ ಗಳಿಸಿ ಭರ್ಜರಿ ಮುನ್ನಡೆಯತ್ತ ಹೆಜ್ಜೆ ಹಾಕಿದ್ದ ಬಾಂಗ್ಲಾದೇಶದ ಮೋಮಿನುಲ್ ಮತ್ತು ಲಿಟನ್ ದಾಸ್ ವಿಕೆಟ್ ಉರುಳಿಸುವ ಮೂಲಕ 158 ರನ್‌ಗಳ ಜೊತೆಯಾಟಕ್ಕೆ ಬೌಲ್ಟ್ ತೆರೆ ಎಳೆದರು.

ಏಷ್ಯಾದ ಹೊರಗೆ ಮೊದಲ ಇನಿಂಗ್ಸ್‌ನಲ್ಲಿ ಗುರಿ ಬೆನ್ನತ್ತಿ ಬಾಂಗ್ಲಾದೇಶ ಮುನ್ನಡೆ ಸಾಧಿಸಿರುವುದು ಇದೇ ಮೊದಲು. ನಾಲ್ಕು ವರ್ಷಗಳ ಹಿಂದೆ ವೆಲಿಂಗ್ಟನ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಮೊದಲು ಬ್ಯಾಟಿಂಗ್ ಮಾಡಿ ಬಾಂಗ್ಲಾದೇಶ ಮುನ್ನಡೆ ಗಳಿಸಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 328; ಬಾಂಗ್ಲಾದೇಶ (ಭಾನುವಾರ 67 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 175):156 ಓವರ್‌ಗಳಲ್ಲಿ 6ಕ್ಕೆ 401 (ಶಾಡ್ಮನ್ ಇಸ್ಲಾಂ 22, ಮೊಹಮ್ಮದುಲ್ ಹಸನ್ 78, ನಜ್ಮುಲ್ ಹೊಸೇನ್ 64, ಮೋಮಿನುಲ್ ಹಕ್ 88, ಮುಷ್ಫಿಕುರ್ ರಹೀಮ್ 12, ಲಿಟನ್ ದಾಸ್ 86, ಯಾಸಿರ್ ಅಲಿ ಬ್ಯಾಟಿಂಗ್ 11, ಮೆಹದಿ ಹಸನ್ 20; ಟ್ರೆಂಟ್ ಬೌಲ್ಟ್ 61ಕ್ಕೆ3, ವ್ಯಾಗ್ನರ್ 98ಕ್ಕೆ3).

ಅಥ್ಲೀಟ್ ಎ.ರಾಮಣ್ಣ ನಿಧನ

ಬೆಂಗಳೂರು: ದೂರ ಅಂತರದ ಓಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದ, ನಂತರ ಸ್ಟಾರ್ಟರ್ ಆಗಿ ಕಾರ್ಯನಿರ್ವಹಿಸಿದ್ದ ಎ.ರಾಮಣ್ಣ (78) ಅನಾರೋಗ್ಯದಿಂದ ಸೋಮವಾರ ನಿಧನರಾದರು.

ಎಚ್‌ಎಎಲ್‌ನ ಉದ್ಯೋಗಿಯಾಗಿದ್ದ ರಾಮಣ್ಣ ಅವರು ರಾಷ್ಟ್ರೀಯ ಕ್ರೀಡಾಕೂಟದಲ್ಲಿ 5000 ಮತ್ತು 10,000 ಮೀಟರ್ಸ್ ಓಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು.

ಎ.ರಾಮಣ್ಣ

ನವದೆಹಲಿಯಲ್ಲಿ 1982ರಲ್ಲಿ ನಡೆದ ಏಷ್ಯನ್ ಗೇಮ್ಸ್ ಸೇರಿದಂತೆ ಅನೇಕ ಕ್ರೀಡಾಕೂಟಗಳಲ್ಲಿ ಅವರು ತಾಂತ್ರಿಕ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು.